ಕರ್ನಾಟಕ ವಿಧಾನ ಸಭೆ

ಮಂಗಳವಾರ 10ನೇ ನವೆಂಬರ್ 1998ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಅವಿಶ್ವಾಸ ನಿರ್ಣಯದ ಪ್ರಸ್ತಾಪ

ಈ ಸದನವು ಶ್ರೀ ಜೆ.ಹೆಚ್.ಪಟೇಲ್ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುತ್ತದೆ (ಮುಂದುವರಿದ ಚರ್ಚೆ) ಹಾಗೂ ಸರ್ಕಾರದಿಂದ ಉತ್ತರ

ಅಧ್ಯಕ್ಷರು: ಮೂವತ್ತು ಗಂಟೆಗಳ ಕಾಲ ನಡೆದ ಚರ್ಚೆಯಲ್ಲಿ ಇಪ್ಪತ್ತೆರಡು ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳವರಿಗೆ ಇವತ್ತು ಮೂರು ಗಂಟೆಗೆ ಉತ್ತರ ಕೊಡಲು ನಾನು ಈಗಾಗಲೇ ಸೂಚನೆ ನೀಡಿದ್ದೇನೆ. ಅದಕ್ಕಿಂತ ಮೊದಲು ಕೆಲವು ಮಂತ್ರಿಗಳು ಒಂದೂವರೆ ಗಂಟೆಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವವರಿದ್ದಾರೆ. ಆದ್ದರಿಂದ, ಇವತ್ತು ಮಾತನಾಡುವ ಕೆಲವು ಸದಸ್ಯರುಗಳಲ್ಲಿ ನನ್ನ ವಿನಂತಿ ಏನೆಂದರೆ, ನಾನೇನು ತಮಗೆ ಮಾತನಾಡುವುದಕ್ಕೆ ಅವಧಿ ನಿಗದಿ ಮಾಡಿರುತ್ತೇನೆ ಅದಕ್ಕೆ ತಾವು ಎಲ್ಲಾ ಸ್ಟಿಕ್ ಆದರೆ ಚೆನ್ನಾಗಿರುತ್ತದೆ. ಆದ್ದರಿಂದ, ಎಲ್ಲಾ ಸದಸ್ಯರು ಸಹಕಾರ ಕೊಡಬೇಕೆಂದು ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಪುಟ್ಟಣ್ಣಯ್ಯನವರೇ, ತಾವು ತಮ್ಮ ಭಾಷಣವನ್ನು ಮುಂದುವರಿಸಿ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಪಾಂಡವಪುರ): ಮಾನ್ಯ ಅಧ್ಯಕ್ಷರೆ, ಯುವಜನ ಮತ್ತು ಕ್ರೀಡಾ ಇಲಾಖೆಯ ನಿಯಮಾವಳಿಗಳಲ್ಲಿ ಇನ್ನೂ ಬದಲಾವಣೆಯಾಗಿಲ್ಲ. ಕಳೆದ ಸಾರಿ ಈ ಬಗ್ಗೆ ತಮ್ಮ ಕೊಠಡಿಯಲ್ಲಿ ಚರ್ಚೆಯಾಗಿತ್ತು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ತಾಂತ್ರಿಕ ಶಿಕ್ಷಣದಲ್ಲಿ ವೈದ್ಯಕೀಯ ಶಿಕ್ಷಣದಲ್ಲಿ ಸ್ಪೋರ್ಟ್ಸ್ ಕೋಟಾ ಎಂದು ಇದೆ. ಸ್ಪೋರ್ಟ್ಸ್ ಮೆರಿಟ್ ಮೇಲೆ ಕೊಡುವುದಕ್ಕೆ ಯಾವುದೇ ತಿದ್ದುಪಡಿಗಳಾಗಲಿಲ್ಲ. ಯುವಜನ ಮತ್ತು ಕ್ರೀಡಾ ಇಲಾಖೆಯ ಮಂತ್ರಿಗಳಿಗೆ ಏನಾದರೂ ಸಂಬಂಧವಿದೆಯೇ? ಸ್ಪೋರ್ಟ್ಸ್‌ಕೋಟಾದಲ್ಲಿ ಎನ್.ಸಿ.ಸಿ. ಅಥವಾ ಮತ್ತೊಂದು ಆಗಬಹುದು. ಸ್ಪೋರ್ಟ್ಸ್ ಮೆರಿಟ್ ಮೇಲೆ ಡಿಕ್ಲೇರ್ ಮಾಡಬೇಕೇ ಹೊರತು ಮಾರ್ಕ್ಸ್ ಮೆರಿಟ್ ಮೇಲೆ ಡಿಕ್ಲೇರ್ ಮಾಡಿದರೆ, ಉತ್ತಮವಾದ ಕ್ರೀಡಾಪಟುಗಳಿಗಾಗಲಿ, ಉತ್ತಮವಾದ ಎನ್.ಸಿ.ಸಿ. ಪಟುಗಳಿಗಾಗಲಿ ಅವಕಾಶ ಎಲ್ಲಿ ಸಿಕ್ಕುತ್ತದೆ? ಆದ್ದರಿಂದ, ಸನ್ಮಾನ್ಯ ಸಭಾಧ್ಯಕ್ಷರೇ, ತಾವು ಇದರಲ್ಲಿ ಮಧ್ಯೆ ಪ್ರವೇಶಿಸಿ ಇದರಲ್ಲಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮನವಿ

ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಅತ್ಯುತ್ತಮವಾದ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಕ್ರೀಡಪಟುಗಳಿಗೆ ಈಗಿರುವ ಕಾನೂನಿನಲ್ಲಿ ಅನಾನುಕೂಲವಾಗುತ್ತದೆ. ಮಾನ್ಯ ಹಣಕಾಸಿನ ಮಂತ್ರಿಗಳಲ್ಲಿ ಒಂದು ಮನವಿ ಏನೆಂದರೆ, ತಾವು ಬೇಕಾದರೆ ಒಂದು ವರ್ಷ ಹೊಸ ಶಾಲೆಗಳನ್ನು ಕಟ್ಟುವುದನ್ನು ನಿಲ್ಲಿಸಿಬಿಡಿ, ಈಗಿರುವ ಹಳೆಯ ಶಾಲೆಗಳನ್ನು ರಿಪೇರಿ ಮಾಡಿಸುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಬೇಕಾಗುತ್ತದೆ. ತಾವು 13ನೇ ತಾರೀಖು ಅದೇನು ರಿಪೇರಿ ಮಾಡಿಕೊಳ್ಳುತ್ತಿರೋ ನನಗೆ ಗೊತ್ತಿಲ್ಲ. ಆದರೆ, ತಾವು ಇನ್ನೊಂದು ವರ್ಷದ ಅಧಿಕಾರಾವಧಿಯಲ್ಲಿ ಎಲ್ಲಾ ಹಳೆಯ ಶಾಲೆಗಳನ್ನು ರಿಪೇರಿ ಮಾಡಿಸುವಂಥ ಪ್ರಯತ್ನ ಮಾಡಿ. ಏಕೆಂದರೆ, ನಾವು ನಮ್ಮ ಕ್ಷೇತ್ರಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಅಲ್ಲಿನ ಶಾಲೆಗಳ ಸ್ಥಿತಿ-ಗತಿಗಳನ್ನು ನೋಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ತಾವು ಕೂಡಲೇ ಈ ಕಡೆ ಗಮನ ಕೊಟ್ಟು ಸುಮಾರು 10-15 ವರ್ಷಗಳಿಂದ ಯಾವುದೇ ರಿಪೇರಿಯನ್ನು ಕಂಡರಿಯದ ಶಾಲೆಗಳನ್ನು ಆದಷ್ಟು ಬೇಗ ರಿಪೇರಿ ಮಾಡಿಸುವಂಥ ಕೆಲಸ ಮಾಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಇವತ್ತು ಬಹಳಷ್ಟು ರೈತರು ಬಾಳೆಹಣ್ಣನ್ನು ಉತ್ಪಾದನೆ ಮಾಡಿಕೊಂಡು ಶಿವಮೊಗ್ಗದಿಂದ ಬರುತ್ತಿದ್ದಾರೆ. ಇಡೀ ಮಾರುಕಟ್ಟೆಯಲ್ಲಿ ತಮಿಳುನಾಡಿನವರು ಆಕ್ರಮಣ ಮಾಡಿಕೊಂಡಿದ್ದಾರೆ. ಮಾರುಕಟ್ಟೆಯಲ್ಲಿ ಬಾಳೆಹಣ್ಣನ್ನು ಹರಾಜಿನ ಮೂಲಕ ತೆಗೆದುಕೊಳ್ಳುವ ಪದ್ಧತಿ ಇದೆ, ಅಲ್ಲಿಗೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಆದ್ದರಿಂದ, ಮಾರುಕಟ್ಟೆಯಲ್ಲಿ ಜನಪ್ರತಿನಿಧಿಗಳನ್ನು ಅಧ್ಯಕ್ಷರನ್ನಾಗಿ ಮಾಡಿ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಬಾಳೆಹಣ್ಣನ್ನು ತೂಕದ ಮೂಲಕ ವ್ಯಾಪಾರ ಮಾಡುವಂತಹ ಬೆಳವಣಿಗೆ ಆಗಬೇಕು. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಬೆಂಗಳೂರಿನ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ನಮ್ಮ ರಾಜ್ಯದಿಂದ ಬಾಳೆಹಣ್ಣನ್ನು ಮಾರಾಟ ಮಾಡಲು ನಮ್ಮ ರಾಜ್ಯದವರು ಬಂದಿರುತ್ತಾರೆ, ಹೊರರಾಜ್ಯಗಳಾದ ತಮಿಳುನಾಡು, ಕೇರಳದ ವ್ಯಾಪಾರಸ್ಥರು ಬಂದಿರುತ್ತಾರೆ. ಇಲ್ಲಿ ಬಾಳೆಹಣ್ಣನ್ನು ಹರಾಜು ಮೂಲಕ ಮಾರಾಟ ಮಾಡುತ್ತಾರೆ. ಆದ್ದರಿಂದ ಎ.ಪಿ.ಎಂ.ಸಿ.ಯವರು ಸ್ವಲ್ಪ ಈ ಕಡೆ ಜವಾಬ್ದಾರಿ ವಹಿಸಿ ಬಾಳೆಹಣ್ಣನ್ನು ತೂಕದ ಮೂಲಕ ಮಾರಾಟವಾಗುವಂತೆ ಏನಾದರೂ ಸೂಕ್ತ ಕ್ರಮ ಕೈಗೊಳ್ಳಬೇಕು.

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಕೇವಲ ಕರ್ನಾಟಕದವರಿಗೆ ಮಾತ್ರ ಮಾರಾಟ ಮಾಡಬೇಕೆಂದು ಯಾವ ಕಾನೂನಿನಲ್ಲಿ ಇಲ್ಲ. ಆದ್ದರಿಂದ, ಮಾನ್ಯ ಸದಸ್ಯರು, ಅವರು ಹೇಳುವ ರೀತಿಯಲ್ಲಿ ಮಾಡಬೇಕಾದರೆ ಯಾವ ರೀತಿಯಲ್ಲಿ ಮಾಡಬೇಕು ಎಂಬುದನ್ನು ಹೇಳಿದರೆ ನಾವೂ ಕೂಡ ಇದರ ಬಗ್ಗೆ ಆಲೋಚನೆ ಮಾಡಬಹುದು. ಇವತ್ತು ರಾಜ್ಯಾಂಗ ಇದೆ ಮತ್ತು ಇಡೀ ದೇಶವನ್ನು

ಒಂದೆಂದು ಮಾಡಿದ್ದಾರೆ. ಯಾರು ಎಲ್ಲಿಬೇಕಾದರೂ ಅಂಗಡಿಯನ್ನು ಇಟ್ಟು ವ್ಯಾಪಾರ ಮಾಡಬಹುದು. ಈಗ ನಾವೇನಾದರೂ ಕಾನೂನನ್ನು ಮಾಡಿದರೆ, ಈ ಕಾನೂನು ರಾಜ್ಯಾಂಗದ ಎದುರಿನಲ್ಲಿ ನಿಲ್ಲುತ್ತದೆಯೆ? ಆದ್ದರಿಂದ, ಇದನ್ನು ಯಾವರೀತಿ ಮಾಡಬೇಕೆಂದು ತಾವು ಬೆಳಕು ಚೆಲ್ಲಿದರೆ ನಾವು ಅದರ ಬಗ್ಗೆ ಯೋಚನೆ ಮಾಡಬಹುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ತಮಿಳುನಾಡಿನವರಿಗೆ ಪೂರ್ತಿ ಕೊಡುತ್ತೀರೆಂದು ನಾನು ಹೇಳುತ್ತಿಲ್ಲ. ನಮ್ಮ ರಾಜ್ಯದಲ್ಲಿರತಕ್ಕಂಥ ಎಪಿಎಂಸಿಯಲ್ಲಿ ನಮ್ಮ ರಾಜ್ಯದ ವ್ಯಾಪಾರಸ್ಥರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ಇವತ್ತು ಗೋಡೌನ್ಸ್‌ನ್ನು ತಮಿಳುನಾಡು ಮತ್ತು ಕೇರಳದವರಿಗೆ ಮಾತ್ರ ಕೊಟ್ಟಿದ್ದೀರಿ. ಇವರಿಗೆ ಕೊಡಬಾರದೆಂದು ನಾನು ಹೇಳುತ್ತಿಲ್ಲ. ಆದರೆ ನಮ್ಮ ರಾಜ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಬಾಳೆಹಣ್ಣನ್ನು ತೂಕ ಮಾಡಬೇಕೋ ಅಥವಾ ಇಲ್ಲವೋ ನೀವೇ ಹೇಳಿ. ಗೊನೆಯನ್ನು ಹಿಡಿದುಕೊಂಡು 50 ರೂಪಾಯಿ ಒಂದು ಸಲ. 50 ರೂಪಾಯಿ ಎರಡು ಸಲ, 50 ರೂಪಾಯಿ ಮೂರು ಸಲ ಎಂದು ಗೊನೆಯನ್ನು ವ್ಯಾಪಾರ ಮಾಡುತ್ತಿದ್ದಾರೆ, ಇದು ಯಾವ ಪದ್ಧತಿಯೆಂದು ತಾವು ಹೇಳಬೇಕು. ಈ ಪದ್ಧತಿಯನ್ನು ಏನಾದರೂ ಮಾಡಿ ಬದಲಾವಣೆ ಮಾಡಬೇಕು. ಕನಿಷ್ಠಪಕ್ಷ ಗೊನೆಯನ್ನು ತೂಕ ಮಾಡಿ ಕೆ.ಜಿ.ಗೆ ಇಷ್ಟೆಂದು ತೀರ್ಮಾನ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಮಾನ್ಯ ತೋಟಗಾರಿಕೆ ಸಚಿವರೆ, ಎಪಿಎಂಸಿಯಲ್ಲಿ ಬಾಳೆ ಹಣ್ಣಿನ ಗೊನೆಯನ್ನು ಹರಾಜು ಮಾಡತಕ್ಕಂಥ ಒಂದು ವೈಜ್ಞಾನಿಕ ಪದ್ಧತಿ ಇದೆ, ಇದನ್ನು ತೂಕ ಮಾಡಿ ವ್ಯಾಪಾರ ಮಾಡತಕ್ಕಂಥ ಒಂದು ಚಿಂತನೆಯನ್ನು ತಾವು ಏಕೆ ಮಾಡಬಾರದು? ಇವತ್ತು ರಾಜ್ಯದಲ್ಲಿ, ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್‌ನನ್ನು ಪ್ರಾರಂಭ ಮಾಡಿ ಒಂದು ಹೊಸ ಆಯಾಮ, ಬೆಳವಣಿಗೆಯನ್ನು ಮಾಡಿದ್ದೀರಿ. ಹರಾಜು ಮಾಡತಕ್ಕಂಥದ್ದು ಗುಲಾಮಗಿರಿ ಕಾಲದ ಪದ್ಧತಿಯಿಂದಲು ಬಂದಿದೆ, ಆದ್ದರಿಂದ ಇದನ್ನು ಸರಿಪಡಿಸಬೇಕು. ಇವತ್ತು ಶಿವಮೊಗ್ಗದಿಂದ ಸಾವಿರಾರು ಜನ ರೈತರು ಟಿಷ್ಯೂ ಕಲ್ಚರ್ ಮಾಡಿ ಸುಮಾರು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಾಳೆ ಹಣನ್ನು ಬೆಳೆದು ಇವತ್ತು ಮಾರುಕಟ್ಟೆಗೆ ತರುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಿ ಇದಕ್ಕೆ ನ್ಯಾಯವನ್ನು ಒದಗಿಸಬೇಕು. ಈ ಸಮಯದಲ್ಲಿ ಸನ್ಮಾನ್ಯ ಸಹಕಾರ ಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಒಂದು ಜವಾಬ್ದಾರಿ ಕೆಲಸವನ್ನು ತಾವು ಮಾಡಿದ್ದೀರಿ. ಇವತ್ತು ನಾಮಕರಣ ಮಾಡಿರುವಂತಹ ವ್ಯಕ್ತಿಗಳಿಗೆ ಮತದಾನದ ಹಕ್ಕನ್ನು ತೆಗೆದು ಹಾಕಿ, ಜನರಿಂದ ಗೆದ್ದು ಬಂದಿರತಕ್ಕಂಥ ಜನಪ್ರತಿನಿಧಿಗಳನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗತಕ್ಕಂಥ ಕೆಲಸವನ್ನು ತಾವು ಮಾಡಿದ್ದೀರಿ, ಇದು ಬಹಳ ಮುಖ್ಯವಾದ ಕೆಲಸವೆಂದು ನಾನು ನಿಮಗೆ ಅಭಿನಂದಿಸುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು

ತರುತ್ತೇನೆ. ಏನೆಂದರೆ, ಇವತ್ತು ಕಾಡಾ ಮಂತ್ರಿಗಳನ್ನು ತಾವು ಮಾಡಿದ್ದೀರಿ. ಆದರೆ, ಅವರ ಇಲಾಖೆಗೆ ಎಷ್ಟು ದುಡ್ಡನ್ನು ಕೊಟ್ಟಿದ್ದೀರಿ? ಈ ಇಲಾಖೆಗೆ 10.25 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಇದರಲ್ಲಿ 6.25 ಕೋಟಿ ರೂಪಾಯಿ ಸಂಬಳ ಹೋಗುತ್ತದೆ ಇನ್ನು ನಾಲ್ಕು ಕೋಟಿ ರೂಪಾಯಿಗಳು ಕಾಡಾ ರೋಡ್ ಕೆಲಸಗಳ ಕಾಮಗಾರಿಗೆ ಖರ್ಚಾಗುತ್ತಿದೆ. ಇದಕ್ಕೆ ಇರತಕ್ಕಂಥ ನಿಯಮ ಏನೆಂದರೆ, ಒಂದು ಕೋಟಿ ರೂಪಾಯಿ ಸಂಬಳ ಕೊಟ್ಟರೆ, 8 ಕೋಟಿ ರೂಪಾಯಿಗಳ ಕಾಮಗಾರಿ ಕೆಲಸವನ್ನು ಮಾಡಬೇಕು. ಈ ಹಣವನ್ನು ಪೂರ್ತಿಯಾಗಿ ನೀರಾವರಿ ಇಲಾಖೆಗೆ ಕೊಟ್ಟರೆ, ಅವರೇ ಹೊಸ ರಸ್ತೆಗಳನ್ನು ಮಾಡುತ್ತಾರೆ. ಆದ್ದರಿಂದ, ಈ ಮಂತ್ರಿಗಳು ಏಕೆ ಬೇಕು? ಇಷ್ಟೊಂದು ಸಂಬಳವನ್ನು ಏಕೆ ಕೊಡಬೇಕು? ಇಲ್ಲಿ ಹೊಸ ಇಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳುವುದು ಬೇಡ, ಇಲ್ಲಿರತಕ್ಕಂಥ ಇಂಜಿನಿಯರ್‌ಗಳನ್ನು ಮರ್ಜ್ ಮಾಡಬಹುದು. ಆದ್ದರಿಂದ, ಈ ಮಂತ್ರಿಯನ್ನು ತೆಗೆಯತಕ್ಕಂಥ ಕೆಲಸವನ್ನು ಮಾಡಬೇಕು.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಪುಟ್ಟಣ್ಣಯ್ಯನವರು ಪ್ರಸ್ತಾಪ ಮಾಡುತ್ತಾ, ಈಗ ಕಾಡಾ ಇಲಾಖೆಗೆ ಕೊಡತಕ್ಕಂಥ ಹಣ ಸಾಲದು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಶೇಕಡ 22 ಅಥವಾ 23 ರಷ್ಟು ನೀರಾವರಿ ಪ್ರದೇಶ ಇದೆ. ನೀರಾವರಿ ಯೋಜನೆಗಳಿಗೆ ಖರ್ಚು ಮಾಡುವುದಕ್ಕೆ ಸಾರ್ವತ್ರಿಕವಾಗಿ ಸಾರ್ವಜನಿಕರ ಹಣವನ್ನು ಉಪಯೋಗಿಸಿಕೊಂಡು ಕೆಲಸ ಮಾಡಬೇಕಾಗಿದೆ. ಈಗ ಎಲ್ಲಾ ಕಡೆ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ನನ್ನಲ್ಲಿರತಕ್ಕಂಥ ಅಂಕಿಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ 107ಲಕ್ಷ ಹೆಕ್ಟೇರ್ ಪ್ರದೇಶ ಇದೆ. ಈ ಪ್ರದೇಶಗಳನ್ನು 10-20-50 ವರ್ಷದಲ್ಲಿ ನೀರಾವರಿ ಪ್ರದೇಶಗಳನ್ನಾಗಿ ಮಾಡಿದರೂ ಸುಮಾರು 49 ರಿಂದ 51 ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ಮಾತ್ರ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಉಳಿದಂಥ ಸುಮಾರು 50ರಿಂದ 55 ಪರ್ಸ್‌ಂಟ್ ಭೂಮಿಗೆ ಎಂದೆಂದಿಗೂ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಿಲ್ಲ. ಇವತ್ತು ನೀರಾವರಿ ಪ್ರದೇಶದಲ್ಲಿರತಕ್ಕಂಥವರು ಮಾತ್ರ ಹೆಚ್ಚಿನ ಅನುಕೂಲವನ್ನು ಪಡೆಯುತ್ತಿದ್ದಾರೆಯೇ ಹೊರತು ನೀರಾವರಿ ಇಲ್ಲದೆ ಇರತಕ್ಕಂಥವರು ಅನುಕೂಲವನ್ನು ಪಡೆಯುತ್ತಿಲ್ಲ. ಈ ಅನುಕೂಲವನ್ನು ಪಡೆಯತಕ್ಕಂಥವರು ಅದಕ್ಕೆ ತಕ್ಕಂತೆ 100ಕ್ಕೆ 100ರಷ್ಟು ಅಲ್ಲದಿದ್ದರೂ, ಒಂದು ಅಂಶ ಭಾಗವಾದರೂ ವಾಪಸ್ಸು ಕೊಡಬೇಕಾಗುತ್ತದೆ. ಇವತ್ತು ಬಯಲುಪ್ರದೇಶಗಳಲ್ಲಿ ಒಂದು ಎಕರೆ ಜಮಿನನ್ನು ನೀರಾವರಿ ಪ್ರದೇಶವನ್ನಾಗಿ ಮಾಡಬೇಕಾದರೆ, ರೈತನಿಗೆ ಕನಿಷ್ಠಪಕ್ಷ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈತ ಸಾಲ ಮಾಡಿ ಅಥವಾ ತನ್ನಲ್ಲಿರತಕ್ಕಂಥ ಕುರಿ, ಕೋಳಿಗಳನ್ನು ಮಾರಾಟ ಮಾಡಿ ಒಂದು ಲಕ್ಷ ರೂಪಾಯಿಗಳನ್ನು ರೈತ ಸ್ವಂತ ಹಣದಿಂದ

ಖರ್ಚುಮಾಡಬೇಕಾಗಿದೆ. ಆದರೆ, ನೀರಾವರಿ ಪ್ರದೇಶದಲ್ಲಿರತಕ್ಕಂಥ ರೈತರು ನನಗೆ ಗೊತ್ತಿರುವ ಹಾಗೆ 5 ಪೈಸೆಯನ್ನು ಖರ್ಚುಮಾಡುವುದಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ನೀರಾವರಿ ಭಾಗದಿಂದ ಬರುವುದರಿಂದ ಇದಕ್ಕೆ ಅವರೇ ಉತ್ತರವನ್ನು ಹೇಳಬೇಕಾಗಿದೆ. ಅಪ್ಪರ್‌ಕೃಷ್ಣ ಭಾಗದವರಿಗೆ ನಾವು ಯಾವ ರೀತಿ ಕಾಂಪನ್‌ಸೇಟ್ ಮಾಡಬೇಕು? ಇವತ್ತು ಸಾಲ ಮಾಡಿರುವ ಹೊರೆ ನನ್ನ ಮೇಲೂ ಕೂಡ ಇದೆ. ಇವತ್ತು ನಾನೂ ಕೂಡ ಸಾಲವನ್ನು ವಾಪಸ್ಸು ಕೊಡಬೇಕಾಗುತ್ತದೆ. ಆದರೆ, ನನ್ನ ಜಮೀನನ್ನು ನೀರಾವರಿ ಪ್ರದೇಶವನ್ನಾಗಿ ಮಾಡಬೇಕಾದರೆ ಕನಿಷ್ಠ ಪಕ್ಷ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. 5 ಪೈಸೆ ಖರ್ಚು ಇಲ್ಲದೇ ಆ ಭಾಗದ ರೈತರ ನೀರು ಪಡೆಯುತ್ತಿದ್ದಾರೆ; ಆದರೆ, ಈ ಭಾಗದ ರೈತರು ಏನು ಮಾಡಬೇಕು? ವಾಟರ್ ರೇಟ್‌ನ್ನು ಜಾಸ್ತಿ ಮಾಡಿದರೆ ಮಾನ್ಯ ಪುಟ್ಟಣ್ಣಯ್ಯನವರು ಜಗಳಕ್ಕೆ ಬರುತ್ತಾರೆ ಮತ್ತು ಅಲ್ಲಿರತಕ್ಕಂಥ ಮೇಂಟೇನನ್ಸ್‌ಗಾದರೂ ಹಣ ಕೊಡಿ ಎಂದರೆ ಕೊಡುವುದಿಲ್ಲ. ಇವತ್ತು ಇರತಕ್ಕಂಥ ವಾಟರ್ ರೇಟ್ ಕೂಡ ಅವೈಜ್ಞಾನಿಕವಾಗಿ ಇದೆ. ಇದರಲ್ಲಿ ಶೇಕಡ 5 ರಷ್ಟು ಕೂಡ ವಸೂಲು ಆಗುತ್ತಿಲ್ಲ. ಈ ಪರಿಸ್ಥಿತಿ ಇರುವಾಗ, ಈ ಭಾಗದಲ್ಲಿರತಕ್ಕಂಥವರು ಮೊದಲಿನಿಂದಲೂ ನೀರಾವರಿಯಿಂದ ವಂಚಿತರಾಗಿರತಕ್ಕಂಥ ಭಾಗಗಳಿಗೆ ಸಮನಾಗಿ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಇದೇ ಪರಿಸ್ಥಿತಿಯನ್ನು ಮುಂದುವರಿಸಿದರೆ ಅನುಕೂಲವಾಗುತ್ತದೆ. ಯಾವಾಗಲೂ ಕೂಡ ಸಮಾನತೆಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ಇವರು ಮೊದಲಿನಿಂದಲೂ ನೀರಾವರಿ ಸೌಲಭ್ಯವನ್ನು ಪಡೆದುಕೊಂಡು ಬಂದಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಬೈರೇಗೌಡರು ತತ್ವ ಹೇಳುವುದರಲ್ಲಿ ಬಹಳ ಒಳ್ಳೆಯವರು. ಮಾನ್ಯ ಗುಂಡೂರಾವ್‌ರವರ ಕಾಲದಲ್ಲಿ ಇದನ್ನು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಿದಾಗ, ಆ ಸಂದರ್ಭದಲ್ಲಿ ಎಲ್ಲರೂ ಕೂಡ ರೈತರಿಗೆ ಪ್ರಚೋದನೆ ಮಾಡಿ ಬೆಟರ್‌ಮೆಂಟ್ ತೆರಿಗೆ ಮತ್ತು ವಾಟರ್ ರೇಟ್ ಬೇಡ ಎನ್ನತಕ್ಕಂಥ ಸ್ಥಿತಿಗೆ ಹೋಗಿ ಮುಟ್ಟಿತ್ತು. ಆ ಮೇಲೆ ಚಡ್ಡಿ ಮೆರವಣಿಗೆಯನ್ನೂ ಸಹ ಮಾಡಿದರು.

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಚಡ್ಡಿ ಮೆರವಣಿಗೆ ಬೇರೆ ಕಾರಣಕ್ಕೋಸ್ಕರ ನಡೆಯಿತು. ಇವತ್ತು ಮಾನ್ಯ ಪುಟ್ಟಣ್ಣಯ್ಯನವರಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ, ಈ ಮೂಲಭೂತವಾದಂತಹ ವಿಚಾರವನ್ನು ನಾವು ರೈತರಿಗೆ ತಿಳಿಸಬೇಕಾಗುತ್ತದೆ ಮತ್ತು ಯಾರು ಅನ್ಯಾಯವಾಗಿ ನೀರನ್ನು ಪಡೆಯುತ್ತಿದ್ದಾರೆ ಅವರಿಗೂ ಕೂಡ ಇದನ್ನು ಮನವರಿಕೆ ಮಾಡಿಕೊಡಬೇಕಾಗುತ್ತದೆ. ಅವರೂ ಕೂಡ ತಮ್ಮ ಜವಾಬ್ದಾರಿಯಿಂದ ವಾಪಸ್ಸು ಕೊಡುವುದಕ್ಕೆ ಬಹುಶಃ ತಾವು ಒಪ್ಪಿಸುತ್ತೀರೆಂದು ನನ್ನ ಭಾವನೆಯಾಗಿದೆ. ಆದ್ದರಿಂದ, ಇದರ ಬಗ್ಗೆ ದಯಮಾಡಿ ತಾವು ಏನು ಹೇಳುತ್ತೀರೆಂಬುದನ್ನು ತಿಳಿಸಿ.

ಅಧ್ಯಕ್ಷರು: 3 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ಇವತ್ತು ಮಾತನಾಡುವುದಕ್ಕೆ ಯಾರಿಗೂ ಹೆಚ್ಚಿಗೆ ಸಮಯವನ್ನು ಕೊಡುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಬೈರೇಗೌಡರು ಹಿರಿಯ ಸಚಿವರು, ತಾವು ಈ ರೀತಿಯಾಗಿ ಮಾತನಾಡಬಾರದು. ಇವತ್ತು ಇಡೀ ದೇಶ ಮತ್ತು ಪ್ರಪಂಚದಲ್ಲಿ ನೀರು ಹೋಗತಕ್ಕಂಥ ಜಾಗಗಳಲ್ಲಿ, ಅಂದರೆ ನೀರಾವರಿ ಪ್ರದೇಶಗಳಲ್ಲಿ ನೀರಾವರಿ ಅಚ್ಚುಕಟ್ಟನ್ನು ಮಾಡಿ ದೇಶದ ಮತ್ತು ರಾಜ್ಯದ ಅಭಿವೃದ್ಧಿಗಾಗಿ ಉತ್ಪಾದನೆ ಮಾಡುವುದಕ್ಕೆ ರೈತರಿಗೆ ನೀರನ್ನು ಕೊಡುವುದರ ಮೂಲಕ ನಾವೆಲ್ಲಾ ಬದುಕುತ್ತಿದ್ದೇವೆ. ಇವತ್ತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರೈತರು ಸಾವಿರಾರು ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಇವತ್ತು ಸಣ್ಣನೀರಾವರಿಗೆ ಹೆಚ್ಚು ಒತ್ತು ಕೊಟ್ಟು 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪಂಪ್‌ಸೆಟ್‌ಗಳಿಂದ ನೀರಾವರಿ ಮಾಡುತ್ತಿದ್ದೇವೆಂದು ಮತ್ತು ಸ್ವಂತವಾಗಿ 15 ಕೋಟಿ ಬಂಡವಾಳ ಹೂಡಿಸಿ ಸುಮಾರು 44 ಲಕ್ಷ ಎಕರೆ ಪ್ರದೇಶಗಳಲ್ಲಿ ತರಕಾರಿ ಮತ್ತು ಇತರೆ ಪದಾರ್ಥಗಳನ್ನು ಉತ್ಪಾದನೆ ಮಾಡುತ್ತಿದ್ದಾರೆಂದು ತಾವು ನೆನ್ನೆ ದಿವಸ ಹೇಳಿದ್ದೀರಿ. ನಾವು ಮೊದಲಿನಿಂದಲೂ ನೀರನ್ನು ಪಡೆಯುತ್ತಾ ಬಂದಿದ್ದೇರೆಂದು ತಾವು ಹೇಳುತ್ತಿದ್ದೀರಿ. ನಮ್ಮ ಕಡೆ ನೀರು ಹರಿದು ಬರುತ್ತಿರುವುದರಿಂದ ನಮಗೆ ನೀರು ಕೊಟ್ಟರು. ನಾನು ವಾಸವಾಗಿದ್ದು ಚಿಕ್ಕನ ಹಳ್ಳಿಯಲ್ಲೆ. ನಾವು ಹೆಂಚು ಕೈ ಆಡುವುದಕ್ಕೆ ಬಂದವರು. ಹಂಚು ಕೈ ಆಡುತ್ತಾ ಒಂದೆರಡು ಎಕರೆ ಜಮೀನನ್ನು ತೆಗೆದುಕೊಂಡು ಅಲ್ಲಿ ಬದುಕುತ್ತಿದ್ದೇವೆ. ನಮ್ಮ ತಾತನವರು ಮೊದಲಿನಿಂದಲೂ ಡ್ರೈ ಏರಿಯಾದಲ್ಲಿದ್ದವರು. ಇವತ್ತಿನ ದಿವಸ ನೀರಾವರಿ ಪ್ರದೇಶಗಳಿಗೆ ಮತ್ತು ಮಳೆ ಆಧಾರಿತ ಪ್ರದೇಶಗಳಲ್ಲಿ ಏನೇನು ಕಾರ್ಯ ಕ್ರಮಗಳನ್ನು ಹಾಕಿಕೊಂಡು ಬಂದಿದ್ದೀರಿ ಎಂಬುದನ್ನು ತಾವು ಯೋಚನೆ ಮಾಡಬೇಕು. ಸಣ್ಣ ನೀರಾವರಿಗೆ 109 ಕೋಟಿ ರೂಪಾಯಿಗಳನ್ನು ಕೊಟ್ಟು ಏಕೆ ಸುಮ್ಮನಿದ್ದೀರಿ? 109 ಕೋಟಿ ರೂಪಾಯಿ ಮೂಲಕ ಸುಮಾರು ನಾಲ್ಕನೇ ಮೂರು ಭಾಗದ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಿಲ್ಲವೆ? ನೀರು ಕೊಡುತ್ತಿದ್ದೇವೆ ಆದ್ದರಿಂದ ರೈತರು ಜಾಸ್ತಿ ತೆರಿಗೆ ಕೊಡಬೇಕೆಂದು ತಾವು ಹೇಳುತ್ತಿದ್ದೀರಿ, ಅದಕ್ಕಾಗಿ ಇವತ್ತು ರೈತರಿಗಾಗಿ ವೈಜ್ಞಾನಿಕವಾಗಿ ಬೆಲೆಯನ್ನು ಫಿಕ್ಸ್ ಮಾಡಿ ಹಣವನ್ನು ವಸೂಲು ಮಾಡಿ. ಇದನ್ನು ಮಾತ್ರ ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ. ಇವತ್ತು 19-20 ತಿಂಗಳ ಕಾಲ ಕಬ್ಬನ್ನು ರೈತ ಬೆಳೆದು ಕೇವಲ 35 ಟನ್ ಇಳುವರಿ ಬರುತ್ತದೆ. ತಡವಾಗಿ ಇಳುವರಿ ಬರುವುದರಿಂದ ಆತ ಏನು ಮಾಡಬೇಕು? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಮಹಿಳೆಯರಿಗೆ ಉದ್ಯೋಗ ಕೊಡಿಸುತ್ತೇವೆಂದು ಹೇಳಿದ್ದೀರಿ. ಕರ್ನಾಟಕ ರಾಜ್ಯದಲ್ಲಿ 29 ಜೆಮ್ಸ್ ಕಟಿಂಗ್ ಕಾರ್ಖಾನೆಗಳನ್ನು ಸರ್ಕಾರ ಸುಮಾರು ಕೋಟಿ ರೂಪಾಯಿಗಳನ್ನು

ಖರ್ಚು ಮಾಡಿ ಸೆಂಟರ್‌ಗಳನ್ನು ಓಪನ್ ಮಾಡಿದೆ. ಈ ಘಟಕಗಳು ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿಯೂ ಇದೆ. ಸುಮಾರು 700-800 ಜನ ಮಹಿಳೆಯರು 1993ನೇ ಇಸವಿಯಿಂದ ಉದ್ಯೋಗವನ್ನು ಮಾಡುತ್ತಿದ್ದರು. ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿರುವವರಿಗೆ ಆ ಜೇಮ್ಸ್‌ಕಟಿಂಗ್‌ನವರು ಸಂಬಳವನ್ನು ಕೊಟ್ಟಿಲ್ಲ. ಅಲ್ಲಿ ಕೆಲಸ ಮಾಡುವ ಎಲ್ಲಾ ಹೆಣ್ಣುಮಕ್ಕಳು ಕೆ.ಎಸ್.ಎಫ್.ಸಿ.ಯಿಂದ ಸಾಲವನ್ನು ತೆಗೆದುಕೊಂಡಿದ್ದಾರೆ. ಕೆ.ಎಸ್.ಎಫ್.ಸಿ.ಯಿಂದ ಸಾಲ ಪಡೆದಂಥ ಹೆಣ್ಣುಮಕ್ಕಳಿಗೆ ಈಗ ನೋಟೀಸ್‌ನ್ನು ಕೊಟ್ಟಿದ್ದಾರೆ. ಅಲ್ಲಿ ಕೆಲಸ ಮಾಡುತ್ತಿರುವವರಿಗೆ ಆ ಜೇಮ್ಸ್ ಕಟಿಂಗ್‌ನವನು 4 ರಿಂದ 6 ತಿಂಗಳವರೆಗೆ ಸಂಬಳವನ್ನು ಕೊಡಬೇಕು. ಮೊನ್ನೆ ದಿನ ಮಂಡ್ಯ ಜಿಲ್ಲೆಯಲ್ಲಿ ಎಲ್ಲಾ ಹೆಣ್ಣುಮಕ್ಕಳು ಸೌಟಿನ ಚಳುವಳಿಯನ್ನು ಮಾಡಿದರು. ಆದುದರಿಂದ ಅವರಿಗೆ ಉದ್ಯೋಗವಿಲ್ಲದಂತಾಗಿವೆ. ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು. ಸರ್ಕಾರದವರು ಮಹಿಳಾ ಆಯೋಗವೆಂದು ಮಾಡಿದ್ದೀರಿ. ಮಹಿಳೆಯರಿಗೆ ಹೆಚ್ಚಿನ ಉದ್ಯೋಗವನ್ನು ಕೊಡಬೇಕೆಂಬ ಬಗ್ಗೆ ತಾವು ಚಿಂತನೆಯನ್ನು ಮಾಡಿದ್ದೀರಿ. ಅವರಿಗೆ ಏನಾದರೂ ಉದ್ಯೋಗವನ್ನು ಕೊಡುವುದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕು. ಆ ಜೇಮ್ಸ್ ಕಟಿಂಗ್‌ನವನು ವಿಶ್ವ ಯೋಜನೆಯ ಅಡಿಯಲ್ಲಿ ಕೃತಕ ಹರಳು ಘಟಕವನ್ನು ಪ್ರಾರಂಭ ಮಾಡಿ ತರಬೇತಿಯನ್ನು ಕೊಟ್ಟು ಅವರು ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರ ಜವಾಬ್ದಾರಿಯಾಗಿ ಕೆಲಸವನ್ನು ಮಾಡಿಲ್ಲ. ಮೊನ್ನೆ ದಿನ ಅರಣ್ಯಭವನದ 9ನೇ ಮಹಡಿಯಲ್ಲಿ ಕುಳಿತುಕೊಂಡು 44ನೇ ವನ್ಯ ಮೃಗಗಳ ಸಪ್ತಾಹವನ್ನು ಮಾಡುತ್ತಿದ್ದೀರಿ. ವನ್ಯಮೃಗಗಳು ಮತ್ತು ರೈತರು ಪ್ರಕೃತಿದತ್ತವಾಗಿ ಬಂದಿರತಕ್ಕಂತಹ ಅನಾನುಕೂಲಗಳ ಬಗ್ಗೆ, ತಾವು ಮಾಡಬೇಕಾದಂತಹ ಕೆಲಸ ಎಲ್ಲಾ ತಾಲ್ಲೂಕುಗಳ ಮುಖ್ಯಕೇಂದ್ರಗಳ ಪಕ್ಷಿಗಳು, ಪ್ರಾಣಿಗಳು, ಯಾವ ಯಾವ ಪ್ರಾಣಿಗಳು ಕೊಡುಗೆಯ ಮೂಲಕ ನಾವು ಕೃಷಿ ಕ್ಷೇತ್ರವನ್ನು ಉಳಿಸಿಕೊಳ್ಳಬಹುದು ಎನ್ನುವಂತಹ ವಿಚಾರವನ್ನು ಗ್ರಾಮಾಂತರ ಪ್ರದೇಶಗಳ ಜನರಿಗೆ ಹೇಳಬೇಕಾಗಿದೆ. ಅರಣ್ಯ ಭವನದಲ್ಲಿ 9ನೇ ಮಹಡಿಯಲ್ಲಿ ಕುಳಿತುಕೊಂಡು ವನ್ಯಮೃಗಗಳ ಸಪ್ತಾಹವನ್ನು ಮಾಡುತ್ತೀರೆಂದರೆ ಅದರ ಅರ್ಥ ನನಗೆ ಗೊತ್ತಾಗಲಿಲ್ಲ. ಬೀದರ್, ಗುಲ್ಬರ್ಗಾಗಳಲ್ಲಿ ಇಷ್ಟೊಂದು ಅನಾಹುತಗಳಾಗಿದ್ದರೂ ಅದಕ್ಕೆ ಕಾರಣಗಳೇನು ಅದಕ್ಕೆ ಮುಖ್ಯವಾದ ಅಂಶಗಳ ಬಗ್ಗೆ ಚಿಂತನೆಯನ್ನು ಮಾಡದೆ ಅರಣ್ಯ ಭವನದಲ್ಲಿ 9ನೇ ಮಹಡಿಯಲ್ಲಿ ಕುಳಿತುಕೊಂಡು ವನ್ಯಮೃಗ ಪಕ್ಷಿಗಳ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದೀರಿ. ಇದಕ್ಕೆ ಏನು ಮಾಡುವುದು? ಒಂದು ಸರ್ಕಾರ ಕನಿಷ್ಟ ಅತ್ಯಂತ ಪ್ರಮುಖವಾದ ವಿಷಯಗಳ ಬಗ್ಗೆ ಚಿಂತನೆಯನ್ನು ಮಾಡಿ ಚರ್ಚೆ ಮಾಡಿ, ಯಾವ ರೀತಿಯಲ್ಲಿ ಸಮಾಜದ ಜನರನ್ನು ಎಜ್ಯುಕೇಟ್ ಮಾಡಬೇಕು, ಜನರನ್ನು ಯಾವ ರೀತಿಯಲ್ಲಿ ಇನ್‌ವಾಲ್ವಮೆಂಟ್ ಮಾಡಬೇಕು. ಇಷ್ಟೊಂದು ಪೆಸ್ಟಿಸೈಡ್ಸ್ ಹೊಡೆಯುತ್ತಾ ಇದ್ದೇವೆ. ಇಷ್ಟೊಂದು ಪೆಸ್ಟಿಸೈಡ್ಸ್ ಹೊಡೆಯುವುದರ ಮೂಲಕ ಹಕ್ಕಿ ಪಕ್ಷಿಗಳು ನಾಶವಾಗುತ್ತಿದೆ. ನಾವು ಹಕ್ಕಿಪಕ್ಷಿಗಳನ್ನು ಕಳೆದುಕೊಂಡರೆ ನಾವು ಬದುಕುವುದಕ್ಕೆ

ಸಾಧ್ಯವೇ? ತಾವು ಇದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಸರ್ಕಾರವೆಂದರೆ ಯುದ್ಧದೋಪಾದಿಯಲ್ಲಿ ಕೆಲಸವನ್ನು ಮಾಡಬೇಕು. ಸರ್ಕಾರದವರು ಮಾತು ಎತ್ತಿದರೆ, ರೈತರು, ಕೃಷಿ ಮತ್ತು ಹಳ್ಳಿ ಎಂಬ ವಿಚಾರವನ್ನು ತಾವು ಮಾತನಾಡುತ್ತಿದ್ದೀರಿ. ತಾವು ಇದರ ಬಗ್ಗೆ ಏನಾದರೂ ಬದಲಾವಣೆ ಮಾಡುವುದರ ಬಗ್ಗೆ ಯೋಚನೆಯನ್ನು ಮಾಡಿದ್ದೀರಾ? ತಮ್ಮ ಪಕ್ಷ ಅಧಿಕಾರಕ್ಕೆ ಬಂದು ನಾಲ್ಕು ವರ್ಷ ಮುಗಿಯುತ್ತಾ ಇದೆ, ಇನ್ನೊಂದು ವರ್ಷ ಬಾಕಿ ಇದೆ. ಉಳಿದ ಒಂದು ವರ್ಷದಲ್ಲಿ ಕನಿಷ್ಟ ವೈಲ್ಡ್‌ಲೈಫ್ ಎಂದರೆ ಏನು? ಜನರಿಗೂ ವೈಲ್ಡ್ ಲೈಫ್‌ಗೂ ಏನು ಸಂಬಂಧ? ವನ್ಯಮೃಗಗಳಿಗೂ ನಮಗೂ ಏನು ಸಂಬಂಧ ಎನ್ನುವುದರ ಬಗ್ಗೆ ಚರ್ಚೆಯನ್ನು ಮಾಡತಕ್ಕಂಥ ಒಂದು ವೈಜ್ಞಾನಿಕವಾದ ಚಿಂತನೆಯನ್ನು ಅರಣ್ಯ ಇಲಾಖೆಯವರು ಮಾಡತಕ್ಕಂತಹ ಕೆಲಸವನ್ನಾದರೂ ಮಾಡಬೇಕು. ಕರ್ನಾಟಕ ರಾಜ್ಯದಲ್ಲಿ 1986ನೇ ಇಸವಿಯಿಂದ 1998ನೇ ಇಸವಿಯವರೆಗೆ ಇರಿಗೇಷನ್ ಟ್ರ್ಯಾಕ್ ರೋಡ್ಸ್ 20 ಸಾವಿರ ಕಿ.ಮೀ.ರಸ್ತೆ ಇದೆ. ಆ ರಸ್ತೆಗಳನ್ನು ಜಿಲ್ಲಾ ಪಂಚಾಯತ್‌ನವರು ವಹಿಸಿಕೊಂಡಿದ್ದಾರೆ. ಆದರೆ ಜಿಲ್ಲಾ ಪಂಚಾಯತ್‌ನವರು ಇದುವರೆಗೂ ಆ ರಸ್ತೆ ರೀಪೇರಿಗೆ ಒಂದು ರೂಪಾಯಿ ಅನುದಾನವನ್ನು ಕೊಟ್ಟಿಲ್ಲ. ನೀರಾವರಿ ಇಲಾಖೆಯವರು ಇರಿಗೇಷನ್ ಟ್ರ್ಯಾಕ್ ರೋಡ್ಸ್ ಯಾವುದೆಂದರೆ, ಇಡೀ ರೈತರು ತಮ್ಮ ಎಲ್ಲಾ ಪದಾರ್ಥಗಳನ್ನು ಗೊಬ್ಬರ ಮುಂತಾದ ಕೆಲಸಗಳಿಗೆ ಮಾಡತಕ್ಕಂಥದ್ದು ಇಡೀ ಕರ್ನಾಟಕದಲ್ಲಿ 20 ಸಾವಿರ ಕಿ.ಮೀ.ರಸ್ತೆಯಲ್ಲಿ ಒಂದು ಕಿ.ಮೀ.ರಸ್ತೆಯ ಕೆಲಸವನ್ನು ಮಾಡಿಲ್ಲ. ನಾವು ನೀರಾವರಿ ಇಲಾಖೆಯವರನ್ನು ಕೇಳಿದರೆ ಆ ರಸ್ತೆ ಜಿಲ್ಲಾ ಪಂಚಾಯತ್‌ಗೆ ಬರುತ್ತದೆ ಎಂದು ಹೇಳುತ್ತಾರೆ. ನಾವು ಜಿಲ್ಲಾ ಪಂಚಾಯತಿಯವರನ್ನು ಕೇಳಿದರೆ ನಮಗೆ 10 ವರ್ಷದಿಂದ ಅನುದಾನ ಬಿಡುಗಡೆಯಾಗಿಲ್ಲ, ನಾವು ಹೇಗೆ ರಸ್ತೆ ರಿಪೇರಿ ಕೆಲಸವನ್ನು ಮಾಡುವುದು ಎಂದು ಹೇಳುತ್ತಾರೆ. ತಾವು ಇರಿಗೇಷನ್ ಟ್ರ್ಯಾಕ್ ರೋಡ್‌ಗಳನ್ನು ಮಾಡುವುದಕ್ಕೆ ಎ.ಪಿ.ಎಂ.ಸಿ.ಯವರಿಗೆ ಅಲ್ಪಸ್ವಲ್ಪ ಹಣವನ್ನಾದರೂ ಕನಿಷ್ಟ ಪಕ್ಷ ಕೊಡಬೇಕೆಂಬುದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ಈಗಾಗಲೇ ಶಾಸಕರ ನೇತೃತ್ವದಲ್ಲಿ ಯಾವಯಾವ ರೋಡ್‌ಗಳು ರಿಪೇರಿಗೆ ಬರುತ್ತದೆಂದು ಮಾಡಿದ್ದೀರಿ. ಈಗಾಗಲೇ ಎ.ಪಿ.ಎಂ.ಸಿ.ಯಲ್ಲಿರುವ ನಿರ್ದೇಶಕರೇ ಕೆಲಸವನ್ನು ಮಾಡಬೇಕೆಂಬ ತೀರ್ಮಾನಕ್ಕೆ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಯೋಚನೆಯನ್ನು ಮಾಡಬೇಕು. ಈಗಾಗಲೇ ಪಿಡಬ್ಲ್ಯೂಡಿ ರಸ್ತೆಗಳು, ಎ.ಪಿ.ಎಂ.ಸಿ.ರಸ್ತೆಗಳು, ಶುಗರ್‌ಸೆಸ್ ರಸ್ತೆಗಳು, ಜಿಲ್ಲಾಪಂಚಾಯತ್ ರಸ್ತೆಗಳು, ಕಾಡಾ ರಸ್ತೆಗಳು, ಮಲೆನಾಡು ಅಭಿವೃದ್ಧಿ ರಸ್ತೆ, ನಬಾರ್ಡ್ ರಸ್ತೆ, ಯಾವ ಯಾವ ರಸ್ತೆಗಳು, ಯಾರ್ಯಾರಿಗೆ ಸೇರುತ್ತದೆ ಏನು ಎನ್ನುವುದೇ ಅರ್ಥವಾಗುತ್ತಿಲ್ಲ, ಸರ್ಕಾರದವರಿಗೆ ಒಂದು ರಸ್ತೆಯ ಬಗ್ಗೆ ಕಲ್ಪನೆಯಿಲ್ಲ. ಜಿಲ್ಲಾ ಪಂಚಾಯತಿಯವರು ಈ ನೇರವಾದ ರಸ್ತೆ ನಮಗೆ ಸೇರುತ್ತದೆ. ಮುಂದಿನ ರಸ್ತೆ ಪಿಡಬ್ಲ್ಯೂಡಿಗೆ ಸೇರುತ್ತದೆ. ಈ ರಸ್ತೆ ನಮಗೆ ಸೇರುವುದಿಲ್ಲ. ಇದು ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಸೇರುತ್ತದೆ ಎಂದು ಹೇಳುತ್ತಾರೆ. ಒಂದು ರೋಡ್ ಕಾನ್ಸೆಫ್ಟ್

ಒಂದು ರಾಜ್ಯದಲ್ಲಿ ಎಷ್ಟು ಕಿ.ಮೀ. ರಸ್ತೆಗಳು ಇದೆ. ಯಾವ ರೀತಿಯಲ್ಲಿ ರಸ್ತೆ ರಿಪೇರಿಯ ಕೆಲಸ ಮಾಡಬೇಕಾಗಿದೆ. ನಾವು ಯಾವ ದಿಕ್ಕಿನಲ್ಲಿ ಕೆಲಸವನ್ನು ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಬೇಕು. ತಾವುಗಳೆಲ್ಲರೂ ಈಗಾಗಲೇ ವಿದೇಶ ಪ್ರವಾಸಕ್ಕೆ ಹೋಗಿಬಂದಿದ್ದೀರಿ. ತಾವು ವಿದೇಶದಲ್ಲಿ ರಸ್ತೆಗಳನ್ನು ನೋಡಿದ್ದೀರಿ. ತಾವು ವಿದೇಶಕ್ಕೆ ಹೋಗಿ ಬಂದ ಬಗ್ಗೆ ಏನಾದರೂ ಹೇಳಬೇಕು. ವಿದೇಶದಲ್ಲಿ ಏನೇನು ನೋಡಿದ್ದೀರಿ? ಈ ರಾಜ್ಯದಲ್ಲಿ ಏನನ್ನು ಅನುಷ್ಠಾನಕ್ಕೆ ತರಬೇಕೆಂದಿದ್ದೀರಿ? ಯಾವ ರೀತಿಯ ಬದಲಾವಣೆಯನ್ನು ಮಾಡಬೇಕೆಂದಿದ್ದೀರಿ? ತಾವು ವಿದೇಶಕ್ಕೆ ಹೋಗಿದ್ದರ ಬಗ್ಗೆ ಏನನ್ನು ತಿಳಿದುಕೊಂಡು ಬಂದಿದ್ದೀರಿ? ಅಲ್ಲಿ ತಾವು ರಸ್ತೆಗಳನ್ನು ನೋಡಿದ್ದೀರಿ. ವಿದೇಶದಲ್ಲಿ ಏನು ಬದಲಾವಣೆಯಾಗಿದೆ. ನಾನೂ ಸಹ ರೋಮ್‌ಗೆ ಹೋಗಿದ್ದೆ. ಆ ರೋಮ್‌ನಲ್ಲಿ ಎಲ್ಲಾ ರಸ್ತೆಗಳು ಚೆನ್ನಾಗಿದೆ. ನಾನು ಜನಸಂಖ್ಯೆ ಎಷ್ಟು ಇದೆ ಎಂದು ಕೇಳಿದೆ. ಅದಕ್ಕೆ ಅವರು 1930ನೇ ಇಸವಿಯಲ್ಲಿ ಎಷ್ಟು ಜನಸಂಖ್ಯೆ ಇತ್ತೋ, ಇವತ್ತು ಅಷ್ಟೇ ಜನ ಸಂಖ್ಯೆ ಆ ರೋಮ್ ನಗರದಲ್ಲಿದೆ. ನಮ್ಮ ದೇಶದಲ್ಲಿ 1930ನೇ ಇಸವಿಯಲ್ಲಿ 30 ಕೋಟಿ ಜನಸಂಖ್ಯೆ ಇತ್ತು, ಈಗ 91ಕೋಟಿಗೂ ಹೆಚ್ಚಿನ ಜನಸಂಖ್ಯೆ ಇದೆ. ಜನಸಂಖ್ಯೆಯನ್ನು ತಡೆಗಟ್ಟುವುದಕ್ಕೆ ಬಜೆಟ್‌ನಲ್ಲಿ 10 ಪರ್ಸೆಂಟ್ ಜನಸಂಖ್ಯೆಯನ್ನು ನಿಯಂತ್ರಣ ಮಾಡುವುದಕ್ಕೆ ಯುದ್ಧದೋಪಾದಿಯಲ್ಲಿ ಕೆಲಸ ಮಾಡಿದರೆ ಅದು ಸಾಧ್ಯವಾಗುತ್ತದೆ. ಈಗ ಸ್ವಲ್ಪ ಏನೋ ಲೋಕೋಪಯೋಗಿ ಸಚಿವರು ಕೆಲಸವನ್ನು ಮಾಡಿದ್ದಾರೆ. ರಸ್ತೆ ಚೆನ್ನಾಗಿಲ್ಲದಿರುವ ಕಾರಣದಿಂದ ರಸ್ತೆಗಳ ಅಪಘಾತವಾಗಿ ಜನಗಳು ಆಟೋಮ್ಯಾಟಿಕ್ ಆಗಿ ಸಾಯುತ್ತಿದ್ದಾರೆ. ಅದರ ಮೂಲಕವಾಗಿ ಜನಸಂಖ್ಯೆ ನಿಯಂತ್ರಣವಾಗುತ್ತಿದೆ. ಫ್ಯಾಮಿಲಿ ಪ್ಲಾನಿಂಗ್ ಇಲ್ಲದಿದ್ದರೂ ರಸ್ತೆಗಳು ಚೆನ್ನಾಗಿಲ್ಲದಿದ್ದರೆ ಜನಸಂಖ್ಯೆ ನಿಯಂತ್ರಣವಾಗುತ್ತದೆ. ಯಾರೋ ಒಬ್ಬ ಕಿವುಡ ಮಹಾರಾಜನಿದ್ದನಂತೆ, ಆ ರಾಜನು ನಮ್ಮ ರಸ್ತೆಗಳು ಯಾವ ರೀತಿ ಇರುವುದರ ಬಗ್ಗೆ ವಿವರಿಸುವಂತನಾಗು ಎಂದು ಹೇಳಿದನಂತೆ, ಆಗ ಮಹಾಪ್ರಭು ನಾನು ಏನೆಂದು ಬಣ್ಣಿಸಲಿ, ರಾಜ್ಯದಲ್ಲಿ ಎಲ್ಲಾ ರಸ್ತೆಗಳು, ಹಳ್ಳಕೊಳ್ಳಗಳಿಂದ ಕೂಡಿದ್ದು ಯಾವುದೇ ವಾಹನಗಳು ಸದಾ ಕಾಲ ಚೆನ್ನಾಗಿ ಓಡಾಡದೆ ಅಲ್ಲಲ್ಲಿ ಅಪಘಾತಗಳಿಗೆ ಒಳಗಾಗಿ ಜನಸಂಖ್ಯೆ ಕಡಿಮೆಯಾಗುತ್ತಿರುವವರು ಮಹಾಪ್ರಭು ಎಂದು ಹೇಳಿದನಂತೆ. ಆಗ ರಾಜನು ನಿನ್ನಂತಹ ಪಿಡಬ್ಲ್ಯೂಡಿ ಹಾಗೂ ಜಿಲ್ಲಾ ಪಂಚಾಯತ್ ರಸ್ತೆ ಮಾಡುವಂತಹ ಮಂತ್ರಿಗಳನ್ನು ಪಡೆದ ನಾನೇ ಪುಣ್ಯಶಾಲಿ ಎಂದು ಹೇಳಿದನಂತೆ. ಏಕೆಂದರೆ ರಾಜನಿಗೆ ಕಿವುಡು, ಏನು ಹೇಳಿದರೂ ಕೇಳಿಸುವುದಿಲ್ಲ. ಆ ಸ್ಥಿತಿಗೆ ನಾವು ಬಂದಿದ್ದೇವೆ. ಫ್ಯಾಮಿಲಿ ಪ್ಲಾನಿಂಗ್ ಇಲ್ಲದಿದ್ದರೂ ರಸ್ತೆಗಳು ಸರಿಯಾಗಿ ಮಾಡದಿದ್ದರೆ ಜನಗಳು ಸಾಯುತ್ತಾರೆ. ನಾವು ನೆಮ್ಮದಿಯಾಗಿ ಆರಾಮವಾಗಿ ಇರಬಹುದು. ಮಾನ್ಯ ಉದಾಸಿಯವರೆ, 30 ವರ್ಷಗಳ ಹಿಂದೆ ಒಂದು ರಸ್ತೆಯಲ್ಲಿ ಎಷ್ಟು ವಾಹನಗಳು ಓಡಾಡುತ್ತಿತ್ತು? ಈಗ ಆ ರಸ್ತೆಗಳಲ್ಲಿ ಎಷ್ಟು ವಾಹನಗಳು ಓಡಾಡುತ್ತಿದೆ? ಈಗಲೂ ಸಹ 20 ಎಂಎಂ ಜಲ್ಲಿ ಹಾಕಿ ರಸ್ತೆಯನ್ನು ಮಾಡಿಸಿದರೆ ಚೆನ್ನಾಗಿರುತ್ತದೆ. ಈಗಲೂ ನಮ್ಮ ಹಳ್ಳಿಗಳ ಕಡೆ ಜನರು

ಪಿಡಬ್ಲ್ಯೂಡಿ ಎಂದರೆ ಏನು ಎಂದು ಕೇಳುತ್ತಾರೆ. ಪಕೋಡ, ವಡೆ, ದೋಸೆ ಎಂದು ಹೇಳುತ್ತಾರೆ. ಆ ರಸ್ತೆಯನ್ನು ಮಾಡುವಾಗ ಜಲ್ಲಿ ಹಾಕಿದಾಗ ಪಕೋಡ ಇದ್ದ ಹಾಗೆ ಇರುತ್ತದೆ. ಒಂದು ಸಾರಿ ಜಲ್ಲಿಗಳ ಮೇಲೆ ರೋಡ್‌ರೋಲರ್ ಹೋದಾಗ ಅದು ವಡೆಯಾಗುತ್ತದೆ. ಪುನಃ ಇನ್ನೊಂದು ಸಾರಿ ರೋಡ್‌ರೋಲರ್ ಹೋದಾಗ ಅದು ದೋಸೆಯಾಗುತ್ತದೆ. ನಮ್ಮ ಹಳ್ಳಿಯ ಜನರು ಈ ರೀತಿ ಹೇಳುತ್ತಾರೆ. ಪಿಡಬ್ಲ್ಯೂಡಿ ಎಂದರೆ ಪಕೋಡ, ವಡೆ, ದೋಸೆ ಎಂದು ಹೇಳುತ್ತಾರೆ. ದಯವಿಟ್ಟು ಏನಾದರೂ ಒಂದು ಬದಲಾವಣೆಯನ್ನು ಮಾಡಿ. ಈಗ ನೀವು ಎಲ್ಲಾ ಕಡೆ ನೋಡಿ 50 ಎಂಎಂ, 60ಎಂಎಂ ಜಲ್ಲಿಯನ್ನು ಹಾಕಿರುತ್ತಾರೆ. ಈಗ ನ್ಯಾಷನಲ್ ಹೈವೆಗೆ 100 ಎಂಎಂ ಜಲ್ಲಿಯನ್ನು ಹಾಕಿರುತ್ತಾರೆ. ಬೇಡವೆಂದರೆ 2 ಕಿ.ಮೀ. ರಸ್ತೆಯನ್ನು ಕಡಿಮೆ ಮಾಡಿ. ನಾನು ರಾಜ್ಯದಾದ್ಯಂತ ನೋಡಿದ್ದೇನೆ, ಎಲ್ಲಿ ರಸ್ತೆಯಲ್ಲಿ ನೀರು ಹರಿಯುವುದಿಲ್ಲ ಎಲ್ಲಿ ಕನಿಷ್ಟ ಡ್ರೈನೇಜ್ ಇರುತ್ತದೆ. ಆ ಕಡೆ ಒಂದು ಸ್ವಲ್ಪ ರಸ್ತೆಯೂ ಹಾಳಾಗಿರುವುದಿಲ್ಲ. ಆ ಡಾಂಬರೀಕರಣಕ್ಕೆ ನೀರು ಜಾಸ್ತಿಯಾದರೆ ಪೂರ್ಣ ರಸ್ತೆಗಳು ಹಾಳಾಗುತ್ತದೆ. ನೀವು ಕಳೆದ 8 ತಿಂಗಳಲ್ಲಿ ಪಾಂಡವಪುರ ಬೀದರ್ ರಸ್ತೆಯನ್ನು ಮಾಡಿದ್ದೀರಿ. ಈಗಾಗಲೇ ಆ ರಸ್ತೆಗಳು ಹಾಳಾಗಿದೆ. ಕಾರಣವೇನೆಂದರೆ ಶೈತ್ಯಾಂಶ ಇರತಕ್ಕಂತಹ ಜಾಗದಲ್ಲಿ ಕನಿಷ್ಟವಾದರೂ ಡ್ರೈನೇಜ್‌ನ್ನು ಮಾಡಬೇಕು. ನಿಮ್ಮಲ್ಲಿ ಡ್ರೈನೇಜ್‌ಗೆ ಪ್ರಾವಿಷನ್ ಇಲ್ಲವಲ್ಲ. ಡ್ರೈನೇಜ್‌ನ್ನು ಎಲ್ಲಾ ಕಡೆಯೂ ಮಾಡಬೇಕು. ಬಹಳ ಶೀತಾಂಶವಿರುವ ಕಡೆ, ಡ್ರೈನೇಜನ್ನು ಮಾಡಿಸಿದರೆ, ಇಲ್ಲದಿದ್ದರೆ ರಸ್ತೆಗಳು ಉಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಾವೆಲ್ಲಾ ವಿದೇಶಕ್ಕೆ ಹೋಗಿಬಂದಿದ್ದೀರಿ. ಅಲ್ಲಿಯ ರಸ್ತೆಗಳು ಹೇಗಿದೆ? ಅಧಿಕಾರಿಗಳು ಮತ್ತು ನೀವೆಷ್ಟು ಜನ ವಿದೇಶಕ್ಕೆ ಹೋಗಿದ್ದೀರಿ? ನಾವು 100 ಕೋಟಿ ಜನಂಖ್ಯೆಯನ್ನು ಇಟ್ಟುಕೊಂಡು, ತಲಾ ಎಂಟೂವರೆ ರೂಗಳನ್ನು ಕೊಟ್ಟು, ನಾವು ಊಟವನ್ನೇ ಮಾಡುವುದೋ ಅಥವಾ ನಿಮಗೆ ಟ್ಯಾಕ್ಸ್ ಅನ್ನು ಕೊಡುವುದೋ? ಇನ್ನು ಮೇಲೆ ನಾವು ರಸ್ತೆಯ ರಿಪೇರಿಯ ಸುದ್ದಿಗೆ ಹೋಗುವುದಿಲ್ಲ ಎಂದು ಹೇಳಿಬಿಡಿ. ಎಲ್ಲಾ ರಸ್ತೆಗಳು ಈ ರೀತಿಯಾಗಿಯೇ ಇರಲಿ ಎಂದು ತೀರ್ಮಾನ ಮಾಡಿದ್ದೇವೆಂದು ತಾವು ಹೇಳಬೇಕು. ನಾನೊಂದು ಕಾನ್ಸೆಫ್ಟ್ ಕೊಡುತ್ತೇನೆ, ಅದನ್ನು ಮಾಡಿ ಆ ಕೆಲಸವನ್ನು ನಾವೇ ಮಾಡಿಕೊಳ್ಳುತ್ತೇವೆ. ನಾನು ಈಗ ಎಲ್ಲಾ ಶಾಸಕರಿಗೂ ಟ್ರೈಪ್ ಮಾಡಿಸಿಕೊಡುತ್ತೇನೆ. ಕಾಂಗ್ರೆಸ್ ಆಗಲಿ, ಬಿಜೆಪಿ ಆಗಲಿ, ದಳ ಆಗಲಿ ಎಲ್ಲರೂ ಒಟ್ಟಾರೆಯಗಿ ಒಂದು ತಿರ್ಮಾನಕ್ಕೆ ಬರೋಣ. ರಾಜ್ಯದಲ್ಲಿ ಏನಾದರೂ ಒಂದು ಬದಲಾವಣೆಯನ್ನು ಮಾಡಬೇಕಲ್ಲವೇ? ಸುಮ್ಮನೆ ನಿರಾಶೆಯಿಂದ ನಾನು ಫಾರಿನ್‌ಗೆ ಹೋಗಿ ಬಂದೆ. ಇಲ್ಲಿ ಯಾರಿಗೂ ತೆರಿಗೆಯನ್ನು ಕೊಡಬೇಕಾಗಿಲ್ಲ. ಯಾವ ರಸ್ತೆಯನ್ನು ಏನೂ ಮಾಡುವುದಕ್ಕಾಗುವುದಿಲ್ಲ, ಎಂದು ಹೇಳಿಬಿಡಿ ಇನ್ನು ನಮ್ಮ ಕತೆ ಮುಗಿಯಿತು. ಇನ್ನೊಂದು ವರ್ಷ ನಮ್ಮ ಸರ್ಕಾರ ಇರುತ್ತೋ ಏನೋ?

10.00 ಪಿ.ಎಂ

ರಾಜ್ಯದಲ್ಲಿ ಏನಾದರೂ ಆಗಲಿ, ರಾಜ್ಯದ ಹಿತ ಏನಾದರೂ ಆಗಲಿ ಎನ್ನುವ ಒಂದು ತೀರ್ಮಾನಕ್ಕೆ ತಮ್ಮಂತಹ ಹಿರಿಯ ಸಚಿವರು ಬಂದರೆ ಏನು ಗತಿ? ಇದೇನಿದು? ಲೋಕೋಪಯೋಗಿ ಸಚಿವರು ದಯವಿಟ್ಟು ಸ್ವಲ್ಪ ಏನಾದರೂ ಯೋಚನೆ ಮಾಡಬೇಕು. ಕಲ್ಕತ್ತಾದಲ್ಲಿ ಒಂದು ಸೀರೆ ತೆಗೆದುಕೊಂಡರೆ ಎರಡು ಕೆ.ಜಿ. ಈರುಳ್ಳಿ ಕೊಡುತ್ತೇವೆಂದು ಹೇಳುತ್ತಾರೆ. ಇಲ್ಲಿ ಎರಡು ಮೂಟೆ ಈರುಳ್ಳಿ ಬೆಳೆದರೆ ಫ್ರೀ ಆಗಿ ವಿಷ ಕೊಡಬೇಕು. ಏಕೆ ಈ ಸ್ಥಿತಿ ಬಂತು? ಈರುಳ್ಳಿ ತೆಗೆದುಕೊಂಡು ಬಂದಂತಹ ರೈತ ಲಾರಿ ಬಾಡಿಗೆ ಕೊಡುವುದಕ್ಕೆ ಆಗದಿರುವ ಪರಿಸ್ಥಿತಿಯಲ್ಲಿ ವಾಪಸ್ಸು ಹೋದರು. ಇಡೀ ಪ್ರಪಂಚದಲ್ಲಿಯೇ ಈರುಳ್ಳಿ ಹೆಚ್ಚು ರೊಟೇಷನ್ ಮಾಡುವುದು. ಅದು ಇಡೀ ಪ್ರಪಂಚಕ್ಕೆ ಬೇಕಾದ್ದು. ಪ್ರಪಂಚಕ್ಕೆ ಬೇಕಾದ ಈರುಳ್ಳಿ ಬೆಲೆ ಈ ಸ್ಥಿತಿಗೆ ಬಂದಿದೆ. ಬಹಳ ಗಂಭೀರವಾದ ವಿಷಯ. ನಾನು ಸ್ಥಳಕ್ಕೆ ಹೋಗಿದ್ದೆ. ಹಿಟ್ಲರನ ಕಾಲದಲ್ಲಿ ಇಂತಹ ಬರ್ಬರಕೃತ್ಯ ನಡೆದಿದೆಯೋ ಇಲ್ಲವೋ ಗೊತ್ತಿಲ್ಲ. ಅಂತಹ ಬರ್ಬರಕೃತ್ಯ ಬಾಗೂರು ನವಿಲೆ ಟನಲ್ ವಿಷಯದಲ್ಲಿ ನಡೆದಿದೆ. ಬಾಗೂರಿನಲ್ಲಿ ಭೈರವೇಶ್ವರ ವೈನ್‌ಶಾಪ್‌ಗೆ ಪೋಲೀಸ್‌ನವರು ನುಗ್ಗಿ ಅಂಗಡಿಯನ್ನು ಲೂಟಿ ಮಾಡಿ ಸುಮಾರು 40ಸಾವಿರ ರೂಪಾಯಿಗಳ ಬೀರು ಬ್ರಾಂದಿ, ವಿಸ್ಕಿಯನ್ನು ಅಂಗಡಿಯವರಿಗೆ ಹೊಡೆದು ಕುಡಿದಿದ್ದಾರೆ. ಸಿಕ್ಕ ಸಿಕ್ಕ ಅಂಗಡಿಗಳ ಮಾಲೀಕರ ಮೇಲೆ ಹಲ್ಲೆ ಮಾಡಿದ್ದಾರೆ. ಬಾಗೂರು, ಗೊಲ್ಲರ ಹೊಸಹಳ್ಳಿ, ವಡ್ಡರಹಳ್ಳಿ, ದೇವನಹಳ್ಳಿ, ಚೌಡೇನಹಳ್ಳಿ, ಹೊನ್ನೇನಹಳ್ಳಿ, ಓಬಳಾಪುರ ಕಾಮನಾಯಕನಹಳ್ಳಿ, ರಂಗಾಪುರ, ಬ್ಯಾಲದಕೆರೆ ಇಲ್ಲಿ ಕೃಷಿ ಕಾರ್ಮಿಕ ಮಹಿಳೆಯರು ವಯಸ್ಸಾದ ಹೆಣ್ಣುಮಕ್ಕಳ ಮೇಲೆ ಅತ್ಯಂತ ಅಶ್ಲೀಲ ಭಾಷೆಯಲ್ಲಿ ಬೈದು, ಯಾವ ತರಹ ಭಾಷೆ ಉಪಯೋಗಿಸಿದ್ದಾರೆಂದರೆ ಅದು ಹೇಳುವುದಕ್ಕಾಗುವುದಿಲ್ಲ. ಚಳುವಳಿಗಾರರು ಊರಿನಲ್ಲಿ ನಮಗೆ ನ್ಯಾಯಬೇಕೆಂದು ಬೋರ್ಡ್ ಹಾಕಿದ್ದರೆ ಅದನ್ನು ಅಳಿಸಬೇಕೆಂದು ಏಟು ಹೊಡೆದಿದ್ದಾರೆ. ಆಮೇಲೆ ಬಹಳ ನೋವಿನ ಸಂಗತಿ ಏನೆಂದರೆ, ಆಶಾ ಮತ್ತು ಜಯಮ್ಮ ಅಪ್ರಾಪ್ತ ವಯಸ್ಸಿನ ಬಾಲಕಿಯರು ಆ ಬಾಲಕಿಯರಿಗೆ ದೊಣ್ಣೆ ತೆಗೆದುಕೊಂಡು ವಯಸ್ಸಿಗೆ ಬಂದ ಹೆಣ್ಣುಮಕ್ಕಳ ಮೇಲೆ ರೋಲರ್ ಉಜ್ಜಿದ್ದಾರೆ. ನನಗೆ ಅರ್ಥವಾಗುವುದಿಲ್ಲ. ಚಳುವಳಿ ಮಾಡಿದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಜೈಲಿಗೆ ಹಾಕಿ ಆದರೆ ಒಂದು ಹಳ್ಳಿಗೆ ನುಗ್ಗಿ ಬಡವರಿಗೆ ನೀವು ಯಾವುದೇ ರಾಜಕಾರಣ ಮಾಡಿ ನೀವು ಏನಾದರೂ ಮಾಡಿಕೊಳ್ಳಿ, ಸಾಮಾನ್ಯ ಜನರು ಏನು ಮಾಡುವುದಕ್ಕೆ ಸಾಧ್ಯ? ಚಳುವಳಿಯ ಹಕ್ಕನ್ನು ಕೇಳುವುದು ತಪ್ಪೇ? ಅತ್ಯಂತ ಅಮಾನುಷವಾಗಿ ಬರ್ಬರಕೃತ್ಯ ಮಾಡಿದ್ದಾರೆ ಅದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಯಾವುದಾದರೂ ಒಂದು ತನಿಖೆ ನಡೆಸಿ. ಸಾಮಾನ್ಯ ಜನರ ಮೇಲೆ ಪೋಲೀಸ್‌ನವರು ಇಷ್ಟೊಂದು ರೀತಿಯಲ್ಲಿ ದೌರ್ಜನ್ಯ ನಡೆಸಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾವು ಇದನ್ನು ಒಪ್ಪುತ್ತೀರಾ? ಹಿಟ್ಲರನ ಕಾಲದಲ್ಲಿ ನಡೆದಂತಹ ಅಮಾನುಷ ಕೃತ್ಯಗಳು ನೆನಪಿಗೆ ಬರುತ್ತವೆ. ನಾನು ಸ್ಥಳಕ್ಕೆ ಹೋಗಿದ್ದೆ. ನಿಮ್ಮನ್ನು ಅಧಿಕಾರದಿಂದ ಇಳಿಸಿ ನಾನು ಮುಖ್ಯಮಂತ್ರಿಯಾಗ ಬೇಕೆಂದು ನಾನು

ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ಸ್ಥಳವನ್ನು ಕಣ್ಣಾರೆ ನೋಡಿದ್ದೇನೆ. ವಯಸ್ಸಾದವರ ಮೇಲೆ ಘೋರ ಹಲ್ಲೆಯಾಗಿದೆ. ಹೆಣ್ಣುಮಕ್ಕಳ ಮೇಲೆ ಅವರ ತಂದೆತಾಯಿಗಳ ಮೇಲೆ ಹಲ್ಲೆ ಮಾಡಿದ್ದಾರೆ. ದಯವಿಟ್ಟು ಯಾವುದಾದರೂ ತನಿಖೆ ಮಾಡಿಸಿ ಪೋಲೀಸರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ವಿಜಯಕುಮಾರ್ ಸರ್ಕಲ್ ಇನ್ಸ್‌ಪೆಕ್ಟರ್, ಸುರೇಶ್ ಕಾಲಪ್ಪ ಇನ್ನೊಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ಮಾಚಯ್ಯ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ನಟರಾಜ್ ಸಬ್ ಇನ್ಸ್‌ಪೆಕ್ಟರ್, ಭೀಮಯ್ಯ ಸಬ್ ಇನ್ಸ್‌ಪೆಕ್ಟರ್ 50 ಜನ ರೈತರಿಗೆ ಪೋಲೀಸ್‌ರು ಏನೋ ನಿಮಗೆ ನ್ಯಾಯ ಬೇಕೇನೊ, ಎಂದು ಕೆಟ್ಟ ಭಾಷೆಯಲ್ಲಿ ಪೋಲೀಸ್‌ನವರು ಬೈದಿದ್ದಾರೆ. ಬೇರೆ ದೇಶದವರೆ? ಅವರಿಗೆ ಆತ್ಮಗೌರವ ಇಲ್ಲವೆ? ಗೋಪಾಲ ಮತ್ತು ಅವರ ಸಂಗಡಿಗರು 11 ಗಂಟೆಯಲ್ಲಿ ರಿಕ್ಷಾದಲ್ಲಿ ಹೋಗುವಾಗ ಚಾಕು ಹಾಕಿ ಹಲ್ಲೆಯಾಗಿದೆ. ಇದರ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಬೇಕು. ಎರಡನೆಯದಾಗಿ ಬಾಗೂರು ನವಿಲೆ ಹೋರಾಟಗಾರರನ್ನು ಕರೆದು ಮಾತನಾಡತಕ್ಕ ಜವಾಬ್ದಾರಿಯನ್ನು ಹೊರಬೇಕೆಂದು ಎರಡು ಪ್ರಮುಖ ವಿಷಯಗಳನ್ನು ಹೇಳುತ್ತಾ ನನಗೆ ಕಾಲಾವಕಾಶ ಇಲ್ಲದಿರುವುದರಿಂದ ಅಧ್ಯಕ್ಷರು ನಮಗೆ ಕಾಲಾವಕಾಶ ಇಷ್ಟೇ ಕೊಟ್ಟಿರುವುದರಿಂದ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಒಂದು ಲೀಟರ್‌ಗೆ 1.50 ಪೈಸೆ ಹಾಲು ಉತ್ಪಾದನೆ ಮಾಡುವವರಿಗೆ ಕಡ್ಡಾಯವಾಗಿ ಕೊಡಿಸುತ್ತೇವೆಂದು ಇಲ್ಲಿ ಘೋಷಣೆ ಮಾಡಿದ್ದಾರೆ. ಘೋಷಣೆ ಮಾಡಿದವರು ಯಾರ ಕೈಗೂ ಸಿಗುತ್ತಿಲ್ಲ. ಬೈರೇಗೌಡರು ಅಪರೂಪಕ್ಕೆ ಸಿಗುತ್ತಾರೆ. ಬಹಳ ಜೋರು ಮಾಡಿ ಇಲ್ಲಿ ಹೇಳಿದರು. ಎಮ್ಮೆ ಹಸು ಕಾಯುವವರಿಗೆ 1.50 ಪೈಸೆ ಕೊಡಿಸುತ್ತೇವೆಂದು. ಈಗ ಇವರು ಒಬ್ಬರೂ ಕೈಗೆ ಸಿಗುವುದಿಲ್ಲ. ಅವರು ಎಮ್ಮೆ ಹಸುಗಳನ್ನು ಹೊಡೆದುಕೊಂಡು ವಿಧಾನಸೌಧಕ್ಕೆ ಬರಬೇಕಾಗಿದೆ. ಈಗ ಅದು ಒಂದೇ ಬಾಕಿ ಇರುವುದು. ಎಲ್ಲಾ ಎಮ್ಮೆಗಳನ್ನು ಹೊಡೆದುಕೊಂಡು ವಿಧಾನಸೌಧಕ್ಕೆ ಬರಬೇಕಾಗುತ್ತದೆ.

ಅಧ್ಯಕ್ಷರು: ಎಮ್ಮೆಗಳನ್ನು ಹೊಡೆದುಕೊಂಡು ವಿಧಾನಸೌಧಕ್ಕೆ ಬರುವುದು ಬೇಡ. ಇಲ್ಲೇ ಸಾಕಷ್ಟು ಇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಒಂದು ಎಮ್ಮೆ ತಾನು ಸಾಯುವುದರೊಳಗೆ ಹತ್ತಾವರೆ ಸಾವಿರ ಲೀಟರ್ ಹಾಲು ಕೊಡುತ್ತದೆ. ಇಲ್ಲಿ ಹಾಲು ಕೊಡುವವರು ಯಾರಿದ್ದಾರೆ? ಹಾಲು ಕುಡಿಯುವವರು ಇರಬಹುದು ಅಷ್ಟೆ.

ಅಧ್ಯಕ್ಷರು: ಹಾಲು ಕೊಡದಿದ್ದರೂ ಸಗಣಿಯನ್ನಾದರೂ ಹಾಕುತ್ತೇವಲ್ಲಾ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸದನದಲ್ಲಿ ಆಡಳಿತ ಪಕ್ಷದ ಸದಸ್ಯರು ಕಡಿಮೆ ಇದ್ದಾರೆ. ಮಾನ್ಯ ನಾಣಯ್ಯನವರು ಎಲ್ಲರ ಹೆಸರು ಬರೆದುಕೊಳ್ಳುತ್ತಿದ್ದಾರೆ. ಯಾರ್‍ಯಾರು ಇದ್ದಾರೆ ಏನು ಎತ್ತ ಅಂತ.

ಅಧ್ಯಕ್ಷರು: ಮಾನ್ಯ ನಾಣಯ್ಯನವರು ಬರೆದುಕೊಳ್ಳುವ ಸ್ಟೇಜಿಗೆ ರೀಚ್ ಆಗಿಲ್ಲ. ಅವರಿಗೆ ಎಲ್ಲಾ ಗೊತ್ತಿದೆ, ಅವರು ಕಂಪ್ಯೂಟರ್.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಮುಖ್ಯಮಂತ್ರಿಗಳು ಚಳುವಳಿ ಮಾಡಿ ಹೋರಾಟ ಮಾಡಿಯೆಂದು ಹೇಳಿದ್ದಾರೆ. ಮಂಡ್ಯಾದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು: ಮಾತು ಕೊಟ್ಟಿದ್ದೇನೆ. ಇವತ್ತು ಸಂಜೆಯೊಳಗೆ ಆ ಕೆಲಸ ಮಾಡಿಸುತ್ತೇನೆ. ರೈತಸಂಘದವರು ಮಾನ್ಯ ಹಿಕ್ಕಿಯವರು ಹೇಳಿದ್ದು ಎಲ್ಲರೂ ಹೇಳಿಇದ್ದು ಏನಿದೆ ಅದಕ್ಕೆ ಉತ್ತರ ಸಿಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಗುಲ್ಬರ್ಗಾದಲ್ಲಿ ಸ್ಟ್ಯಾಚು ಗಲಾಟೆ ಅದರ ಬಗ್ಗೆ ಉತ್ತರ ಕೊಡಿಸಿ.

ಅಧ್ಯಕ್ಷರು: ಸದನದಲ್ಲಿ ಮಾತು ಕೊಟ್ಟಿದ್ದಾರೆ, ಇವತ್ತು ಸ್ಟೇಟ್‌ಮೆಂಟ್ ಮಾಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಪುಟ್ಟಣ್ಣಯ್ಯನವರು ಬಾಗೂರು ನವಿಲೆ ರೈತ ಚಳುವಳಿ, ರೈತರಿಗೆ ಗೊಬ್ಬರ ಕೊಡುತ್ತಿಲ್ಲ ಇದೆಲ್ಲವನ್ನೂ ಹೇಳಿದ ಮೇಲೆ ನಿಮಗೆ ಅವರಿಗೆ ಸಹಾಯ ಮಾಡಬೇಕೆಂದು ಇದೆಯಾ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನಾನು ಯಾವಾಗ ಸಹಾಯ ಮಾಡುತ್ತೇನೆಂದು ಹೇಳಿದ್ದೇನೆ. ನಾನು ಆ ರೀತಿ ಹೇಳಲಿಲ್ಲ. ಹೋದ ಸಾರಿ ನಾನು ಹೇಳಿದ್ದೇನೆ. ನೀವು ಇಬ್ಬರೂ ಏನಾಗಿದ್ದೀರಿ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಪ್ಪು ಕೆಲಸ ಮಾಡಿದಾಗ ಅದನ್ನು ಪ್ರತಿಭಟನೆ ಮಾಡತಕ್ಕದ್ದು ನಮ್ಮ ಕೆಲಸ. ಮುಂದೆ ಆಗತಕ್ಕದ್ದನ್ನು ನಾವು ನೀವು ಕಾದುನೋಡೋಣ. ಕೆಟ್ಟದ್ದು ಮಾಡಿದ್ದನ್ನು ಕೆಟ್ಟದ್ದು ಎಂದು ಹೇಳಬೇಕಾಗಿದೆ. ಅದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅವಿಶ್ವಾಸ ನಿರ್ಣಯ ತಂದಿರುವ ನೀವಿಬ್ಬರೂ ಕಚ್ಚಾಡುವುದನ್ನು ನಾವು ನೋಡಬೇಕು. ಅವಿಶ್ವಾಸ ನಿರ್ಣಯ ತಂದು ಚರ್ಚೆ ಮಾಡಿ ಅವರೆಲ್ಲಾ ಬಿಗಿಯಾಗಲಿಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರಿ. ಮಾತನಾಡಿಕೊಂಡು ಅವಿಶ್ವಾಸ ನಿರ್ಣಯ ತಂದಿದ್ದೀರಿ ಅನ್ನುವ ಅನುಮಾನ ಬಂದಿದೆ. ಅವಿಶ್ವಾಸ ನಿರ್ಣಯ ತಂದಿರುವವರು ರಾಜ್ಯದಲ್ಲಿ ಯಾವ ಕ್ಷೇತ್ರದಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ನಾವು ಯಾವ ಚುನಾವಣೆಯನ್ನು ಫೇಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ನಾವೇನಾದರೂ

ಭದ್ರವಾಗದಿದ್ದರೆ, ಈ ಅವಿಶ್ವಾಸ ನಿರ್ಣಯದಿಂದ ಬಚಾವ್ ಆಗದಿದ್ದರೆ ಕಷ್ಟವೆಂದು ಅವರಿಗೆ ಮನವರಿಕೆಯಾಗಿದೆ. ನೀವು ಅವರ ಮೇಲೆ ಅವಿಶ್ವಾಸ ನಿರ್ಣಯ ತಂದು ಅನುಕೂಲ ಮಾಡಿಕೊಟ್ಟ ಹಾಗೆ ಆಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವತ್ತು ಲಾಸ್ಟ್ ಡೇ. ನಾಳೆ ನೋಡಿ ರಿಸಲ್ಟ್.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಉಳಿದುಕೊಳ್ಳುತ್ತಾರೋ ಬಿಡುತ್ತಾರೋ ಅದು ಬೇರೆ ಪ್ರಶ್ನೆ. ಇನ್ನು ಒಂದು ವರ್ಷ ಕಾಲವಿದೆ. ಇವತ್ತು ನೀವು ಅವರು ಹೊಂದಿಕೊಳ್ಳುವುದಕ್ಕೆ ಸಹಾಯ ಮಾಡಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ: ನಮಗೆ ಬಸ್ ಬೇಕೆಂದು ಅಂಕೋಲದಲ್ಲಿ ಚಳುವಳಿ ಮಾಡಿದವರ ಮೇಲೆ 80ಜನರ ಮೇಲೆ ಕೇಸ್ ಹಾಕಿದ್ದಾರೆ.

ಅಧ್ಯಕ್ಷರು: ಎಲ್ಲವನ್ನೂ ಕೊಡಿ. ನನ್ನ ಛೇಂಬರ್‌ಗೆ ಬಂದು ಹೇಳಿ. ಮಾಡಿಸೋಣ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ರಾಜ್ಯದ ಮಾಲೀಕರು ಮತದಾರರು ಎಂಬ ಅಭಿಮಾನವಿಟ್ಟುಕೊಂಡು ಗೌರವಯುತವಾಗಿ ಕೆಲಸ ಮಾಡಿಯೆಂದು ಹೇಳುತ್ತಾ ಇಷ್ಟು ಸಮಯ ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಅಧ್ಯಕ್ಷರು ಮುಖ್ಯಮಂತ್ರಿಗಳಾಗುತ್ತಾರೆಂದು ಹೇಳುತ್ತಾರೆ. ಆದರೆ ಒಳ್ಳೆಯದಾಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ತಮಗೆ ಧನ್ಯವಾದಗಳು ಮಾನ್ಯ ಪುಟ್ಟಣ್ಣಯ್ಯನವರೇ. ಮಾನ್ಯ ಮುದ್ದಹನುಮೇಗೌಡರು, ತಾವು 20ನಿಮಿಷ ಮಾತನಾಡಿ.

+ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ನನಗೆ ತಾವು ಅವಕಾಶ ಕೊಟ್ಟಿದ್ದೀರಿ; ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. The Government's confidence is at stake. ತಾವು ವಿರೋಧ ಪಕ್ಷದ ಎಲ್ಲರೂ ಕೂಡ ಸರ್ಕಾರದ ಮೇಲೆ ನಮಗೆ ವಿಶ್ವಾಸ ಇಲ್ಲ ಎನ್ನುವಂಥ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ವಿರೋಧ ಪಕ್ಷದ ಎಲ್ಲಾ ಶಾಸಕರು ಕೂಡ ಸರ್ಕಾರದ ಮೇಲೆ ವಿಶ್ವಾಸ ಇಲ್ಲವೆನ್ನುವುದೇ that is an undisputed fact. I would like to call upon the Hon.Minister for Law and parliamentary Affairs whether he is prepared to make a statement on the Floor of the House with all sincerity at his command that they are enjoying the confidence of all members of their party? ಇಲ್ಲ, ಎಲ್ಲಾ ಸದಸ್ಯರುಗಳ ವಿಶ್ವಾಸ ತಮಗೆ ಇದೆಯೆಂದು ಹೇಳಿ ನೀವು ಧೈರ್ಯವಾಗಿ

ಇಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುವುದಾದರೆ we are prepared to take back this motion. ತಮಗೆ ಗೊತ್ತಿದೆ you constitute 50% of this House. ಈ 50 ಪರ್ಸೆಂಟ್‌ನಲ್ಲಿ ನಿಮಗೆ ಕನಿಷ್ಠ 40 ಪರ್ಸೆಂಟ್ ಸಿಗುತ್ತದೆ, ಇವತ್ತು ಮೇಲ್ನೋಟಕ್ಕೆ ನಿಮ್ಮ ಒಳಗಡೆ ಏನಿದೆಯೋ ಗೊತ್ತಿಲ್ಲ. ಶೇಕಡಾ 40ರಷ್ಟು ಸದಸ್ಯರ ವಿಶ್ವಾಸವೂ ಇಲ್ಲ.

ಶ್ರೀ ಎಸ್.ಆರ್.ಲಕ್ಷ್ಮಯ್ಯ: ಈಗ ನಿಮ್ಮ ನಾಯಕರು ಮಾತನಾಡಿದಮೇಲೆ ಇವರೇನು ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ ಅದಕ್ಕೆ ಉತ್ತರ ಕೊಡುವುದಕ್ಕೆ ನಾವು ತಯಾರಿದ್ದೇವೆ. ಆಗ ಅವರಿಗೆ ಗೊತ್ತಾಗುತ್ತದೆ.

ಅಧ್ಯಕ್ಷರು: ಇವತ್ತು ನೀವು ಮಾತನಾಡಿದ್ದು ನನಗೆ ಅರ್ಥವಾಯಿತು.

SRI S.P.MUDHA HANUMEGOWDA: Defeating the no-confidence motion by raising their hands is different. ಆದರೆ ನಾನು ಮಾನ್ಯ ಕಾನೂನು ಸಚಿವರಿಗೆ ಕೇಳುತ್ತಿದ್ದೇನೆ.whether he is prepared to make a statement that the government enjoys the confidence of all members of his party? That is not so.

SRI M.C.NANNAIAH: No-confidence motion has been moved by you and the debate is going on. Let the motion be put to vote and then you realise it.

SRI.S.P.MUDHA HANUMEGOWDA: Raising hands to defeat the no-cofidence motion is different. But to respect the democratic values, to respect the political ethics, when you come to the confusion that you are not enjoying the confidence of your party members, it is better to resign on your own. ತಾವು ಅವಿಶ್ವಾಸ ನಿರ್ಣಯ ಸೂಚನೆ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೂ ಕೂಡ ಆ ನಿಯಮಾವಳಿಯ ಕೆಲವು ಚೌಕಟ್ಟನ್ನು ಮೀರಿ ತಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮುಕ್ತವಾದ ಅವಕಾಶವನ್ನು ತಾವು ಕೊಟ್ಟಿದ್ದೀರಿ. ಅದಕ್ಕೆ ನಾನೂ ಕೂಡ ತಮಗೆ ಕೃತಜ್ಞತೆ ಅರ್ಪಿಸುತ್ತಾ ಆ ಚೌಕಟ್ಟಿನ ಎಲ್ಲೆಮೀರಿ ಸ್ವಲ್ಪ ವಿಷಯಗಳನ್ನು ಸರ್ಕಾರದ ತರುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ತಮಗೆಲ್ಲ ಗೊತ್ತಿದೆ ಅತಿವೃಷ್ಟಿಯಿಂದ ಈ ರಾಜ್ಯದಲ್ಲಿ ಸಾಕಷ್ಟು ನಷ್ಟವನ್ನು ನಾವು ಅನುಭವಿ

ತುಮಕೂರು ಜಿಲ್ಲೆಯಲ್ಲಿ ಕೂಡ ಇದೇರೀತಿ ನಷ್ಟವನ್ನು ನಾವು ಅನುಭವಿಸಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, 14 ಕೋಟಿ ರೂಪಾಯಿಗಳ ನಷ್ಟವಾಗಿದೆಯೆಂದು ಹೇಳಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರಿದಿಯನ್ನು ಸಲ್ಲಿಸಿದ್ದಾರೆ. ನಮ್ಮ ಜಿಲ್ಲಾಸಚಿವರು ಇಲ್ಲಿ ಇದ್ದಾರೆ. ಎರಡು ಸಾವಿರ ಮನೆಗಳು ನಮ್ಮ ಜಿಲ್ಲೆಯಲ್ಲಿ ಬಿದ್ದಿವೆ. ಇದರ ಜೊತೆಗೆ ಸಾಕಷ್ಟು ರಸ್ತೆಗಳು ಹಾಳಾಗಿವೆ, ಬೆಳೆ ನಾಶವಾಯಿತು, ಸುಮಾರು 18 ಜನರು ತಮ್ಮ ಪ್ರಾಣವನ್ನು ಕಳೆದುಕೊಂಡರು. 14 ಕೋಟಿ ರೂಪಾಯಿಗಳ ಬೇಡಿಕೆ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಬಂದಿದ್ದರೆ, ಮೊನ್ನೆ ನನಗೆ ಸಿಕ್ಕಿದ ಮಾಹಿತಿ ಪ್ರಕಾರ 14 ಲಕ್ಷ ರೂಪಾಯಿಗಳು ಮಾತ್ರ ಇವತ್ತು ಸರ್ಕಾರದವರು ಬಿಡುಗಡೆ ಮಾಡಿದ್ದಾರೆ. ಇದು ಏನಾಗುತ್ತದೆ ಎಂದರೆ ಇವತ್ತು ರೈತರ ಕಷ್ಟಕ್ಕೆ, ಸಾರ್ವಜನಿಕರ ಕಷ್ಟಕ್ಕೆ, ಬಡವರ ಕಷ್ಟಕ್ಕೆ ಮತ್ತು ಅತಿವೃಷ್ಟಿಗೆ ಸಿಕ್ಕಿರತಕ್ಕಂಥ ನೊಂದ ಕುಟುಂಬಗಳಿಗೆ ಸಾಂತ್ವನ ಹೇಳತಕ್ಕಂಥ ರೀತಿ ಇದು ಅಂತ ಹೇಳುವುದಾದರೆ ಬಹುಶಃ ಇಲ್ಲಿ ಎಲ್ಲರೂ ಕೂಡ ತಲೆತಗ್ಗಿಸಬೇಕಾಗುತ್ತದೆ. ಇವತ್ತು ಸರ್ಕಾರ ಯಾವುದೇ ರೀತಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ನೊಂದಿರತಕ್ಕಂಥ ಕುಟುಂಬಗಳಿಗೆ ಸ್ಪಂದಿಸತಕ್ಕಂಥ ಕೆಲಸದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಸಭಾಧ್ಯಕ್ಷರೇ, 14 ಕೋಟಿ ರೂಪಾಯಿ ಹಣ ಬೇಕಾಗಿದೆ. ಇದು ಕನಿಷ್ಟವಾದಂಥ ಅಸೆಸ್‌ಮೆಂಟ್. ದಯಮಾಡಿ ಈ ಸಂದರ್ಭದಲ್ಲಿ **If the government succeeds in defeating this no-confidence motion, atleast** 14 ಕೋಟಿ ರೂಪಾಯಿಗಳನ್ನು ಈ ಜಿಲ್ಲೆಗೆ ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಾ, ಶಿರಾ ಗಲಭೆ ಬಗ್ಗೆ ಈಗಾಗಲೇ ತಾವು ಸದನಸಮಿತಿ ರಚನೆ ಮಾಡಿದ್ದೀರಿ. ನ್ಯಾಯಾಂಗ ತನಿಖೆ ಮಾಡುತ್ತದೆ ಎಂದು ಸರ್ಕಾರ ಹೇಳಿದೆ. ಆದ್ದರಿಂದ ಈ ವಿಷಯದಲ್ಲಿ ಸಾಕಷ್ಟು ಬೆಳಕನ್ನು ಚೆಲ್ಲಬೇಕೆಂಬ ದೃಷ್ಟಿಯಿಂದ ನಾವು ಇದ್ದರೂ ಕೂಡ ಇವತ್ತು ಈ ವಿಷಯ ಈಗಾಗಲೇ ಸದನದ ಮುಂದೆ ಇರುವುದರಿಂದ ನಾನು ಒಂದು ವಿಷಯ ಮಾತ್ರ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಸಭಾದ್ಯಕ್ಷರೇ, ಇವತ್ತು ಏನಾಗಿದೆ? ಶಿರಾದಲ್ಲಿ ರೈತರ ಮೇಲೆ ಹಲ್ಲೆಯಾಯಿತು, ರೈತರನ್ನು ಕೊಂದರು. ಇವತ್ತು ಶಿರಾದಲ್ಲಿ ಆಗಿರತಕ್ಕಂಥ ಘಟನೆಗೆ ಯಾರು ಕಾರಣ? ರೈತರು ತಮ್ಮ ಬೆಳೆಗೆ ಸರಿಯಾದಂಥ ಬೆಲೆ ಬರಲಿ ಎಂದು ಹೇಳಿಬಿಟ್ಟು ಯಾವ ರೀತಿಯಲ್ಲಿ ಶಾಂತಿಯಿಂದ ಕುಳಿತು ಕೊಂಡು ಧರಣೆ ಮಾಡುವುದು ಅಥವಾ ಮತ್ತೊಂದು ರೀತಿಯಲ್ಲಿ ಅವರ ಬೇಡಿಕೆಯನ್ನು ಮುಂದಿಟ್ಟಾಗ ಯಾವುದೇ ಕಾರಣ ಇಲ್ಲದೆ ಅವರ ಮೇಲೆ ಗುಂಡನ್ನು ಹಾಕಿ ಸುಮಾರು ಐದು ಜನ ರೈತರನ್ನು ಕೊಂದಿರುವುದರ ಜೊತೆಗೆ ಇವತ್ತು ಕೆಲವು ದುಷ್ಕರ್ಮಿಗಳು ಒಬ್ಬ ನಿಷ್ಠಾವಂತ ಪೋಲೀಸ್ ಅಧಿಕಾರಿಯನ್ನು ಕೊಲ್ಲತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ಸರ್ಕಾರ ಸಂಪೂರ್ಣವಾದಂಥ ಹೊಣೆ ಹೊರಬೇಕಾಗಿದೆ. ಇದೇನು ಘಟನೆಯಾಗಿದೆ ಇದಕ್ಕೆ ರೈತರೇ ಜವಾಬ್ದಾರರು ಎಂದು ಹೇಳತಕ್ಕಂಥ ಮಾತನ್ನು ಸರ್ಕಾರ ಹೇಳುವುದಕ್ಕೆ ನ್ಯವಿಲ್ಲ. ಆದ್ದರಿಂದ ಶಿರಾದಲ್ಲಿ ಅಮಾನುಷವಾಗಿ ರೈತರ ಮೇಲೆ ಏನು

ಹಲ್ಲೆಯಾಯಿತು, ರೈತರನ್ನು ನಾವು ಕಾಪಾಡುತ್ತೇವೆ ಎಂದು ಸರ್ಕಾರ ಹೇಳಿಕೊಂಡು ಬಂದು ಇವತ್ತು ಆ ರೈತರ ಮೇಲೆ ಹಲ್ಲೆ ಮಾಡಿರುವುದರಿಂದ ನಡೆದಂಥ ಘಟನೆಗೆ ನೈತಿಕ ಹೊಣೆಯನ್ನು ಹೊತ್ತು ಸರ್ಕಾರ ತಾನಾಗಿಯೇ ರಾಜೀನಾಮೆ ಕೊಡತಕ್ಕಂಥ ಪರಿಸ್ಥಿತಿ ಇದೆ. ಇವರು ಹೋಗಬೇಕಾಗುತ್ತದೆ. ಆದ್ದರಿಂದ ಶಿರಾದಲ್ಲಿ ಇವತ್ತು ಏನು ಘಟನೆ ನಡೆದಿದೆ, ರೈತರ ಮೇಲೆ ಏನು ಹಲ್ಲೆ ನಡೆದಿದೆ, ಇದಕ್ಕೆ ಸಂಪೂರ್ಣವಾಗಿ ಸರ್ಕಾರವೇ ಜವಾಬ್ದಾರರೆಂದು ನೇರವಾದ ಆರೋಪವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಾ, ಈ ಘಟನೆಗೆ ಕಾರಣರಾದವರೆಲ್ಲರ ಮೇಲೆ ನಿಷ್ಪಕ್ಷಪಾತವಾಗಿ ಕಾನೂನು ಕ್ರಮವನ್ನು ಜರುಗಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಸಭಾಧ್ಯಕ್ಷರೇ, ತಾವು ನನಗೆ 20 ನಿಮಿಷ ಕಾಲಾವಕಾಶ ಕೊಟ್ಟಿರುವುದು ಬಹಳ ತೊಂದರೆಯಾಗುತ್ತಿದೆ. ಅಷ್ಟರೊಳಗೆ ಎಲ್ಲಾ ಹೇಳಬೇಕು ಎಂದರೆ ಕಷ್ಟವಾಗುತ್ತದೆ. ಆದರೂ ಕೂಡ ತಾವು ಉದಾರ ಮನಸ್ಸಿನಿಂದ ನಮಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಸಭಾಧ್ಯಕ್ಷರೇ, ಇವತ್ತು ತುಮಕೂರು ಜಿಲ್ಲೆ ಮಟ್ಟಿಗೆ ಹೇಳಬೇಕು ಎಂದರೆ ಹೇಮಾವತಿಯಿಂದ ನೀರು ಬರುತ್ತದೆ, ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ತೃಪ್ತಿಯನ್ನು ನಾವು ಕಾಣುತ್ತೇವೆ ಎನ್ನತಕ್ಕಂಥ ದಿಸೆಯಲ್ಲಿ ನಾವು ಕಾಲ ಕಳೆಯುತ್ತಿದ್ದೆವು. ಇವತ್ತು ಸರ್ಕಾರ ಈ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸತಕ್ಕಂಥ ದಿಸೆಯಲ್ಲಿ ಸಾಕಷ್ಟು ಟೈಮ್ ಬೌಂಡ್ ಪ್ರೋಗ್ರಾಮ್‌ಗಳನ್ನು ಸರಿಯಾಗಿ ಹಾಕಿಕೊಂಡಿಲ್ಲ ಎನ್ನುವುದಕ್ಕೆ ಇವತ್ತು ನಮ್ಮ ತುಮಕೂರು ಜಿಲ್ಲೆಯಲ್ಲಿ ನಡೆಯುತ್ತಾ ಇರತಕ್ಕಂಥ ಹೇಮಾವತಿ ಕಾಮಗಾರಿಗಳೇ ಸಾಕ್ಷಿ. ಇವತ್ತು ಇವರು ಏನು ನಾವು ನೀರಾವರಿಗೆ ಇಷ್ಟು ಸಾವಿರ ಕೋಟಿ ಖರ್ಚುಮಾಡಿದ್ದೇವೆ, 2ಸಾವಿರ, 5 ಸಾವಿರ ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ನಮ್ಮ ತುಮಕೂರು ಜಿಲ್ಲೆಯಲ್ಲಿ ನಡೆಯತಕ್ಕಂಥ ಹೇಮಾವತಿ ನಾಲೆ ಕಾಮಗಾರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ ಯಾವುದೇ ರೀತಿಯಿಂದ ಕೆಲಸ ಚುರುಕಾಗಿ ನಡೆದಿಲ್ಲ. ಆದ್ದರಿಂದ ನಾನು ಇವತ್ತು ಏನು ಒತ್ತಾಯ ಮಾಡುತ್ತಿದ್ದೇನೆ ಎಂದರೆ, ಕೃಷ್ಣಾಜಲಭಾಗ್ಯ ನಿಗಮವನ್ನು ಮಾಡಿ 2ಸಾವಿರ ಇಸವಿ ಒಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕಂಥ ಯೋಚನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಇದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಕಾಮಗಾರಿಗಳನ್ನು ಬಹಳ ಪರಿಣಾಮಕಾರಿಯಾಗಿ ಇವತ್ತು ಕೈಗೆತ್ತಿಕೊಳ್ಳಬೇಕಾದರೆ ನಾನು ಸರ್ಕಾರಕ್ಕೆ ಏನು ಒತ್ತಾಯ ಮಾಡುತ್ತೇನೆ ಎಂದರೆ ಇವತ್ತು ಕೃಷ್ಣಾ ಜಲಭಾಗ್ಯನಿಗಮ ಏನು ರಚನೆ ಮಾಡಿ ಒಂದು ಟೈಮ್ ಬೌಂಡ್ ಪ್ರೋಗ್ರಾಮ್ ಮಾಡಿ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದೀರಿ, ಅದೇ ರೀತಿಯಲ್ಲಿ ಕಾವೇರಿ ಜಲಭಾಗ್ಯ ನಿಗಮವನ್ನೂ ಕೂಡ ನೀವು ರಚನೆ ಮಾಡಿ ಅದಕ್ಕೆ ಸಾಕಷ್ಟು ಹಣವನ್ನು ಕೊಟ್ಟು ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಎಲ್ಲಾ ಕಾಮಗಾರಿಗಳನ್ನು ಅದು ಹೇಮಾವತಿ ಇರಬಹುದು, ಬೇರೆ ಯಾವುದೇ ಯೋಜನೆ ಇರಬಹುದು, ಆ ಕಾವೇರಿ ಬೇಸಿನ್‌ನಲ್ಲಿ ಇರತಕ್ಕಂಥ

ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಕಾವೇರಿ ಜಲಭಾಗ್ಯ ನಿಗಮವನ್ನು ಸ್ಥಾಪನೆ ಮಾಡಿ ಅದಕ್ಕೆ ಸಾಕಷ್ಟು ಹಣ ಕೊಟ್ಟು ನೀವು ಇವತ್ತು ಮತ್ತೊಂದು ಟೈಮ್ ಬೌಂಡ್ ಪ್ರೋಗ್ರಾಮ್‌ನ್ನು ಹಾಕಿಕೊಂಡು ಈ ಕಾರ್ಯಕ್ರಮವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಇವತ್ತು ನೀರಾವರಿ ಸಚಿವರು ಇಲ್ಲ. ಅವರು ಇದ್ದಿದ್ದರೆ ಒಂದು ವಿಷಯವನ್ನು ನಾನು ಹೇಳಬೇಕೆಂದು ಇದ್ದೆ. ಇವತ್ತು ಏನಾಗಿದೆ ಎಂದರೆ ಜೂನ್ 99 ರೊಳಗೆ ಕುಣಿಗಲ್ ಕೆರೆಗೆ ನೀರು ಕೊಡತಕ್ಕಂಥ ತೀರ್ಮಾನ ಮಾಡಿದ್ದೇವೆ, ಅಷ್ಟರೊಳಗೆ ಈ ಕಾಮಗಾರಿಯನ್ನು ಮುಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ನಿರ್ದಿಷ್ಟವಾದ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಆದರೆ ದುರ್ದೈವದಿಂದ ಏನಾಗಿದೆ ಎಂದರೆ ಈ ದಿಸೆಯಲ್ಲಿ ಕಾಮಗಾರಿಗಳು ಆಗುತ್ತಿಲ್ಲ. ಇದು ಸಂಪೂರ್ಣವಾಗಿ ಕುಂಠಿತವಾಗಿದೆ. ಆದ್ದರಿಂದ ಕಾವೇರಿ ಜಲಭಾಗ್ಯ ನಿಗಮವನ್ನು ಸ್ಥಾಪನೆ ಮಾಡುವುದರ ಜೊತೆಗೆ ಜೂನ್ 99ರೊಳಗೆ ಮಾಡುತ್ತೇವೆ ಎಂದು ಮಾನ್ಯ ಭಾರಿನೀರಾವರಿ ಸಚಿವರು ನಿರ್ದಿಷ್ಟವಾದ ನಿಲುವನ್ನು ಏನು ಹೇಳಿದ್ದಾರೆ, ಆ ರೀತಿ ಕುಣಿಗಲ್ ಕೆರೆಗೆ ಜೂನ್ 99ರೊಳಗೆ ನೀರನ್ನು ಕೊಡತಕ್ಕಂಥ ಕೆಲಸವನ್ನು ಅವರು ಮಾಡಬೇಕಾಗುತ್ತದೆ. ಸಾಕಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಸಾಕಷ್ಟು ಹಣವನ್ನೂ ಕೂಡ ಬಿಡುಗಡೆ ಮಾಡುವಂಥ ಜವಾಬ್ದಾರಿಯನ್ನು ಅವರು ಹೊರಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಸಭಾಧ್ಯಕ್ಷರೇ, ನಾನು, ಮತ್ತು ಮಾನ್ಯ ಮುನಿಯಪ್ಪನವರು ಮತ್ತು ಇನ್ನೂ ಕೆಲವು ಸ್ನೇಹಿತರು ತಮಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು. ಇವತ್ತು ರೇಷ್ಮೆಯನ್ನು ಮುಕ್ತವಾಗಿ ಆಮದು ಮಾಡಿಕೊಳ್ಳತಕ್ಕಂಥ ಕೇಂದ್ರಸರ್ಕಾರದ ನೀತಿ ಏನಿದೆ, ಇದರಿಂದ ರಾಜ್ಯದಲ್ಲಿರತಕ್ಕಂಥ ರೇಷ್ಮೆ ಕೃಷಿಗೆ ಭಾರಿ ಹೊಡೆತ ಬೀಳುತ್ತದೆ ಎನ್ನುವ ದಿಸೆಯಲ್ಲಿ ಇವತ್ತು ಆ ವಿಷಯವನ್ನು ಮುಕ್ತವಾಗಿ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆಯನ್ನು ಕಳಿಸಿ ತಮ್ಮ ಅಪ್ಪಣೆಯನ್ನು ಕೇಳಿದ್ದೆವು. ಆದರೆ ತಾವು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದೆ, ಈ ಚರ್ಚೆಯ ಒಳಗೇನೆ ತಾವು ಭಾಗವಹಿಸಿ ಈ ವಿಷಯವನ್ನು ಚರ್ಚೆ ಮಾಡಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೀರಿ. ನಾವು ಈ ವಿಷಯ ರೆಲವೆಂಟ್ ಇಲ್ಲದಿದ್ದರೂ ಕೂಡ ತಾವು ಅನುಮತಿ ನೀಡಿದ್ದರ ಮೇರೆಗೆ ನಾವು ಈ ವಿಷಯದ ಬಗ್ಗೆ ಒಂದೆರಡು ಮಾತನ್ನು ಹೇಳುವುದಕ್ಕೆ ಇಚ್ಚಿಪಡುತ್ತೇವೆ. ಅದು ಕಚ್ಚಾ ರೇಷ್ಮೆ ಆಮದು. ರೇಷ್ಮೆಯನ್ನು ಚೈನಾದಿಂದ ಅಥವಾ ಬೇರೆ ರಾಷ್ಟ್ರಗಳಿಂದ ಮುಕ್ತವಾಗಿ ಆಮದು ಮಾಡಿಕೊಳ್ಳುವ ನೀತಿಯ ಬಗ್ಗೆ ಮಾತನಾಡುವುದಕ್ಕೆ ಮುಂಚೆ, ಮಾನ್ಯ ರೇಷ್ಮೆ ಸಚಿವರು ಇಲ್ಲಿದ್ದಾರೆ ಅವರಿಗೆ ನಮ್ಮ ಮೈಸೂರು ಬಿತ್ತನೆ ವಲಯದಲ್ಲಿರತಕ್ಕ ರೇಷ್ಮೆ ಬಗ್ಗೆ ಒಂದೇ ಒಂದು ಮನವಿ. ಇವತ್ತು ಏನಾಗಿದೆ ಎಂಬುದು ಮಾನ್ಯ ರೇಷ್ಮೆ ಸಚಿವರಿಗೆ ಗೊತ್ತಿದೆ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ದೇವೇಗೌಡರು ಮತ್ತೆ ಈಗಿನ ಉಪಮುಖ್ಯಮಂತ್ರಿಗಳು ಮತ್ತು ಆಗಿನ ಹಣಕಾಸಿನ ಸಚಿವರು ಹಾಗೂ ಈಗಿನ ಹಣಕಾಸಿನ ಸಚಿವರಾಗಿರತಕ್ಕಂಥ

ಮಾನ್ಯ ಸಿದ್ದರಾಮಯ್ಯನವರು, ಕಳೆದ ಮೂರು ವರ್ಷಗಳ ಹಿಂದೆ, 1996ನೇ ಇಸವಿಯಲ್ಲಿ ಕುಣಿಗಲ್‌ಗೆ ಬಂದಿದ್ದರು. ಆ ಸಂದರ್ಭದಲ್ಲಿ ಸಾರ್ವಜನಿಕವಾಗಿ ಒಂದು ಹೇಳಿಕೆಯನ್ನು ಕೊಟ್ಟರು. ಇವತ್ತು ನಮ್ಮ ಮೈಸೂರು ಬಿತ್ತನೆ ವಲಯದಲ್ಲಿ ಏನಾಗಿದೆ, ಬಿತ್ತನೆಗೆ ನೀಡತಕ್ಕಂಥ ಬೆಲೆ ಮತ್ತೆ ರೀಲಿಂಗ್ ಹೋಗತಕ್ಕ ಗೂಡಿನ ಬೆಲೆಗೆ ಬಹಳಷ್ಟು ಅಂತರ ಇರುವುದರಿಂದ, ಅದನ್ನು ಸರಿದೂಗಿಸತಕ್ಕ ದಿಸೆಯಲ್ಲಿ ಇವತ್ತು 25 ರೂಪಾಯಿ ಬೋನಸ್ಸನ್ನು ತಾವು ನೀಡುತ್ತಾ ಇದ್ದೀರಿ. ಇದು ಬಹಳ ಕಡಿಮೆಯಾಗುತ್ತದೆ, ನೀವು ಸರಿದೂಗಿಸತಕ್ಕ ಸೂತ್ರಕ್ಕೆ ಯಾವುದೇ ರೀತಿಯಲ್ಲಿ ಅದು ಸಾಧ್ಯವಿಲ್ಲ. ಆ ಭಾಗದ, ಮೈಸೂರು ಬಿತ್ತನೆ ವಲಯದ ರೇಷ್ಮೆ ಬೆಳೆಗಾರರ ಒತ್ತಾಯದ ಮೇರೆಗೆ ನಾವು ಆ ದಿನ ಕೇಳಿದಾಗ, 5 ರೂಪಾಯಿ ಬೋನಸ್‌ನ್ನು ಹೆಚ್ಚು ಮಾಡುತ್ತೇವೆಂದು ತಾವು ಹೇಳಿದ್ದಿರಿ. ಇವತ್ತು ಮಾನ್ಯ ರೇಷ್ಮೆ ಸಚಿವರು ಇಲ್ಲಿದ್ದಾರೆ. ನಾನು ಹೇಳುವುದೇನೆಂದರೆ, ಮೂರು ವರ್ಷಗಳ ಹಿಂದೆ ನೀವು ರೈತರ ಮುಂದೆ, ನೇರವಾಗಿ ನಿರ್ದಿಷ್ಟವಾಗಿ ಹೇಳಿಕೆ ಮಾಡಿ, ನಾವು ಈಗಿನಿಂದಲೇ 5 ರೂಪಾಯಿ ಬೋನಸ್ಸನ್ನು ಹೆಚ್ಚಿಗೆ ಮಾಡುತ್ತೇವೆ, 25 ರೂಪಾಯಿ ಬೋನಸ್ ಜೊತೆಗೆ, 30 ರೂಪಾಯಿ ಬೋನಸ್‌ನ್ನು ನಾವು ಮಾಡುತ್ತೇವೆಂದು ನೀವು ರೈತರ ಮುಂದೆ ಹೇಳಿದ್ದಿರಿ. ಮೂರು ವರ್ಷಗಳಾದರೂ ಕೂಡ ಇನ್ನೂ ಆ ಬಗ್ಗೆ ಒಂದು ಅಧಿಸೂಚನೆ ಬರಲಿಲ್ಲ. ಆ ಬೋನಸ್ ನೀಡುವುದಕ್ಕಾಗಲಿಲ್ಲ. ರಾಜ್ಯಸರ್ಕಾರದ ಬೊಕ್ಕಸಕ್ಕೆ ಕೇವಲ, ಒಂದು ವರ್ಷಕ್ಕೆ 15 ರಿಂದ 20 ಲಕ್ಷ ಹೆಚ್ಚುವರಿಯಾಗಿ ಬೀಳುತ್ತದೆ. ಇಷ್ಟು ಆರ್ಥಿಕ ಹೊರೆ ಬೀಳತಕ್ಕ ನಿರ್ಧಾರವನ್ನು, ತಾವು ನಿರ್ದಿಷ್ಟವಾಗಿ ರೇಷ್ಮೆ ಬೆಳೆಗಾರರ ಮುಂದೆ ಹೇಳಿ, ಇವತ್ತಿನವರೆಗೂ ನೀವು ಅದನ್ನು ಮಾಡಲಿಕ್ಕೆ ಆಗಲಿಲ್ಲವೆಂದರೆ, ಇದು ಖಂಡಿತವಾಗಿಯೂ ಕೂಡ ಬಹಳ ಶೋಚನೀಯವಾದಂಥ ಸ್ಥಿತಿ. ಈ ಬಗ್ಗೆ ರೇಷ್ಮೆ ಸಚಿವರು ಸೂಕ್ತವಾದಂಥ ನಿರ್ಧಾರವನ್ನು ಕೈಗೊಳ್ಳುತ್ತೀರಾ; ನಿಮಗೆ ಕೊಡುವುದಕ್ಕೆ ಮನಸ್ಸು ಇದೆಯೇ ಅಥವಾ ನಿಮಗೆ ಕೊಡುವುದಕ್ಕಾಗುವುದಿಲ್ಲವೆಂದರೆ, ಕೊಡುವುದಕ್ಕಾಗುವುದಿಲ್ಲವೆಂದಾದರೂ ಹೇಳಿ. ಮೂರು ವರ್ಷವಾದರೂ ಕೂಡ ಅದರ ಮೇಲೆ ಒಂದು ಆದೇಶ ಇಲ್ಲವೆಂದು ಹೇಳಿದರೆ ನಾವೇನು ತಿಳಿದುಕೊಳ್ಳಬೇಕು?

ಶ್ರೀ ಎಂ.ವರದೇಗೌಡ (ರೇಷ್ಮೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ನಾವು ಮೊದಲು ಹೇಳಿರುವುದು ನಿಜ. ಆದರೆ ಅದರ ಬಗ್ಗೆ ಇದುವರೆಗೂ ಕ್ರಮ ತೆಗೆದುಕೊಂಡಿರಲಿಲ್ಲ. ಇವತ್ತು ತೀರ್ಮಾನವಾಗುತ್ತದೆ. 5 ರೂಪಾಯಿ ಹೆಚ್ಚುವರಿ ಕೊಡತಕ್ಕಂಥಾದ್ದನ್ನು ಮಾಡುತ್ತೇವೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಸನ್ಮಾನ್ಯ ರೇಷ್ಮೆ ಸಚಿವರಿಗೆ ಅಭಿನಂದನೆಗಳು. ಕೊನೆಗೂ ಹೋಗುವಂಥ ಕಾಲದಲ್ಲಿ ಒಂದು ಒಳ್ಳೆಯ ಕೆಲಸ ಮಾಡುತ್ತಾ ಇದ್ದೀರಿ. ಮೈಸೂರು ಬಿತ್ತನೆ ವಲಯದ ರೇಷ್ಮೆ ಬೆಳೆಗಾರರ ಪರವಾಗಿ ಹಾಗೂ ವೈಯಕ್ತಿಕವಾಗಿ ಮಾನ್ಯ ರೇಷ್ಮೆ ಸಚಿವರು ಹಾಗೂ ಹಣಕಾಸಿನ ಸಚಿವರಿಗೆ ನಾನು ಅಭಿನಂದನೆಗಳನ್ನು

ಹೇಳುತ್ತೇನೆ. ಇವತ್ತು ನಮ್ಮ ವಾದ ಏನಿದೆ, ನೀವು ವಿಶ್ವಾಸವನ್ನು ಕಳೆದುಕೊಂಡಿದ್ದೀರಿ ಎಂಬ ವಾದಕ್ಕೆ ನಾವು ಹೇಳಿರತಕ್ಕ ಮಾತು ಯಾವುದೇ ಅಡ್ಡಿ ಬರುವುದಿಲ್ಲ. ಇವತ್ತು ಕಚ್ಚಾರೇಷ್ಮೆ ಆಮದು. ಇವತ್ತಿನಮಟ್ಟಿಗೆ ನಮಗೆ ಅದರ ಹೊಡೆತ ಮೇಲ್ನೋಟಕ್ಕೆ ಕಾಣದೇ ಇರಬಹುದು.ಇವತ್ತು 15 ಸಾವಿರ ಮೆಟ್ರಿಕ್‌ಟನ್ ರೇಷ್ಮೆಯನ್ನು ಈ ದೇಶದಲ್ಲಿ ಉತ್ಪಾದನೆ ಮಾಡುತ್ತಾ ಇದ್ದೇವೆ. ಅದರಲ್ಲಿ ಶೇಕಡ 60ರಷ್ಟು ಭಾಗವನ್ನು ನಾವು ಕರ್ನಾಟಕದಿಂದ ಉತ್ಪಾದನೆ ಮಾಡುತ್ತಿದ್ದೇವೆ. ಇವತ್ತು ಕರ್ನಾಟಕದಲ್ಲಿ ಸುಮಾರು 35 ಲಕ್ಷ ಜನ ಪರೋಕ್ಷವಾಗಿ ಅಥವಾ ಅಪರೋಕ್ಷವಾಗಿ ಈ ರೇಷ್ಮೆ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇವತ್ತು 35 ಲಕ್ಷ ಜನಕ್ಕೆ to eke out their livelihood, they are depending on sericulture. ಆದ್ದರಿಂದ, ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಈ ರಾಜ್ಯದಲ್ಲಿರತಕ್ಕ ರೈತರು, ಈ ರಾಜ್ಯದಲ್ಲಿರತಕ್ಕ ಬಡವರು ಏನು ಆಧಾರವಾಗಿಟ್ಟುಕೊಂಡಿದ್ದಾರೆ, ಅಂತಹ ಕೃಷಿಗೆ ಯಾವರೀತಿ ಹೊಡೆತ ಬೀಳಬಹುದು ಎನ್ನುವುದನ್ನು ನಾವೆಲ್ಲರೂ ಚಿಂತನೆ ಮಾಡಬೇಕಾಗಿದೆ. ಇವತ್ತು ಮುಕ್ತ ರೇಷ್ಮೆ ಆಮದು ನೀತಿಯನ್ನು ಮಾಡಿರತಕ್ಕಂಥವರು ಕೇಂದ್ರಸರ್ಕಾರದವರು. ಆದರೆ, ರಾಜ್ಯ ಸರ್ಕಾರದ ಪಾತ್ರ ಏನು ಎಂಬುದನ್ನು ಏಕೆ ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಇವತ್ತು ಸುಮಾರು 35 ಲಕ್ಷ ಜನ ನಮ್ಮ ರಾಜ್ಯದಲ್ಲಿ ಈ ರೇಷ್ಮೆ ಕೃಷಿಯನ್ನು ನಂಬಿಕೊಂಡು, ರೇಷ್ಮೆ ಉದ್ದಿಮೆಯನ್ನು ನಂಬಿಕೊಂಡು ಜೀವನ ಮಾಡುತ್ತಿರಬೇಕಾದರೆ, ಇವತ್ತೇನು ಮುಕ್ತ ರೇಷ್ಮೆ ಆಮದು ನೀತಿಯನ್ನು ಮಾಡುತ್ತಿದ್ದೀರಿ, ಅದರಿಂದ ಸಂಪೂರ್ಣವಾಗಿ ಇನ್ನು ಕೆಲವೇ ವರ್ಷಗಳಲ್ಲಿ ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ರೇಷ್ಮೆ ಕೃಷಿ ಸಂಪೂರ್ಣವಾಗಿ ನಾಶವಾಗತಕ್ಕ ಎಲ್ಲಾ ಸೂಚನೆಗಳಿವೆ. ಮೊನ್ನೆ ಒಂದು ಹೇಳಿಕೆ ಬಂದಿದೆ. ವಾಣಿಜ್ಯ ಸಚಿವರು ಒಂದು ಹೇಳಿಕೆಯನ್ನು ಮಾಡಿದ್ದಾರೆ. ಅದನ್ನು ಸ್ವಲ್ಪ ಮಾರ್ಪಾಟು ಮಾಡುತ್ತೇವೆಂಬ ಹೇಳಿಕೆ ಮಾಡಿದ್ದಾರೆ. ನೀವು ಮಾರ್ಪಾಟು ಮಾಡಬಹುದು ಅಥವಾ ಹಾಗೆಯೇ ಬಿಡಬಹುದು. ಒಟ್ಟಾರೆ ಇವತ್ತು ಈ ರಾಜ್ಯದಲ್ಲಿರತಕ್ಕ ರೇಷ್ಮೆ ಕೃಷಿ ಈ ರಾಷ್ಟ್ರದಲ್ಲಿರತಕ್ಕ ರೇಷ್ಮೆ ಕೃಷಿಗೆ ಮಾರಕವಾಗತಕ್ಕ ನೀತಿಯಾಗುತ್ತದೆ. ಇವತ್ತು ಗ್ರೇಡ್-2 ಎ ಮತ್ತು ಮೇಲ್ಪಟ್ಟು, ಇದನ್ನು ಮಾತ್ರ ಬಿಡುವುದಕ್ಕೆ ಪರ್ಮಿಷನ್ ಕೊಡುತ್ತೇವೆಂದು ಹೇಳುತ್ತಾರೆ. ನಮ್ಮಲ್ಲಿರತಕ್ಕ ರೇಷ್ಮೆ ಬೆಲೆಗಿಂತ, ಇನ್ನೂ ಕಡಿಮೆ ಬೆಲೆಯಲ್ಲಿ ರೇಷ್ಮೆಯನ್ನು ನೀವು ಆಮದು ಮಾಡಿಕೊಳ್ಳತಕ್ಕ ನೀತಿಗೆ, ದಯಮಾಡಿ ನೀವು ಕೂಲಂಕುಷವಾಗಿ ಆಲೋಚನೆ ಮಾಡಿ. ಇವತ್ತು ನಿಮ್ಮ ಸರ್ಕಾರ ಏನಿದೆ, ನೀವು ಕೇಂದ್ರದಲ್ಲಿರತಕ್ಕ ಬಿಜೆಪಿ ಸರ್ಕಾರದವರು, ಇವತ್ತು ಕರ್ನಾಟಕದಲ್ಲಿ 35 ಲಕ್ಷ ಜನ ಏನು ರೇಷ್ಮೆ ಕೃಷಿಯನ್ನು ನಂಬಿಕೊಂಡು ಜೀವನ ಮಾಡುತ್ತಿದ್ದಾರೆ, ಅವರ ಮಾರಣ ಹೋಮ ಮಾಡುವುದಕ್ಕೆ ನೀವೆಲ್ಲರೂ ಜವಾಬ್ದಾರರಾಗುತ್ತೀರಿ. ಆದ್ದರಿಂದ, ರಾಜ್ಯಸರ್ಕಾರದವರು ಒಪ್ಪಬೇಡಿ. ಇವತ್ತು ರೇಷ್ಮೆ ಸಚಿವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನೀವು ಆಗಲೇ ಒಂದು ಹೇಳಿಕೆಯನ್ನೂ ಕೊಟ್ಟಿದ್ದೀರಿ. ಅದನ್ನು ನಾನೂ ಕೂಡ ಪೇಪರಿನಲ್ಲಿ ಓದಿದ್ದೇನೆ. ಇದನ್ನು

ಸಂಪೂರ್ಣವಾಗಿ ವಿರೋಧಿಸಿದ್ದೀರಿ. ನಿಮ್ಮ ಪಕ್ಷದ ಅನೇಕ ಮುಖಂಡರೂ ಕೂಡ ಇದನ್ನು ವಿರೋಧ ಮಾಡಿದ್ದಾರೆ. ಆದರೆ, ನೀವು ಇವತ್ತು ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇವತ್ತು ಈ ರಾಜ್ಯದಲ್ಲಿರತಕ್ಕ 35 ಲಕ್ಷ ಕುಟುಂಬಗಳನ್ನು ಸಾಕತಕ್ಕ ಜವಾಬ್ದಾರಿಯನ್ನು ಹೊತ್ತುಕೊಂಡು, ಸಂಪೂರ್ಣವಾಗಿ ನೀವು ಕೇಂದ್ರಸರ್ಕಾರದ ನೀತಿಯನ್ನು ವಿರೋಧ ಮಾಡದೇಹೋದರೆ ನಿಮ್ಮ ಜವಾಬ್ದಾರಿಯಿಂದ ವಂಚಿತರಾಗುತ್ತೀರಿ. ಇವತ್ತು ಈ ರಾಜ್ಯದಲ್ಲಿರತಕ್ಕ ಜನತೆಯ ಶಾಪಕ್ಕೆ ಗುರಿಯಾಗುತ್ತೀರಿ. ನಾವೂ ಕೂಡ ನಿಮಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತೇವೆ. ಇವತ್ತು ಮುಕ್ತ ರೇಷ್ಮೆ ಆಮದು ನೀತಿ ಏನಿದೆ, ಇವತ್ತು ಕೇಂದ್ರದವರು ಏನು ಮಾಡಿದ್ದಾರೆ, ಇದನ್ನು ಸಂಪೂರ್ಣವಾಗಿ ವಿರೋಧಿಸಿ, ಈ ರಾಜ್ಯದಲ್ಲಿರತಕ್ಕ ರೇಷ್ಮೆ ಕೃಷಿಯನ್ನು ಉಳಿಸುವುದರ ಜೊತೆಗೆ, ಈ ರಾಜ್ಯದ ರೇಷ್ಮೆ ಬೆಳೆಗಾರರು ಮತ್ತು ಅವರ ಕುಟುಂಬವನ್ನು ಉಳಿಸತಕ್ಕ ಮಹತ್ತರವಾದ ಜವಾಬ್ದಾರಿಯನ್ನು ತಾವು ಹೊರಬೇಕಾಗುತ್ತದೆ. ಸಂಪೂರ್ಣವಾದ ಜವಾಬ್ದಾರಿಯನ್ನು ಹೊತ್ತು ನೀವು ಕೆಲಸ ಮಾಡಬೇಕು. ಇದು ರಾಜ್ಯಸರ್ಕಾರದ ಕರ್ತವ್ಯವೂ ಹೌದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ.ವರದೇಗೌಡ (ರೇಷ್ಮೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳ ಹತ್ತಿರ ಮತ್ತು ವಾಣಿಜ್ಯ ಸಚಿವರ ಹತ್ತಿರ ಮತ್ತು ಜವಳಿ ಖಾತೆ ಸಚಿವರ ಹತ್ತಿರ ಮಾತನಾಡಿದ್ದಾರೆ. ಏನು ನೋಟಿಫಿಕೇಷನ್ ಆಗಿತ್ತೋ ಅದನ್ನು ವಿತ್ ಡ್ರಾ ಮಾಡಿದ್ದಾರೆ. ಮುಂದೆ ಯಾವುದಾದರೂ ನಮಗೆ ಮಾರಕವಾಗುವಂಥ ನೋಟಿಫಿಕೇಷನ್ ಬಂದರೆ, ರಾಜ್ಯಸರ್ಕಾರದವರೂ ಕೂಡ ಕೇಂದ್ರಸರ್ಕಾರದ ವಿರುದ್ಧ ಚಳುವಳಿ ಮಾಡಬೇಕಾಗುತ್ತದೆ.

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಿಂದೆ ಇದ್ದಂಥ ಪದ್ಧತಿ ಏನಿತ್ತು, ರಿಸ್ಟ್ರಿಕ್ಟೆಡ್ ಐಟಂ ಎಂದು ಮಾಡಿದ್ದಾರೆ. ಏನು ನಮ್ಮ ಲಿಬರಲೈಸ್ ಪಾಲಿಸಿ ತಂದರು ಆದರಲ್ಲಿಯೂ ಕೂಡ ಸಿಲ್ಕ್ ಇಂಪೋರ್ಟ್‌ಬಗ್ಗೆ ರಿಸ್ಟ್ರಿಕ್ಟೆಡ್ ಐಟಂ ಮಾಡಿದ್ದರು. ಆದರೂ ಸಹ ನಮ್ಮ ರಾಷ್ಟ್ರಕ್ಕೆ ಬಹಳಷ್ಟು ಸಿಲ್ಕ್ ಸ್ಮಗಲ್ಡ್ ಆಗಿಬರುತ್ತಾ ಇದೆ. ರಿಸ್ಟ್ರಿಕ್ಟೆಡ್ ಐಟಂ ಎಂದು ಮಾಡಿದ್ದರೂ ಸಹ, ನಮ್ಮ ರಾಷ್ಟ್ರಕ್ಕೆ ಬರುವ ಸಿಲ್ಕನ್ನು ತಡೆಗಟ್ಟುವುದಕ್ಕೆ ಬಹಳ ತೊಂದರೆಯಾಗಿದೆ. ಅಂತಹ ಸಂದರ್ಭದಲ್ಲಿ ಗ್ರೇಡ್-2ಎ ಗೆ ಮಾತ್ರ, ಆಮದು ಮಾಡುವುದಕ್ಕೆ, ಅದೂ ಹೊರ ರಾಜ್ಯಕ್ಕೆ ಮಾತ್ರ ಆಗುತ್ತದೆ. ನಮ್ಮ ರಾಜ್ಯದ ಉತ್ಪತ್ತಿ ಮೇಲೆ ಮಾರಕವಾಗುವುದಿಲ್ಲ ಎಂಬ ಮಾತನ್ನು, ಕೇಂದ್ರದ ವಾಣಿಜ್ಯ ಸಚಿವರಾದ ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ. ಇದರಿಂದ ಖಂಡಿತವಾಗಿ ನೇರವಾಗಿ ನಮ್ಮ ರಾಜ್ಯದ ಉತ್ಪಾದನೆ, ರಾಷ್ಟ್ರದ ಉತ್ಪಾದನೆ ಮೇಲೆ ಧಕ್ಕೆಯಾಗುತ್ತದೆ.

ಏಕೆಂದರೆ, ಈಗಾಗಲೇ ಹಿಂದೆ ಇದ್ದ ಪದ್ಧತಿಯಲ್ಲೇ ತರತಕ್ಕಂತಾದ್ದರಲ್ಲೇ ಸ್ಮಗಲ್ಡ್ ಕಂಟ್ರೋಲ್ ಮಾಡುವುದಕ್ಕಾಗುತ್ತಾ ಇಲ್ಲ. ಮತ್ತೆ ಇವರೇನಾದರೂ ಲಿಬರಲೈಸ್ ಮಾಡಿ ಕೊಟ್ಟಿದ್ದೇ ಆದರೆ ಖಂಡಿತವಾಗಿಯೂ ನೇರವಾಗಿ ನಮ್ಮ ರೇಷ್ಮೆ ಉತ್ಪಾದನೆ ಮೇಲೆ ಮಾರಕವಾಗುತ್ತದೆ ಎನ್ನುವ ವಿಚಾರವನ್ನು ಮಂತ್ರಿಗಳು ದಯಮಾಡಿ, ಈ ಸಭೆಯ ಮುಖಾಂತರ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡಬೇಕು. ಈ ವಿಷಯವನ್ನು ತಮ್ಮ ಮುಖಾಂತರ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಇವತ್ತು ರಾಜ್ಯದ ರೇಷ್ಮೆ ಕೃಷಿಗೆ ಮಾರಕವಾಗತಕ್ಕ ನೀತಿಯನ್ನು ಕೇಂದ್ರದವರು ಪ್ರಕಟ ಮಾಡಿದ್ದಾರೆ. ಅದನ್ನು ನಾನು ಈ ಸಭೆಯ ಮೂಲಕ ಖಂಡಿಸುತ್ತೇನೆ. ಮತ್ತೆ ನಾನು ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ನೀತಿಯನ್ನು ನೀವು ದಯಮಾಡಿ ವಾಪಸ್ ತೆಗೆದುಕೊಳ್ಳಬೇಕು. ಸಂಪೂರ್ಣವಾಗಿ ಇದನ್ನು ನೀವು ನಿಲ್ಲಿಸಬೇಕು. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ರೇಷ್ಮೆ ಕೃಷಿಯನ್ನು , ರೇಷ್ಮೆ ಬೆಳೆಗಾರರನ್ನು ಉಳಿಸಬೇಕೆಂದು ಈ ಸದನದ ಮೂಲಕ ಮನವಿಯನ್ನು ಮಾಡುತ್ತೇನೆ. ಇದೇರೀತಿ ಮಾನ್ಯ ಪುಟ್ಟಣ್ಣಯ್ಯನವರೂ ಮಾತನಾಡುತ್ತಾರೆಂದು ಅಂದುಕೊಂಡಿದ್ದೆ. ಇವತ್ತು ಓಜಿಎಲ್ ಅಂದರೆ ಓಪನ್ ಜನರಲ್ ಲೈಸೆನ್ಸ್ ಎನ್ನುವ ಒಂದು ವಿಚಾರವನ್ನು ಕೇಂದ್ರಸರ್ಕಾರದವರು ಚಿಂತನೆ ಮಾಡುತ್ತಾ, ಇವತ್ತು ಸಕ್ಕರೆಯನ್ನೂ ಕೂಡ ಇಂಪೋರ್ಟ್ ಮಾಡತಕ್ಕ ಮಟ್ಟಕ್ಕೆ ಹೋಗಿದ್ದಾರೆ. ಇವತ್ತು ರಾಜ್ಯದ ಪಾತ್ರ ಅಷ್ಟು ಸಂಪೂರ್ಣವಾಗಿ ಇಲ್ಲವೆಂದರೂ ಕೂಡ ನಮ್ಮ ಜವಾಬ್ದಾರಿ ಇದೆ. ಇವತ್ತು, to safeguard the interests of the people of Karnataka, to safeguard the farmers of this State ನಾವು ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇದೇ ರೀತಿ ಕೇಂದ್ರಸರ್ಕಾರದವರು ಸಕ್ಕರೆಯನ್ನೂ ಕೂಡ ಆಮದು ಮಾಡಿಕೊಳ್ಳತಕ್ಕ ಪರಿಸ್ಥಿತಿಗೆ ಹೋದರೆ, ಇವತ್ತು ಈ ರಾಜ್ಯದಲ್ಲಿ ಸಂಪೂರ್ಣವಾಗಿ ಕಬ್ಬನ್ನು ಬೆಳೆದು, ಜೀವನ ಮಾಡತಕ್ಕ ಅನೇಕ ರೈತರಿಗೆ ಇವತ್ತು ಮಾರಕವಾಗುತ್ತದೆ,ಅದರಿಂದ ಓ ಜಿ ಎಲ್ ಆಗಬಹುದು ಅಥವಾ ಇನ್ನೊಂದು ವ್ಯವಸ್ಥೆಯಾಗಬಹುದು. ಆದ್ದರಿಂದ ನಮ್ಮಲ್ಲಿರತಕ್ಕ ಸಕ್ಕರೆಗಿಂತ ಕಡಿಮೆ ಬೆಲೆಯಲ್ಲಿ ಬೇರೆ ರಾಷ್ಟ್ರಗಳಿಂದ ತರಿಸಿಕೊಂಡು ಇಲ್ಲಿ ಕೃಷಿಯನ್ನೇ ನಂಬಿಕೊಂಡು ಜೀವನ ಮಾಡತಕ್ಕ ರೈತರ ಹೊಟ್ಟೆಮೇಲೆ ಹೊಡೆಯತಕ್ಕ ನೀತಿಗಳಿಗೆ ನಮ್ಮ ಧಿಕ್ಕಾರ ಎಂದು ಹೇಳುತ್ತೇನೆ. ಒಟ್ಟಾರೇ ಸರ್ಕಾರ ಎಲ್ಲಾ ರಂಗಗಳಲ್ಲಿ ವಿಫಲವಾಗಿದೆ. ಇವತ್ತು ಸಂಪೂರ್ಣವಾಗಿ ವೈಫಲ್ಯಗಳನ್ನು ನೋಡುತ್ತಿರತಕ್ಕ ಈ ಸರ್ಕಾರದ ವಿರುದ್ಧ, ನಮ್ಮ ಪಕ್ಷದ ನಾಯಕರು ಮಂಡಿಸಿರತಕ್ಕ ಅವಿಶ್ವಾಸ ನಿರ್ಣಯದ ಪರವಾಗಿ ನಾನು ಮತವನ್ನು ಹಾಕುತ್ತೇನೆ ಎಂದು ಹೇಳುತ್ತಾ, ತಾವು ಈ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

10.30 ಎ.ಎಂ

+ ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ಅಧ್ಯಕ್ಷರೇ, ಅವಿಶ್ವಾಸ ಗೊತ್ತುವಳಿ ಪರವಾಗಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ, ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದೇನೆ. ನಾವು ಮತ್ತು ಕಾಂಗ್ರೆಸ್ ಪಕ್ಷದವರು ಇವತ್ತು ಆಡಳಿತ ಇರತಕ್ಕಂಥ ರಾಜ್ಯ ಸರ್ಕಾರದ ವಿರುದ್ಧವಾಗಿ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿ ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ವಿರೋಧಪಕ್ಷಗಳು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ನಡೆದಿರತಕ್ಕಂಥ ಹತ್ತಾರು ವಿಚಾರಗಳ ಬಗ್ಗೆ ಪ್ರಸ್ತಾಪವಾಗಿದೆ. ಅದರಲ್ಲಿ ಬಹಳ ಪ್ರಮುಖವಾದಂಥಾದ್ದು ವಿದ್ಯುಚ್ಛಕ್ತಿ. ಪಂಪ್‌ಸೆಟ್‌ಗಳಿಗೆ ವಿದ್ಯುತ್ ಮೀಟರ್ ಅಳವಡಿಕೆ. ಹಾಗೆಯೇ ಭಾಗ್ಯಜ್ಯೋತಿ ಮನೆಗಳಿಗೆ ಮೀಟರ್‌ಗಳನ್ನು ಅಳವಡಿಕೆ. ಇಂತಹ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಮೈಸೂರು ನಗರದಲ್ಲಿ ಸುಮಾರು 21 ರೆವಿನ್ಯೂ ಬಡಾವಣೆಗಳು ಇವೆ ಇವತ್ತು ಆ ಬಡಾವಣೆಗಳಲ್ಲಿ ವಾಸ ಮಾಡುವಂತಹ ಜನ ಸರ್ಕಾರಕ್ಕೆ ಸುಮಾರು 80-90 ಲಕ್ಷ ರೂಪಾಯಿಗಳನ್ನು ಕೊಟ್ಟು ನಮಗೆ ವಿದ್ಯುತ್ ಸೌಲಭ್ಯ ಕಲ್ಪಿಸಿಕೊಡಿ ಎಂದು ಕಳೆದ ಎರಡು ಮೂರು ವರ್ಷಗಳ ಹಿಂದೆಯೇ ಹಣ ಕಟ್ಟಿದ್ದರೂ ಸಹ ಆ ಜನರಿಗೆ ವಿದ್ಯುತ್ ಕಂಬಗಳನ್ನು ಹಾಕಿ ಟ್ರಾನ್ಸ್‌ಫಾರ್ಮರ್ಸ್‌ನ್ನು ಅಳವಡಿಸುವುದಕ್ಕೆ ಸರ್ಕಾರಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ನಾನು ಮಾನ್ಯ ಸಚಿವರಾದ ದರ್ಶನಾಪುರ್ ಅವರ ಹತ್ತಿರ ಸುಮಾರು ಹಲವಾರು ಬಾರಿ ಹೋಗಿದ್ದೇನೆ. ವಿದ್ಯುಚ್ಛಕ್ತಿ ಮಂಡಲಿ ಅಧಿಕಾರಿಗಳು ನಾನು ಹೋಗಿ ವಿಚಾರಿಸಿದಾಗ ಇಂತಹ ಮೆಟೀರಿಯಲ್ಸ್ ನಮ್ಮಲ್ಲಿ ಇಲ್ಲ ಎಂದು ಹೇಳಿ ಏನು ಲಿಸ್ಟ್‌ಗಳನ್ನು ಕೊಡುತ್ತಾರೆ ಆ ಲಿಸ್ಟ್‌ನ್ನು ಮಾನ್ಯ ಮಂತ್ರಿಗಳ ಹತ್ತಿರ ತಂದು ಆ ಮೆಟೀರಿಯಲ್ಸ್‌ನ್ನು ತೆಗೆದುಕೊಂಡು ಹೋಗುವುದಕ್ಕೆ ಅಪ್ರೂವಲ್ ತೆಗೆದುಕೊಂಡು ಮೆಟೀರಿಯಲ್ಸ್ ತೆಗೆದುಕೊಂಡು ಹೋಗತಕ್ಕಂಥ ಕೆಲಸವನ್ನೂ ಸಹ ನಾನು ಮಾಡಿದ್ದೇನೆ. ಅವರು ಅಪ್ರೂವಲ್ ಕೊಟ್ಟರೂ ಸಹ ಅನೇಕ ಮೆಟೀರಿಯಲ್ಸ್ ಇಲ್ಲಿ ಸಿಗುವುದೇ ಇಲ್ಲ. ಆ ಮೆಟೀರಿಯಲ್ಸ್ ಸಿಗದೇ ಇರುವುದರಿಂದ ಆ ರೆವಿನ್ಯೂ ಬಡಾವಣೆಗಳಲ್ಲಿ ವಾಸ ಮಾಡುತ್ತಾ ಇರುವಂತಹ ಜನ ಏನು ಇದ್ದಾರೆ ಅವರು ಕಳೆದ 2-3 ವರ್ಷಗಳ ಹಿಂದೆ ಸರ್ಕಾರಕ್ಕೆ 80-90 ಲಕ್ಷ ರೂಪಾಯಿಗಳನ್ನು ಕಟ್ಟಿದ್ದರೂ ಸಹ ಅವರಿಗೆ ಸಿಗಬೇಕಾದಂತಹ ನಾಗರೀಕ ಸೌಲಭ್ಯಗಳು ಇವತ್ತು ಸಿಗುತ್ತಿಲ್ಲ. ಅಂದರೆ ಬಡ ನಾಗರೀಕರಿಗೆ ಕೊಡಬೇಕಾದಂತಹ ಸೌಲಭ್ಯಗಳನ್ನು ಕೊಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆದ್ದರಿಂದ ದಯಮಾಡಿ ತಕ್ಷಣ ಸರ್ಕಾರ ಆ ಕಡೆ ಗಮನ ಹರಿಸಬೇಕು. ಆ ಜನಗಳ ನೋವು ಮತ್ತು ನಲಿವುಗಳ ಬಗ್ಗೆ ಸರ್ಕಾರ ತಕ್ಷಣ ಸ್ಪಂದಿಸಬೇಕೆಂದು ನಾನು ಹೇಳುತ್ತಿದ್ದೇನೆ ಮತ್ತೊಂದು ಪ್ರಮುಖವಾದಂತಹ ವಿಚಾರ. ವಿದ್ಯುಚ್ಛಕ್ತಿ ಯಾವ ರೀತಿ ಹದಗೆಟ್ಟಿದೆ ಎಂದರೆ ಅದನ್ನು

ಹೇಳತೀರದು. ಇವತ್ತು ನಗರಪ್ರದೇಶಗಳಲ್ಲಿ ಅನೇಕ ಜನ ಶಾಸಕರು ವಾಸ ಮಾಡುತ್ತಿದ್ದೇವೆ. ಪ್ರತಿಯೊಬ್ಬ ಶಾಸಕರು ಪ್ರಶ್ನೆ ಮಾಡುವಂತಹ ವಿಚಾರ ಇವತ್ತು ಕುಡಿಯುವ ನೀರು. ಈ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಪ್ರತಿಯೊಬ್ಬ ಶಾಸಕರು ಪ್ರತಿ ಸದನದಲ್ಲೂ ಪ್ರಸ್ತಾಪ ಮಾಡುತ್ತಿದ್ದೇವೆ ಈ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ. ಮೈಸೂರು ನಗರಕ್ಕೆ ಸುಮಾರು 8 ಎಂಜಿಡಿ ನೀರನ್ನು ಕಾವೇರಿಯಿಂದ ತರುವಂತಹ ಯೋಜನೆಯ ಹಿನ್ನೆಲೆಯಲ್ಲಿ ಕಳೆದ 8 ವರ್ಷಗಳಿಂದ ಆ ಕೆಲಸ ಪೂರ್ಣಗೊಂಡಿಲ್ಲ. ಮೈಸೂರು ನಗರದಲ್ಲಿರತಕ್ಕಂಥ ಜನ ಮೈಸೂರು ನಗರದ ಶಾಸಕರಿಗೆ ಒತ್ತಾಯ ತಂದು ನಮಗೆ ಕುಡಿಯುವ ನೀರಿನ ಸೌಲಭ್ಯ ದೊರಕಿಸಿಕೊಡಬೇಕೆನ್ನುವ ಒತ್ತಡ ತಂದ ನಂತರ ನಾನು ಧರಣಿಯನ್ನು ಪ್ರಾರಂಭ ಮಾಡಿದೆ. ನಾನು ಧರಣಿಯನ್ನು ಪ್ರಾರಂಭ ಮಾಡಿದೆ. ನಂತರ ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರಿನಿಂದ ಬಂದು ನಾವು ಇಂತಹ ದಿನಾಂಕಕ್ಕೆ ಕಾವೇರಿ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸಿ ಮೈಸೂರು ನಗರದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆಂದು ನನಗೆ ಬರವಣಿಗೆಯಲ್ಲಿ ಕೊಟ್ಟಿದ್ದಾರೆ. ಅದರಲ್ಲಿ 25-7-98ಕ್ಕೆ ನಮ್ಮ ಜ್ಯೂಯಲ್ ಫಿಲ್ಟರ್‌ಗೆ ಕಾವೇರಿ ನೀರನ್ನು ತಂದು ಹಾಕಿ ಕುಡಿಯುವ ನೀರನ್ನು ಕೊಡುತ್ತೇವೆಂದು ಹೇಳಿದರು. ಆದರೆ ಇದುವರೆಗೂ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಿಲ್ಲ. ಈಗ ನಾವು ನವೆಂಬರ್ ತಿಂಗಳಲ್ಲಿದ್ದೇವೆ. ಸರ್ಕಾರ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಿಕ್ಕೆ ಆಗಲಿಲ್ಲ. ಮಾನ್ಯ ಸಚಿವರಾದ ಬಚ್ಚೇಗೌಡರು ಬಂದಿದ್ದರು. ನೀರು ಸರಬರಾಜು ಮಂಡಲಿಯ ಅಧ್ಯಕ್ಷರು ಬಂದಿದ್ದರು. ಅವರೂ ಸಹ ಜೂನ್ ಮತ್ತು ಜುಲೈ ತಿಂಗಳಲ್ಲಿ ನಾವು ನಿಮಗೆ ಕುಡಿಯುವ ನೀರನ್ನು ಕೊಡುತ್ತೇವೆನ್ನುವ ಮಾತನ್ನು ಹೇಳಿದರು. ಆದರೆ ಇದುವರೆಗೂ ಕಾವೇರಿ ಕುಡಿಯುವ ನೀರನ್ನು ಮೈಸೂರು ನಗರಕ್ಕೆ ಒದಗಿಸುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅಂದರೆ ಸರ್ಕಾರದ ಆಡಳಿತ ಇವತ್ತು ಕುಸಿದಿದೆ. ಮತ್ತೊಂದು ಪ್ರಮುಖವಾದಂತಹ ವಿಚಾರ, ಮೈಸೂರು ನಗರದಲ್ಲಿ ಇರುವ ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವುದಕ್ಕೆ ಸರ್ಕಾರ ಈಗಾಗಲೇ ಒಂದು ಪ್ರಗತಿಯ ಹಂತವನ್ನು ತಲುಪಿದೆ. ಅದಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತಿದ್ದೇನೆ. ರೆವಿನ್ಯೂ ನಿವೇಶನಗಳಲ್ಲಿ ವಾಸ ಮಾಡುತ್ತಾ ಇರತಕ್ಕಂಥ ಜನ ಏನು ಇದ್ದಾರೆ ಅವರು ತೀರಾ ಕಡುಬಡವರು. ಅವರು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಕೂಲಿ ಮಾಡಿ ಗಂಜಿ ಕುಡಿಯುವಂತಹ ಜನ ಇದ್ದಾರೆ. ಆ ಜನ ನಮ್ಮ ಹತ್ತಿರ ಬಂದು ಈ ಸಕ್ರಮಗೊಳಿಸುವುದಕ್ಕೆ ಸರ್ಕಾರಕ್ಕೆ ನಾವು ಏನು ಹಣ ಕಟ್ಟಬೇಕು ಆ ಹಣವನ್ನು ಕಂತುಗಳ ಮೂಲಕ ಹಣ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಒತ್ತಾಯ ಮಾಡುತ್ತಿದ್ದಾರೆ. ನಾನು ಈ ವಿಷಯವನ್ನು ನಮ್ಮ ಉಪ ಮುಖ್ಯಮಂತ್ರಿಗಳ ಗಮನಕ್ಕೂ ಮತ್ತು ಪೌರಾಡಳಿತ ಸಚಿವರಾದ ಮಿರಾಜುದ್ದಿನ್ ಪಟೇಲ್ ಅವರ ಗಮನಕ್ಕೂ ಕೂಡ ಈ ವಿಷಯ ತಂದೆ. ಈ ರೆವಿನ್ಯೂ ನಿವೇಶನದಾರರು ಬಹಳ ಬಡವರು ಇದ್ದಾರೆ. ಅವರು ಸುಮಾರು 10-12 ಸಾವಿರ ರೂಪಾಯಿಗಳನ್ನು ಒಂದೇ

ಕಂತಿನಲ್ಲಿ ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರು ಆ ಹಣವನ್ನು ಕಂತಿನ ಮೂಲಕ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಒಂದು ಮನವಿಯನ್ನೂ ಸಹ ಸರ್ಕಾರಕ್ಕೆ ಕೊಟ್ಟಿದ್ದೇನೆ. ಇದುವರೆಗೂ ನನ್ನ ಮನವಿಗೆ ಪುರಸ್ಕಾರ ಸಿಗಲಿಲ್ಲ. ಇವತ್ತು ಬಡವರು ಏನು ರೆವಿನ್ಯೂ ನಿವೇಶನಗಳಲ್ಲಿ ವಾಸ ಮಾಡುತ್ತಿದ್ದಾರೆ ಅವರ ಪರವಾಗಿ ಸರ್ಕಾರ ಕೆಲಸ ಮಾಡದೇ ಆ ಬಡವರಿಗೆ ಕಂತುಗಳ ಮೂಲಕ ಹಣ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ. ಈ ಸರ್ಕಾರ ಇವತ್ತು ಜನರ ಪರವಾಗಿ ಕೆಲಸ ಮಾಡುವುದಕ್ಕೆ ಇದೆಯೋ ಅಥವಾ ಜನ ವಿರೋಧಿ ಕೆಲಸ ಮಾಡುವುದಕ್ಕೆ ಇದೆಯೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ಒಂದು ಅವಿಶ್ವಾಸ ನಿರ್ಣಯವನ್ನು ಈ ಸರ್ಕಾರದ ವಿರುದ್ಧ ಮಂಡಿಸಿ ಈ ಸರ್ಕಾರ ಇವತ್ತು ಹೋಗಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಇವತ್ತು ಮೈಸೂರು ನಗರದಲ್ಲಿ ನಾಲ್ಕನೇ ನ್ಯಾಷನಲ್ ಗೇಮ್ಸ್ ನಡೆಯಿತು. ಅದರ ಸಂಬಂಧವಾಗಿ ಕಟ್ಟಡಗಳನ್ನು ಕಟ್ಟಿ ಎರಡು ಮೂರು ವರ್ಷಗಳು ಆದವು. ಆ ಕಟ್ಟಡಗಳನ್ನು ಕಟ್ಟಿದಂತಹ ಗುತ್ತಿಗೆದಾರರಿಗೆ ಇವತ್ತಿನವರೆಗೂ ಸರ್ಕಾರ ಹಣ ಪಾವತಿ ಮಾಡಲಿಕ್ಕೆ ಆಗಲಿಲ್ಲ. ಕಳೆದ ಅಧಿವೇಶನದಲ್ಲಿ ಕೊನೆಯ ದಿನ ಸರ್ಕಾರ ಸಪ್ಲಿಮೆಂಟರಿ ಬಜೆಟ್‌ನ್ನು ಮಂಡನೆ ಮಾಡಿತು. 70 ಕೋಟಿರೂಪಾಯಿಗಳನ್ನು ಕೊಡಲಿಕ್ಕೆ. ಹಿಂದೂಸ್ತಾನ್ ಕನ್‌ಸ್ಟ್ರಕ್ಷನ್ ಕಂಪನಿ. ಇದು ಕೇಂದ್ರ ಸರ್ಕಾರದ ಸಾಮ್ಯದಲ್ಲಿರತಕ್ಕಂಥ ಒಂದು ಸಂಸ್ಥೆ. ಆ ಸಂಸ್ಥೆಯ ಅಡಿಯಲ್ಲಿ ಕೆಲಸ ಮಾಡಿರತಕ್ಕಂಥ ತುಂಬಾ ಜನ ಕಂಟ್ರಾಕ್ಟರ್ಸ್‌ಗೆ ಸರ್ಕಾರ ಇದುವರೆಗೂ ಪೇಮೆಂಟ್ ಕೊಡುವುದಕ್ಕೆ ಆಗಿಲ್ಲ. ಒಬ್ಬ ವ್ಯಕ್ತಿಯದು 1 ಕೋಟಿ 80 ಲಕ್ಷ ರೂಪಾಯಿ ಬಾಕಿ ಇದೆ. ನಮ್ಮ ಸರ್ಕಾರದಲ್ಲಿ ಹಣ ಇದೆ ಎಂದು ಹೇಳಿ ನಮ್ಮ ಉಪ ಮುಖ್ಯಮಂತ್ರಿಗಳು ಯಾವಾಗಲೂ ಹೇಳುತ್ತಿರುತ್ತಾರೆ. ಎಲ್ಲಿ ಹಣ ಇದೆ? ಒಂದು ವೇಳೆ ಹಣ ಇದ್ದಿದ್ದರೆ ಎತಕ್ಕೆ ಅವರಿಗೆಲ್ಲಾ ಹಣ ಸಂದಾಯ ಮಾಡುತ್ತಿಲ್ಲ. ಅವರು ಒಂದು ದಿನಕ್ಕೆ ಸುಮಾರು 6-7 ಸಾವಿರ ರೂಪಾಯಿಗಳ ಬಡ್ಡಿಗೆ ಹಣ ತಂದು ಕೆಲಸ ಮಾಡಿದ್ದಾರೆ. ಇದರಲ್ಲಿ ಸರ್ಕಾರದ ಜವಾಬ್ದಾರಿ ಏನು? ನಾನು ಈ ಸಂಬಂಧವಾಗಿ ಪ್ರತಿ ಸದನದಲ್ಲಿ ಸಹ ಪ್ರಶ್ನೆಗಳನ್ನು ಹಾಕಿ ಅವರಿಂದ ಉತ್ತರವನ್ನು ಪಡೆದಿದ್ದೇನೆ. ಮಾನ್ಯ ಲೋಕೋಪಯೋಗಿ ಸಚಿವರು ನನಗೆ ಉತ್ತರಕೊಟ್ಟಿದ್ದಾರೆ. ಮೈಸೂರು ನಗರದಲ್ಲಿ ಮಹಾರಾಜರ ಕಾಲದಲ್ಲಿ ಆಗಿರುವಂತಹ ಪೋಲೀಸ್ ವಸತಿ ಗೃಹಗಳು 1919ನೇ ಇಸವಿಯಲ್ಲಿ ನಿರ್ಮಿಸಿರುವಂತಹ ಕಟ್ಟಡಗಳು. ಇದುವರೆಗೂ ಆ ಮನೆಗಳಿಗೆ ಮತ್ತು ರಸ್ತೆಗಳಿಗೆ ಡಾಂಬರೀಕರಣವಾಗಿಲ್ಲ. ನಗರಪಾಲಿಕೆಯವರು ನಮಗೆ ಸಂಬಂಧಪಟ್ಟಿಲ್ಲ ಎಂದು ಹೇಳುತ್ತಾರೆ. ನಗರಾಭಿವೃದ್ಧಿ ಪ್ರಾಧೀಕಾರದವರು ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ಆ ಮನೆಗಳ ನಿರ್ವಹಣೆಯನ್ನು ಮಾಡುತ್ತಿರುವವರು ಲೋಕೋಪಯೋಗಿ ಇಲಾಖೆಯವರು. ಅವರೂ ಸಹ ಇದುವರೆಗೂ ಆ ರಸ್ತೆಗಳನ್ನು ಮಾಡಲಿಕ್ಕೆ ಮುಂದಾಗಲಿಲ್ಲ. ನಾನು ಅನೇಕ ಸಾರಿ ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಪ್ರತಿ

ಅಧಿವೇಶನದಲ್ಲಿಯೂ ಸಹ ನಾನು ಈ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅವರು ಹೇಳಿದರು ಇದರ ಬಗ್ಗೆ ಒಂದು ಎಸ್ಟಿಮೇಟ್ ಆಗಲಿ ನಾನು ಮಾಡಿಸಿಕೊಡುತ್ತೇನೆಂದು ಹೇಳಿದರು. ಅದೇ ಪ್ರಕಾರವಾಗಿ ನಾನು 15 ಲಕ್ಷ ರೂಪಾಯಿಗಳಿಗೆ ಒಂದು ಎಸ್ಟಿಮೇಟ್ ತಂದು ನಿನ್ನೆಯ ದಿವಸ ಸಹ ನಾನು ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆ 15 ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿ ಆ ಪೋಲೀಸ್ ವಸತಿ ಗೃಹಗಳ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸರ್ಕಾರ ಮುಂದಾಗಲಿಲ್ಲ. ಜನ ಸಾಮಾನ್ಯರ ಕೆಲಸ ಮಾಡಲಿಕ್ಕೆ ಆಗದೇ ಇರುವಂತಹ ಸರ್ಕಾರ ಇನ್ನು ಏತಕ್ಕೆ ಇದೆ? ವಿರೋಧಪಕ್ಷದಲ್ಲಿ ಇರುವ ಶಾಸಕರು ನಾವು ಹೇಗೆ ಇವತ್ತು ಜನರ ಮುಂದೆ ನಿಲ್ಲಬೇಕೆನ್ನುವುದು ನನಗೆ ಆಶ್ಚರ್ಯವಾಗುತ್ತದೆ. ನಿನ್ನೆಯ ದಿವಸ ಮಾನ್ಯ ಸಚಿವರು ಹೇಳಿದ್ದಾರೆ ನಾನು ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನೆಂದು; ತಾವು ನನಗೆ ಇದೇ ರೀತಿಯ ಉತ್ತರವನ್ನು ಕೊಡುತ್ತಿದ್ದರೆ ನಾನು ತಮ್ಮ ಮನೆಯ ಮುಂದೆ ಧರಣಿ ಮಾಡಬೇಕಾಗುತ್ತದೆ. ಈ ಸರ್ಕಾರ ಇವತ್ತು ನಾಳೆ ಇರುತ್ತದೆಯೋ ಇಲ್ಲವೋ ಎನ್ನುವ ಅನುಮಾನ ನಮಗೆ. ಇದುವರೆಗೂ ಮಾಡದೇ ಇರುವ ಸರ್ಕಾರ ಇನ್ನು ಮುಂದೆ ಯಾವ ರೀತಿ ಮಾಡುತ್ತೀರಿ ಎನ್ನುವ ಅನುಮಾನ ನಮಗೆ ಬರುತ್ತಿದೆ.ಮಾನ್ಯ ಅಧ್ಯಕ್ಷರೇ, ನನ್ನ ಒಂದು ಪ್ರಮುಖವಾದಂಥ ಸಮಸ್ಯೆಯು ಇದೆ. ಇದು ನನ್ನ ಕ್ಷೇತ್ರದಲ್ಲಿರತಕ್ಕಂಥ ಸಮಸ್ಯೆಯಾಗಿದೆ. ನನ್ನ ಕ್ಷೇತ್ರದಲ್ಲಿ ಹಿಂದುಳಿದ ಸಮಾಜದವರು ಪರಿಶಿಷ್ಟ ಜಾತಿ ಮತ್ತು ಜನಾಂಗದವರು ಹೆಚ್ಚು ವಾಸ ಮಾಡುತ್ತಿದ್ದಾರೆ. ಕ್ಯಾತಮಾರನ ಹಳ್ಳಿ ಎಂಬ ನಗರಪ್ರದೇಶದಲ್ಲಿರತಕ್ಕಂಥ ಹಳ್ಳಿ ಇದೆ. ಹುಲಿಯಮ್ಮ ದೇವರು ಆ ಗ್ರಾಮದ ಅಧಿದೇವತೆ. ನೂರಾರು ವರ್ಷಗಳಿಂದ ಆ ಜನರು ದೇವತೆಯ ಪೂಜೆಯನ್ನು ಮಾಡಿಕೊಂಡು ಬಂದಿದ್ದಾರೆ. ಆ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಮೂರು ಎಕರೆ ಹದಿನೈದುವರೆ ಗುಂಟೆ ಜಮಿನು ಇದೆ. 1993ರಲ್ಲಿ ಆಗಿದ್ದಂಥ ಜಿಲ್ಲಾಧಿಕಾರಿಗಳು, ಬೆಂಗಳೂರಿನಿಂದ ಬಂದಂಥ ರೆವಿನ್ಯೂ ಕಾರ್ಯದರ್ಶಿಯವರು ಮತ್ತು ರೆವಿನ್ಯೂ ಕಮಿಶನರ್‌ರವರ ಒಪ್ಪಿಗೆಯ ಆಧಾರದ ಮೇಲೆ ಆ ಜಮಿನನ್ನು ಪೋಲೀಸ್ ಇಲಾಖೆಗೆ ಪೋಲೀಸ್ ಠಾಣೆ ಮತ್ತು ವಸತಿಗೃಹಗಳನ್ನು ಕಟ್ಟಲು ಕೊಟ್ಟಿದ್ದೇವೆ ಎಂಬ ಒಂದು ಆದೇಶವನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಅಂದರೆ ಮೌಖಿಕ ಒಪ್ಪಿಗೆಯ ಆಧಾರದ ಮೇಲೆ ತಹಶೀಲ್ದಾರರಿಗೆ ಜಿಲ್ಲಾಧಿಕಾರಿಯವರು ವರ್ಗಾವಣೆ ಮಾಡಿ ಎಂದು ಹೇಳತಕ್ಕಂಥ ಒಂದು ಪತ್ರವನ್ನು ಪಡೆದಿದ್ದೇನೆ. ನಾನು ಚುನಾಯಿತನಾಗಿ ಬಂದು ನಂತರ ಅಲ್ಲಿನ ಜನರು ಈ ಜಮೀನು ನಮ್ಮ ದೇವಸ್ಥಾನಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು, ಇದನ್ನು ಈಗ ಪೋಲೀಸ್ ಇಲಾಖೆಗೆ ಕೊಟ್ಟಿದ್ದಾರೆ, ಇದನ್ನು ನಮಗೆ ಉಳಿಸಿಕೊಳ್ಳಬೇಕೆಂಬ ಮಾತನ್ನು ನನ್ನ ಗಮನಕ್ಕೆ ತಂದರು. ಇದಾದನಂತರ ಹಿಂದಿದ್ದಂಥ ಕಂಡಾಯ ಸಚಿವರಿಗೆ, ಸಂಬಂಧಪಟ್ಟಂಥ ಅಧಿಕಾರಿಗಳಿಗೆ, ಮುಖ್ಯಮಂತ್ರಿಯವರಿಗೆ ಎಲ್ಲರಿಗೂ ಮನವಿಪತ್ರಗಳನ್ನು ಕೊಟ್ಟಿದ್ದೆನು. ದೇವಸ್ಥಾನಕ್ಕೆ ಸಂಬಂಧಪಟ್ಟಂಥ ಆಸ್ತಿಯನ್ನು ಉಳಿಸಿಕೊಳ್ಳಬೇಕೆಂಬ ಮನವಿಯನ್ನು

ನಾನು ಮಾಡಿಕೊಂಡಿದ್ದೆನು. ಮೈಸೂರು ನಗರದ ಪೋಲೀಸ್ ಆಯುಕ್ತರನ್ನೂ ಕೂಡ ಆ ಸಂಬಂಧಪಟ್ಟ ಜನರನ್ನು ಕರೆದುಕೊಂಡು ಹೋಗಿ ಮನವಿ ಮಾಡಿಕೊಂಡಿದ್ದೆನು. ಈ ಸ್ಥಳವನ್ನು ಅವರಿಗೆ ಬಿಟ್ಟುಕೊಡಿ, ಪೋಲೀಸ್ ಠಾಣೆಗೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಬೇರೆ ಯಾವುದಾದರೂ ಜಾಗವನ್ನು ಮಂಜೂರು ಮಾಡಿಕೊಡಬಹುದು, ಪೋಲೀಸ್ ಠಾಣೆ ಕಟ್ಟಲು ಬೇಕಾದಷ್ಟು ಸ್ಥಳ ಇದೆ, ನಾನು ಮತ್ತು ನೀವು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಿದ್ದೇವೆ. ಬೇರೆ ಯಾವುದಾದರೂ ಒಂದು ಸ್ಥಳವನ್ನು ನಾವು ಮಂಜೂರು ಮಾಡಿಕೊಳ್ಳೋಣ, ಎಂಬ ಮನವಿಯ ಮೂಲಕ, ಆ ಜನರ ಮೂಲಕ ಎಲ್ಲರನ್ನೂ ನಾನು ಕೇಳಿಕೊಂಡು ಪ್ರಯತ್ನವನ್ನು ಮಾಡಿದೆ. ಎರಡು ವರ್ಷಗಳ ನನ್ನ ಪ್ರಯತ್ನ ಆಗಲಿಲ್ಲ. ಸರಕಾರದ ಗಮನಕ್ಕೆ ತಂದೆ, ಅದೂ ಆಗಲಿಲ್ಲ. ಕಡೆಗೆ ನನ್ನ ಕ್ಷೇತ್ರದ ಜನರನ್ನು ಕಟ್ಟಿಕೊಂಡು ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ಮಾಡಬೇಕಾಯಿತು. ಪ್ರತಿಭಟನೆ ಮಾಡಿದ ನಂತರ ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲಾಧಿಕಾರಿಯವರಿಗೆ ಹೇಳಿ ಒಂದು ಸಭೆಯನ್ನು ಕರೆದು ವಿಷಯವನ್ನು ತೀರ್ಮಾನ ಮಾಡುವ ಹಿನ್ನೆಲೆಯಲ್ಲಿ ಸರಕಾರಿ ಗೆಸ್ಟ್‌ಹೌಸ್‌ನಲ್ಲಿ ಒಂದು ಸಭೆ ಸೇರಿದೆವು. ಆ ಸಭೆಯಲ್ಲಿ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಮಾನ್ಯಶ್ರೀ ಸಿದ್ದರಾಮಯ್ಯನವರ ಮುಂದೆ ಹೇಳಿಕೊಂಡಿದ್ದೆ. ಆ ಸಮಯದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾಪಂಚಾಯತ್‌ನ ಕಾರ್ಯದರ್ಶಿಯವರು, ಪೋಲೀಸ್ ಆಯುಕ್ತರು, ಮಾನ್ಯ ಸಿದ್ದರಾಮಯ್ಯನವರು ಸೇರಿ ಎಲ್ಲರೂ ಕುಳಿತುಕೊಂಡು ಮೊದಲು ತೀರ್ಮಾನ ಮಾಡೋಣ ಎಂದು ಒಂದು ರೂಮ್‌ನಲ್ಲಿ ಸೇರಿದ್ದೆವು. ಆ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಿದ್ದೆ. ಮೈಸೂರು ನಗರದಲ್ಲಿ ಪೋಲೀಸ್ ಠಾಣೆಗಳು ನವೀಕರಣಗೊಳ್ಳುತ್ತಾ ಇವೆ. ಇದರಲ್ಲಿ ಸಾರ್ವಜನಿಕರು ತಮ್ಮ ಹಣವನ್ನು ತೊಡಗಿಸಿದ್ದಾರೆ, ಪೋಲೀಸ್ ಠಾಣೆಯ ನವೀಕರಣವಾಗ ಬೇಕಾದರೆ ಅಲ್ಲಿ ಒಂದು ಸಿಟಿಜನ್ಸ್ ಕಮಿಟಿ ಎಂದು ಇರುತ್ತದೆ. ಆ ಸಿಟಿಜನ್ಸ್ ಕಮಿಟಿಗೆ ನೀವು ಇನ್‌ವಾಲ್ವ್ ಮಾಡಿದ್ದೀರಾ? ಪೋಲೀಸ್ ಇಲಾಖೆಯ ಮೂಲಕ ಹಣವನ್ನು ಏನು ಸಂಗ್ರಹ ಮಾಡುತ್ತಿದ್ದೀರಿ ಅದನ್ನು ಸಾರ್ವಜನಿಕರ ಗಮನಕ್ಕೆ ತಂದು ತಿಳಿಯ ಪಡಿಸಿದ್ದೀರಾ ಎಂಬ ಪ್ರಶ್ನೆಯನ್ನು ಕೇಳಿದೆ. ಇದನ್ನು ನಾನು ಯಾಕೆ ಕೇಳಿದೆ ಅಂದರೆ, ದೇವರಾಜ್ ಮಾರ್ಕೆಟ್‌ನಲ್ಲಿ ತರಕಾರಿ ಮಾರಾಟಗಾರನಾದ ನಾಗರಾಜ್ ಎಂಬುವರು ನನ್ನ ಮನೆಗೆ ಒಂದು ದಿನ ಓಡಿ ಬಂದರು. ಬಂದವರು ನನ್ನನ್ನು ನರಸಿಂಹರಾಜ ಮೊಹಲ್ಲಾ ಪೋಲೀಸ್ ಸ್ಟೇಶನ್‌ಗೆ ಕರೆಸಿದ್ದಾರೆ, ಅಲ್ಲಿಗೆ ಹೋಗಿ ಏನೆಂದು ಕೇಳಿದಾಗ 250ಮೂಟೆ ಸಿಮೆಂಟ್‌ನ್ನು ಕೊಡಬೇಕೆಂದು ಆದೇಶಿಸಿದರು. ಆ ಬಗ್ಗೆ ಪೋಲೀಸ್ ಅಧಿಕಾರಿಗಳು ಒತ್ತಾಯವನ್ನು ತರುತ್ತಿದ್ದಾರೆ ಎಂಬ ಮಾತನ್ನು ಹೇಳಿದರು. ನಾನು ನಾಗರಾಜ್‌ರವರಿಗೆ ನೀವು ಯಾವ ಸಿಮೆಂಟ್‌ನ್ನೂ ಕೂಡ ಅವರಿಗೆ ಕೊಡುವ ಅವಶ್ಯಕತೆ ಇಲ್ಲ ಮುಂದೆ ಯಾರಾದರೂ ಪೋಲೀಸ್ ಅಧಿಕಾರಿಗಳು ನಿಮ್ಮನ್ನು ಕೇಳಿದರೆ ನಾನು ಶಾಸಕರ ಹತ್ತಿರ ಕೊಟ್ಟಿದ್ದೇನೆ ಎಂಬ ಮಾತನ್ನು ಹೇಳಿ ಎಂದು ಹೇಳಿಕಳುಹಿಸಿದ್ದೆ. ಹಾಗೆಯೇ ಮೈಸೂರಿನ

ರಿಯಾಜ್ ಎನ್ನುವವರು ಒಂದು ರಾತ್ರಿ ನಮ್ಮ ಮನೆಗೆ ಬಂದರು. ನನ್ನ ಲಾರಿ ಪೋಲೀಸ್ ಸ್ಟೇಶನ್‌ನಲ್ಲಿ ಹಿಡಿದಿಟ್ಟಿದ್ದಾರೆ, ಅದನ್ನು ಬಿಡಿಸಿಕೊಳ್ಳಲು ಅವರು 100ಮೂಟೆ ಸಿಮೆಂಟ್‌ನ್ನು ಕೇಳುತ್ತಾ ಇದ್ದಾರೆ ಎಂಬ ಮಾತನ್ನು ಹೇಳಿದರು. ಕೇಳಿದ ನಾನು ಆಶ್ಚರ್ಯದಿಂದ ತತ್‌ಕ್ಷಣವೇ ಪೋಲೀಸ್ ಸ್ಟೇಶನ್‌ಗೆ ಫೋನ್ ಮಾಡಿದೆ. ಪೋಲೀಸ್ ಸ್ಟೇಶನ್‌ಗಳ ನವೀಕರಣಕ್ಕಾಗಿ ಸಾರ್ವಜನಿಕರಿಂದ ಒತ್ತಾಯದ ಮೂಲಕ ಬಲವಂತವಾಗಿ ಹಣ ಸಂಗ್ರಹವನ್ನು ಮಾಡುತ್ತಿದ್ದೀರಾ ಎಂದು ಸಂಬಂಧಪಟ್ಟವರನ್ನು ಕೇಳಿದೆ. ಹೀಗೆ ಸಂಗ್ರಹಣೆ ಮಾಡಲು ನಿಮಗೆ ಏನು ಅಧಿಕಾರವಿದೆ ಎಂದು ಕೇಳಿದೆ. ಅದಕ್ಕೆ ಹಾಗಿಲ್ಲ, ಹೀಗಿಲ್ಲ ಎಂಬ ಹಾರಿಕೆಯ ಉತ್ತರವನ್ನು ಅವರು ಕೊಟ್ಟರು. ನನಗೆ ಸಾರ್ವಜನಿಕರಿಂದ ಈ ರೀತಿಯಾದಂಥ ವಿಚಾರಗಳು ಬಂದ ನಂತರ, ಕ್ಷೇತ್ರದ ಶಾಸಕನಾಗಿ ಪ್ರಸ್ತಾಪ ಮಾಡುವ ಅವಶ್ಯಕತೆಯು ಇತ್ತು. ನನಗೆ ಆ ಬಗ್ಗೆ ಸಾರ್ವಜನಿಕರಿಂದ ಮನವಿ ಕೂಡ ಬಂದಿತ್ತು. ಇದನ್ನು ಪ್ರಸ್ತಾಪ ಮಾಡಿದುದಕ್ಕಾಗಿ ಮೈಸೂರು ನಗರದ ಪೋಲೀಸ್ ಆಯುಕ್ತರು ಈ ವಿಚಾರದ ಹಿನ್ನೆಲೆಯಲ್ಲಿ ಮಾಡಿದ ಪ್ರೆಸ್ ನೋಟ್‌ನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ. ಮಾರುತಿರಾವ್ ಪವಾರ್‌ರವರು ಶಾಸಕರಾಗಿ ನನಗೆ ಬ್ಲಾಕ್‌ಮೈಲ್ ಮಾಡುತ್ತಿದ್ದಾರೆ, ಎನ್ನತಕ್ಕಂಥ ಪತ್ರಿಕಾ ಹೇಳಿಕೆಯನ್ನು ಸಹಿ ಮಾಡಿಕೊಟ್ಟಿದ್ದಾರೆ. ಹೀಗೆ ಒಬ್ಬ ಅಧಿಕಾರಿಯು ಶಾಸಕರು ಹೇಳುತ್ತಿರುವುದು ಸುಳ್ಳು, ಅವರು ನನ್ನನ್ನು ಬ್ಲಾಕ್‌ಮೈಲ್ ಮಾಡುತ್ತಿದ್ದಾರೆ ಎಂದು ಪತ್ರಿಕಾ ಹೇಳಿಕೆಯನ್ನು ಕೊಡುತ್ತಾರೆ. ಶಾಸಕರ ವಿರುದ್ಧವಾಗಿ ಒಬ್ಬ ಪೋಲೀಸ್ ಅಧಿಕಾರಿಯು ಪತ್ರಿಕಾ ಹೇಳಿಕೆಯನ್ನು ಬರವಣಿಗೆಯ ಮೂಲಕ ಕೊಡುತ್ತಾರೆ ಎನ್ನುವುದಾದರೆ ಶಾಸಕರು ನಾವೋ ಅಥವಾ ಸರಕಾರದವರು ತಮ್ಮ ಅಧಿಕಾರಿಗಳ ಮೂಲಕ ರಾಜ್ಯಭಾರವನ್ನು ನಡೆಸುತ್ತಿದ್ದಾರೋ ಎಂಬ ಅನುಮಾನವು ಬರುತ್ತದೆ. ನಮಗೆ ಕ್ಷೇತ್ರದಲ್ಲಿ ಕೆಲಸ ಮಾಡಲು ಹಿಂಸೆಯಾಗುತ್ತಿದೆ. ಸರಕಾರದ ಐಬಿಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಾವು ಏನು ಸಭೆ ಸೇರಿದ್ದೆವು, ಅಲ್ಲಿ ಎಲ್ಲಾ ವಿಷಯಗಳನ್ನು ಅವರ ಮುಂದೆ ಪ್ರಸ್ತಾಪ ಮಾಡಿದ್ದೆನು. ಆಗ ಪೋಲೀಸ್ ಆಯುಕ್ತರು ಇದ್ದಕ್ಕಿದ್ದ ಹಾಗೆ ನನಗೆ ಏಕವಚನದಲ್ಲಿ ಏನೋ ಮಾಡಿ ಕೊಳ್ಳುತ್ತೀಯ? ಎಂಬ ಮಾತನ್ನು ಹೇಳಿದರು. ನಾನು ಏನು ಮಾಡಿಕೊಳ್ಳುವುದಕ್ಕೆ ಆಗುತ್ತದೆ? ಮೇಲಿನಿಂದ ಕೆಳಗೆ ಕಣ್ಣುಬಿಟ್ಟು ಮೇಲಿನಿಂದ ಕೆಳಗಡೆ ಆ ಬೂಟು ಕಾಲಿನಲ್ಲಿ ಹೊಸಕಿ ಆ ಮಾತುಗಳನ್ನು ಹೇಳುತ್ತಿರುವುದನ್ನು, ಆ ಒಂದು ಪ್ರಸಂಗವನ್ನು ನನ್ನ ಕಣ್ಣಿನಿಂದ ನೋಡಿದೆ. ಈ ನೋವು ಏನಾಯಿತು ಅದನ್ನು ನನ್ನಿಂದ ತಡೆಯಲು ಆಗಲಿಲ್ಲ. ಆಗ ಮಾನ್ಯ ಉಪ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು. ಜನಪ್ರತಿನಿಧಿಗಳಿಗೆ ಅಧಿಕಾರಿಗಳು ಈ ರೀತಿಯ ಮಾತನಾಡುವುದನ್ನು ನಾನು ಸಹಿಸಿ ಕೊಳ್ಳುವುದಕ್ಕೆ ಆಗುವುದಿಲ್ಲ ಎಂಬ ಮಾತನ್ನು ಹೇಳಿದರು. ಆ ಬಗ್ಗೆ ನಾನು ಮಾನ್ಯ ಸಿದ್ದರಾಮಯ್ಯನವರನ್ನು ಅಭಿನಂದಿಸುತ್ತೇನೆ. ಆದರೆ ನಿಮ್ಮ ಸರಕಾರದಲ್ಲಿ ಒಬ್ಬ ಅಧಿಕಾರಿ, ಒಬ್ಬ ಶಾಸಕರಿಗೆ ಅದೂ ಉಪ ಮುಖ್ಯಮಂತ್ರಿಯವರ ಎದುರಿನಲ್ಲಿಯೇ ಈ

ರೀತಿಯಾಗಿ ಮಾತನಾಡುವ ಒಂದು ವ್ಯವಸ್ಥೆಯು ಇದ್ದರೆ ನಿಮ್ಮ ಈ ಸರಕಾರವು ಬದುಕಿದೆಯೇ? ಇವತ್ತು ಯಾವುದೇ ರಾಜಕೀಯ ಪಕ್ಷದಲ್ಲಿ ಕೆಲಸ ಮಾಡುತ್ತಿರುವಂಥ ಜನಗಳು ಇರಬಹುದು. ಆಡಳಿತದಲ್ಲಿ ನೀವು ಇರಬಹುದು, ವಿರೋಧ ಪಕ್ಷದಲ್ಲಿ ನಾವು ಇರಬಹುದು. ಆದರೆ ಚುನಾಯಿತ ಜನಪ್ರತಿನಿಧಿಗಳಿಗೆ ಇಂಥ ವಿಚಾರಗಳಲ್ಲಿ ರಕ್ಷಣೆ ಬೇಕಾಗುತ್ತದೆ. ಒಬ್ಬ ಅಧಿಕಾರಿಯು ಉಪಮುಖ್ಯಮಂತ್ರಿಯವರ ಎದುರಗಡೆಯಲ್ಲಿಯೇ ಶಾಸಕರಿಗೆ ಈ ರೀತಿಯಾಗಿ ಮಾತನಾಡುವ ಉದ್ಧಟತನವನ್ನು ತೋರಿಸುವ ವ್ಯವಸ್ಥೆಯು ನಿಮ್ಮ ಸರಕಾರದಲ್ಲಿದ್ದರೆ ಆ ಬಗ್ಗೆ ಸರಕಾರದವರು ಯಾವ ಕ್ರಮವನ್ನು ಅಧಿಕಾರಿಯ ಮೇಲೆ ಜರುಗಿಸಿದೆ? ಅವರ ಮೇಲೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ?

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಇದು ಇಡೀ ರಾಜ್ಯದಲ್ಲಿಯೇ ಇರುವಂಥ ಸ್ಥಿತಿಯಾಗಿದೆ. ಈ ಸುದ್ಧಿಯು ಎಲ್ಲರಿಗೂ ಗೊತ್ತಿದೆ. ಇಲ್ಲಿ ಈಗ ಗೃಹಮಂತ್ರಿಗಳಾಗಲೀ, ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಲೀ, ಯಾರೂ ಇಲ್ಲ. ವಿಚಾರವನ್ನು ಯಾರು ನೋಟ್ ಮಾಡಿಕೊಳ್ಳುತ್ತಿದ್ದಾರೆ? ಇದಕ್ಕೆ ಉತ್ತರ ಕೊಡುವವರು ಯಾರು? ಇದು ಸರಕಾರದ ಕಡೆಯಿಂದ ಆಗಿರತಕ್ಕಂಥ ತಪ್ಪೇ ಅಥವಾ ಪೋಲೀಸ್ ಇಲಾಖೆಯಿಂದ ಆಗಿರುವ ತಪ್ಪೇ ಎಂಬಿತ್ಯಾದಿ ವಿಚಾರಗಳು ಇರುವುದರಿಂದ ಇದರ ಬಗ್ಗೆ ಸ್ಪಷ್ಟನೆ ಕೊಡತಕ್ಕಂಥವರು ಯಾರು ಎಂಬ ಬಗ್ಗೆ ಗಮನಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

(ಉಪ-ಸಭಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿರವರು) ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶ್ರೀ ಇ.ಮಾರುತಿರಾವ್: ಮಾನ್ಯ ಅಧ್ಯಕ್ಷರೇ, ಈ ರೀತಿ ಸರಕಾರವು ತನ್ನ ಆಡಳಿತವನ್ನು ಒಬ್ಬ ಅಧಿಕಾರಿಯ ಕೈಯ್ಯಲ್ಲಿ ಕೊಟ್ಟು ಬಿಟ್ಟಂತಾಗಿದೆ. ಇವೊತ್ತು ಜನರು ತೆರಿಗೆಯನ್ನು ಕೊಡುತ್ತಾರೆ. ಸರಕಾರದವರು ಜನರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಅಪೇಕ್ಷಿಪಡುತ್ತಾರೆ. ಆದರೆ ನಾವು ತೆರಿಗೆಯನ್ನು ಕೊಡುವುದರ ಜೊತೆಗೆ ಸರಕಾರದವರು ಇಂಥ ನಗರಪ್ರದೇಶಗಳಲ್ಲಿ ಇಂಥ ಅಧಿಕಾರಿಗಳನ್ನು ಹಾಕಿ ಜನರಿಂದ ಬಲವಂತವಾಗಿ ಹಣವನ್ನೂ ಕೂಡ ವಸೂಲು ಮಾಡಬೇಕೆಂಬ ಹಿನ್ನಲೆ ಏನಿದೆ, ಇದು ಈ ಸರಕಾರದಲ್ಲಿ ತಪ್ಪಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಇವೊತ್ತು ವಿರೋಧ ಪಕ್ಷದಲ್ಲಿರುವ ಶಾಸಕರಿಗೆ ಕೆಲಸ ಮಾಡುವುದು ಕಷ್ಟವಾಗುತ್ತಿದೆ. ಈ ಸರಕಾರವು ತನ್ನ ಅಧಿಕಾರಿಗಳ ಮೂಲಕ ನಮ್ಮ ಮೇಲೆ ದಬ್ಬಾಳಿಕೆ ಮಾಡತಕ್ಕಂಥ ವ್ಯವಸ್ಥೆ ಏನಿದೆ, ಇದು ಬಹಳ ದಿನಗಳ ಕಾಲ ನಡೆಯುತ್ತದೆ ಎಂದು ಭಾವಿಸ ಬಾರದು. ಇವೊತ್ತು ಯಾರ್ಯಾರು ಮಂತ್ರಿಗಳಾಗಿದ್ದಾರೆ ಅವರುಗಳು ಶಾಶ್ವತವಾಗಿ ತಮ್ಮ ಸ್ಥಾನದಲ್ಲಿ ಉಳಿಯುವುದಿಲ್ಲ. ಬದಲಾವಣೆಗಳು ಆಗುತ್ತಾ ಇರುತ್ತವೆ. ಆ ಸಂದರ್ಭದಲ್ಲಿ ನಾವೂ

ಕೂಡ ಈ ತರಹ ಮಾಡಬಹುದೇ? ಆದ್ದರಿಂದ ಅಧಿಕಾರಿಗಳು ಬಹಳ ಜವಾಬ್ದಾರಿಯಿಂದ ತಮ್ಮ ವರ್ತನೆಯನ್ನು ಇಟ್ಟುಕೊಳ್ಳ ಬೇಕಾಗುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ.ನಾನೂ, ಲೋಕಸಭಾ ಸದಸ್ಯ ವಿಜಯಶಂಕರ್ ಮತ್ತು ಆಯುಕ್ತರು ಮೂರೂ ಜನ ಕೂತು ಒಂದು ಸಲ ಮಾತನಾಡಿದೆವು. ಸದನಲ್ಲಿ ಮಾತನಾಡ್ರಿ, ಅದೇನ್ರಿ ಮಾಡ್ಕೋತೀರ ಎಂದು ಪೋಲೀಸ್ ಆಯುಕ್ತರು ಮಾತನಾಡುತ್ತಾರೆ. ಇದರಿಂದ ರಕ್ಷಣೆ ಎಲ್ಲಿದೆ? ಕಾನೂನು ಮೂಲಕ ಪೋಲಿಸರಿಗೆ ಸುವ್ಯವಸ್ಥೆಯ ವ್ಯವಸ್ಥೆ ಕೊಟ್ಟಿದ್ದರೆ ಅದನ್ನು ಅವರು ಇಷ್ಟ ಬಂದ ಹಾಗೆ ತಿರುಚಿ ನಡೆಯುವುದಕ್ಕೆ ನಾವು ಅವರಿಗೆ ಕಾನೂನು ಕೊಟ್ಟಿವಾ? ಇದು ತಪ್ಪಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಇದರ ಜೊತೆಗೆ ಅಶೋಕ ರಸ್ತೆಯಲ್ಲಿ ಒಂದು ಪೋಲಿಸ್‌ಠಾಣೆಯನ್ನು ನಿರ್ಮಿಸಿದ್ದಾರೆ. ಅದರ ಕಟ್ಟಡಕ್ಕೆ ಏಳೂವರಡಿ 234 ಅಡಿ ಅಲ್ಪಸಂಖ್ಯಾತ ಬಾಂಧವರಿಗೆ ಸೇರಿದ ಸ್ಥಳವನ್ನು ಸೇರಿಸಿಕೊಂಡಿದ್ದಾರೆ. ಬಿಷಪ್‌ರು ಎರಡುಮೂರು ಪತ್ರ ಬರೆದು ಚರ್ಚಿನ ಪ್ರಾಪರ್ಟಿಯಲ್ಲಿ ತಾವು ಅಕ್ವೈರ್ ಮಾಡಿ ಕಟ್ಟಿದ್ದೀರಿ. ಇದನ್ನು ಬಿಟ್ಟುಕೊಡಿ ಎಂದು ಕೇಳಿದರು. ಪೋಲಿಸ್ ಆಯುಕ್ತರಾಗಲಿ, ಇಲಾಖೆಯಾಗಲಿ ಒಂದು ಉತ್ತರವನ್ನೂ ಕೊಡಲಿಲ್ಲ. ದರ್ಪದಕ್ಷತೆಗಳಿಂದ ಅದನ್ನು ಅಕ್ವೈರ್‌ಮಾಡಿಕೊಂಡು ಕಟ್ಟಡ ಕಟ್ಟಿಕೊಂಡರು. ಅದರ ಉದ್ಘಾಟನೆಗೆ ಒಂದು ಆಹ್ವಾನಪತ್ರಿಕೆಯನ್ನು ಕೆಲವು ಪೋಲಿಸ್ ಅಧಿಕಾರಿಗಳು ತಂದುಕೊಟ್ಟರು. ಆ ಸಂದರ್ಭದಲ್ಲಿ ನಾನು ಹೇಳಿದೆ, ನೀವು ಹೇಗೆ ಉದ್ಘಾಟನೆ ಮಾಡುತ್ತೀರೋ ನೋಡ್ತೇನೆ, ಚರ್ಚಿನ ಆಸ್ತಿಯನ್ನು ಪೋಲಿಸ್ ಠಾಣೆಗೆ ವಶಪಡಿಸಿಕೊಂಡು ಕಬಳಿಕೆ ಮಾಡಲು ಹೊರಟಿದ್ದೀರಿ. ಹಾಗೆಂದು ನಾನು ಗಲಾಟೆ ಮಾಡಿದ ಮೇಲೆ ಆ ಸ್ಥಳವನ್ನು ಬಿಟ್ಟುಕೊಟ್ಟರು. ಅಂದರೆ ಮೈಸೂರು ನಗರದಲ್ಲಿ ಜನರ ಮೇಲೆ ಪೋಲಿಸ್ ಇಲಾಖೆ ನಡೆಸುತ್ತಿರುವ ದೌರ್ಜನ್ಯ ಏನಿದೆ, ಇಂತಹ ಅಧಿಕಾರಿಗಳು ಎಷ್ಟು ದಿನ ಇರುತ್ತಾರೆ? ಇದರಿಂದ ಮೈಸೂರು ನಗರದಲ್ಲಿ ನಮಗೆ ಅವಮಾನ ಆಗುತ್ತಿದೆ, ಇವತ್ತು ನೋವಿನಿಂದ ಹೇಳುತ್ತಿದ್ದೇನೆ ನಾನು. ಅಲ್ಲಿ ಕೆಲಸ ಮಾಡುವುದಕ್ಕೆ ನಮಗೆ ತೊಂದರೆಯಾಗುತ್ತಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಬಂದಿದ್ದಾರೆ. ಈ ಸಂದರ್ಭದಲ್ಲಿ ಕ್ಯಾತಮಾರನಹಳ್ಳಿ ಹುಲಿಯಮ್ಮನ ದೇವಸ್ಥಾನದ ಆಸ್ತಿ ವಿಚಾರದಲ್ಲಿ ಮತ್ತೆ ಕೂತು ಮಾತನಾಡಿ ಜಗಳವಾಗುವ ವಿಚಾರವೇ ಇಲ್ಲ. ಅಲ್ಲಿನ ಗ್ರಾಮಸ್ಥರು ನಾವೆಲ್ಲಾ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಆ ದೇವಸ್ಥಾನದ ಆಸ್ತಿಯಲ್ಲಿ ಒಂದಡಿಯನ್ನೂ ಬಿಟ್ಟುಕೊಡುವುದಿಲ್ಲ ಸಂಪೂರ್ಣ ಆಸ್ತಿಯೂ ದೇವಸ್ಥಾನಕ್ಕೆ ಸೇರಬೇಕು. ಸರ್ಕಾರ ಈ ನಿರ್ಧಾರ ತೆಗೆದುಕೊಳ್ಳಬೇಕು ಮತ್ತು ಈ ಬಗ್ಗೆ ಸರ್ಕಾರ ಬೇಜವಾಬ್ದಾರಿಯಿಂದ ವರ್ತಿಸಿದರೆ ಇನ್ನೇನೂ ಮಾಡುವುದಿಲ್ಲ, ನಾವು ಉಪಮುಖ್ಯಮಂತ್ರಿಗಳನ್ನು ಅಡ್ಡಹಾಕುತ್ತೇವೆ,ನಾವೆಲ್ಲಾ ಮೈಸೂರುನಗರದಲ್ಲಿ ಹೋರಾಟಕ್ಕೆ ಇಳಿಯುತ್ತೇವೆ. ಉಪಮುಖ್ಯಮಂತ್ರಿಗಳೂ ಪೋಲಿಸ್ ಅಧಿಕಾರಿಗಳಿಗೆ ಕಿವಿಮಾತು ಹೇಳಬೇಕಾಗುತ್ತದೆ. ನಿನ್ನೆ ಸಮಾರಂಭದಲ್ಲೂ ಇಂತಹ ಮಾತುಗಳೆಲ್ಲಾ ಬರುತ್ತವೆ, ಅದಕ್ಕೇನೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂದು ಉಪಮುಖ್ಯಮಂತ್ರಿಗಳು

ಹೇಳಿದ್ದನ್ನು ಕೇಳಿ ಬಹಳ ನೋವಾಯಿತು ನನಗೆ. ಸಾರ್ವಜನಿಕರಿಂದ ಹಣ ವಸೂಲು ಮಾಡಿದ್ದಾರೆ ಎಂಬುದನ್ನು ಒಂದು ತನಿಖೆ ಮಾಡಿಸಬೇಕು,ನಾನು ರುಜುವಾತು ಮಾಡುತ್ತೇನೆ ಅದನ್ನು. ಬಹಳ ನೋವಿನಿಂದ ಈ ಮಾತು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): ಅಲ್ಲಿ ಹುಲಿಯಮ್ಮನ ದೇವಸ್ಥಾನಕ್ಕೆ ಸೇರಿದ ಆಸ್ತಿ ಬಗ್ಗೆ. ಮೂರು ಎಕರೆ ಚಿಲ್ಲರೆ ಜಾಗವಿದೆ. ಹಿಂದಿನ ಸರ್ಕಾರ ಇದ್ದಾಗಲೇ ಅದನ್ನು ಪೋಲಿಸ್ ಸ್ಟೇಷನ್‌ಗೆ ಕೊಡಬೇಕೆಂದು ಒಂದು ಆಜ್ಞೆಯಾಗಿದೆ, ನಾವು ಬಂದ ಮೇಲೆ ಮಾಡಿರುವುದಲ್ಲ. ಇವರೂ ಆ ಏರಿಯಾದವರೆಲ್ಲಾ ಸೇರಿಕೊಂಡು ಚಳುವಳಿ ಮಾಡುತ್ತಿದ್ದರು. ಒಂದು ಸಲ ನಾನು ಅಲ್ಲಿ ಇನ್‌ಸ್ಪೆಕ್ಟ್ ಮಾಡಿದೆ. ಹಿಂದೆ ಅಲ್ಲೊಂದು ಸಲ ಕೋಮುಗಲಭೆಯಾಗಿತ್ತು. ಆ ಸಂದರ್ಭದಲ್ಲಿ ಅಲ್ಲಿಗೊಂದು ಪೋಲಿಸ್‌ಠಾಣೆ ಬೇಕೆಂದು ತೀರ್ಮಾನಿಸಿ ಆಕ್ಷುವಲಿ ಅದು ದೇವಸ್ಥಾನಕ್ಕೆ ಸೇರಿದ ಜಾಗ, ಭೂಸುಧಾರಣೆ ಕಾಯಿದೆ ಪ್ರಕಾರ ಅವರು ಅರ್ಜಿ ಹಾಕಬೇಕಾಗಿತ್ತು. ಅರ್ಜಿ ಹಾಕಲಿಲ್ಲ. ಇದರಿಂದ ಜಮೀನು ಸರ್ಕಾರಕ್ಕೆ ಹೊರಟುಹೋಗುತ್ತದೆ. ಹಾಗೆ ರೆವಿನ್ಯೂಇಲಾಖೆ ವಶಕ್ಕೆ ಬಂದ ಜಮೀನನ್ನು ಪೋಲಿಸ್ ಇಲಾಖೆಗೆ ಕೊಟ್ಟಿದ್ದಾರೆ. ಈಗಿರುವ ಪೋಲಿಸ್ ಕಮಿಶನರ್‌ಗೂ ಅದಕ್ಕೂ ಸಂಬಂಧ ಇಲ್ಲ. ಇವರು ಚಳುವಳಿ ನಡೆಸುತ್ತಿದ್ದಾಗ ನಾನೇ ಇನ್‌ಸ್ಪೆಕ್ಟ್ ಮಾಡಿ ಇವರನ್ನೆಲ್ಲಾ ಕರೆಸಿ ನಾವೆಲ್ಲಾ ಮಾತನಾಡಿದೆವು. ಹಾಗೆ ಮಾತನಾಡುವ ಸಂದರ್ಭದಲ್ಲಿ, ನಾನು ಹೇಳಿದೆ, ಸರ್ಕಾರ ದುಡ್ಡು ಕೊಟ್ಟಿರುತ್ತದೆ ಅದರಿಂದ ಠಾಣೆಗಳನ್ನು ಕಟ್ಟಿಸುವುದು, ಇರುವುದನ್ನು ರಿನೋವೇಟ್ ಮಾಡಿಸುವುದು ಇವನ್ನೆಲ್ಲಾ ಕಮಿಶನರ್ ಮಾಡುತ್ತಾರೆ. ಅದಕ್ಕೆ ಸಾರ್ವಜನಿಕರು ಕೆಲವರು ವಂತಿಗೆ ಕೊಟ್ಟಿದ್ದಾರೆ, ಬಲವಂತವಾಗಿ ವಸೂಲಿ ಮಾಡಿದ್ದಾರೆ ಎಂದು ಇವರು ಹೇಳುತ್ತಾರೆ. ಆ ತರಹದ್ದು ನನ್ನ ಗಮನಕ್ಕಂತೂ ಬಂದಿಲ್ಲ, ನಾನು ಎದುರಗಡೆ ಕೂತುಕೊಂಡಾಗ ಬಲವಂತವಾಗಿ ವಸೂಲು ಮಾಡಿದ್ದಾರೆ ಎಂದು ಇವರು ಹೇಳಿದರು, ತೋರಿಸಪ್ಪ, ಯಾರನ್ನು ಬಲಾತ್ಕಾರ ಮಾಡಿದ್ದಾರೆ ಎಂದು ಕೇಳಿದೆ. ಆ ಮಾತುಕತೆಯೆಲ್ಲಾ ಆದ ಮೇಲೆ, ಇನ್ನೊಂದು ಕಡೆ ಸಭೆ ಮಾಡುತ್ತಿರುವಾಗ ಇವರೇ ಹೇಳಿದ್ದಾರೆ ಕೆಂಪಯ್ಯನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು. ಅವತ್ತು ಹೇಳಿದೆ ನಾನು, ಒಳ್ಳೆಯ ಕೆಲಸ ಎನ್ನುವುದಕ್ಕಿಂತ ಒಬ್ಬ ಅಧಿಕಾರಿಯಾಗಿ ಮಾಡಬೇಕಾದ ಕೆಲಸ ಮಾಡಿದ್ದಾರೆ ಎಂದು. ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದ ಇವರೇ ಈಗ ಕೆಟ್ಟ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಯಾವ ಕೆಟ್ಟ ಅಧಿಕಾರಿಗೂ ಸಹಾಯ ಮಾಡುವ ಪ್ರಶ್ನೇನೇ ಇಲ್ಲ. ಅಧಿಕಾರಿಗಳ ಜೊತೆ ಬಹಳ ಕೆಟ್ಟದಾಗಿ ನಡೆದುಕೊಳ್ಳುತ್ತಾರೆ ಅಂತಾನೇ ನನ್ನ ಮೇಲೆ ದೂರಿರುವುದು. ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡಲೇಬೇಕು. ಅದರ ಬಗ್ಗೆ ಎರಡನೇ ಮಾತಿಲ್ಲ. ಆ ತರಹದ್ದು ಆಗುವುದಕ್ಕೆ ನಾನು ಅವಕಾಶವೂ ಕೊಡುವುದಿಲ್ಲ. ಮಾತುಕತೆ ಸಂದರ್ಭದಲ್ಲಿ ಇವರೊಂದು ಮಾತು ಅವರೊಂದು ಮಾತು ಆಡಿದ್ದಾರೆ. ಆಗ ನಾನು ಪೋಲಿಸ್ ಅಧಿಕಾರಿಗೇ ಬೈದಿದ್ದೇನೆ.

ಸರಿಯಾಗಿ ಮಾನಾಡುವುದು ಕಲಿತುಕೊಳ್ಳಬೇಕಪ್ಪ, ಹೀಗೆಲ್ಲಾ ಮಾತನಾಡಬಾರದು ಎಂದು. ನಾವು ಸಮಾಧಾನವಾಗಿದ್ದೇವೆ, ಇಬ್ಬರೂ ಸೇರಿ ಮೈಸೂರು ನಗರದಲ್ಲಿ ಕೆಲಸ ಮಾಡಿಕೊಂಡು ಹೋಗೋಣ ಎಂದು ಹೇಳಿಬಿಟ್ಟು. ನಾನು ಕರೆದಿದ್ದನೇ ನಿಮಗೆ ರಾಜೀ ಮಾಡಿಸುತ್ತೇನೆ ಬನ್ನಿ ಎಂದು? ಮೂಡ ಅಧ್ಯಕ್ಷ ಬಸವೇಗೌಡರ ಜೊತೆಯಲ್ಲಿ ನೀವು ಏನೆಂದು ಹೇಳಿದ್ದಿರಿ ಹೇಳಲಾ?

ಶ್ರೀ ಇ.ಮಾರುತಿರಾವ್ ಪವಾರ್: ಜಿಲ್ಲಾಧಿಕಾರಿಗಳ ಕೈಲಿ ಸಭೆ ಕರೆಸಿದ್ದು ನಾನಾ ನೀವಾ?

ಶ್ರೀ ಸಿದ್ದರಾಮಯ್ಯ: ನನಗೆ ಇದರಲ್ಲಿ ಎಳ್ಳಷ್ಟೂ ನಂಬಿಕೆ ಇರಲಿಲ್ಲ, ಅವರು ಚಳುವಳಿ ಮಾಡಿದರೆ ಮಾಡಿಕೊಳ್ಳಲಿ ಎಂದು ಹೇಳಿದ್ದೆ ನಾನು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚಳುವಳಿಗೆ ಅವಕಾಶ ಇದೆ ಮಾಡಲಿ ಅಂತಾನೇ ನಾನು ಹೇಳಿದ್ದೆ. ಇವರಿವರೇ ಮಾತನಾಡಿಕೊಂಡು ಇವರ ಜಗಳಕ್ಕೆ ನನ್ನನ್ನು ತೆಗೆದುಕೊಂಡು ಬಂದು ದಾರಿಗೆ ಎಳೆಯುತ್ತಿದ್ದಾರೆ. ನಾನು ಇಂತಹ ಸಹವಾಸಗಳಿಗೂ ಹೋಗುವುದಿಲ್ಲ ಇವರು ಹೇಳಿದರು. ಅವರು 8 ಕೋಟಿ ರೂ ಹೊಡೆದುಬಿಟ್ಟಿದ್ದಾರೆ ಎಂದು, ನಾನು ಎಲ್ಲಿ ಹೊಡೆದಿದ್ದೇನೆ ತೋರಿಸಿ ಎಂದು ಅವರು ಹೇಳುತ್ತಾರೆ. ನಾನೇ ಸಮಾಧಾನ ಮಾಡಿ ಬೇಡಪ್ಪಾ, ನಡೆಯಿರಿ ಎಂದು ಪಂಚಾಯ್ತಿನೂ ಮಾಡಿದೆ. ಆಗ ಹೇಳಿದೆ, ಪೋಲಿಸ್ ಸ್ಟೇಷನ್‌ಗೆ ಬೇಕಾದರೆ ಒಂದು ಎಕರೆ ಬಿಟ್ಟುಬಿಡಿರಿ, ಉಳಿದ ಎರಡೆಕರೆ ಭೂಮಿಯನ್ನು ನೀವೇ ಇಟ್ಟುಕೊಳ್ಳಿ. ರೆವಿನ್ಯೂ ಇಲಾಖೆಯಿಂದ ಬೇಕಾದರೆ ಇನ್ನೊಂದು ಆರ್ಡರ್ ಮಾಡಿಸೋಣ ಎಂದು ಹೇಳಿದರೆ ಅದಕ್ಕೆ ಆ ಜನಗಳು ಒಪ್ಪಲಿಲ್ಲ. ಪವಾರೂ ಒಪ್ಪಲಿಲ್ಲ. ಸರಿ ಇನ್ನೊಂದು ದಿನ ಮಾಡೋಣಪ್ಪ ಎಂದು ನಾನು ಬಿಟ್ಟುಬಿಟ್ಟೆ ಅಷ್ಟೇ. ಇದೆಲ್ಲ ಬಿಟ್ಟು ನಾನು ಪೋಲಿಸರಿಗೆ ಕುಮ್ಮಕ್ಕು ಕೊಡುತ್ತೇನೆ, ಎಂದು ಹೇಳಿದರೆ ಹೇಗೆ? ನಾನು ಮಾತ್ರ ಯಾವುದೇ ಅಧಿಕಾರಿಯೂ ಕೆಲಸ ಮಾಡಲಿಕ್ಕೆ ಸರ್ಕಾರದಿಂದ ಸಂಬಳ ತೆಗೆದುಕೊಳ್ಳುವುದು, ಅವರು ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡಬೇಕು, ಹಾಗೇನೇ ನಾವೂ ಕೂಡ ಇತಿಮಿತಿಯೊಳಗೆ ನಡೆದುಕೊಳ್ಳಬೇಕಾಗುತ್ತದೆ. ಬಾಯಿಗೆ ಬಂದಹಾಗೆ ಮಾತನಾಡುವುದಕ್ಕಾಗುವುದಿಲ್ಲ. ಅಂತಹ ವಾತಾವರಣ ಇರಬೇಕಾಗುತ್ತದೆ, ಇಷ್ಟು ಹೇಳಿದೆನೇ ಹೊರತು ಬೇರೆ ಯಾವ ವಿಚಾರಾನೂ ಹೇಳಲಿಲ್ಲ.

ಶ್ರೀ ಇ.ಮಾರುತಿರಾವ್‌ಪವಾರ್: ನಿಮ್ಮಲ್ಲಿ ನಾನು ಮನವಿ ಮಾಡುವುದೇನೆಂದರೆ ದಯಮಾಡಿ ಆ ಜನ ಒಪ್ಪುವುದಿಲ್ಲ. ಆ ಹುಲಿಯಮ್ಮನ ಆಸ್ತಿಯನ್ನು ಉಳಿಸಿಕೊಡಬೇಕು. ಪೋಲಿಸ್ ಠಾಣೆಗೆ ಬೇರೆ ಯಾವುದಾದರೂ ಒಂದು ಜಾಗ ತಾವು ಗೊತ್ತು ಮಾಡಬಹುದು.

ಶ್ರೀ ಸಿದ್ದರಾಮಯ್ಯ: ಒಂದು ಎಕರೇನೋ ಮೂವತ್ತು ಗುಂಟೆನೋ ಪೋಲಿಸ್ ಠಾಣೆಗೆ ಎಷ್ಟು ಬೇಕೋ ಅಷ್ಟು ಬಿಟ್ಟುಬಿಡಿರಿ; ಅದು 12, 13 ಎಕರೆ ಇತ್ತು, ಎಲ್ಲಾ

ಹೋಗಿ 3 ಎಕರೆಗೆ ಉಳಿದಿದೆ.

11.00 ಎ.ಎಂ

ಇನ್ನೂ ಸ್ವಲ್ಪ ದಿವಸ ಹೋದರೆ ಅದೂ ಹೊರಟುಹೋಗುತ್ತದೆ. ಅದು ಈಗಾಗಲೇ ಸರ್ಕಾರದ ಬಳಿ ಇದೆ. ಅವರೇನೊ ನಾವು ಛತ್ರವನ್ನು ಕಟ್ಟುತ್ತೇವೆ, ಸ್ಕೂಲ ಮಾಡುತ್ತೇವೆಂದರು. ಅವರೆಲ್ಲರೂ ಬ್ಯಾಕ್‌ವರ್ಡ್‌ಕ್ಲಾಸ್ ಜನರು. ನಾನು ಹೇಳಿದೆ, ನೀವು ಕಟ್ಟುವುದಾದರೆ ಎರಡು ಎಕರೆ ಜಾಗವನ್ನು ಉಳಿಸಿಕೊಳ್ಳಿ, 30 ಗುಂಟೆ ಜಮಿನನ್ನು ಆ ಕಡೆ ಬಿಟ್ಟುಬಿಡಿ ಎಂದು ಹೇಳಿ. ಇದು ನಾನು ಬಂದಾಗ ಆರ್ಡರ್ ಆಗಿರುವುದಿಲ್ಲ. ಹಿಂದೆಯೇ ಆರ್ಡರ್ ಆಗಿದೆ. ನಾವು ಇದನ್ನು ಬದಲಾಯಿಸಿಕೊಳ್ಳೋಣ ಎಂದು ಹೇಳಿದೆ. ಅದಕ್ಕೆ ಅವರು ಒಪ್ಪಲಿಲ್ಲ. ಅದಕ್ಕಿಂತ ಹಿಂದೆ ನನ್ನ ಹತ್ತಿರ ಬಂದು ಏನು ಹೇಳಿದರು ಎಂದರೆ ನಾವು ಪೋಲೀಸ್ ಸ್ಟೇಷನ್‌ಗೆ ಬಿಟ್ಟುಕೊಡುತ್ತೇವೆಂದು ಹೇಳಿ ಒಂದು ಗುಂಪು ಜನರು ಬಂದು ಹೇಳಿದ್ದರು. ಆ ಸಮಸ್ಯೆ ಏನಿದ್ದರೂ ಅದರ ಬಗ್ಗೆ ಕುಳಿತು ಬಗೆಹರಿಸೋಣ ಎಂದು ಹೇಳಿ ಸುಮ್ಮನೆ ಆರೋಪಗಳನ್ನು ಮಾಡುವುದರಿಂದ ಏನೂ ಪ್ರಯೋಜನವಿಲ್ಲ ಎಂದು ಹೇಳಿದೆ.

ಶ್ರೀ ಇ.ಮಾರುತಿರಾವ್ ಪವಾರ್: ದಯಮಾಡಿ ಅದನ್ನು ಉಳಿಸಿಕೊಡಬೇಕು. ಮತ್ತೆ ಪೋಲೀಸ್ ಅಧಿಕಾರಿಗಳಿಗೆ ತಾವು ದಯಮಾಡಿ ಕಿವಿಮಾತನ್ನು ಹೇಳಬೇಕು. ತಾವು ಯಾವುದೇ ಒಂದು ಸಂದರ್ಭದಲ್ಲಿ ಅವರ ಪರವಾಗಿ ಹೇಳಿಕೆಯನ್ನು ಕೊಡಬಾರದು. ಇದು ಪತ್ರಿಕೆಗೆ ಬಂದಿದೆ. ಭೀತಿಗೆ ಅಂಜಿ ಕೆಂಪಯ್ಯನಿಗೆ ಅಭಯಹಸ್ತ ಎಂದು ಮೈಸೂರು ಪತ್ರಿಕೆಯಲ್ಲಿ ಬಂದಿದೆ. ನನಗೆ ಬಹಳ ಹಿಂಸೆಯಾಯಿತು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಪತ್ರಿಕೆಗಳಲ್ಲಿ ಏನೇನೊ ಹೇಳುತ್ತಾರೆ, ಅದೆಲ್ಲವನ್ನೂ ನಂಬುವುದಕ್ಕಾಗುತ್ತದೆಯೇ? ಯಾವ ಅಧಿಕಾರಿ ಅವರು ಎಷ್ಟೇ ದೊಡ್ಡವರಾಗಿರಲಿ, ಎಷ್ಟೇ ಚಿಕ್ಕವರಾಗಿರಲಿ, ಅವರು ಯಾವ ಜಾತಿಗೆ ಸೇರಿದವರೇ ಇರಲಿ, ಯಾವ ಅಧಿಕಾರಿಗೂ ರಕ್ಷಣೆ ಕೊಡುವ ಪ್ರಶ್ನೆಯೇಇಲ್ಲ. ಅವರು ಕರಪ್ಟ್ ಅಧಿಕಾರಿ ಎಂದರೆ ನಾನು ನೇರವಾಗಿ ಅವರ ಮುಖಕ್ಕೆ ನೀನು ಕರಪ್ಟ್ ಎಂದು ಹೇಳುವ ನೈತಿಕತೆಯನ್ನು ಉಳಿಸಿಕೊಂಡಿರುವವನು. ಸಿದ್ಧರಾಮಯ್ಯ ಬಹಳ ಒರಟಾಗಿ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತಾರೆ, ಅವರು ಸೌಜನ್ಯದಿಂದ ಮಾತನಾಡುವುದೇ ಇಲ್ಲ ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ ಈ ರೀತಿ ಬರೆದಿಲ್ಲವೇ ಮೈಸೂರಿನಲ್ಲಿ?

ಶ್ರೀ ಇ.ಮಾರುತಿರಾವ್ ಪವಾರ್: ನಾವೇನೂ ಹಾಗೆ ಹೇಳಿಲ್ಲವಲ್ಲಾ. ಸರ್ಕಾರ ಎಲ್ಲಾ ಹಂತಗಳಲ್ಲಿ ಏನು ವಿಫಲತೆಯನ್ನು ಕಂಡಿದೆ, ದಯಮಾಡಿ ಮಾನ್ಯ ವಿರೋಧಪಕ್ಷದವರು ಏನು ನಾವೇನು ಅವಿಶ್ವಾಸ ಗೊತ್ತವಳಿಯನ್ನು ಮಂಡಿಸಿದ್ದೇವೆ,

ಈ ಸಂದರ್ಭದಲ್ಲಿ ಈ ಸರ್ಕಾರ ಇನ್ನು ಮುಂದೆ ಆಡಳಿತ ಮಾಡಲಿಕ್ಕೆ ವಿಫಲವಾಗಿದೆ. ದಯಮಾಡಿ ಈ ಸರ್ಕಾರ ಹೋಗಬೇಕು. ಇವತ್ತು ಜನರಿಗೆ ಮತ್ತೊಂದು ಚುನಾವಣೆ ಅವಶ್ಯಕತೆ ಇದೆ, ಮತ್ತೊಂದು ಸರ್ಕಾರದ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ್.ಸಿ ಕುನ್ನೂರ್ (ಶಿಗ್ಗಾಂವ್): ಮಾನ್ಯ ಉಪಾಧ್ಯಕ್ಷರೇ, ನಿಯಮ 166ರ ಮೇರೆಗೆ ಶ್ರೀ ಜೆ.ಹೆಚ್.ಪಟೇಲ್ ಸಚಿವಸಂಪುಟದ ಮೇಲೆ ಅವಿಶ್ವಾಸ ನಿರ್ಣಯ ಮಂಡನೆಯನ್ನು ನಮ್ಮ ವಿರೋಧ ಪಕ್ಷದ ನಾಯಕರು ಮಂಡನೆ ಮಾಡಿದ್ದಾರೆ. ಆ ಮಂಡನೆಗೆ ನಾನು ಬೆಂಬಲವನ್ನು ಕೋರುತ್ತಾ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ಈ ಒಂದು ಅವಿಶ್ವಾಸ ಗೊತ್ತುವಳಿಯನ್ನು ನಾವು ವಿರೋಧಪಕ್ಷದವರು ಮಂಡಿಸುವುದಕ್ಕಿಂತ ಮುಂಚೆ ಮಾನ್ಯ ಮುಖ್ಯಮಂತ್ರಿಗಳೇ ಈ ಒಂದು ಕಾನ್‌ಫಿಡೆನ್ಸ್ ಮೋಷನನ್ನು ಮೂವ್ ಮಾಡಿದ್ದರೆ ಒಳ್ಳೆಯದಿತ್ತು ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಚೆಪಡುತ್ತಿದ್ದೇನೆ. ಏಕೆಂದರೆ ಈಗಾಗಲೇ ಇವತ್ತು ಆಡಳಿತ ಪಕ್ಷದಲ್ಲಿರುವಂಥ ಒಂದು ಶಾಸಕರ ಸಂಖ್ಯಾಬಲವನ್ನು ನೋಡಿದಾಗ ಆಡಳಿತ ಪಕ್ಷದಲ್ಲಿರುವ ಸದಸ್ಯರ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ನೋಡಿದಾಗ ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನೈತಿಕವಾಗಿ ಮುಂದುವರಿಯಲಿಕ್ಕೂ ಕೂಡ ಅವರಿಗೆ ಒಂದು ಸಾಧ್ಯತೆ ಇಲ್ಲ ಎನ್ನುವುದು ಇವತ್ತು ಜಗಜ್ಜಾಹೀರಾಗಿದೆ ಎನ್ನುವ ಮಾತನ್ನೂ ಕೂಡ ಹೇಳಿದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ತಪ್ಪಾಗಲಿಕ್ಕಿಲ್ಲ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಸುಮಾರು ಆರು ಗಂಟೆಗಳ ಕಾಲ ಸುದೀರ್ಘ ಭಾಷಣವನ್ನು ಮಾಡಿ 23 ಛಾರ್ಜುಗಳನ್ನು ಈ ಸರ್ಕಾರದ ಮೇಲೆ ಮಾಡಿದ್ದಾರೆ. ಇದರ ಜೊತೆಗೆ ಈ ಆರೋಪಗಳ ಜೊತೆಗೆ 24 ಮತ್ತು 25 ಎಂದು ಮತ್ತೆರಡು ಛಾರ್ಜುಗಳನ್ನೂ ಕೂಡ ಹೇಳ ಬೇಕಾಗಿದೆ. ಆ ಎರಡು ಛಾರ್ಜುಗಳೆಂದರೆ ಮುಖ್ಯವಾಗಿ ಡಾ|| ಎಂ.ಐ.ಸವದತ್ತಿ ಆಯೋಗದ ಶಿಫಾರಸ್ಸಿಗೆ ವಿರುದ್ಧವಾಗಿ ರಾಜ್ಯಸರ್ಕಾರದವರು 20 ಮೆಡಿಕಲ್ ಕಾಲೇಜುಗಳನ್ನು ಕೂಡ ಕೊಟ್ಟಿದ್ದಾರೆ. ಈ ಮೆಡಿಕಲ್ ಕಾಲೇಜುಗಳನ್ನು ಕೊಡುವಾಗ ವೃತ್ತಿಪರ ಕಾಲೇಜುಗಳನ್ನು ಇವತ್ತು ಅಲ್ಲಿ ಅಗತ್ಯವಾದ ಸೌಲಭ್ಯತೆ, ವಿದ್ಯಾರ್ಥಿಗಳ ಸಂಖ್ಯೆ ಬೇಡಿಕೆ ಹಾಗೂ ಪೂರೈಕೆ ಇವೆಲ್ಲವುಗಳನ್ನೂ ಕೂಡ ಗಣನೆಗೆ ತೆಗೆದುಕೊಳ್ಳದೆಯೇ ಈ ಕಾಲೇಜುಗಳನ್ನು ಕೊಟ್ಟಿದ್ದರಿಂದ ಈ ವೃತ್ತಿಪರ ಶಿಕ್ಷಣದ ಮೇಲೆ ದುಷ್ಪರಿಣಾಮ ಕೂಡ ಬೀಳಬಹುದು ಎನ್ನುವಂಥ ಶಂಕೆ ನಮ್ಮೆಲ್ಲರಿಗೂ ಕೂಡ ಇವತ್ತು ಇದೆ. ಇದರ ಜೊತೆಗೆ 25ನೇ ಆರೋಪ ಮಾಡಬೇಕೆಂದರೆ ರಾಜ್ಯ ಸರ್ಕಾರದಲ್ಲಿ ಸುಮಾರು 76 ಸಾರ್ವಜನಿಕ ಉದ್ಯಮಗಳಿವೆ. ಇದರಲ್ಲಿ 76 ಉದ್ಯಮಗಳಲ್ಲಿ ಸುಮಾರು 39 ಉದ್ಯಮಗಳು ಕೇವಲ 148.56 ಕೋಟಿ ರೂಪಾಯಿಗಳ ಲಾಭವನ್ನು ತೋರಿಸುತ್ತಿದ್ದರೆ 27 ಉದ್ಯಮಿಗಳು

203.61 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುವುದನ್ನು ನಾವು ನೋಡುತ್ತಿದ್ದೇವೆ. ಇದೆಲ್ಲಾ ಸರ್ಕಾರದ ನಿರ್ಲಕ್ಷ್ಯ ಅಧಿಕಾರಿಗಳ ಒಂದು ಹೊಣೆಗೇಡಿತನ ಹಾಗೂ ವಿವೇಚನಾರಹಿತ ನಿರ್ವಹಣೆಯಿಂದಾಗಿ ಈ ಉದ್ಯಮಗಳು ಸತತವಾಗಿ ನಷ್ಟವನ್ನು ಅನುಭವಿಸುತ್ತಾ ಇವೆ ಎನ್ನುವ ಮಾತನ್ನು ಹೇಳಬೇಕಾಗಿದೆ. ಇವತ್ತು ಲಾಭಕ್ಕಿಂತ ನಷ್ಟವೇ ಹೆಚ್ಚಾಗಿದೆ. ಇಂಥ ಪರಿಸ್ಥಿತಿ ಇದ್ದಾಗ್ಯೂ ಕೂಡ ಕೆಲವು ಉದ್ಯಮಗಳನ್ನು ನಾವು ಲಾಭದಾಯಕವಾಗಿ ಕೂಡ ಪರಿವರ್ತಿಸುವುದಕ್ಕೆ ಸಾಧ್ಯ ಇರುವುದರಿಂದ ಇವುಗಳನ್ನು ಖಾಸಗೀಕರಣ ಮಾಡುವ ಬಗ್ಗೆ ನನ್ನದು ಸಂಪೂರ್ಣ ವಿರೋಧ ಇದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಇವತ್ತಿನ ದಿವಸ ಮುಖ್ಯವಾಗಿ ಶ್ರೀಮಾನ್ ಹೆಚ್‌ಡಿ ದೇವೇಗೌಡರು 116 ವಿಧಾನಸಭೆ ಸದಸ್ಯರ ಜನತಾದಳ ಶಾಸಕಾಂಗ ಪಕ್ಷದ ನಾಯಕರಾಗಿ 13ನೇ ಮುಖ್ಯಮಂತ್ರಿಯಾಗಿ 11-12-1994ರಂದು ಪ್ರಮಾಣ ವಚನವನ್ನು ಮಾಡುತ್ತಾರೆ. ಅದಾದನಂತರ 1-6-96ರಂದು ಶ್ರೀ ಜೆ.ಹೆಚ್.ಪಟೇಲರ ನೇತೃತ್ವದ ಮಂತ್ರಿಮಂಡಲ ಕೂಡ ರಚನೆಯಾಗುತ್ತದೆ. ಈ ಎರಡು ಮಂತ್ರಿ ಮಂಡಲದಲ್ಲಿ 116 ಜನತಾದಳ ಶಾಸಕರ ಪೈಕಿ 60 ಜನರಿಗೆ ಸಚಿವ ಸ್ಥಾನಮಾನವನ್ನು ನೀಡಲಾಗಿದೆ ಎನ್ನುವಂಥದ್ದು ನಮ್ಮೆಲ್ಲರಿಗೂ ಕೂಡ ಗೊತ್ತಿರುವ ಪರಿಸ್ಥಿತಿ. ಇದರ ಜೊತೆಗೆ ನೂರಾರು ಮಂಡಳಿಗಳಿಗೆ ಸದಸ್ಯರನ್ನು ನೇಮಕ ಮಾಡಿದೆ. ಇದರ ಒಂದು ಆರ್ಥಿಕ ದೃಷ್ಟಿಯಿಂದ ಪರಿಶೀಲಿಸಿದಾಗ ಇವತ್ತು ಸರ್ಕಾರದ ಬೊಕ್ಕಸಕ್ಕೆ ಎಷ್ಟೊಂದು ತೊಂದರೆಯಾಗಿದೆ ಎನ್ನುವುದನ್ನೂ ಕೂಡ ತಾವು ನೋಡಬೇಕಾಗಿದೆ. ಅಷ್ಟೇ ಅಲ್ಲ, ಇಷ್ಟೊಂದು ಮಂತ್ರಿಮಂಡಲಗಳ ರಚನೆಯಲ್ಲಿ ಇವತ್ತು ಜಂಬೋಜೆಟ್ ಇರುವ ಮಂತ್ರಿಮಂಡಲದ ಜೊತೆಗೆ ಇಷ್ಟೊಂದು ನಿಗಮ ಕಾರ್ಪೊರೇಷನ್‌ಗಳಿಗೂ ಮಾಡಿದಾಗಲೂ ಕೂಡ ಇನ್ನೂ ಕೂಡ ನಮ್ಮ ಶಾಸಕಾಂಗ ಮಿತ್ರರಿಗೆ ತೃಪ್ತಿ ಇಲ್ಲ ಎನ್ನುವುದು ಎದ್ದು ತೋರಿಸುತ್ತಾ ಇದೆ. ಮತ್ತೆ ಪುನಃ ಸಚಿವಸಂಪುಟ ಇವತ್ತು ಬದಲಾವಣೆಯಾಗಬೇಕು. ಜೊತೆಗೆ ತಮಗೂ ಸ್ಥಾನಮಾನ ಸಿಗಬೇಕು ಎನ್ನುವ ಹಿನ್ನಲೆಯಲ್ಲಿ ಇವತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸದೆ ಇವತ್ತು ಇಂಥ ಒಂದು ಕೆಲಸಕ್ಕೆ ಕೈಹಾಕಿದ್ದು ಇದನ್ನು ಯಾರೂ ಕೂಡ ಸಹಿಸಲಾರರು ಎಂದು ನಾವು ಇವತ್ತು ಹೇಳಬೇಕಾಗಿದೆ. ಈ ಒಂದು ಪರಿಸ್ಥಿತಿಯಲ್ಲಿ ಇವತ್ತು ಜಿಲ್ಲಾ ಮತ್ತು ಗ್ರಾಮೀಣ ಮಟ್ಟದಲ್ಲಿ ಆಡಳಿತ ಯಂತ್ರವೂ ಕೂಡ ಸಂಪೂರ್ಣವಾಗಿ ಕುಸಿದು ಬಿದ್ದಿದೆ ಮತ್ತು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಬಿಡುಗಡೆಯಾದ ಅನುದಾನವನ್ನು ಮುಖ್ಯವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಸಮಾಜಕಲ್ಯಾಣ ಇಲಾಖೆಗಳು ಖರ್ಚು ಮಾಡಿರುವುದಿಲ್ಲ ಎನ್ನುವುದನ್ನು ಅವರು ಕೊಟ್ಟ ಪುಸ್ತಕಗಳ ಮೇಲೆಯೇ ಅದರ ದುರುಪಯೋಗವಾಗಿದೆ ಎನ್ನುವುದನ್ನು ತೋರಿಸಲಾಗಿದೆ. ಪ್ರತಿವರ್ಷ ಅಲ್ಲಿ ದುರುಪಯೋಗವಾಗುತ್ತಿದೆ ಎನ್ನುವುದನ್ನು ನಾವು ನೋಡಿದ್ದೇವೆ. ರಾಜ್ಯದ ನೆಲಜಲದ ಬಗ್ಗೆ ಅತಿಯಾಗಿ ಮಾತನಾಡುವ ಈ ಸರ್ಕಾರ ಸಾಧಿಸಿರುವುದು ಶೂನ್ಯ ಎನ್ನುವ ಮಾತನ್ನೂ ಕೂಡ ಇವತ್ತು ಹೇಳಬೇಕಾಗಿದೆ. ಇವತ್ತು ನೆಲಜಲದ ಬಗ್ಗೆ ಮಾತನಾಡುವ

ಸಂದರ್ಭ ಬಂದಾಗ ಕೃಷ್ಣಾ ಮತ್ತು ಕಾವೇರಿ ನದಿಗಳ ಬಗ್ಗೆ ನಾವು ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಬಾರಿ ಮಾತನಾಡಿದ್ದೇವೆ ಎನ್ನುವುದನ್ನು ಈ ಪುಟಗಳನ್ನು ತೆಗೆದುನೋಡಿದಾಗ ಬಹುಶಃ ನಾವು ಸಾಧಿಸಿರುವುದು ಶೂನ್ಯ. ಇವತ್ತು ಕಾವೇರಿಯಂಥ ನದಿಯಿಂದ ತಮಿಳುನಾಡಿಗೆ ಯಾರೂ ಕೊಡದಂಥ ಯಾವ ಸರ್ಕಾರವೂ ತನ್ನಿಂದ ತಾನೇ ಕೊಡದಂಥ 5 ಟಿಎಂಸಿ ನೀರನ್ನು ಕೊಟ್ಟಾಗ ನಾವು ಎಷ್ಟೇ ಇಲ್ಲಿ ಪ್ರತಿಭಟನೆಗಳನ್ನು ಮಾಡಿದರೂ ಕೂಡ ನಾವು ಈ ಸದನದಲ್ಲಿ ಯಾವುದೇ ನಿರ್ಣಾಣವನ್ನು ಮಾಡಿದರೂ ಕೂಡ ಅದಕ್ಕೆ ಬೆಲೆ ಸಿಗದೆಯೇ ಇವತ್ತು ಆ ನೀರನ್ನು ಕೊಡುವ ಕೆಲಸ, ಅದಕ್ಕೆ ಕೈ ಹಾಕಿದ ಕೆಲಸವನ್ನು ಈ ಸರ್ಕಾರ ಮಾಡಿದ್ದು ಆ ಜನತೆ ಅದನ್ನು ಸಹಿಸಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಇವತ್ತು ಹೇಳಬೇಕಾಗಿದೆ. ಇನ್ನು ಕೃಷ್ಣಾ ಮೇಲ್ದಂಡೆಯಂಥ ಇವತ್ತು ಉತ್ತರಕರ್ನಾಟಕದಲ್ಲಿ ಆಗಬೇಕಾದ ಕೆಲಸ ಅತಿತೀವ್ರದಲ್ಲಿ ಮುಗಿಯಬೇಕಾಗಿದೆ. ಅದಕ್ಕೂ ಕೂಡ ನಮ್ಮ ಸಚಿವರ ಮತ್ತು ಸರ್ಕಾರದ ನಿರ್ಲಕ್ಷ್ಯತನದಿಂದ ಇವತ್ತು ಯಾವ ರೀತಿಯಲ್ಲಿ ಆ ಕೆಲಸ ವೇಗವಾಗಿ ಮುಗಿಯಬೇಕಾಗಿದೆಯೋ ಮತ್ತು ತೊಂದರೆಗಳಿಲ್ಲದೆ ಮುಗಿಯಬೇಕಾಗಿತ್ತೋ ಅದೂ ಕೂಡ ಇವತ್ತು ಮುಗಿಯುತ್ತಿಲ್ಲ. ಆಂಧ್ರಪ್ರದೇಶದ ಸರ್ಕಾರದವರೂ ಕೂಡ ಇವತ್ತು ವಿನಾಕಾರಣವಾಗಿ ಬಚಾವತ್ ಅವಾರ್ಡ್ ಪ್ರಕಾರ ನಾವು ಎರಡು ಸಾವಿರ ಇಸವಿಯೊಳಗಾಗಿ ಆ ನೀರನ್ನು ಉಪಯೋಗ ಮಾಡಬೇಕು ಎನ್ನುವ ಹಕ್ಕಿದ್ದರೂ ಕೂಡ ಇವತ್ತು ಅವರ ಒಂದು ಅಪಸ್ವರದಿಂದ ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾವ ವೇಗದಲ್ಲಿ ಇವತ್ತು ಆ ಕೆಲಸವಾಗಬೇಕಾಗಿದೆಯೋ ಅದು ಕೂಡ ನಡೆಯುತ್ತಿಲ್ಲ. ಆ ಕಾರಣ ಇವತ್ತು ಕೃಷ್ಣಾ ಮತ್ತು ಕಾವೇರಿ ಎರಡು ಕಣಿವೆಗಳಲ್ಲಿ ಕೆಲಸ ಸರಿಯಾಗಿ ಆಗಿಲ್ಲ. ಇದರ ಜೊತೆಗೆ ನಾನು ಅನೇಕಬಾರಿ ನಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ನಾನು ಈ ಸದನದಲ್ಲಿ ಮಾತನಾಡಿದ್ದೇನೆ. ಅನೇಕ ನಮ್ಮ ಅನೇಕ ಶಾಸಕರುಗಳು ಮಾತನಾಡಿದ್ದಾರೆ. ಆದರೆ ಈ ತುಂಗಾ ಮೇಲ್ದಂಡೆ ಯೋಜನೆಗೆ ಈವರೆಗೂ ಐದಾರು ವರ್ಷಗಳಲ್ಲಿ ಖರ್ಚು ಮಾಡಿದ ಹಣವನ್ನು ನೋಡಿದಾಗ 20 ಕೋಟಿ ರೂಪಾಯಿಗಳ ಮೇಲೆ ಇವತ್ತು ಹಣವನ್ನು ಅಲ್ಲಿ ಖರ್ಚುಮಾಡಿಲ್ಲ.ಇಂತಹ ಪರಿಸ್ಥಿತಿ ಇರುವಾಗ ಈ ಯೋಜನೆಗೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬೇಕಾದಾಗ ಇವತ್ತು ಈ ಒಂದು ಹಣ ಖರ್ಚು ಮಾಡಿದಂತಹ ಪರಿಸ್ಥಿತಿಯನ್ನು ನೋಡಿದಾಗ ಬಹಳಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದ್ದೇವೆ. ಆ ಕಾರಣ ಹೆಚ್ಚಿನ ಹಣವನ್ನು ಕೊಟ್ಟು ಈ ಯೋಜನೆಯನ್ನು ಮುಗಿಸಬೇಕು ಎನ್ನತಕ್ಕ ಒಂದು ಲವಲವಿಕೆ ಅವರಲ್ಲಿ ಇದ್ದರೆ ಈ ಕಾರ್ಯವನ್ನು ಬೇಗನೇ ಈಗಾಗಲೇ ಮಾಡುತ್ತಿದ್ದರು. ಆದರೆ ಈ ವಿಚಾರ ಸರ್ಕಾರಕ್ಕೆ ಇಲ್ಲ ಎಂದು ನಾನು ಹೇಳಬೇಕಾಗಿದೆ. ಅಷ್ಟೇ ಅಲ್ಲದೆ ಅನೇಕ ಗೊಂದಲಮಯ ಹೇಳಿಕೆಗಳನ್ನು ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸುತ್ತೇವೆ ಎಂಬುದರ ಬದಲಾಗಿ ನಾವು 1996ರಲ್ಲಿ ಭದ್ರಾ ಮೇಲ್ದಂಡೆ ಯೋಜನೆಯನ್ನು

ಜಾರಿಗೊಳಿಸುತ್ತೇವೆಂದು ಹೇಳಿದರು. ಆ ಭದ್ರಾ ಮೇಲ್ದಂಡೆ ಆಗುವುದರ ಬದಲಾಗಿ ಮತ್ತೆ ಒಂದು ಸಾರಿ ತುಂಗಾ ಕಿರು ಯೋಜನೆ ಎಂದು ಈ ಯೋಜನೆಗೆ ಒಂದು ಹೆಸರನ್ನು ಕೊಟ್ಟು ಅದನ್ನು ನಾವು ಮಾಡುತ್ತೇವೆ ಎನ್ನುವುದನ್ನು ಹೇಳಿದ್ದಾರೆ. ಆ ಕಾರಣ ಇವತ್ತು ತುಂಗಾ ಮೇಲ್ದಂಡೆ ಯೋಜನೆಯನ್ನೇ ಜಾರಿಗೊಳಿಸತಕ್ಕದ್ದು ಅತಿ ಅವಶ್ಯಕತೆ ಇದೆ. ಇವತ್ತು ತುಂಗಾ ಕಿರು ಯೋಜನೆ ಆಗಲಿ, ಭದ್ರಾ ಮೇಲ್ದಂಡೆ ಯೋಜನೆ ಆಗಲಿ. ಇವತ್ತು ತುಂಗಾ ಮೇಲ್ದಂಡೆ ಯೋಜನೆಯಿಂದ ಬರತಕ್ಕ ನೀರನ್ನು ಉಪಯೋಗಿಸಿಕೊಳ್ಳಬೇಕು. ಒಂದು ಸಾರಿ ಮಾನ್ಯ ಸಚಿವರ ಪತ್ರಿಕಾ ಹೇಳಿಕೆ ಬಂದಿತ್ತು. ಆಗುಂಬೆ ಬಳಿ 20 ಟಿಎಂಸಿ ನೀರನ್ನು ಲಿಫ್ಟ್ ಮುಖಾಂತರ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದರು ಆ 20 ಟಿಎಂಸಿ ನೀರನ್ನು ಇವತ್ತು ಬಚಾವತ್ ಅವಾರ್ಡನ ಪ್ರಕಾರ ತುಂಗಾ ಮೇಲ್ದಂಡೆ ಯೋಜನೆ ಜಾರಿ ಆಗಬೇಕಾಗಿದ್ದರೆ ಸುಮಾರು 34 ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಅದರಲ್ಲಿ ತೋರಿಸಲಾಗಿದೆ. ಇವತ್ತು ಆ 34 ಟಿಎಂಸಿ ನೀರನ್ನು ಉಪಯೋಗ ಮಾಡುವುದರ ಬದಲಾಗಿ ತುಂಗಾ ಮೇಲ್ದಂಡೆಯ ಮಾಲತಿ ಜಲಾಶಯ ಯೋಜನೆಯನ್ನು ಬಿಟ್ಟು ಕೇವಲ 12.4 ಟಿಎಂಸಿ ನೀರನ್ನು ತೆಗೆದುಕೊಂಡು ತುಂಗಾ ಮೇಲ್ದಂಡೆ ಜಾರಿಗೆ ತರುತ್ತೇವೆನ್ನುವ ಆಲೋಚನೆ ಇದ್ದರೂ ಕೂಡ, ಅದನ್ನೂ ಕೂಡ ಇವತ್ತು ಕಾರ್ಯಗತ ಮಾಡುತ್ತಿಲ್ಲ ಎನ್ನತಕ್ಕದ್ದರ ಬಗ್ಗೆ ನಾವು ಬಹಳಷ್ಟು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ ಎನ್ನುವುದನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಇನ್ನು ಇವತ್ತಿನ ದಿವಸ ಮುಖ್ಯವಾಗಿ ಜನತಾ ದಳದ ಚುನಾವಣೆ ಪ್ರಣಾಳಿಕೆಯನ್ನು ನೋಡಿದಾಗ ಜನತಾ ದಳ ಸರ್ಕಾರದವರು ಪ್ರಣಾಳಿಕೆಯಲ್ಲಿದಂತಹ ಘೋಷಣೆಗಳನ್ನು ಕಾರ್ಯಗತಗೊಳಿಸಿಲ್ಲ ಎಂದು ನಾವು ಹೇಳಬೇಕಾಗಿದೆ. ಇದರಲ್ಲಿ ಇವತ್ತು ಅವರು ಕನ್ನಡದ ನೆಲ-ಜಲ ಭಾಷೆಯ ಸೊಗಸು ಇದರ ಬಗ್ಗೆ ನಾವು ಸಂಪೂರ್ಣವಾಗಿ ಸಂರಕ್ಷಣೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಸಂರಕ್ಷಣೆ ಮಾಡಿಲ್ಲ ಎಂದು ಕೂಡ ನಾನು ಹೇಳಿದ್ದೇನೆ. ಇನ್ನು ಭಾಷೆಯ ವಿಚಾರವನ್ನು ತೆಗೆದುಕೊಂಡಾಗ ಶ್ರೀಮಾನ್ ವಾಟಾಳ್ ನಾಗರಾಜ್‌ಅವರು ಕನ್ನಡ ನೆಲ-ಜಲ, ಸಂಸ್ಕೃತಿ ಬಗ್ಗೆ ಅನೇಕ ಸಾರಿ ಮಾತನಾಡುತ್ತಿರುತ್ತಾರೆ. ನಾನು ಇವತ್ತು ಉತ್ತರ ಕರ್ನಾಟಕದವನಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತು ತಮ್ಮ ಸರ್ಕಾರದವರೇ ಆದಂತಹ ಶ್ರೀ ಚಂಪಾ ಅವರು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಬೆಳಗಾವಿಯ ನಗರಸಭೆ ಸದಸ್ಯರು ಅವರು ಬೆಳಗಾವಿಗೆ ಬಂದಿದ್ದು ಆದರೆ ನಾವು ಒದ್ದು ಓಡಿಸುತ್ತೇವೆಂದು ಹೇಳತಕ್ಕ ಮಾತನ್ನು ನಾನೂ ಕೂಡ ಪತ್ರಿಕೆಯಲ್ಲಿ ಓದಿದ್ದೇನೆ. ಅದಕ್ಕೆ ಇವತ್ತು ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ತಾವು ಏಕೆ ಮೌನವಾಗಿದ್ದೀರಿ ಎನ್ನತಕ್ಕ ಪ್ರಶ್ನೆಯನ್ನು ಇವತ್ತು ನಾವು ಮಾಡಬೇಕಾಗಿದೆ? ಇವತ್ತು ಅಂತಹ ಒಬ್ಬ ಪ್ರಾಧಿಕಾರದ ಅಧ್ಯಕ್ಷರಿಗೇ ಅನ್ನುವಾಗ ಇನ್ನು ಜನ ಸಾಮಾನ್ಯರನ್ನು ಯಾವ ರೀತಿಯಿಂದ ಆ ಭಾಗದ ಜನರು ವಿಶೇಷವಾಗಿ ಮರಾಠಿ ಜನರು ಹೆದರಿಸಿಕೊಳ್ಳಬಹುದು ಎನ್ನತಕ್ಕದ್ದನ್ನು ಇವತ್ತು ನಾವು

ತಿಳಿದುಕೊಳ್ಳಬೇಕಾಗಿದೆ. ಆ ಕಾರಣ ನಾವು ಕನ್ನಡ ಭಾಷೆಯನ್ನು ಸಂರಕ್ಷಿಸುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ, ಸಂರಕ್ಷಣೆಯನ್ನು ಮಾಡಲಿಕ್ಕೆ ಆಗಲಿಲ್ಲ ಎಂದು ನಾನು ಹೇಳಬೇಕಾಗಿದೆ. ಜೊತೆಗೆ ಗಂಗಾ ಕಲ್ಯಾಣದಂತಹ ಸ್ಕೀಮ್‌ಗಳನ್ನು ನಾವು ಜಾರಿ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಈ ಗಂಗಾ ಕಲ್ಯಾಣ ಯೋಜನೆಯಲ್ಲಿ ಎಸ್‌ಸಿ ಎಸ್‌ಟಿ ಕಾರ್ಪೋರೇಷನ್‌ನಿಂದ ಏನಾಗಿದೆ ಎಂದು ಅವಲೋಕಿಸಿ ನೋಡಿದಾಗ ಬಹುಶಃ ಆ ನಿಗಮದಲ್ಲಿ ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಹಗರಣವಾಗಿದೆ ಎನ್ನತಕ್ಕದ್ದನ್ನು ಇವತ್ತು ನಾನು ನೇರವಾಗಿ ಹೇಳಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತೆ ನಾನು ಕಳೆದ ಅಧಿವೇಶನ ನಡೆಯುವಾಗ ಒಂದು ಪ್ರಶ್ನೆಯನ್ನು ಕೇಳಿದ್ದೆ. ನಮ್ಮ ಸವಣೂರು ತಾಲ್ಲೂಕಿನಲ್ಲಿ ವೈಯಕ್ತಿಕವಾಗಿ ಕೊರೆದಂತಹ ಬೋರ್‌ವೆಲ್‌ಗಳು ಮತ್ತು ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದಂತಹ ಬೋರ್‌ವೆಲ್‌ಗಳ ಸಂಖ್ಯೆ, ಯಾರ್‍ಯಾರಿಗೆ ಕೊಡಲಾಗಿದೆ, ಯಾವ ಫಲಾನುಭವಿಗಳು ಎಲ್ಲಿ ಕೊರೆದಿದ್ದೀರಿ ಎಂದು ಕೇಳಿದ್ದಕ್ಕೆ ಯಾವ ಒಂದು ಉತ್ತರವನ್ನೂ ಕೊಡಲಿಲ್ಲ. ಅದು ಹೆಲ್ಡ್ ಓವರ್ ಪ್ರಶ್ನೆ ಆಯಿತು. ಈ ಸದನದಲ್ಲಿ ಮೊನ್ನೆ ಅನ್‌ಸ್ಟಾರ್ಡ್ ಪ್ರಶ್ನೆ ಆಗಿತ್ತು. ಅವತ್ತೂ ಕೂಡ ಇದಕ್ಕೆ ಉತ್ತರ ಬಂದಿಲ್ಲ. ಇದನ್ನು ನೋಡಿದಾಗ ಇವತ್ತು ಆ ಕಾರ್ಪೋರೇಷನ್‌ನವರು ಸವಣೂರ್ ತಾಲ್ಲೂಕಿನಲ್ಲಿ ಹಣದ ದುರುಪಯೋಗವನ್ನು ಮಾಡಿಕೊಂಡಿದ್ದಾರೆ ಎನ್ನತಕ್ಕ ಒಂದು ನೇರವಾದ ಆರೋಪವನ್ನು ನಾನು ಮಾಡಬೇಕಾಗಿದೆ. ಜೊತೆಗೆ ಮಾನ್ಯ ಮುನಿಯಪ್ಪನವರ ಕ್ಷೇತ್ರವಾದ ಶಿಡ್ಲಘಟ್ಟದಲ್ಲಿ ಕೂಡ ಕೆಲವು ಕಾಗದ ಪತ್ರಗಳನ್ನು ಕೊಟ್ಟಿದ್ದಾರೆ. ಅಲ್ಲಿಯೂ ಕೂಡ ಇವತ್ತು ಹಣದ ದುರುಪಯೋಗ ಆಗಿದೆ. ಅದರ ಜೊತೆಗೆ ಅಲ್ಲಿ ಪಂಪುಸೆಟ್ಟುಗಳನ್ನು ಖರೀದಿ ಮಾಡತಕ್ಕ ಸಂದರ್ಭದಲ್ಲಿ ಅಲ್ಲಿ ಸುಮಾರು ಆರು ಕೋಟಿ ರೂಪಾಯಿಯನ್ನು ಖರ್ಚು ಮಾಡಿ ಇವತ್ತು ಯಾವ ಪಂಪುಸೆಟ್ಟುಗಳನ್ನು ಖರೀದಿ ಮಾಡಿದ್ದಾರೆ? ಅವುಗಳನ್ನು ಕೂಡ ಯಾವ ಕೊಳವೆ ಬಾವಿಗಳಿಗೆ ತೆಗೆದುಕೊಂಡಿದ್ದರೋ ಅವುಗಳಿಗೆ ಜೋಡಿಸಿಲ್ಲ ಎನ್ನತಕ್ಕದ್ದನ್ನೂ ಕೂಡ ಹೇಳಬೇಕಾಗಿದೆ.

ಉಪಾಧ್ಯಕ್ಷರು: ಬಹಳಷ್ಟು ಜನರು ಇದ್ದಾರೆ. ಇನ್ನು ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಇಂತಹ ಪರಿಸ್ಥಿತಿ ಇರುವಾಗ ಸಮಗ್ರವಾದ ಒಂದು ತನಿಖೆಯ ಅತಿ ಅಗತ್ಯ ಇದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ನಾನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಅವುಗಳನ್ನು ಬದಿಗಿಟ್ಟು ನಮ್ಮ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ನಮ್ಮ ಹುಬ್ಬಳ್ಳಿಗೆ ನೈರುತ್ಯ ರೈಲ್ವೆ ವಲಯ ಆಗಬೇಕಾಗಿತ್ತು. ದುರ್ದೈವದಿಂದ ಅದು ಕೈ ತಪ್ಪಿ ಹೋಗಿದೆ. ಅದನ್ನು ಪುನಃ ಅಲ್ಲಿ ರೈಲ್ವೆ ವಲಯ ಮಾಡತಕ್ಕಂಥ ಪ್ರಯತ್ನವನ್ನು ನಮ್ಮ ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ಮಾಡತಕ್ಕದ್ದು ಅತಿ ಸೂಕ್ತವಿದೆ

ಎನ್ನತಕ್ಕದ್ದನ್ನು ಹೇಳುತ್ತೇನೆ. ಅಲ್ಲಿ ಉಚ್ಚ ನ್ಯಾಯಾಲಯದ ಒಂದು ಪೀಠವನ್ನು ಕೂಡ ಅತೀ ಅಗತ್ಯವಾಗಿ ಮಾಡಬೇಕಾಗಿದೆ. ಸುಮಾರು ಆರು ಜನ ಮುಖ್ಯಮಂತ್ರಿಗಳು ಈಗಾಗಲೇ ಶಿಫಾರಸ್ ಮಾಡಿದ್ದಾರೆ. ಜಸ್ವಂತ್ ಸಿಂಗ್ ಆಯೋಗದ ವರದಿಯನ್ನೂ ಕೂಡ ಈ ಬಗ್ಗೆ ಕೊಡಲಾಗಿದೆ. ಆದರೂ ಕೂಡ ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂಬ ಪ್ರಶ್ನೆಯನ್ನು ನಾವು ಮಾಡಬೇಕಾಗಿದೆ. ಆ ಕಾರಣದಿಂದ ಕೂಡಲೇ ಒಂದು ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪನೆ ಮಾಡತಕ್ಕದ್ದು ಆಗಬೇಕು. ಇನ್ನು ಲೋಕೋಪಯೋಗಿ ಸಚಿವರು ಕೂಡ ನಮ್ಮ ಭಾಗದಲ್ಲಿ ಇವತ್ತು ರಸ್ತೆಗಳ ಕಡೆಗೆ ಗಮನ ಹರಿಸಬೇಕು. ರಾಣಿಬೆನ್ನೂರ್, ಹಾವೇರಿ ಮತ್ತು ಶಿಗ್ಗಾಂವ್‌ಗಳಲ್ಲಿ, ಅವರು ಬೈ ಪಾಸ್ ರಸ್ತೆಗಳನ್ನು ಮಾಡತಕ್ಕದ್ದು ಅತಿ ಅವಶ್ಯಕ ಇದೆ. ದಾವಣಗೆರೆ ಬಿಟ್ಟರೆ ಹುಬ್ಬಳ್ಳಿಗೆ ಆಗಿದೆ. ಹುಬ್ಬಳ್ಳಿ ಧಾರವಾಡದಲ್ಲಿ ನಿರ್ಮಿಸತಕ್ಕ ಬೈ ಪಾಸ್ ರಸ್ತೆ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಅದರ ಬಗ್ಗೆ ಆದಷ್ಟು ಕೂಡಲೇ ಅವರು ಕೆಲಸವನ್ನು ಮಾಡಬೇಕು. ಮತ್ತು ಆ ಜಿಲ್ಲೆಯ ಉಸ್ತುವಾರಿ ಸಚಿವರೂ ಅವರಾಗಿರುವುದರಿಂದ ವಿಶೇಷವಾಗಿ ಆ ಭಾಗದಲ್ಲಿ ಆ ಕೆಲಸಗಳನ್ನು ಕೂಡ ಮಾಡಿಸಬೇಕಾದ್ದು ಅತಿ ಅವಶ್ಯಕ ಇದೆ ಎಂದು ಹೇಳುತ್ತೇನೆ. ಕೊನೆಯದಾಗಿ ಇವತ್ತಿನ ದಿವಸ ನಮ್ಮ ಹುಬ್ಬಳ್ಳಿಯ ಕಾನೂನು ಮತ್ತು ಆಡಳಿತ ವ್ಯವಸ್ಥೆಯ ಸಂಬಂಧವಾಗಿ ಮತ್ತು ಒಂದು ಪ್ರತಿಷ್ಠಿತ ಮಠವಾದಂತಹ ಮೂರು ಸಾವಿರ ಮಠದ ಬಗ್ಗೆ ಕೂಡ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇವತ್ತು ಹುಬ್ಬಳಿಯಲ್ಲಿ ಮೂರು ಸಾವಿರ ಮಠದಲ್ಲಿ ಮೂಜಗಂ ಎನ್ನತಕ್ಕ ಜಗದ್ಗುರುಗಳವರು ಶ್ರೀ ರುದ್ರಮುನಿ ದೇವರನ್ನು ಈಗಾಗಲೇ ಅವರು ನೇಮಕ ಮಾಡಿಕೊಂಡಿದ್ದಾರೆ. ಉತ್ತರಾಧಿಕಾರಿಯನ್ನಾಗಿ ಮಾಡಿ ಬಹಳ ದಿವಸ ಆಯಿತು. ಈ ಬಗ್ಗೆ ಹುಬ್ಬಳ್ಳಿಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದಾಗ ಅವರನ್ನು ನೇಮಕ ಮಾಡಿರುವುದನ್ನು ಸಮರ್ಥಿಸಿ ಒಂದು ಅಭಿಪ್ರಾಯವನ್ನೂ ಕೂಡ ಅಲ್ಲಿರುವ ಹಿರಿಯರು ಕೊಟ್ಟಿದ್ದಾರೆ. ಹೀಗಿರುವಾಗ ಅಲ್ಲಿನ ಗುರುಗಳು ಇದರ ಬಗ್ಗೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೆ, ನಾವು ಮಧ್ಯದಲ್ಲಿ ಇರುವವರು. ಕುತೂಹಲದಿಂದ ಏನು ನಡೆದಿದೆ ಎಂದು ಕೇಳುವವರು ನಾವು. ಆ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಕ ಮಾಡುವಾಗ ಯಾವ ನಿಯಮವನ್ನು ಅನುಸರಿಸಬೇಕು ಮತ್ತು ಉತ್ತರಾಧಿಕಾರಿಯನ್ನು ನೇಮಿಸತಕ್ಕವರು ಯಾರು? ಅದಕ್ಕೇನು ಟ್ರಸ್ಟ್ ಇದೆಯಾ? ಅದಕ್ಕೇನು ಕಾನೂನುಗಳು ಇದ್ದಾವಾ? ಏನು ಪದ್ಧತಿ ಇದೆಯಾ? ಆ ಪದ್ಧತಿಯನ್ನು ಅನುಸರಿಸಿ ಮಾಡಿದೆಯಾ? ಉತ್ತರಾಧಿಕಾರಿಯನ್ನು ನೇಮಿಸಬೇಕಾದರೆ ಏನು ಪದ್ಧತಿಯನ್ನು ಅನುಸರಿಸಬೇಕು? ಉತ್ತರಾಧಿಕಾರಿಯನ್ನು ನೇಮಿಸಬೇಕಾದರೆ ಆ ಮಠದ ಪದ್ಧತಿ ಪ್ರಕಾರ, ಅದು ಕಾನೂನು ಇರಬಹುದು, ನಿಯಮ ಇರಬಹುದು, ಟ್ರಸ್ಟ್ ಇರಬಹುದು, ಏನು ಇದೆಯೋ ನನಗೆ ಗೊತ್ತಿಲ್ಲ. ಅದಕ್ಕೆ ಇದ್ದಂತಹ ನಿಯಮಾವಳಿ ಪ್ರಕಾರ ಯಾವ ರೀತಿ ಮಾಡಬೇಕು ಆ ರೀತಿ ಮಾಡಿದ್ದಾರಾ ಇಲ್ಲವೇ

ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಮಠದ ಉತ್ತರಾಧಿಕಾರಿಯನ್ನು ನೇಮಿಸುವ ವಿಚಾರವನ್ನು. ಇಲ್ಲಿ ಚರ್ಚೆ ಮಾಡು ಎಂದು ಹೇಳುತ್ತೀರಾ? Do you support this seriously? ಇದೇನು ಸಾರ್ ತಿಮ್ಮಪ್ಪನವರ ಬಾಯಿಯಲ್ಲಿ ಇಂತಹ ಮಾತು ಬರುತ್ತದೆ?

ಉಪಾಧ್ಯಕ್ಷರು: ಮಾನ್ಯ ಕುನ್ನೂರ್ ಅವರು ಮುಗಿಸಲಿ.

ಶ್ರೀ ಜೆ.ಸಿ.ಮಾಧಸ್ವಾಮಿ: ಮಠದ ವಿಷಯಗಳೆಲ್ಲಾ ಇಲ್ಲಿ ಚರ್ಚೆ ಆಗುವುದಾದರೆ.

ಉಪಾಧ್ಯಕ್ಷರು: ಟ್ರಸ್ಟ್ ಆಕ್ಟ್ ಪ್ರಕಾರ ಯಾರು ಆ ಮಠದಲ್ಲಿ ಹೋಗುವಂತಹ ಜಗದ್ಗುರುಗಳು ಬರುವಂತಹವರನ್ನು ನೇಮಿಸುವುದು ಒಂದು ಸಂಪ್ರದಾಯ. ಅದು ಪೇಪರ್‌ನಲ್ಲಿ ಬಂದಿದೆ. ಅವರ ಮೂಲ ಸ್ವಾಮಿಗಳೇ ನೇಮಿಸುವುದು.

ಶ್ರೀ ಕಾಗೋಡು ತಿಮ್ಮಪ್ಪ: ಅಲ್ಲಿ ಸಾರ್ವಜನಿಕರ ಎದುರಿನಲ್ಲಿ ನೇಮಿಸಿದ್ದಾರೆ ಎಂದು ಹೇಳಿದ್ದಾರೆ. ಅದು ಹೇಗೆ ಆಯಿತು?

ಉಪಾಧ್ಯಕ್ಷರು: ಬೇರೆ ಬೇರೆ ಜನರು ಬೇರೆ ಬೇರೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಠದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಲ್ಲ. ನಾನು ಹೇಳುವುದು ಇಷ್ಟೇನೇ. ವ್ಯವಸ್ಥೆ ಅವರಿಗೆ ಸಂಬಂಧಪಟ್ಟಿರುವುದು. ಇಲ್ಲಿ ಚರ್ಚೆ ಆಗಬೇಕಾಗಿರುವುದು, ಆ ಒಂದು ನೆವದಲ್ಲಿ ಅಲ್ಲಿ ಗೊಂದಲ ಪ್ರಾರಂಭ ಆಗಿದೆಯಲ್ಲಾ, ಲಾ ಅಂಡ್ ಆರ್ಡರ್ ಪರಿಸ್ಥಿತಿ. ಅದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಏಕೆಂದರೆ ಎರಡೂ ಕಡೆ ಆದರೆ ಗುಂಪಾಗುತ್ತದೆ. ಗುಂಪಾದ ಮೇಲೆ ಹೊಡೆದಾಟ ಬಡಿದಾಟ ಶುರುವಾಗುತ್ತದೆ. ಇದಕ್ಕೆ ಅವಕಾಶ ಇರಬಾರದು. ಅವರ ಮಠಕ್ಕೆ ಉತ್ತರಾಧಿಕಾರಿ ನೇಮಕ ಮಾಡಿಕೊಳ್ಳಲಿ ಬಿಡಲಿ. ಅದು ಅವರಿಗೆ ಸಂಬಂಧಪಟ್ಟ ವಿಷಯ. ತಂದೆ ಮಕ್ಕಳ ಜಗಳ ಅದು.

ಉಪಾಧ್ಯಕ್ಷರು: ಶಾಂತತೆಯನ್ನು ಕಾಪಾಡಿಕೊಳ್ಳಬೇಕು.

ಶ್ರೀ ಬಿ.ಬಿ.ಶಿವಪ್ಪ: ಅದು ರಾಜಕೀಯವಾಗಿ ಹೊರಗೆ ಬರಬಾರದು.

ಶ್ರೀ ಪಿ.ಸಿ.ಸಿದ್ದನಗೌಡರ್: ಮಾನ್ಯ ಉಪಾಧ್ಯಕ್ಷರೆ, ನಾನೂ ಸಹ ತಮಗೆ ಬರೆದು ಕಳುಹಿಸಿದ್ದೇನೆ. ಉತ್ತರಾಧಿಕಾರಿ ಯಾರನ್ನು ಮಾಡಬೇಕೆಂಬುದು ಅವರಿಗೆ ಬಿಟ್ಟಿದ್ದು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಅಲ್ಲಿ ಯಾವುದೇ ಗೊಂದಲ ನಡೆಯದ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಆ ವೇಳೆಗೆ ರಾಜಿ'ಸಂಧಾನ ಕೂಡ ನಡೆದಿದೆ. ಸಾಧ್ಯವಾದಮಟ್ಟಿಗೆ ಶಾಂತಿಯುತವಾಗಿ ಸಂಧಾನ ಮಾಡುವಂತಹ ವ್ಯವಸ್ಥೆ ನಡೆದಿದೆ. ಅದನ್ನು ಶಾಂತಿಯುತವಾಗಿ ಬಗೆಹರಿಸುತ್ತೇವೆ ಎನ್ನುವುದನ್ನು ಈ ಸದನದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಮಂಜುನಾಥ್ ಸಿ.ಕುನ್ನೂರು: ಅಲ್ಲಿ ಶಾಂತವಾದ ವಾತಾವರಣ ಕಾಯ್ದು ಕೊಂಡುಹೋಗಬೇಕು. ಒಂದು ಸಾರಿ ತಾಳಿ ಕಟ್ಟಿದ ಮೇಲೆ, ಉತ್ತರಾಧಿಕಾರಿಯಾದ ನಂತರ ಪಟ್ಟಾಭಿಷೇಕ ಆಗುವುದು ಸ್ವಾಭಾವಿಕ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಅದು ಏನೇ ಇರಲಿ ಮಾಡಿರುವಂಥದ್ದು ನಾನು ಸಮರ್ಥನೆ ಮಾಡಿ ಅಲ್ಲಿ ಶಾಂತ ಸ್ಥಿತಿಯನ್ನು ಕಾಯ್ದುಕೊಂಡು ಹೋಗಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ತಪಸ್ಸು ಮಾಡಬೇಕಾ, ಪೋಲಿಸರ ಕೈಯಲ್ಲಿ ಪ್ರದರ್ಶನ ಮಾಡಿಸಬೇಕಾ? ಅದು ನೇರವಾಗಿ ಹೇಳಿ.

ಶ್ರೀ ಪಿ.ಸಿ.ಸಿದ್ದನಗೌಡರ್: ನೀವೇನು ತಪಸ್ಸು ಮಾಡುವುದಕ್ಕೆ ಹೋಗಬೇಡಿ. ಸರ್ಕಾರದಲ್ಲಿರುವಂತಹ ಜವಾಬ್ದಾರಿ ಮುಖ್ಯಮಂತ್ರಿಗಳು ಅಥವಾ ಮುಖಂಡರು ಹೋಗಿ ಯಾವುದೇ ರಾಜಕೀಯ ಮಾಡದೇ ಇದ್ದರೆ ಸ್ವಾಮೀಜಿಯವರು ಕೂಡಿದರೆ ಆಗುತ್ತದೆ. ಸ್ವಾಮಿಗಳಿಗೆ ಎಷ್ಟೋ ಸಾರಿ ಕೂರಿಸಿದ್ದೇವೆ, ಅಲ್ಲಿ ತಪಸ್ಸು ಎಲ್ಲಾ ಆಗಿದೆ. ಅವರವರಲ್ಲಿ ಭಿನ್ನಾಭಿಪ್ರಾಯ ಇದೆ ಸರಿ ಹೋಗುತ್ತದೆ. ಮುಖ್ಯ ಮಂತ್ರಿಯವರು ಜವಾಬ್ದಾರಿ ತೆಗೆದುಕೊಂಡು ಮಾಡಿದರೆ ಆಗುತ್ತದೆ. ಉಳಿದ ವಿಷಯ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಅತಿವೃಷ್ಟಿ ಬಗ್ಗೆ 63 ಕೋಟಿ ರೂಪಾಯಿಗಳನ್ನು ಮಾತ್ರ ಸರ್ಕಾರದವರು ಖರ್ಚು ಮಾಡಿದ್ದಾರೆ. ನನ್ನ ಮತ ಕ್ಷೇತ್ರದಲ್ಲಿ ಶಿಗ್ಗಾವ್ ತಾಲ್ಲೂಕಿನ ಬಾರ್ಡರ್‌ನಲ್ಲಿ ಒಂದು ಆತ್ಮಾಹುತಿ ಆಯಿತು. ಕಳಗನೂರು ತಾಲ್ಲೂಕಿನಲ್ಲಿ ಕೂಡ ಒಂದು ಆತ್ಮಾಹುತಿ ಆಯಿತು. ಕುಂದಗೋಳು ತಾಲ್ಲೂಕಿನಲ್ಲಿ ಎರಡು ಆತ್ಮಾಹುತಿಗಳನ್ನು ರೈತರು ಮಾಡಿಕೊಳ್ಳತಕ್ಕಂತಹ ಪ್ರಸಂಗ ನೋಡಿದರೂ ಇವತ್ತು ಕೇವಲ ಗುಲ್ಬರ್ಗ ಜಿಲ್ಲೆಗೆ ಮಾತ್ರ ಬೆಳೆಗಳ ಪರಿಹಾರವನ್ನು ಕೊಡುತ್ತಿದ್ದೀರಿ, ನಮ್ಮ ಕಡೆಗೂ ಕೂಡ ಬೆಳೆಗಳಿಗೆ ಪರಿಹಾರದ ಹಣವನ್ನು ಕೊಡತಕ್ಕಂತಹ ಅವಶ್ಯಕತೆ ಇರುವುದರಿಂದ ಸರ್ಕಾರ ಇದರಲ್ಲಿ ವಿಫಲವಾಗಿದೆ ಅನ್ನತಕ್ಕಂತಹ ಮಾತನ್ನು ಹೇಳಿ, ಸರ್ಕಾರದವರು ಇವತ್ತು ಕೇವಲ ತಮ್ಮ ರಾಜಕೀಯ ಸಮಸ್ಯೆಯಲ್ಲಿ ಸಮಯ ಕಳೆಯುತ್ತಿದ್ದಾರೆ ವಿನಃ ಇಂತಹ ಮಹತ್ವದ ಸಂಗತಿಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಿಲ್ಲ. ಅನ್ನತಕ್ಕಂತಹ ಮಾತನ್ನು ಹೇಳಿ, ಇವತ್ತು ನನಗೆ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಭಾರತೀಯ ಜನತಾ ಪಕ್ಷದ ನಾಯಕರಾದ ಸನ್ಮಾನ್ಯ ಶ್ರೀ ಈಶ್ವರಪ್ಪನವರು ಹಾಗೂ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಂಡನೆ ಮಾಡಿರುವಂತಹ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ನೀಡಿ ನಾನು ಕೆಲವು ಅನಿಸಿಕೆಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ವಿಶೇಷವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ಅಂಶಗಳನ್ನು ಉಲ್ಲೇಖ ಮಾಡುವುದಕ್ಕೆ ಇಚ್ಛಿಸುತ್ತೇನೆ. ಮೊದಲನೆಯದಾಗಿ ಮಂಗಳೂರು ಕ್ಷೇತ್ರದಲ್ಲಿರುವ ಜಿಲ್ಲಾ ವೆನ್‌ಲಾಕ್ ಆಸ್ಪತ್ರೆ ಮತ್ತು ಲೇಡಿ ಗೋಷನ್ ಆಸ್ಪತ್ರೆಗಳು ಏನಿವೆ, ಈ ಆಸ್ಪತ್ರೆಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪರ್ಚೇಸ್ ಇಲಾಖೆ ಏನಿದೆ ಅಲ್ಲಿ ವಿತರಣೆಯಾಗಿರುವಂತಹ ವೈದ್ಯಕೀಯ ಉಪಕರಣಗಳು ಏನಿವೆ, ಅದರಲ್ಲಿ ಉದಾಹರಣೆಗೆ ಅನೆಸ್ಥೆಟಿಕ್ ಎಕ್ವಿಪ್‌ಮೆಂಟ್ಸ್, ಯಾವ ಅನೆಸ್ತೆಟಿಕ್ ಎಕ್ವಿಪ್‌ಮೆಂಟ್ ಉಪಯೋಗ ಮಾಡಿಕೊಂಡು ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡುತ್ತಾರೆ, ಅಂತಹ ಸಂದರ್ಭದಲ್ಲಿ ಕೊರತೆ ಇರುವ ಆಕ್ಸಿಜನ್ ಸಪ್ಲೆ ಮಾಡುವ ಉಪಕರಣ ಅದು. ಆದರೆ ಈ ಉಪಕರಣದಲ್ಲಿ ಆಕ್ಸಿಜನ್ ಲೀಕ್ ಆಗುವ ದುಸ್ಥಿತಿ ಬಂದರೆ; ಬಹುಶಃ ಎರಡು ಲಕ್ಷ ಬೆಲೆ ಬಾಳುವ ಎಂಟು ಉಪಕರಣಗಳನ್ನು ಸಪ್ಲೆ ಮಾಡಿದ್ದಾರೆ. ಇದು ಯಾವುದೇ ರೀತಿಯಲ್ಲಿ ಉಪಯೋಗಕ್ಕೆ ಬಾರದೆ ಇರವಂತಹ ದುಸ್ಥಿತಿ ಬಂದಿದೆ. ಇದಕ್ಕೆ ಯಾರು ಹೊಣೆಗಾರರು? ಪರ್ಚೇಸ್ ಡಿಪಾರ್ಟ್‌ಮೆಂಟ್‌ನವರು ಏನು ಮಾಡಿದ್ದಾರೆಂದು ಕೇಳಿದರೆ, ಸಂಬಂಧಪಟ್ಟ ಕಂಪನಿಯವರು ಹೇಳುತ್ತಾರೆ, ಯಾರ್‍ಯಾರಿಗೆ ಎಷ್ಟೆಷ್ಟು ಕೊಡಬೇಕು ಎಲ್ಲವನ್ನೂ ಕೊಟ್ಟು ನಾವು ಅದನ್ನು ಸಪ್ಲೈ ಮಾಡಿದ್ದೇವೆ. ಆದ್ದರಿಂದ ತಾವು ಪ್ರಶ್ನೆ ಮಾಡುವುದು ಅಗತ್ಯವಿಲ್ಲ ಎನ್ನುವ ಮಾತನ್ನು ಅಲ್ಲಿರತಕ್ಕಂತಹ ಡಿಎಮ್‌ಓಗಳಿಗೆ ಸಪ್ಲೈಯರ್ಸ್ ಹೇಳುವುದಾದರೆ ಯಾವ ರೀತಿಯಲ್ಲಿ ಪರ್ಚೇಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ನಡೆಯುತ್ತಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿರುವಂತಹ ಆಪರೇಷನ್ ಥಿಯೇಟರ್‌ನಿಂದ ಹಿಡಿದು ವಾರ್ಡ್‌ಗಳಲ್ಲಿ ಸಹಿತ ಆಗಾಗ ವಿದ್ಯುತ್ ಶಾಕ್ ಬರುತ್ತಿದೆ. ಏಕೆ ವಿದ್ಯುತ್ ಶಾಕ್ ಬರುತ್ತಿದೆ ಎಂದರೆ 50 ವರ್ಷಗಳ ಹಿಂದಿನ ಹಳೆಯ ವೈರಿಂಗ್ ಇದೆ. ಈ ವೈರಿಂಗ್ ಹಳೆಯದಾಗಿರುವುದರಿಂದ ಅದನ್ನು ತಕ್ಷಣ ನವೀಕರಿಸಬೇಕಾಗಿದೆ. ನಾಲ್ಕೂವರೆ ಲಕ್ಷದ ಒಂದು ಎಸ್ಟಿಮೇಟನ್ನು ಕಳುಹಿಸಿ ಕೆಲವು ವರ್ಷಗಳಾದರೂ ಕೂಡ ಇವತ್ತಿನವರೆಗೂ ಕೂಡ ಅದನ್ನು ಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಈ ಸ್ಥಿತಿಯಿಂದ ಈ ಪೇಶೆಂಟ್‌ಗಳಿಗೆ ಯಾವ ಸಮಯಲ್ಲಿ ಶಾಕ್ ಹೊಡೆಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇಂತಹ ಒಂದು ದುಸ್ಥಿತಿ ಈ ಸರ್ಕಾರದಿಂದ ಆಗಿದೆ. ಅಷ್ಟು ಮಾತ್ರವಲ್ಲ ನಾರ್ಮ್ಸ್ ಪ್ರಕಾರ 66 ಸ್ಟಾಫ್ ನರ್ಸ್‌ಗಳನ್ನು ತಕ್ಷಣ ನೇಮಕ ಮಾಡಬೇಕಾಗಿದೆ. ಡಿ ವರ್ಗದ ನೌಕರರನ್ನೂ ನೇಮಕ ಮಾಡಿ ಫಾರ್ಮಸಿಸ್ಟ್ ಮತ್ತು ಲ್ಯಾಬೊರೇಟರಿ ಟೆಕ್ನಿಷಿಯನ್‌ಗಳನ್ನೂ ನೇಮಕ ಮಾಡಬೇಕಾಗಿದೆ. ಅಲ್ಲಿರುವಂತಹ ಬ್ಲಡ್ ಬ್ಯಾಂಕ್ ಒಂದು ವರ್ಷದಿಂದಲೂ ಕೂಡ ಕಾರ್ಯಾಚರಣೆ ಮಾಡುವುದಕ್ಕೆ

ಸಾಧ್ಯವಾಗುತ್ತಿಲ್ಲ. ಬೇಕಾಗಿರುವಂತಹ ಲ್ಯಾಬೊರೇಟರಿ ಟೆಕ್ನಿಷಿಯನ್ ಕೊಟ್ಟಿಲ್ಲ. ಅಲ್ಲಿರುವಂತಹ ಫಾರ್ಮಸಿಸ್ಟ್ ಕೂಡ ತುಂಬ ಸಂಕಷ್ಟದ ಸ್ಥಿತಿಯಲ್ಲಿದ್ದಾರೆ. ನರ್ಸ್‌ಗಳೂ ಕೂಡ ಅದೇ ಪರಿಸ್ಥಿತಿಯಲ್ಲಿದ್ದಾರೆ. ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತಿದೆ. ಆರೋಗ್ಯ ಇಲಾಖೆ ಹೊಂದಿರುವಂತಹ ಡಾ|| ಶಂಕರನಾಯಕ್ ಮತ್ತು ಡಾ|| ಹೆಚ್.ಸಿ.ಮಹದೇವಪ್ಪ ಅವರಲ್ಲಿ ಕೋ ಆರ್ಡಿನೇಷನ್ ಇಲ್ಲದೆ ಇರುವುದರಿಂದ ಈ ಸಮಸ್ಯೆ ಉದ್ಭವವಾಗುತ್ತಿದೆ. ಈ ಇಲಾಖೆಯಲ್ಲಿ ಸಮನ್ವಯ ತರುವಂತಹ ಕಾರ್ಯವನ್ನು ಕೂಡ ಸನ್ಮಾನ್ಯ ಮಂತ್ರಿಗಳು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಂತಹ ಸ್ಥಿತಿಯನ್ನು ಕೂಡ ನಾನು ಉಲ್ಲೇಖ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಅದೇ ರೀತಿಯಲ್ಲಿ ಪಿಡಬ್ಲ್ಯುಡಿ ಇಲಾಖಾ ಸಚಿವರಿಗೆ ಭೇಟಿ ಮಾಡಿ ಮಂಗಳೂರು ಕ್ಷೇತ್ರದಲ್ಲಿರುವ ರಸ್ತೆಗಳು ಯಾವುದು ಇದೆ ಹೊಂಡಗಳು ಮತ್ತು ದುಸ್ಥಿತಿಯಲ್ಲಿರುವ ರಸ್ತೆಗಳನ್ನು ಸುಸ್ಥಿತಿಗೆ ತರಬೇಕಾದರೆ ಅದಕ್ಕೆ ಬೇಕಾದ ಅನುದಾನ ಬಿಡುಗಡೆ ಮಾಡಬೇಕೆಂದು ಹೇಳಿದೆ. ಒಂದು ದೊಡ್ಡ ಪ್ರಶ್ನೆ ಅವರು ನನಗೆ ಹಾಕಿದರು. ಮಂಗಳೂರು ಕ್ಷೇತ್ರದಲ್ಲಿ ಪಿಡಬ್ಲ್ಯುಡಿ ರಸ್ತೆಗಳಿವೆಯಾ ಎಂದು ನನಗೆ ಪ್ರಶ್ನೆ ಕೇಳಿದರು. ಬಹುಶಃ ಒಬ್ಬ ಸಚಿವರು ಈ ಪ್ರಶ್ನೆ ಕೇಳುತ್ತಾರೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಒಂದು ಕಡೆ ನಗರ ಮಟ್ಟದ ಶಾಸಕರಿಗೆ ಇಲ್ಲಿರುವಂತಹ ಪಿಡಬ್ಲ್ಯುಡಿ ರಸ್ತೆಯನ್ನು ಸುಸ್ಥಿತಿಗೆ ತರುವಂತಹ ಕನಿಷ್ಟ ಗ್ರಾಂಟನ್ನು ಕೊಡುವ ಸೌಜನ್ಯ ನಮ್ಮ ಸರ್ಕಾರಕ್ಕೆ ಇಲ್ಲ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಯಾವುದಿದೆ, ಇವರು ಮಂಗಳೂರು ಹತ್ತಿರದಲ್ಲಿ ವೆಂಟೆಡ್ ಡ್ಯಾಮ್ ಕಟ್ಟಿದ್ದಾರೆ. ಈ ವೆಂಟೆಡ್ ಡ್ಯಾಮ್‌ನಿಂದ ನಮಗೆ ಕುಡಿಯುವ ನೀರಿನ ವ್ಯವಸ್ಥೆಯಾಗಿದೆ. ಇದು ಕುಡಿಯುವ ನೀರಿಗೆ ಪ್ರಮುಖವಾದ ಮೂಲವಾಗಿದೆ. ಆದರೆ ಇವತ್ತು ಅಲ್ಲಿರುವಂತಹ ಪಿಲ್ಲರ್ಸ್ ಯಾವುದಿದೆ ಅವುಗಳು ಬಿರುಕು ಬಿಡಲು ಆರಂಭವಾಗಿದೆ ಎಂದು ನನಗೆ ಗೊತ್ತಾಗಿದೆ. ಅದನ್ನು ಕಾಂಕ್ರೀಟ್ ಹಾಕಿ ಗಟ್ಟಿ ಮಾಡುವ ಸ್ಥಿತಿ ಇವತ್ತು ಬಂದಿದೆ. ಇವತ್ತಿಗೂ ಕೂಡ ರಾಜ್ಯ ಸರ್ಕಾರದಿಂದ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪುರೇಷನ್ ಏನು ಕಳಪೆ ಕಾಮಗಾರಿ ಮಾಡಿತ್ತು ಅದನ್ನು ದುರಸ್ತಿಗೊಳಿಸುವಂತಹ ಯಾವುದೇ ಕಾರ್ಯವನ್ನು ಮಾಡಿಲ್ಲ. ಈ ಕಂಬಗಳಲ್ಲಿ ಬಿರುಕು ಬಿದ್ದು ನೀರಿನ ಲೀಕೇಜ್ ಆರಂಭವಾಯಿತೆಂದರೆ ಮಂಗಳೂರು ಕ್ಷೇತ್ರ ಕುಡಿಯುವ ನೀರಿನಿಂದ ವಂಚನೆ ಆಗುತ್ತದೆ ಆದ್ದರಿಂದ ತಕ್ಷಣ ಇದರ ಬಗ್ಗೆ ಗಮನಹರಿಸಬೇಕೆಂದು ಹೇಳುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿಶೇಷವಾಗಿ ಕೆಇಬಿ ಮಂತ್ರಿಗಳಿಗೆ ಒಂದು ಕಿವಿ ಮಾತು ನಾನು ಹೇಳುತ್ತಿದ್ದೇನೆ, ತಾವು ಕಳುಹಿಸಿದಂತಹ ಇಲಾಖಾಧಿಕಾರಿಗಳ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಗಮನ ಕೊಡಿ. ವಿಶೇಷವಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಛಾರ್ಜ್ ಮಾಡುವುದಕ್ಕೆ ಮತ್ತು ಅದನ್ನು ಪರಿಶೀಲನೆ ಮಾಡುವುದಕ್ಕೆ ಬರುವಂತಹ ಅಧಿಕಾರಿಗಳು ವಿಲಾಸಿ ಹೋಟೆಲ್‌ನಲ್ಲಿದ್ದು ಅಲ್ಲಿಂದಲೇ ಸರ್ಟಿಫೆ, ಮಾಡುತಾರೆ. ಕನಿಷ ಒಂದೊಂದು [illegible]

ಬಂದಿದೆ; ಬಹುಶಃ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ಬಂದರೂ ಕೂಡ ಯಾವುದೇ ರೀತಿಯಲ್ಲಿ ಇಂತಹ ಅಧಿಕಾರಿಗಳನ್ನು ಬದಲಾಯಿಸುವುದಕ್ಕೆ ಸಾಧ್ಯವಾಗಿಲ್ಲ. ಅದೇ ರೀತಿ ಇನ್ನೊಂದು ಕಾರಣ ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ಅನೇಕ ಗ್ರಾಮೀಣ ಪ್ರದೇಶಗಳ ಸೇರ್ಪಡೆಯಾಗಿದೆ. ಗ್ರಾಮೀಣ ಪ್ರದೇಶಗಳ ಸೇರ್ಪಡೆಯಾಗಿದ್ದರೂ ಕೂಡ ಅಲ್ಲಿ ನಗರಪಾಲಿಕೆಯಲ್ಲಿರುವಂತಹ ಸಿಬ್ಬಂದಿಗಳೂ ಕೂಡ ಅಲ್ಲಿ ಇಲ್ಲ. ಬಹುಶಃ ಬೇರೆ ಮಹಾ ನಗರಪಾಲಿಕೆಗಳನ್ನು ಕಂಪೇರ್ ಮಾಡಿದಾಗ ಆದಾಯದ ಶೇಕಡ 60 ಪ್ರತಿಶತ ವೆಚ್ಚದಲ್ಲಿ ಸಿಬ್ಬಂದಿಗಳನ್ನು ಅಲ್ಲಿ ನೇಮಕ ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ 28 ಪರ್ಸೆಂಟ್ ಮಾತ್ರ ಸಿಬ್ಬಂದಿ ವೆಚ್ಚವಾಗಿದೆ. ಆದರೂ ಕೂಡ ನಮ್ಮಲ್ಲಿ ಬೇಕಾದಂತಹ ಸಿಬ್ಬಂದಿ, ಪೌರ ಕಾರ್ಮಿಕರ ನೇಮಕಾತಿ ಇನ್ನೂ ಮಾಡಿಲ್ಲ. ಬಹುಶಃ ಅನೇಕ ಸಾರಿ ಮಹಾನಗರ ಪಾಲಿಕೆಯಲ್ಲಿನ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ ಪ್ರಶ್ನೆಗಳ ಮೂಲಕ ಬೇರೆ ಬೇರೆ ರೀತಿಯಲ್ಲಿ ಗಮನಕ್ಕೆ ಸೆಳೆದರೂ ಕೂಡ ಯಾವುದೇ ರೀತಿಯಲ್ಲಿ ಪ್ರತಿಕ್ರಿಯೆ ಕೊಟ್ಟಿಲ್ಲ. ಅಲ್ಲಿರುವಂತಹ ಕ್ರೀಡಾಂಗಣಕ್ಕೆ ಸಂಬಂಧಪಟ್ಟ ಹಾಗೆ ಹೇಳಿದರು. ಬಹುಶಃ ಅಲ್ಲಿರುವಂತಹ ಕ್ರೀಡಾಂಗಣಗಳಿಗೆ ಸಿಂಥ್‌ಟ್ರಾಕ್ ಕೊಡುತ್ತೇವೆಂದು ಮೂರು ವರ್ಷಗಳಿಂದ ಕೊಟ್ಟ ಆಶ್ವಾಸನೆ ಕೂಡ ಅನುಷ್ಠಾನಕ್ಕೆ ಬಂದಿಲ್ಲ. 40 ಲಕ್ಷ ರೂಪಾಯಿ ವೆಚ್ಚದಲ್ಲಿ ಇಡೀ ಕ್ರೀಡಾಂಗಣ ದುರಸ್ತಿ ಮಾಡಬೇಕೆಂದು ಹೇಳಿ ಯಾವ ರೀತಿ ಎಸ್ಟಿಮೇಟ್ ಆಗಿ ಕೆಲವು ವರ್ಷಗಳಾದರೂ ಕೂಡ ಅದನ್ನು ಕೊಟ್ಟಿಲ್ಲ. ಸಬ್ ಜೈಲ್‌ಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಅಲ್ಲಿರುವಂತಹ ಸಬ್ ಜೈಲ್ ಎಸ್ಕೇಪ್ ಆಗುವಂಥ ಒಂದು ಜೈಲ್ ಆಗಿ ಬಿಟ್ಟಿದೆ. ಅಲ್ಲಿಂದ ಅನೇಕ ಖೈದಿಗಳು ಪಲಾಯನ ಮಾಡುತ್ತಿದ್ದಾರೆ. ಒಂದು ಬೆರಳಿನ ಉಗುರಿನಿಂದ ಅಲ್ಲಿರುವಂತಹ ಗೋಡೆಯ ಗಾರೆಯ ಸಿಮೆಂಟನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಅಷ್ಟು ದುರ್ಬಲ ಸ್ಥಿತಿಯಲ್ಲಿ ಆ ಕಟ್ಟಡ ಇದೆ. ಅದನ್ನು ಸುಸ್ಥಿತಿಯಲ್ಲಿ ತಂದು, ಒಳ್ಳೆಯ ರೀತಿಯಲ್ಲಿ ಕನ್‌ಸ್ಟ್ರಕ್ಷನ್ ಮಾಡಬೇಕು, ಅದರ ದುರಸ್ತಿಗೆ ಹಣ ಬಿಡುಗಡೆ ಮಾಡಿ ಎಂದು ಹೇಳಿದರೆ, ಪ್ರತಿ ಸಾರಿ ನಮ್ಮ ಸಚಿವರು ಅಲ್ಲಿ ಬಂದು ಆಶ್ವಾಸನೆ ಕೊಡುತ್ತಾ ಹೋಗುತ್ತಿದ್ದಾರೆ. ಯಾವ ರೀತಿಯಲ್ಲೂ ಅದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮತ್ತು ವಿಶೇಷವಾಗಿ ಮಂಗಳೂರು ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಐಎಸ್‌ಐ ಚಟುವಟಿಕೆಗಳು ಗೂಂಡಾಗಳುಬೇರೆ ಬೇರೆ ರೀತಿಯಲ್ಲಿ ಬಾಂಬೆಯಲ್ಲಿರುವಂತಹ ಅಂಡರ್ ಗ್ರೌಂಡ್ ಚಟುವಟಿಕೆ ಇರಬಹುದು, ಅದು ನಿರಂತರವಾಗಿ ಅಲ್ಲಿ ನಡೆದರೂ ಕೂಡ ಗೃಹ ಮಂತ್ರಿಗಳು ಮಂಗಳೂರು ಕ್ಷೇತ್ರಕ್ಕೆ ಬಂದಾಗ ಕರಾವಳಿಯಲ್ಲಿರುವಂತಹ ಗಸ್ತು ಪಡೆಯನ್ನು ಬಲಪಡಿಸಬೇಕೆಂದು ಹೇಳಿ ಅದರ ಬಗ್ಗೆ ಏನೋ ಕಾರ್ಯಾಚರಣೆ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟುಕೊಂಡು ಹೋಗಿದ್ದಾರೆ. ಸನ್ಮಾನ್ಯ ಸಚಿವರಿಗೂ ಕೂಡ ನಾನು ಅನೇಕ ಸಾರಿ ಲಿಖಿತ ಪ್ರಶ್ನೆಗಳನ್ನು ಕೇಳಿದ್ದೇನೆ. ಐದು ವರ್ಷಗಳಲ್ಲಿ ಏನು ಕರಾವಳಿಯಲ್ಲಿ ರಕ್ಷಣಾ ಪಡೆ ಮಾಡುತ್ತಿದ್ದೀರಿ, ಅದಕ್ಕೆ ವೆಚ್ಚ ಮಾಡಿದ ಹಣ ಎಷ್ಟು, ಎಷ್ಟು ಲಕ್ಷ ರೂಪಾಯಿಗಳಲ್ಲಿ ತಾವು

ಬೋಟುಗಳನ್ನು ಖರೀದಿ ಮಾಡಿದ್ದೀರಿ.

11.30 ಎಎಂ

ಎಷ್ಟು ದೋಣಿಗಳು ಕೆಲಸ ಮಾಡುತ್ತಿವೆ, ಎಷ್ಟು ದೋಣಿಗಳು ಉಳಿದಿವೆ ಎಂಬ ಬಗ್ಗೆ ಅನೇಕ ಬಾರಿ ಪ್ರಶ್ನೆಗಳನ್ನು ಕೇಳಿದರೂ ಇದುವರೆಗೂ ಅದರ ಬಗ್ಗೆ ಉತ್ತರವನ್ನು ಕೊಟ್ಟಿಲ್ಲ. ಇದರ ರಹಸ್ಯವೇನು ಎಂಬುದನ್ನು ಕೇಳಬಯಸುತ್ತೇನೆ. ಐ.ಎಸ್.ಐ. ಚಟುವಟಿಕೆಗಳು ಅನೇಕ ರೀತಿಯಲ್ಲಿ ಅಲ್ಲಿ ನಡೆದಿರುವುದರಿಂದ ಮಂಗಳೂರು ಅಂಥ ಕ್ಷೇತ್ರಕ್ಕೆ ಒಬ್ಬರು ಪೋಲೀಸ್ ಕಮೀಷನರ್ ಇರುವಂಥ ಕಛೇರಿಯನ್ನು ಮತ್ತು ಎಲ್ಲಾ ರೀತಿಯಾದ ಐ.ಪಿ.ಎಸ್. ಅಧಿಕಾರಿಗಳನ್ನು ನೇಮಕ ಮಾಡುವಂಥ ಅವಶ್ಯಕತೆ ಇದ್ದರೂ ಸರ್ಕಾರ ಅದನ್ನು ಮಾಡಿಲ್ಲವೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅರ್ಥ ನೀತಿಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಯಾವುದೇ ಸರ್ಕಾರ ಬಜೆಟ್‌ನ ಸಂದರ್ಭದಲ್ಲಿ ತೆರಿಗೆಯನ್ನು ಹಾಕುವ ವಿಧಿವಿಧಾನಗಳಿವೆ. ಆದರೆ ಕಳೆದ ನಾಲ್ಕೂವರೆ ವರ್ಷಗಳಿಂದ ರೆಟ್ರಾಸ್ಪೆಕ್ಟೀವ್ ಆಗಿ ತೆರಿಗೆಯನ್ನು ಕೊಡಬೇಕು ಎಂಬ ಆದೇಶವನ್ನು ಹೊರಡಿಸಿದ್ದು ಈ ಜನತಾದಳದ ಸರ್ಕಾರ ಮಾತ್ರ. ಈ ಕಾನೂನಿಂದ ಸಾಕಷ್ಟು ವ್ಯಾಪಾರಿಗಳಿಗೆ ಮತ್ತು ಉದ್ಯಮಿಗಳಿಗೆ ತೊಂದರೆಯಾಗಿದೆ. ಇವತ್ತು ಅವರುಗಳು ಸಂಗ್ರಹ ಮಾಡಿರುವಂಥ ಹಣದಲ್ಲಿ ಲಕ್ಷಗಟ್ಟಲೆ ಹಣವನ್ನು ಕೊಡಬೇಕಾದಂಥ ಸ್ಥಿತಿ ಬಂದಿದೆ. ಅದಕ್ಕೆ ತಡೆಯಾಜ್ಞೆ ತರುವ ಮಟ್ಟಕ್ಕೆ ಉದ್ದಿಮೆದಾರರು ಕೋರ್ಟ್‌ಗೆ ಹೋಗಿದ್ದಾರೆ. ಸರ್ಕಾರ ಇದರ ಬಗ್ಗೆ ಏಕೆ ಯೋಚನೆ ಮಾಡುತ್ತಿಲ್ಲವೆಂಬುದು ಗೊತ್ತಾಗುತ್ತಿಲ್ಲ. ಇನ್ನು ಎಂ.ಎಸ್.ಐ.ಎಲ್.ಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಬಡವರಿಗೆ ಒಂದು ಶ್ರೀಮಂತರಿಗೆ ಒಂದು ಕಾನೂನು ಇದೆಯೇ ಎಂದು ಸರ್ಕಾರವನ್ನು ಪ್ರಶ್ನೆ ಮಾಡುತ್ತಿದ್ದೇನೆ. ವಿಶೇಷವಾಗಿ ಖೋಡೇಸ್ ಎಂಬ ಸಂಸ್ಥೆ 1989 ರಿಂದ 95ರವರೆಗೆ ಸುಮಾರು 13 ಕೋಟಿ ರೂಪಯಿಗಳನ್ನು ಎಂ.ಎಸ್.ಐ.ಎಲ್.ಗೆ ಕೊಡಬೇಕಾಗಿತ್ತು. ಈ ಹಣದ ವಸೂಲಾತಿಗೆ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ವಸೂಲಿ ಮಾಡುತ್ತಾರೆಂದು ಅವರು ಕೋರ್ಟ್‌ಗೆ ಹೋದಾಗ ಸರ್ಕಾರದವರು ಈ ಹಣವನ್ನು ವಸೂಲಿ ಮಾಡಲೇ ಬೇಕೆಂಯಿದಾಗಿ ತೀರ್ಮಾನ ಕೊಟ್ಟಮೇಲೆ ಬಹಳ ಆಶ್ಚರ್ಯ ಎಂಬುವಂತೆ 13 ಕೋಟಿಯನ್ನು ಸಂಗ್ರಹ ಮಾಡವುದರ ಬದಲಾಗಿ ಕೇವಲ 8 ಕೋಟಿಗೆ ಸೆಟಲ್‌ಮೆಂಟ್ ಆಗಿದೆ. ಇದರ ಜೊತೆಗೆ 4 ಕೋಟಿ ರೂ.ಗಳ ಅನ್‌ಸೋಲ್ಡ್ ಗೂಡ್ಸ್‌ನ್ನು ಅಲ್ಲಿ ತಂದು ಡಂಪ್ ಮಾಡಿದ್ದಾರೆ. ಎಂ.ಎಸ್.ಐ.ಎಲ್.ನ ಎಂಡಿ.ಯವರ ಕ್ಯಾಬಿನ್‌ನಲ್ಲಿ ಕೋಡೇಸ್‌ನ ಪ್ರತಿನಿಧಿ ಯಾವ ರೀತಿ ಸರಾಗವಾಗಿ ಅನುಮತಿಯನ್ನು ಪಡೆಯುತ್ತಾರೆ, ಬಡಜನರು, ಜನಸಾಮಾನ್ಯರು ಎಂ.ಡಿ.ಯವರ ಸಂದರ್ಶನಕ್ಕಾಗಿ ಎಷ್ಟು ಕಷ್ಟ ಪಡಬೇಕಾಗಿದೆ ಎಂಬ ಬಗ್ಗೆ ಪ್ರಸ್ತಾಪವಾಗಿದೆ. ಎಂ.ಎಸ್.ಐ.ಎಲ್.ಗೆ ಸಂಬಂಧಪಟ್ಟಂತೆ 23.7.1996ರಂದು ನಂದಿ ಬಂಪರ್ ಡ್ರಾ ಆಯಿತು. ನಂಬರ್ 824, ಲಾಟರಿ ಟಿಕೇಟ್‌ನ

ನಂಬರ್ 199475, ಅದು ಅನ್ ಸೋಲ್ಡ್ ಟಿಕೇಟ್ ಆಗಿತ್ತು. ಆ ರೀತಿ ಇದ್ದರೂ ಸಹ ಆ ನಂಬರ್‌ನ ಟಿಕೇಟ್‌ಗೆ ಬಹುಮಾನ ಸಿಕ್ಕಿರುವುದು ದಾಖಲಾಗಿದೆ. ಇದರ ಬಗ್ಗೆ ತನಿಖೆ ಮಾಡಬೇಕೆಂದು ಹೇಳಬಯಸುತ್ತೇನೆ. ಅಲ್ಲಿನ ಎಂ.ಡಿ.ಯವರ ಕ್ಯಾಬಿನ್ ಮಾಡಲು 6 ಲಕ್ಷ ರೂಪಾಯಿಗಳ ಅಂದಾಜು ಆಗಿತ್ತು, ಆದರೆ 15 ಲಕ್ಷಕಿಂತ ಹೆಚ್ಚು ವೆಚ್ಚ ಮಾಡಿ ಕ್ಯಾಬಿನ್ ಮಾಡಿದ್ದಾರೆ. 15 ಲಕ್ಷ ಎಲ್ಲಿಂದ ಬಂತು ಎಂಬ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಬಿ.ಎಸ್.ಎಸ್.ಸಿ. ಕಟ್ಟಡವನ್ನು ಎರಡು ಕೋಟಿಗಿಂತ ಹೆಚ್ಚು ಮೊತ್ತದಲ್ಲಿ ಕಟ್ಟುವ ಅವಶ್ಯಕತೆ ಏನಿತ್ತು? ಕ್ಯಾಂಟೀನ್‌ನನ್ನು 6 ಲಕ್ಷ ವೆಚ್ಚದಲ್ಲಿ ಕಟ್ಟುವ ಅವಶ್ಯಕತೆ ಏನಿತ್ತು? ಪೇಪರ್ ವಿಭಾಗವನ್ನು 3 ಲಕ್ಷ ವೆಚ್ಚದಲ್ಲಿ ಕಟ್ಟುವ ಅವಶ್ಯಕತೆ ಏನಿತ್ತು ಎಂಬ ಬಗ್ಗೆ ಪ್ರಶ್ನೆ ಮಾಡಬಯಸುತ್ತೇನೆ. ಇತ್ತೀಚೆಗೆ ಎಂ.ಡಿ.ಯವರ ಡಿಪಾರ್ಟ್‌ಮೆಂಟ್‌ನಿಂದ ವಿ.ಸಿ.ಆರ್. ಕಳ್ಳತನವಾಗಿದೆ. ಅನೇಕ ಸೀರೆಗಳು ಕಳ್ಳತನವಾಗಿದೆ. ಇದರ ಬಗ್ಗೆ ತನಿಖೆ ಮಾಡಲು ಸಂಬಂಧಪಟ್ಟ ಇಲಾಖೆಯಿಂದ ಪೋಲೀಸ್ ಠಾಣೆಗೆ ದೂರನ್ನು ಕೊಡಲಾಯಿತು. ಅನಂತರ ತನಿಖೆ ಯಾವಾಗ ಆರಂಭವಾಯಿತು ಆಗ ಪೋಲೀಸ್ ಇಲಾಖೆಯವರು ಎಂ.ಡಿ.ಯವರ ಕಾರನ್ನೂ ಸಹ ಕಳುಹಿಸಿಕೊಡಿ, ತನಿಖೆ ಮಾಡಬೇಕು ಎಂದಾಗ ಆ ವಿಚಾರ ಅಲ್ಲಿಗೇ ನಿಂತುಹೋಯಿತು. ಇದರ ರಹಸ್ಯವೇನು ಎಂಬುದನ್ನು ಕೇಳಬಯಸುತ್ತೇನೆ. ಮೀನುಗಾರರಿಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಕಳೆದ ಹಲವಾರು ವರ್ಷಗಳಿಂದ ಮೀನುಗಾರರು ಬಳಸುವ ಡೀಸೆಲ್ ಬೆಲೆಯ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಮಾಡಬೇಕೆಂದು ವಿನಂತಿ ಮಾಡಿಕೊಂಡರೂ, ಮಾನ್ಯ ಸಚಿವರು ಆಶ್ವಾಸನೆ ಕೊಟ್ಟಿದ್ದರೂ, ಆದರೆ ಅದನ್ನು ಇನ್ನೂ ಅನುಷ್ಠಾನಕ್ಕೆ ತಂದಿಲ್ಲ. ಎರಡನೆಯದಾಗಿ, ನಾಡ ದೋಣಿ ಉಪಯೋಗಿಸುವವರಿಗೆ 150 ಲೀಟರ್ ಸೀಮೆ ಎಣ್ಣೆ ಕೊಡುತ್ತಿರುವುದನ್ನು 400 ಲೀಟರ್‌ಗೆ ಹೆಚ್ಚು ಮಾಡಬೇಕೆಂದು ವಿನಂತಿ ಮಾಡಿದರೂ ಅದು ಕಾರ್ಯ ರೂಪಕ್ಕೆ ಬಂದಿಲ್ಲ. ಇಡೀ ರಾಜ್ಯಕ್ಕೆ ಮೀನುಗಾರರಿಗೆ ವಸತಿಗೃಹವನ್ನು ಮಂಜೂರು ಮಾಡಿದ್ದರೂ ಮಂಗಳೂರು ಕ್ಷೇತ್ರಕ್ಕೆ ಕೊಟ್ಟಿಲ್ಲ. ಬಾರ್ಜ್‌ಮೌಂಟ್ ಜನನಿಬಿಡ ಪ್ರದೇಶಕ್ಕೆ ಈ ಬಾರ್ಜ್‌ಮೌಂಟ್ ಮೀನುಗಾರರಿಗೆ ಬಹಳ ತೊಂದರೆಯಾಗುತ್ತಿದೆ. ಮೀನುಗಾರರಿರುವ ವಸತಿ ಪ್ರದೇಶಕ್ಕೆ ಬಾರ್ಜ್‌ಮೌಂಟ್ ಬರಲು ಅವಕಾಶ ಕೊಡಬಾರದು. ಸರ್ಕಾರ ಜನಪರವಾಗಿರುವಂಥ ನೀತಿಯನ್ನು ಅನುಷ್ಠಾನ ಮಾಡದಿರುವುದರಿಂದ ಜನರು ತಮ್ಮ ಆಡಳಿತದ ಬಗ್ಗೆ ವಿರೋಧವನ್ನು ವ್ಯಕ್ತ ಮಾಡಿರುವುದರಿಂದ, ತಮ್ಮ ಸರ್ಕಾರದ ಮೇಲೆ ಭ್ರಷ್ಟಾಚಾರದ ಆರೋಪಗಳು ಇರುವುದರಿಂದ ನಾನು ಅವಿಶ್ವಾಸ ನಿರ್ಣಯದ ಪರವಾಗಿ ಬೆಂಬಲವನ್ನು ವ್ಯಕ್ತಮಾಡುತ್ತೇನೆ. ಅಕಸ್ಮಾತ್ ಸರ್ಕಾರ ಯಾವುದೋ ಕಾರಣದಿಂದ ಉಳಿದುಕೊಂಡರೆ ತಾವು ಮಾಡಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಇನ್ನಾದರೂ ಒಳ್ಳೆಯ

+ ಶ್ರೀ ಹೆಚ್.ಡಿ.ಬಸವರಾಜ್ (ವೀರಾಜಪೇಟೆ): ಮಾನ್ಯ ಅಧ್ಯಕ್ಷರೆ, ಈ ಸದನವು ಶ್ರೀ ಜೆ.ಹೆಚ್.ಪಟೇಲ್‌ರವರ ನೇತೃತ್ವದ ಸಚಿವಸಂಪುಟದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುತ್ತದೆ ಎನ್ನುವಂಥ ನಮ್ಮ ನಾಯಕರ ಮಾತನ್ನು ಬೆಂಬಲಿಸುತ್ತ ನನಗೆ ಮಾತನಾಡಲು ಅವಕಾಶ ನೀಡಿದ ತಮಗೂ ವಂದಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ಬೆಳಿಗ್ಗೆ ನಾವು ತಮ್ಮ ಕಛೇರಿಗೆ ಬಂದಿದ್ದಂಥ ಸಮಯದಲ್ಲಿ ಒಬ್ಬರಿಗೆ 25 ನಿಮಿಷವನ್ನು ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅವಿಶ್ವಾಸ ನಿರ್ಣಯವನ್ನು ತಂದಿರತಕ್ಕಂಥ ಸಂದರ್ಭವನ್ನು ನಾವು ನೋಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಹಲವಾರು ಹಿರಿಯ ಮುಖಂಡರುಗಳು ಮಾತನ್ನು ತಮ್ಮದೇ ಆದಂಥ ಧಾಟಿಯಲ್ಲಿ ಮಾತುಗಳನ್ನು ಆಡಿ, ಈ ಸರ್ಕಾರ ಜನಹಿತವನ್ನು ಮಾಡುವಂಥ ಕೆಲಸದಲ್ಲಿ ಹೇಗೆ ವಿಫಲವಾಗಿದೆ ಎಂಬುದನ್ನು ಮನದಟ್ಟು ಮಾಡುವುದರಲ್ಲಿ ಬಹಳಷ್ಟು ಯಶಸ್ವಿಯಾಗಿದ್ದಾರೆ. ಜನತಾದಳದ ಸದಸ್ಯರುಗಳಲ್ಲಿ ಮನವಿಯನ್ನೂ ಸಹ ಮಾಡಿಕೊಳ್ಳುತ್ತೇನೆ. ತಮ್ಮಲ್ಲಿರುವ ಆಂತರಿಕ ಕಲಹವನ್ನು ಬದಿಗಿಡುವಂಥ ಕೆಲಸವನ್ನು ತಾವುಗಳು ಮಾಡಿದ್ದರೆ ಬಹುಶಃ ಈ ಸದನದಲ್ಲಿ ಅವಿಶ್ವಾಸ ನಿರ್ಣಯದಲ್ಲಿ ಗೆದ್ದರೂ ಮುಂದಿನ ಚುನಾವಣೆಯಲ್ಲಿ ತಾವು ನಿಲ್ಲಲು ಸಾಧ್ಯವಿಲ್ಲ ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ತಮ್ಮಗಳ ಆಂತರಿಕ ಕಲಹಗಳಿಂದಾಗಿ ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ಯಾವುದೇ ಕೆಲಸಕಾರ್ಯಗಳಾಗಿಲ್ಲ. ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯನ್ನು ಮಾಡಿದ್ದೇವೆ. ತಮ್ಮ ಸರ್ಕಾರ ಕೆಲಸವನ್ನು ಮಾಡುತ್ತಿಲ್ಲ ಎಂಬುದನ್ನು ಪ್ರತಿಪಾದನೆ ಮಾಡಲು ಒಂದು ವಿಚಾರವನ್ನು ಹೇಳ ಬಯಸುತ್ತೇನೆ. ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ವಿತರಣೆ ಮಾಡುವ ಸಂಬಂಧವಾಗಿ ಬಂದಿರುವ ಅರ್ಜಿಗಳ ಸಂಖ್ಯೆ 13 ಲಕ್ಷದ 99 ಸಾವಿರದ 42. 30.11-1998ರ ಒಳಗಾಗಿ ಈ ಅರ್ಜಿದಾರರಿಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡುವುದಾಗಿ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖಾ ಸಚಿವರಾದ ಬಸವಣ್ಣಪ್ಪನವರು ಹೇಳಿದ್ದಾರೆ. ಆದರೆ ನಿಜವಾಗಿಯೂ ಇದು ತಮ್ಮಿಂದ ಸಾಧ್ಯವಾಗುತ್ತದೆಯೇ? ಇದಕ್ಕಾಗಿ ಯಾವ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇದರ ಬಗ್ಗೆ ತಮಗೆ ಹೇಳಲು ಸಾಧ್ಯವಾಗುತ್ತದೆಯೇ? ಜನರಿಗೆ ವಂಚನೆ ಮಾಡುವ ಹೇಳಿಕೆಗಳನ್ನು ತಾವು ಏಕೆ ಕೊಡಬೇಕು? ಚುಕ್ಕೆ ಗುರುತಿನ ಪ್ರಶ್ನೆಯೊಂದಕ್ಕೆ ಈ ರೀತಿ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ಇನ್ನು ಅರ್ಹ ಕುಟುಂಬಗಳಿಗೆ ಹಸಿರು ಕಾರ್ಡು ಸಿಕ್ಕಿಲ್ಲವೆಂದು ಅನೇಕ ಜನ ಶಾಸಕರುಗಳು ಈ ಸದನದಲ್ಲಿ ಗಮನಸೆಳೆದಿದ್ದರಿಂದ, ಅದು ಸರ್ಕಾರದ ಗಮನಕ್ಕೆ ಬಂದು, ಅರ್ಹ ಕುಟುಂಬಗಳು 6 ಲಕ್ಷ ಇರಬಹುದೆಂದು ಅಂದಾಜು ಮಾಡಿದೆವು. ಆದರೆ ಅದರ ಬಗ್ಗೆ ಸರ್ವೆ ಮಾಡಿಸಿದಾಗ ಸುಮಾರು 13 ಲಕ್ಷ ಅರ್ಜಿಗಳು ಬಂದದ್ದು

ನಿಜ. ಅದರ ಬಗ್ಗೆ ಪರಿಶೀಲನೆ ಮಾಡಿಸಿದಾಗ ಸುಮಾರು 7 ಲಕ್ಷ ಕುಟುಂಬಗಳು ಹಸಿರು ಕಾರ್ಡು ಪಡೆಯಲು ಅರ್ಹವೆಂದು ಗುರುತಿಸಿ ಅಕ್ಟೋಬರ್ 2 ರಿಂದ ಹಸಿರು ಕಾರ್ಡುಗಳನ್ನು ಕೊಟ್ಟು ಅವರಿಗೆ ಬೇಕಾದ ಆಹಾರ ಧಾನ್ಯಗಳನ್ನು ಕೊಡುವುದಕ್ಕೆ ಈಗಾಗಲೆ ವ್ಯವಸ್ಥೆ ಮಾಡಿದ್ದೇವೆ. ಇದರಲ್ಲಿ ಸ್ವಲ್ಪ ಲೋಪದೋಷಗಳು ಇರಬಹುದು. ಕೆಲವು ಬಡ ಕುಟುಂಬದವರು ಸಕಾಲದಲ್ಲಿ ಅರ್ಜಿಯನ್ನು ಹಾಕಿಲ್ಲ. ಏಕೆಂದರೆ ಕೂಲಿ ಮಾಡುವಂಥ ಜನರ ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ಹೋಗಿರುತ್ತಾರೆ. ನನ್ನ ಕ್ಷೇತ್ರದಲ್ಲೇ ಇದು ಆಗಿದೆ. ಇಂಥ ದೂರುಗಳು ಬಹಳ ಇದೆ, ಇದರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಹೆಚ್.ಡಿ.ಬಸವರಾಜ್: ಮಂತ್ರಿಗಳು ಹೇಳಿಕೆಯನ್ನೇನೋ ನೀಡಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಅವರ ಕಾರ್ಯಚಟುವಟಿಕೆಗಳನ್ನು ನಾನು ನೋಡಿದ್ದೇನೆ. ಅನೇಕ ಸಂದರ್ಭಗಳಲ್ಲಿ ನಾವೂ ಅವರಿಗೆ ಯಾವ ರೀತಿಯಲ್ಲಿ ಮಾರ್ಗದರ್ಶನ ಮಾಡಿದ್ದೇವೆ ಎಂಬುದು ನನಗೆ ನೆನಪು ಇದೆ. ಇದನ್ನು ಖಂಡಿತವಾಗಿ ಮಾಡಲು ಸಾಧ್ಯವಾಗುವುದಿಲ್ಲವೆಂಬುದು ತಮ್ಮ ಕಾರ್ಯಚಟುವಟಿಕೆಗಳಿಂದ ನಿರೂಪಣೆಯಾಗಿದೆ. ಇದರಿಂದ ಸರ್ಕಾರದ ಮೇಲೆ ವಿಶ್ವಾಸವಿಲ್ಲವೆಂಬುದು ಜನರಿಗೆ ಮನದಟ್ಟಾಗಿದೆ. ತಾವು ಎಷ್ಟು ಬೇಗ ಸರ್ಕಾರವನ್ನು ವಿಸರ್ಜನೆ ಮಾಡಿ ಹೋಗುತ್ತೀರೋ ಅಷ್ಟು ಬೇಗ ಜನರಿಗೆ ಹಿತವನ್ನು ಮಾಡುವಂಥ ಸರ್ಕಾರ ಬರಲು ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, 1995ರಿಂದ 1998ರವರೆಗೆ ನಮ್ಮ ಸಚಿವರುಗಳು ಮತ್ತು ಅಧಿಕಾರಿಗಳು ಸುಮಾರು 1 ಕೋಟಿ 46 ಲಕ್ಷ 98 ಸಾವಿರ ರೂ.ಗಳ ಅಂದಾಜು ವೆಚ್ಚದಲ್ಲಿ ವಿದೇಶ ಪ್ರವಾಸವನ್ನು ಕೈಗೊಂಡಿದ್ದಾರೆ. ಅವರು ಪ್ರವಾಸ ಕೈಗೊಳ್ಳಲಿ, ಆದರೆ ಯಾವ ಒಂದು ಉದ್ದೇಶಕ್ಕೋಸ್ಕರ ಸಾರ್ವಜನಿಕರ ಈ ಹಣವನ್ನು ನೀವು ಖರ್ಚು ಮಾಡಿದಿರಿ, ತಾವು ವಿದೇಶಕ್ಕೆ ಹೋಗಿ ಬಂದಿರಿ, ವಿದೇಶದಿಂದ ಹೋಗಿ ಬಂದ ನಂತರ ಈ ನಮ್ಮ ರಾಜ್ಯಕ್ಕೆ ಯಾವ ಕಾರ್ಯಕ್ರಮಗಳನ್ನು ರೂಪಿಸಿ ಆ ಕಾರ್ಯಕ್ರಮಗಳು ಜನಕ್ಕೆ ಹಿತವಾಗುವಂತಹ ಕೆಲಸಗಳನ್ನು ಮಾಡಿದ್ದೀರಾ ಎಂದು ತಾವು ಯಾರಾದರೂ ತಿಳಿಸಲಿಕ್ಕೆ ಯಾವತ್ತಾದರೂ ಪ್ರಯತ್ನ ಪಟ್ಟಿದ್ದಾರಾ? ಕೇವಲ ತಮಗೆ ಬಂದಂತಹ ರೀತಿಯಲ್ಲಿ, ತಾವು ವಿಸಿಟ್ ಮಾಡಬೇಕಾದಂತಹ ದೇಶ ವಿದೇಶಗಳಿಗೆ ಹೋಗುವಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಂಡು, ಹೋಗಿ ಬಂದರೇ ವಿನಃ ಬಂದ ಮೇಲೆ ಒಂದು ಸಣ್ಣ ಟಿಪ್ಪಣಿಯನ್ನು, ಸುಮಾರು 224 ಜನ ಇರುವಂತಹ ಈ ಸದಸ್ಯರಿಗೆ, ಇಂತಹ ದೇಶಗಳಿಗೆ ನಾವು ವಿಸಿಟ್ ಮಾಡಿದ್ದೇವೆ, ಇಂತಹ ದೇಶಗಳಲ್ಲಿರುವಂತಹ ಕೆಲವು ಕಾರ್ಯಕ್ರಮಗಳನ್ನು ನಮ್ಮ ರಾಜ್ಯದಲ್ಲಿಯೂ ಕೂಡ ಅನುಷ್ಠಾನ ಮಾಡಬೇಕು ಎನ್ನುವಂತಹದ್ದು ನಮ್ಮ ಅಭಿಪ್ರಾಯವಾಗಿದೆ, ಈ ಅಭಿಪ್ರಾಯದ ಸಲುವಾಗಿ ನಾವು ಪ್ರವಾಸ ಕೈಗೊಂಡಿದ್ದೇವೆ ಎಂದು ಹೇಳುವಂತಹ

ಕೆಲಸವನ್ನಾದರೂ ಮಾಡಿದ್ದರೆ ನಾವು ತೃಪ್ತಿ ಪಡಬಹುದಾಗಿತ್ತು. ನನಗನಿಸುತ್ತದೆ ಮತ್ತು ಜನರು ಹೇಳುವಂತಹ ಧಾಟಿಯನ್ನು ನೋಡಿದರೆ ಅನಿಸುತ್ತದೆ, ಈ ಸರ್ಕಾರದಲ್ಲಿ ಇರುವಂತಹ ಮಂತ್ರಿಗಳು ಕೇವಲ ತಮ್ಮ ಮೋಜಿಗೋಸ್ಕರ, ತಮ್ಮದೇ ಆದಂತಹ ವ್ಯವಸ್ಥೆಯನ್ನು ಬೇರೆ ದೇಶದಲ್ಲಿ ಸರ್ಕಾರದ ಖರ್ಚಿನಲ್ಲಿ ನೋಡಿಕೊಂಡು ಬರಬೇಕು ಎನ್ನುವಂತಹ ದೃಷ್ಟಿಯಲ್ಲಿ ಅವರು ವಿದೇಶ ಪ್ರವಾಸವನ್ನು ಮಾಡಿದ್ದಾರೆ. ಇದರಿಂದ ಸಾರ್ವಜನಿಕರ ಹಣವಾದಂತಹ 1 ಕೋಟಿ 46 ಲಕ್ಷ 98 ಸಾವಿರ ರೂ.ಗಳು ಪೋಲಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇಂತಹ ಒಂದು ವ್ಯವಸ್ಥೆಯನ್ನು ಮಾಡಿದಂತಹ ಈ ಮಂತ್ರಿಗಳು ಇರಬೇಕೇ ಬೇಡವೇ ಎನ್ನುವುದನ್ನು ಇವತ್ತು ತೀರ್ಮಾನ ಮಾಡುವಂತಹ ಒಂದು ಪ್ರಸಂಗ ಬಂದಿದೆ. ಬಹುಶಃ ಸದನದಲ್ಲಿರುವಂತಹ ಪ್ರತಿಯೊಬ್ಬರೂ ಕೂಡ ತಮ್ಮ ಆತ್ಮಸಾಕ್ಷಿಗನುಗುಣವಾಗಿ ಏನಾದರೂ ಮತವನ್ನು ನೀಡಿದರೆ ಈ ಸರ್ಕಾರ ಹೋಗಿ ಮುಂದೆ ಬರುವಂತಹ ದಿನಗಳಲ್ಲಿ ಜನಕ್ಕೆ ಒಳ್ಳೆಯ ಹಿತವನ್ನು ಮಾಡುವಂತಹ ಒಂದು ಸರ್ಕಾರ ಬರಬಹುದೆಂದು ನಾನು ಭಾವಿಸಿದ್ದೇನೆ. ದಿನಾಂಕ 30.9.98ರಂದು ಇದ್ದಂತೆ 32 ಗುತ್ತಿಗೆದಾರರಿಂದ ಅಬ್ಕಾರಿ ಶುಲ್ಕ 290.26 ಕೋಟಿ ರೂ.ಗಳ ಹಣ ಬರಬೇಕಾಗಿದೆ. ಇದನ್ನು ವಸೂಲು ಮಾಡುವುದಕ್ಕೆ ಸರ್ಕಾರದ ಕೈಯ್ಯಲ್ಲಿ ಸಾಧ್ಯವಾಗುತ್ತಿಲ್ಲವೇ? ಈ ವಸೂಲಾತಿಯನ್ನು ಮಾಡುವಂತಹ ಒಂದು ಪ್ರಕ್ರಿಯೆಗೆ ಏನಾದರೂ ಇವರು ಚುರುಕು ಮುಟ್ಟಿಸಿದ್ದಾರೆಯೇ? ಇಷ್ಟು ಅಗಾಧ ಪ್ರಮಾಣದ ಹಣವನ್ನು ಗುತ್ತಿಗೆದಾರರಿಂದ ಬಾಕಿ ಉಳಿಸುವಂತಹ ಒಂದು ಪ್ರಯತ್ನಕ್ಕೆ ಇವರು ಏಕೆ ಬೆಂಬಲಕೊಟ್ಟಿದ್ದಾರೆ? ನನಗೆ ಸಂಶಯ ಬರುತ್ತದೆ, ಇವರು ಇದರಲ್ಲಿ ಶಾಮೀಲಾಗಿದ್ದಾರೆಯೇ? ಇವತ್ತು ಜನರೂ ಕೂಡ ಮಾತನಾಡಿಕೊಳ್ಳುತ್ತಿದ್ದಾರೆ, ಇವರು ಗುತ್ತಿಗೆದಾರರಿಂದ 29.26 ಕೋಟಿ ರೂ.ಗಳ ಹಣವನ್ನು ವಸೂಲು ಮಾಡಲಿಲ್ಲವೆಂದರೆ ಇವರಿಗೆ ಅದರಲ್ಲಿ ಏನೋ ಒಂದು ರೀತಿಯ ಹಣ ಸಂದಾಯವಾಗುತ್ತಿರಬೇಕು, ಇವರಿಗೆ ಜನ ಹಿತಕ್ಕಿಂತ ತಮ್ಮ ಹಿತವೇ ಮುಖ್ಯ ಎನ್ನುವಂತಹ ಒಂದು ಭಾವನೆಯಿಂದ ಇವರು ಅದರ ಬಗ್ಗೆ ಮೌನವನ್ನು ತಾಳಿದ್ದಾರೆ, ಇವತ್ತು ವಸೂಲಿ ಮಾಡುವಂತಹ ಕಾರ್ಯಕ್ರಮವನ್ನೂ ಕೂಡ ಚುರುಕು ಮಾಡಲಿಲ್ಲವೆನ್ನುವುದಾದರೆ, ತಾವು ಯಾವ ಉದ್ದೇಶಕ್ಕೋಸ್ಕರ ಸರ್ಕಾರವನ್ನು ಆಳಬೇಕು ಎಂದುಕೊಂಡು ಬಂದಿದ್ದೀರೋ ಜನಹಿತವನ್ನು ಮಾಡಬೇಕು ಎಂದು ಬಂದಿದ್ದೀರೋ ನಮಗೆ ಅರ್ಥವಾಗುತ್ತಿಲ್ಲ. ಇವತ್ತಿನ ಅವಿಶ್ವಾಸ ನಿರ್ಣಯದ ಮೇಲಿನ ಮತದಾನದಲ್ಲಿ ತಾವು ಸೋಲು ಅನುಭವಿಸಿದರೆ, ನಿಜಕ್ಕೂ ಜನಕ್ಕೆ ಒಂದು ಒಳ್ಳೆಯದು ಆಗುವಂತಹ ಸರ್ಕಾರ ಬರುತ್ತದೆ ಎಂದು ನಾನು ಮತ್ತೊಮ್ಮೆ ಹೇಳಲಿಚ್ಛಿಸುತ್ತೇನೆ. ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈ ಒಂದು ಸರ್ಕಾರ ಬಂದಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಲವಾರು ಯೋಜನೆಗಳನ್ನು ಹಾಕುವುದರ ಮೂಲಕ ತಮ್ಮ ಉದ್ಧಾರವನ್ನು ಮಾಡುತ್ತೇವೆ, ನೀವು ನಮ್ಮನ್ನು ಬೆಂಬಲಿಸಬೇಕು ಎನ್ನುವಂತಹ

ಮಾತುಗಳನ್ನು ಹೇಳಿ, ಅವರ ಒಂದು ಆಶೀರ್ವಾದದಿಂದ ಇವತ್ತು ಸರ್ಕಾರವನ್ನು ರಚನೆ ಮಾಡಿದರು. ಇವತ್ತು 1994ರಿಂದ 1998ರವರೆಗೆ ನಾಲ್ಕು ವರ್ಷಗಳು ಇವರು ಅಧಿಕಾರ ಮಾಡಿದ್ದಾರೆ. ಈ ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅವರದೇ ಆದಂತಹ ಹುದ್ದೆಗಳು ಸುಮಾರು 25 ಸಾವಿರ ಇದೆ. ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಂತಹ ಪ್ರಯತ್ನವನ್ನು ಯಾರೂ ಕೂಡ ಮಾಡಲಿಲ್ಲ. ಕಳೆದ ಆಗಸ್ಟ್ ತಿಂಗಳಿನಲ್ಲಿ ಅಂದರೆ ದಿನಾಂಕ 18.8.98ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇಲ್ಲಿರುವಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಮುಖ ಮಂತ್ರಿಗಳು ಮತ್ತು ಶಾಸಕರು ಕುಳಿತುಕೊಂಡು ಚರ್ಚೆಯನ್ನು ಮಾಡಿದರು. ಆ ಚರ್ಚೆಯಲ್ಲಿ ಒಂದು ನಿರ್ಧಾರವನ್ನು ಕೈಗೊಂಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿರುವಂತಹ ಬ್ಯಾಕ್‌ಲಾಗ್ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಬೇಕು ಎಂಬ ನಿರ್ಧಾರ ಆ ಸಭೆಯಲ್ಲಿ ಕೈಗೊಂಡರು. ಆದರೆ ಇದುವರೆವಿಗೂ ಆ ದಿಸೆಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲಿಲ್ಲ. ಅದಕ್ಕೆ ಯಾವುದೇ ಒಂದು ಚಾಲನೆಯನ್ನೂ ಕೂಡ ಸರ್ಕಾರ ನೀಡಲಿಲ್ಲ ಎಂದು ಹೇಳಬಯಸುತ್ತೇನೆ. ತಾವು ಈ ಜನಾಂಗವನ್ನು ಯಾವ ರೀತಿ ಉದ್ಧಾರ ಮಾಡಬೇಕೆಂದು ತಾವು ಬಯಸಿದ್ದೀರೋ ನನಗಂತೂ ಅರ್ಥವಾಗುತ್ತಿಲ್ಲ, ಎನ್ನುವ ಮಾತನ್ನು ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಸರ್ಕಾರದವರು ಈ ಜನಾಂಗದವರಿಗೆ ಮೀಸಲಿಟ್ಟ ಹುದ್ದೆಗಳನ್ನು ತುಂಬುವುದರಲ್ಲಿ ವಿಫಲರಾಗಿದ್ದಾರೆ ಎಂದರೆ ಆ ಜನಾಂಗದವರ ಕಲ್ಯಾಣವನ್ನು ಇವರು ಹೇಗೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. ಇವತ್ತು ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಕಳೆದ ವಾರದಲ್ಲಿ ನಡೆದಂತಹ ಸಚಿವ ಸಂಪುಟದ ಸಭೆಯಲ್ಲಿ ಅರಣ್ಯ ಸಂರಕ್ಷಣೆಗಾಗಿ ಅರಣ್ಯ ಪಾಲಕರನ್ನು, ಅರಣ್ಯ ರಕ್ಷಕರನ್ನು ಮತ್ತು ಸರ್ವೇಯರ್‌ಗಳನ್ನು ನೇಮಕ ಮಾಡುವುದಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಆದರೆ 1994ರಿಂದ 25 ಸಾವಿರ ಬ್ಯಾಕ್ ಲಾಗ್ ಹುದ್ದೆಗಳನ್ನು ನೇಮಕ ಮಾಡುವುದರ ಬಗ್ಗೆ ಸಚಿವ ಸಂಪುಟದ ಒಪ್ಪಿಗೆ ಪಡೆಯುವುದಾಗಲೀ, ಅಥವಾ ಆ ಪ್ರಕ್ರಿಯೆಗೆ ಚಾಲನೆ ಕೊಡುವಂತದ್ದೇ ಆಗಲೀ ಇವರು ಮಾಡುತ್ತಿಲ್ಲವೆಂದರೆ, ಈ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಎಷ್ಟು ಕಾಳಜಿ ತೋರಿಸುತ್ತಿದೆ ಎಂಬುದು ಗೊತ್ತಾಗುತ್ತದೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ರಾಜ್ಯದಲ್ಲಿ ಸುಮಾರು 17 ಮೆಡಿಕಲ್ ಕಾಲೇಜುಗಳಿವೆ. ಈ ಕಾಲೇಜುಗಳಲ್ಲಿ 1500 ವಿದ್ಯಾರ್ಥಿಗಳಿಗೆ ಸರ್ಕಾರ ಪ್ರವೇಶಾವಕಾಶ ಕಲ್ಪಿಸಿದೆ. ಈ 1500 ವಿದ್ಯಾರ್ಥಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೀಟುಗಳ ಸಂಖ್ಯೆ ಕೇವಲ 33 ಮಾತ್ರ. ಈ ಒಂದು ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಶೇಕಡ 3ರಂತೆ ಸೀಟುಗಳನ್ನು ಮೀಸಲಿರಿಸಬೇಕು ಎಂಬ ಒಂದು ಕಾಯ್ದೆ ಇದ್ದರೂ ಕೂಡ ಆ ಕಾಯ್ದೆಯ ಬಗ್ಗೆ

ಯಾವುದೇ ಒಂದು ಯೋಚನೆಯನ್ನೂ ಕೂಡ ಮಾಡದೇ ಸುಮಾರು 45 ಸೀಟುಗಳನ್ನು ನೀಡಬೇಕಾಗಿದ್ದಂತಹ ಜಾಗದಲ್ಲಿ ಕೇವಲ 33 ಸೀಟುಗಳನ್ನು ನೀಡುವಂತಹ ಒಂದು ಕಾರ್ಯಕ್ರಮದಲ್ಲಿ ಇವರೂ ಕೂಡ ಭಾಗಿಗಳಾಗಿದ್ದಾರೆ. ಇದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ನಗರ ಪ್ರದೇಶದವರಿಗೆ 11 ಸೀಟುಗಳು ಮತ್ತು ಗ್ರಾಮಾಂತರ ಪ್ರದೇಶದವರಿಗೆ 3 ಸೀಟುಗಳನ್ನು ಮಾತ್ರ ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಕ್ಕೆ ಸೇರಿದ ಪರಿಶಿಷ್ಟಪಂಗಡದವರು ಇಡೀ ರಾಜ್ಯದಲ್ಲಿ ಈ ವರ್ಷ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಗಿಟ್ಟಿಸಿರುವುದು ಕೇವಲ ಮೂವರು ಮಾತ್ರ.

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಮಾಜ ಕಲ್ಯಾಣ ಸಚಿವರು ಒಂದು ವಿಚಾರಕ್ಕೆ ಈ ಸದನದ ಸಮ್ಮತಿಯನ್ನು ಪಡೆದಿದ್ದಾರೆ. ನಾವು ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ.ಯಿಂದ ಹಣವನ್ನು ಕ್ರೋಢೀಕರಣ ಮಾಡುತ್ತೇವೆ, ಈ ಹಣ ಆಯಾ ಇಲಾಖೆಗಳಲ್ಲಿ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ, ಆಯಾ ಇಲಾಖೆಗಳಲ್ಲಿ ಸಮರ್ಪಕವಾಗಿ ಕೆಲಸವಾಗದೇ ಆ ಜನಾಂಗದ ಅಭಿವೃದ್ಧಿಯಾಗುತ್ತಿಲ್ಲ. ಆ ಜನಾಂಗದ ಅಭಿವೃದ್ಧಿ ಸಲುವಾಗಿ ನಾವು ಈ ಹಣವನ್ನು ಕ್ರೋಢೀಕರಣ ಮಾಡಿ ಕೆಲವೇ ಕೆಲವು ಇಲಾಖೆಗಳ ಮೂಲಕ ಹಣವನ್ನು ಖರ್ಚು ಮಾಡುತ್ತೇವೆ ಎಂದು ಮಾನ್ಯ ಸಚಿವರು ಇಲ್ಲಿ ಹೇಳಿದ್ದರು. ಅದರ ಒಂದು ಉಲ್ಲೇಖವನ್ನು ನಾನು ಇಲ್ಲಿ ಮಾಡಲಿಕ್ಕೆ ನಾನು ಇಚ್ಛೆ ಪಡುತ್ತಿದ್ದೇನೆ. 1996-97ರಲ್ಲಿ ಈ ಒಂದು ಸದನದ ಮೂಲಕ 104.1 ಕೋಟಿ ರೂ.ಗಳನ್ನು ಕ್ರೋಢೀಕರಣ ಮಾಡಲಿಕ್ಕೆ ಅನುಮತಿ ಪಡೆದಿದ್ದರು. ಆದರೆ ವಾಸ್ತವವಾಗಿ ಅವರು ಇಲಾಖೆಗಳಿಂದ ವಾಪಸ್ ಪಡೆದು ಕ್ರೋಢೀಕರಣ ಮಾಡಿದಂತಹ ಹಣ ಕೇವಲ 89.6 ಕೋಟಿ ರೂ.ಗಳು ಮಾತ್ರ. ಮಿಕ್ಕ ಹಣವನ್ನು ಕ್ರೋಢೀಕರಣ ಮಾಡಲಿಕ್ಕೆ ಅವರಿಗೆ ಏಕೆ ಸಾಧ್ಯವಾಗಲಿಲ್ಲವೋ ಗೊತ್ತಾಗಲಿಲ್ಲ. ಅದೇ ರೀತಿ 1997-98ರ ಸಾಲಿನಲ್ಲಿ ಸರ್ಕಾರ 70.04 ಕೋಟಿ ರೂ.ಗಳನ್ನು ಕ್ರೋಢೀಕರಣ ಮಾಡುವುದಾಗಿ ಸದನದಲ್ಲಿ ತಿಳಿಸಿತ್ತು. ಆದರೆ ವಾಸ್ತವವಾಗಿ 60.29 ಕೋಟಿ ರೂ.ಗಳನ್ನು ಮಾತ್ರ ಅವರು ಕ್ರೋಢೀಕರಣ ಮಾಡಿದರು. ಅದೇ ರೀತಿ ಗಿರಿಜನ ಉಪಯೋಜನೆಯಲ್ಲಿ 1996-97ರಲ್ಲಿ 18 ಕೋಟಿ 23 ಸಾವಿರ ಹಣವನ್ನು ಮಾತ್ರ ಕ್ರೋಢೀಕರಣ ಮಾಡುತ್ತೇವೆ ಎಂದು ಹೇಳಿದ ಸರ್ಕಾರ ಕೇವಲ 15 ಕೋಟಿ 23 ಸಾವಿರ ಹಣವನ್ನು ಮಾತ್ರ ಕ್ರೋಢೀಕರಣ ಮಾಡುವುದರಲ್ಲಿ ಯಶಸ್ವಿಯಾಯಿತು. ಯಾವ ಕಾರಣದಿಂದ ಬೇರೆ ಇಲಾಖೆಗಳಿಂದ ಇವರು ಉಳಿಕೆ ಹಣವನ್ನು ಕ್ರೋಢೀಕರಣ ಮಾಡಲಿಕ್ಕೆ ಸಾಧ್ಯವಾಗಲಿಲ್ಲವೋ ನನಗೆ ಗೊತ್ತಾಗಲಿಲ್ಲ. 1997-98ರಲ್ಲಿ 14.54 ಕೋಟಿ ರೂ.ಹಣವನ್ನು ಕ್ರೋಢೀಕರಣ ಮಾಡುತ್ತೇವೆಂದು ಹೇಳಿದ್ದ ಮಂತ್ರಿಗಳು 11.54 ಕೋಟಿ ರೂ.ಗಳ ಹಣವನ್ನು ಮಾತ್ರ ಕ್ರೋಢೀಕರಣ ಮಾಡಿದರು. ಅಂದರೆ

1996-97ರಲ್ಲಿ ವಿಶೇಷ ಘಟಕ ಯೋಜನೆಯಡಿ ಇವರು ಕ್ರೋಢಿಕರಣ ಮಾಡಿದ್ದು 149.89 ಕೋಟಿ ರೂ.ಗಳು ಮಾತ್ರ. ಈ 149.89 ಕೋಟಿ ರೂ.ಗಳ ಹಣವನ್ನು ಆಯಾ ವರ್ಷವೇ ನಾವು ಖರ್ಚು ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಇವತ್ತು ಈ ಒಂದು ಸದನದ ಮೂಲಕ ನಾನು ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಿಗೆ ಮತ್ತು ಈ ಮಂತ್ರಿಮಂಡಲದವರಿಗೆ ನಾನು ಕೇಳುತ್ತಿದ್ದೇನೆ, ನಿಜವಾಗಿಯೂ ಕೂಡ ನೀವು ಈ ಹಣವನ್ನು ಖರ್ಚು ಮಾಡಿದ್ದೀರಾ? ಖರ್ಚು ಮಾಡಲಿಕ್ಕೆ ಇವರಿಗೆ ಸಾಧ್ಯವೇ ಆಗಲಿಲ್ಲ. ಈ ಹಣವನ್ನು ಖರ್ಚು ಮಾಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗಲಿಲ್ಲವೆಂದ ಮೇಲೆ ಈ ಒಂದು ಸದನದಲ್ಲಿ ಯಾವ ದೃಷ್ಟಿಯಿಂದ ಸಮ್ಮತಿಯನ್ನು ಪಡೆದಿರಿ? ಯಾವ ಕಾರಣಕ್ಕೋಸ್ಕರ ಬೇರೆ ಇಲಾಖೆಗಳಲ್ಲಿ ಆಯಾ ವರ್ಷವೇ ಖರ್ಚಾಗಬೇಕಾಗಿದ್ದ ಹಣವನ್ನು ನೀವು ಇಲ್ಲಿಗೆ ವರ್ಗಾವಣೆ ಮಾಡಿಕೊಂಡು ಇಲ್ಲೂ ಕೂಡ ಖರ್ಚು ಮಾಡದೇ ಉಳಿಸಿರುವಂತಹ ರೀತಿಗೆ ಯಾರನ್ನು ಜವಾಬ್ದಾರರನ್ನಾಗಿ ಮಾಡಿದ್ದೀರಿ? ಯಾವ ಅಧಿಕಾರಿಯ ಒಂದು ಕುತಂತ್ರದಿಂದ ಈ ರೀತಿ ನೀವು ಕ್ರೋಢೀಕರಣ ಮಾಡಿದಿರಿ. ಕ್ರೋಢೀಕರಣದ ಹಣ ಏಕೆ ಖರ್ಚಾಗಲಿಲ್ಲ ಎಂಬ ವಿಚಾರವನ್ನು ತಾವು ಏನಾದರೂ ಪರಿಶೀಲನೆ ಮಾಡಿದ್ದೀರಾ? ಎಂಬ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಈ ಸದನದ ಮಂತ್ರಿಗಳನ್ನು ಮತ್ತು ಸರ್ಕಾರವನ್ನು ನಾನು ಕೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಬಹುಶಃ ಇವರು ಈ ಕ್ರೋಢೀಕರಣದಲ್ಲಿ ಯಾವುದೇ ಒಂದು ಹೊಸ ತಂತ್ರವನ್ನು ಮಾಡಿದ್ದಾರೆ ಎಂದು ಇವತ್ತು ಜನರು ಹೇಳುತ್ತಿದ್ದಾರೆ. ಇವರು ಕ್ರೋಢೀಕರಿಸಿದ ಹಣ ಯಾವ ರೀತಿಯಲ್ಲಿ ದುರುಪಯೋಗವಾಗುತ್ತಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನಾನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈ ಹಣ ದುರುಪಯೋಗವಾಗಿರುವುದನ್ನು ಯಾರೂ ಕೂಡ ಕೇಳದಂತಹ ಒಂದು ಪರಿಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಆಗಿದೆ. 1996-97ರಲ್ಲಿ ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ 300 ಲಕ್ಷ ಹಣವನ್ನು ವಿಶೇಷ ಘಟಕ ಯೋಜನ ಕೆಳಗೆ ವರ್ಗಾವಣೆ ಮಾಡಿದ್ದಾರೆ. ಇವತ್ತು ಆಶ್ರಯ ಯೋಜನೆಯಲ್ಲಿ ನಿರ್ಮಾಣ ಮಾಡಿರುವಂತಹ ಮನೆಗಳಿಗೆ ಬಹುಶಃ ಅದರಲ್ಲಿರುವಂತಹ ಪರಿಶಿಷ್ಟ ಜಾತಿಯವರಿಗೆ ಈ ಹಣ ಸಂದಾಯವಾಗಿಲ್ಲ, ಬೇರೆ ಜನಾಂಗದವರಿಗೆ ಸಂದಾಯವಾಗಿದೆ. ಪರಿಶಿಷ್ಟ ಜಾತಿಯವರಿಗೆ ಇದ್ದ ಹಣ ಬೇರೆ ಜನಾಂಗದವರಿಗೆ ಸಂದಾಯವಾಗುವುದಕ್ಕೆ ಸರ್ಕಾರ ಹೇಗೆ ಒಪ್ಪಿಗೆ ಕೊಟ್ಟಿತು? ಈ ದುರ್ಬಳಕೆ ಬಗ್ಗೆ ಸರ್ಕಾರ ನಿಜವಾಗಿ ತನಿಖೆ ಮಾಡಿತೆಂದರೆ ಬಹಳಷ್ಟು ಜನ ಅಧಿಕಾರಿಗಳು ಮನೆಗೆ ಹೋಗಬೇಕಾಗುತ್ತದೆ. ಮತ್ತು ಆ ಸ್ಥಾನದಲ್ಲಿರುವಂತಹ ಮಂತ್ರಿಗಳೂ ಕೂಡ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. 1996-97ರಲ್ಲಿ ದೇವದಾಸಿಯರ ಮನೆಗಳ ನಿರ್ಮಾಣಕ್ಕೋಸ್ಕರ 380 ಲಕ್ಷ ರೂಪಾಯಿ ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೆ, ನನಗೆ ತಿಳಿದ ಮಟ್ಟಿಗೆ ದೇವದಾಸಿಯರನ್ನು ಹಿಂದುಳಿದ ವರ್ಗಗಳ

ಗುಂಪಿಗೆ ಸೇರಿಸಿದ್ದಾರೆ. ಹಿಂದುಳಿದ ವರ್ಗಗಳ ಗುಂಪಿಗೆ ಸೇರಿದ ಇವರಿಗೆ 380ಲಕ್ಷ ರೂ.ಹಣವನ್ನು ಕ್ರೋಢೀಕರಿಸಿದ ಹಣದಿಂದ ವರ್ಗಾವಣೆ ಮಾಡಿದ್ದೀರಿ ಎಂದರೆ ಪರಿಶಿಷ್ಟ ಜಾತಿಯವರ ಹಣ ಪರಿಶಿಷ್ಟ ಜಾತಿಯವರಿಗೆ ಸಲ್ಲದೆ ಬೇರೆಯವರಿಗೆ ಸಲ್ಲುವಂತಹ ಪ್ರಯತ್ನವಾಗುತ್ತಿದೆ. ಅದಕ್ಕೆ ತಾವೆಲ್ಲರೂ ಸಹಕರಿಸುತ್ತಿದ್ದೀರಿ ಎಂದರೆ ಇದು ದುರ್ಬಳಕೆ ಅಲ್ಲವಾ? ಆ ಜನಾಂಗದವರಿಗೆ ಮಾಡುತ್ತಿರುವ ಅನ್ಯಾಯವಲ್ಲವೇ, ಈ ಅನ್ಯಾಯದ ಬಗ್ಗೆ ನಿಮ್ಮ ಮಂತ್ರಿ ಮಂಡಲದಲ್ಲಿರುವಂತಹ ಪರಿಶಿಷ್ಟ ಮಂತ್ರಿಗಳು ಚಕಾರ ಎತ್ತುವುದಿಲ್ಲ. ಈ ದುರ್ಬಳಕೆಯನ್ನು ತಡೆಗಟ್ಟಬೇಕಾದರೆ ಈ ಸರ್ಕಾರ ಹೋಗಬೇಕು.

ಅಧ್ಯಕ್ಷರು: ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಂತ್ರಿಗಳು ಉತ್ತರ ಕೊಡಬೇಕಾಗಿದೆ, ಸಮಯ ನಿಗಧಿ ಮಾಡಿದ್ದೇನೆ, ಪದೇ ಪದೇ ಎಲ್ಲರಲ್ಲೊ ವಿನಂತಿ ಮಾಡಿದ್ದೇನೆ ಯಾರಿಗೂ ಸಮಯ ಕೊಟ್ಟಿಲ್ಲ. ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಹೆಚ್.ಡಿ.ಬಸವರಾಜ್- ನೀವು ಕ್ರೋಢೀಕರಣ ಮಾಡಿರುವಂತಹ ಯಾವುದೇ ಹಣವಾಗಲಿ ಪರಿಶಿಷ್ಟ ಜಾತಿಯವರಿಗೆ ತಲುಪುವಂತಹ ವ್ಯವಸ್ಥೆ ಇಲ್ಲ. ಇವತ್ತು ನೀವು ಏನಾದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕ್ರೋಢೀಕರಿಸಿದ ಹಣ ಎಲ್ಲೆಲ್ಲಿ ಖರ್ಚಾಗಿದೆ ಅನ್ನುವಂತಹ ಒಂದು ವಿವರವಾದ ತನಿಖೆ ಮಾಡಿದರೆ ಬಹಳಷ್ಟು ಅಧಿಕಾರಿಗಳು ಮನೆಗೆ ಹೋಗಬೇಕಾಗುತ್ತದೆ. ಪರಿಶಿಷ್ಟ ಜಾತಿಯವರ ಹಣ ಪರಿಶಿಷ್ಟ ಜಾತಿಯವರಿಗೆ ಸಲ್ಲದೆ ಇವತ್ತು ಬೇರೆ ಯಾರಿಗೋ ಸಲ್ಲುತ್ತಿದೆ. ಆ ಸಲ್ಲುವಂತಹ ಕೆಲಸವನ್ನು ಮಂತ್ರಿಗಳೇ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಕೃಷ್ಣರೆಡ್ಡಿಯವರು ಇರುವಂತಹ ಒಂದು ಪ್ರದೇಶದಲ್ಲಿ ದೌರ್ಜನ್ಯ ನಡೆಯುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಏಕೆಂದರೆ, ಸಮಾಜ ಕಲ್ಯಾಣ ಮಂತ್ರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಹಣ ಅವರಿಗೆ ಸಲ್ಲುವಂತಹ ಯೋಜನೆಗಳನ್ನು ಮಾಡುವಂತಹ ಪ್ರಯತ್ನ ಸಮರ್ಪಕವಾಗಿ ಮಾಡುತ್ತಿಲ್ಲ. ಕ್ರೋಢೀಕರಿಸಿದ ಹಣ ಬೇರೆ ಜನಾಂಗದವರಿಗೆ ಉಪಯೋಗವಾಗುತ್ತಿದೆ. ಬೇರೆ ಜನಾಂಗದವರು ಈ ಹಣವನ್ನು ಬಳಕೆ ಮಾಡಿಕೊಂಡು ಮೇಲೆ ಬರುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಬಹುಶಃ ಯಾವುದೇ ಸರ್ಕಾರದಲ್ಲಿ ಪರಿಶಿಷ್ಟ ಜಾತಿಯವರ ಹಣ ಈ ರೀತಿ ದುರ್ಬಳಕೆ ಆಗಿರಲಿಲ್ಲ. ಇವತ್ತು ಸುಮಾರು 149.89 ಕೋಟಿ ರೂ.ಹಣದಲ್ಲಿ ಬಹಳಷ್ಟು ಪಾಲು ಸುಮಾರು 60 ಕ್ಕೂ ಹೆಚ್ಚು ಭಾಗ ದುರ್ಬಳಕೆಯಾಗಿದೆ. ಇದರ ಬಗ್ಗೆ ತನಿಖೆಯಾಗಬೇಕು. ಈ ಸರ್ಕಾರ ಇರುತ್ತದೆ ಇಲ್ಲ ಗೊತ್ತಿಲ್ಲ, ಮುಂದೆ ಬರುವಂತಹ ದಿನಗಳಲ್ಲ ಸದಸ್ಯರು ಇದರ ಬಗ್ಗೆ ಒತ್ತಾಯ ಮಾಡಬೇಕೆಂದು ಈ ಸದನದ ಮೂಲಕ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದೇ ರೀತಿ ಗಿರಿಜನರ ಉಪ ಯೋಜನಯಲ್ಲಿ ತೊಡಗಿಸಿದಂತಹ 26.563 ಕೋಟಿ ರೂ.ಹಣ ಕೂಡ ದುರ್ಬಳಕೆಯಾಗಿದೆ. ಬಹುಶಃ ತಮಗೆ ಒಂದು ಉದಾಹರಣೆಯನ್ನು ಈ

ಸಂದರ್ಭದಲ್ಲಿ ಕೊಡುತ್ತೇನೆ, ಕ್ರೋಢೀಕರಿಸಿದ ಹಣ ಗಿರಿಜನರ ಉಪ ಯೋಜನೆಯಲ್ಲಿ ಇದ್ದ ಹಣ ಯಾವ ರೀತಿ ವೆಚ್ಚವಾಗಿ ಗಿರಿಜನರಿಗೆ ತಲುಪಲಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಶ್ರಯ ಮನೆಗಳಿಗೆ 436.7 ಲಕ್ಷ ಹಣವನ್ನು ನಾವು ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ, ಆಶ್ರಯ ಮನೆಗಳಿಗೆ ಎಲ್ಲಿ ಖರ್ಚು ಮಾಡಿದ್ದೀರಿ ಏನು ಅನ್ನುವುದನ್ನು ತಾವು ಪರಿಶೀಲನೆ ಮಾಡಬೇಕೆಂದು ಈ ಸರ್ಕಾರ ಕೇಳಿಕೊಂಡು, ಈ ಸರ್ಕಾರ ಆದಷ್ಟು ಬೇಗ ಅಧಿಕಾರದಿಂದ ಇಳಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಉದ್ದಾರ ಖಂಡಿತ ಆಗುತ್ತದೆ ಎಂದು ಹೇಳುತ್ತಿದ್ದೇನೆ. ಅವರ ರಕ್ಷಣೆ ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದರ ಬಗ್ಗೆ ಯಾವುದೇ ಎರಡು ಮಾತಿಲ್ಲ. ಯಾರಾದರೂ ಈ ಸದನದಲ್ಲಿರುವಂತಹ ಪರಿಶಿಷ್ಟ ಜಾತಿಯವರು ಆತ್ಮಾವಲೋಕನ ಮಾಡಿದರೆ ಯಾವ ಕಾಲದಲ್ಲೂ ನಡೆಯದಂತಹ ದುರ್ಬಳಕೆ ಮತ್ತು ಪರಿಶಿಷ್ಟರಿಗೆ ಅನ್ಯಾಯ ಆಗಿರುವುದನ್ನು ಈ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಡೆಯುವಂತಹ ವಿಶ್ವಾಸ ಮತದಲ್ಲಿ ನನ್ನ ಎಲ್ಲಾ ಸದಸ್ಯರಿಗೆ ಪರಿಶಿಷ್ಟ ಜಾತಿಯವರ ಮೇಲೆ ಆಗುತ್ತಿರುವಂತಹ ಅನ್ಯಾಯವನ್ನು ಮನಗಂಡಾದರೂ ಈ ಸರ್ಕಾರವನ್ನು ಹೊರಗೆ ಹಾಕುವಂತಹ ಪ್ರಯತ್ನದಲ್ಲಿ ತಾವೂ ಕೂಡ ಭಾಗಿಯಾಗಬೇಕೆಂದು ಮನವಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜೆ.ಟಿ.ಪಾಟೀಲ್ (ಬೀಳಗಿ): ಸನ್ಮಾನ್ಯ ಸಭಾಧ್ಯಕ್ಷರೆ, ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನಮ್ಮ ನಾಯಕರು ತಂದಂತಹ ಅವಿಶ್ವಾಸ ನಿರ್ಣಯದ ಮಂಡನೆಗೆ ಬೆಂಬಲ ಸೂಚಿಸುತ್ತಾ ವೈಯಕ್ತಿಕವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೆಲವು ಹಿರಿಯ ಮಂತ್ರಿಗಳ ಬಗ್ಗೆ ನನಗೆ ಗೌರವ ಇದ್ದರೂ ಸಹಿತ ಈ ಸರ್ಕಾರ ಉತ್ತರ ಕರ್ನಾಟಕಕ್ಕೆ ಮಾಡುತ್ತಿರುವ ಅನ್ಯಾಯವನ್ನು ಪ್ರತಿಭಟಿಸುತ್ತಾ ಅದರಲ್ಲೂ ವಿಶೇಷವಾಗಿ ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಯ ಹಲವಾರು ಸಮಸ್ಯೆಗಳಿಗೆ ಯಾವುದೇ ರೀತಿಯ ಸ್ಪಂದನ ಮಾಡದೆ ಆಮೆ ಗತಿಯ ಸರ್ಕಾರದ ಆಡಳಿತವನ್ನು ನಾನು ಸ್ಪಷ್ಟವಾಗಿ ಖಂಡಿಸಲೇಬೇಕಾಗುತ್ತದೆ. ಹಣಕಾಸಿನ ವಿಷಯದಲ್ಲಿ ಸರ್ಕಾರ ಅಥವಾ ಅಧಿಕಾರಿಗಳನ್ನು ಕೇಳುವುದಕ್ಕೆ ಹೋದಾಗ ನಿಮ್ಮ ಬಿಜಾಪುರ ಬಾಗಲಕೋಟೆ ಜಿಲ್ಲೆಗೆ ಯುಕೆಪಿಯಲ್ಲಿ 16 ಕೋಟಿ ರೂಪಾಯ ಖರ್ಚು ಮಾಡಿದ್ದೇವೆ, ಮತ್ತೆ ನಿಮಗೆ ಹಣ ಖರ್ಚು ಮಾಡಬೇಕಾ ಎನ್ನುವಂತಹ ಮಾತನ್ನು ನಾವು ಕೇಳುತ್ತಿದ್ದೇವೆ. ದುರ್ದೈವದ ಸಂಗತಿ ಎಂದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಯಾವುದೇ ಸರಿಯಾದ ಆಸ್ಪತ್ರೆಗಳ ವ್ಯವಸ್ಥೆ ಇಲ್ಲ. ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲದೆ ಇರುವಂತಹ ಒಂದೇ ಒಂದು ಕೆಎಮ್‌ಸಿ ಆಸ್ಪತ್ರೆಯನ್ನು ಯಾವುದೇ ಸೌಲಭ್ಯಗಳನ್ನು ಕೊಡದೇ ಮುಚ್ಚುವಂತಹ ಸ್ಥಿತಿಗೆ ತಿಂದಿದ್ದೀರಿ. ಗ್ರಾಮೀಣ ಸಾರಿಗೆ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ.

ಯಾವುದೇ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ. ಕಳೆದ ಮೂರು ವರ್ಷಗಳಲ್ಲಿ ಬೇಸಿಗೆಯಲ್ಲಿ ಇತ್ತೀಚಿನ ವ್ಯವಸ್ಥೆ ಹೇಳತೀರದು. ಇವತ್ತು ಹಳ್ಳಿಯಿಂದ ವಿಧಾನಸೌಧನ ಮೆಟ್ಟಿಲು, ಮತ್ತು ಬಹು ಮಹಡಿ ಕಟ್ಟಡದ ಮೆಟ್ಟಿಲುಗಳವರೆಗೆ ಲಂಚ ಹಾಸು ಹೊಕ್ಕಾಗಿ ಹರಡಿಕೊಂಡಿದೆ. ಆಡಳಿತದ ಬಿಗಿ ಇಲ್ಲವೇ ಇಲ್ಲ. ಇವತ್ತು ನೀವು ನಮ್ಮ ಆಲಮಟ್ಟಿ ಯೋಜನೆಗೆ 16,000 ಕೋಟಿ ರೂಪಾಯಿ ಖರ್ಚು ಮಾಡುವ ಯೋಜನೆ ಹಾಕಿಕೊಂಡಿರಬಹುದು, ದುರ್ದೈವದ ಸಂಗತಿ ಎಂದರೆ ಅದರಿಂದ ನಮಗೆ ಒಂದು ಇಂಚೂ ಲಾಭವಾಗಿಲ್ಲ. ಇದುವರೆಗೆ ಒಂದು ಇಂಚೂ ನೀರಾವರಿಯಾಗಿಲ್ಲ. 3.27 ಲಕ್ಷ ಎಕರೆ ಭೂಮಿ ಕಳೆದುಕೊಳ್ಳುವುದರ ಜೊತೆಗೆ ಬಾಗಲಕೋಟೆ ಪಟ್ಟಣ ಒಳಗೊಂಡು 160 ಹಳ್ಳಿಗಳು ಇವತ್ತು ಸಂಪೂರ್ಣವಾಗಿ ನಿರಾಶ್ರಿತರಾಗಿದ್ದಾರೆ. ಕಳೆದ ಮೂರು ವರ್ಷಗಳಿಂದ ನಾವು ಕೇಳುತ್ತಿದ್ದೇವೆ, ಆ ಜನರು ಪುನರ್ವಸತಿ ಕೇಂದ್ರಕ್ಕೆ ಹೋದ ನಂತರ ಅವರ ಹೊಟ್ಟೆ ಪಾಡಿಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದರೆ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಳೆದ 40 ವರ್ಷಗಳಲ್ಲಿ ನನ್ನ ಕ್ಷೇತ್ರದಲ್ಲಿ ಯಾವುದೇ ಒಂದು ಅಹಿತಕರ ಘಟನೆಯಾಗಿರಲಿಲ್ಲ. ಈ ಎರಡು ವರ್ಷಗಳಲ್ಲಿ ಒಂಬತ್ತು ಕೊಲೆಗಳಾಗುವುದರ ಜೊತೆಗೆ ರೋಡ್ ರಾಬರಿ ಮತ್ತು ಡಕಾಯಿತಿ ಆಗುತ್ತಿದೆ. ಅದರಲ್ಲಿ ನಾಲ್ಕಾರು ರೌಡಿಗಳ ಕೊಲೆಯಾಗಿದೆ. ಇದರಿಂದ ಯಾವ ರೀತಿ ಜನರ ನಿರಾಶ್ರಿತರಾಗಿ ಇವತ್ತು ನೀತಿ ನಿಯಮಗಳನ್ನು ಬಿಟ್ಟು ಅನೀತಿಯತ್ತ ಹೆಜ್ಜೆ ಹಾಕಿದ್ದಾರೆಂದು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಇದರ ಬಗ್ಗೆ ಒಂದು ಮುಳುವಾಡ ಏತ ನೀರಾವರಿ ಯೋಜನೆ ಇದೆ, ಯರ್ಕಲ್ ಏತ ನೀರಾವರಿ ಯೋಜನೆ ಇದೆ. ಇದು ಆಗದೆ ಹೋದರೆ ನಿಮ್ಮ ಯುಕೆಪಿ ಆಲಮಟ್ಟಿ ಜಲಾಶಯ ಯೋಜನೆ ಏನಿದೆ ಇದರಿಂದ ಸಂಪೂರ್ಣವಾಗಿ ನಮಗೆ ಅನ್ಯಾಯವಾಗುತ್ತದೆ ಎನ್ನುವ ಮಾತನ್ನು ಈ ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಮುಳುವಾಡ ಏತ ನೀರಾವರಿ ಯೋಜನೆ 300 ಕೋಟಿಯಿಂದ ಸಾವಿರ ಕೋಟಿಯವರೆಗೆ ಈ ಯೋಜನೆ ಹೆಚ್ಚಾಗಿದೆ. ಇಲ್ಲಿಯವರೆಗೆ ಖರ್ಚು ಮಾಡಿದ್ದು 2,700 ಕೋಟಿ ಎಂದು ಸನ್ಮಾನ್ಯ ಬಿ.ಆರ್.ಪಾಟೀಲರು ಹೇಳಿದ್ದಾರೆ. ಇಲ್ಲಿಯವರೆಗೆ ಸರ್ಕಾರ ಖರ್ಚು ಮಾಡಿರುವುದು 10 ಕೋಟಿ ಮಾತ್ರ ಎಂದು ಹೇಳುತ್ತೇನೆ. ಮುಳುವಾಡ ಏತ ನೀರಾವರಿ ಯೋಜನೆ ಆಗದೆ ಹೋದರೆ ಇದು ಒಂದು ಆಲಮಟ್ಟಿ ಯೋಜನೆ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಶಾಪ.

12 ಪಿ.ಎಂ

ಆಲಮಟ್ಟಿ ಯೋಜನೆಯ ಬಲದಂಡೆ ಕಾಲುವೆ ಇನ್ನೂ ಪ್ರಾರಂಭವಾಗಿಲ್ಲ. ಇದರಿಂದಾಗಿ ಬಾಗಲಕೋಟೆಯ ಒಂದು ಎಕರೆ ಜಮೀನಿಗೂ ಕೂಡ ನೀರಾವರಿ ಆಗುವುದಿಲ್ಲ ಇಂದು ಬಾಗಲಕೋಟೆಯ ಮತ್ತು ಬಿಜಾಪುರ ಜಿಲ್ಲೆಗಳ ಬಗ್ಗೆ ಕಿಂಚಿತ್ತೂ ಕೂಡ ಸರ್ಕಾರ ಯೋಚನೆ ಮಾಡುವುದಕ್ಕೆ ಸಿದ್ಧವಾಗಿಲ್ಲ ಈ ಆಲಮಟ್ಟಿ ಜಲಾಶಯದ

ಹಿನ್ನೀರಿನಲ್ಲಿ ಕೊಲಾರ್, ಚಿಕ್‌ಪಡಸಲಗಿ ಹಾಗೂ ಗಲಗಲಿಯಂಥ ಏನು ಸಣ್ಣ ಕ್ಷೇತ್ರಗಳಿದ್ದವೋ ಅವುಗಳು ಇವೊತ್ತು ಮುಳುಗಡೆಯಾಗಿ ಬಿಜಾಪುರ ಮತ್ತು ಬಾಗಲಕೋಟೆಗಳು ತೊಂದರೆಗೊಳಗಾಗಿವೆ. ಇದರ ಜೊತೆಗೆ ಅಂತರ್‌ಜಿಲ್ಲೆಯ ಸಂಚಾರದಲ್ಲಿಯೂ ನಾವು ವಂಚಿತರಾಗುತ್ತಿದ್ದೇವೆ. ಇವರೇನು 21ನೇ ಶತಮಾನಕ್ಕೆ ಹೋಗುತ್ತಿದ್ದಾರೋ ಅಥವಾ ಇವರು ನಮ್ಮ ಜನರಿಗೆ ಏನು ಸೌಲಭ್ಯಗಳನ್ನು ಕೊಡಬೇಕೋ ಅದನ್ನು ಕೊಡದೇ ಇನ್ನೂ ಚಿಂತಿಸುವುದರಲ್ಲಿಯೇ ಕಾಲ ಕಳೆಯುತ್ತಿದ್ದಾರೋ ಎನ್ನುವ ಅನುಮಾನ ಬರುತ್ತಿದೆ. ಮುಳುಗಡೆಯಾಗಿರುವ ಪ್ರದೇಶದ ಜನರಿಗೆ ಇಷ್ಟು ವರ್ಷವಾದರೂ ಕೂಡ ಸರ್ಕಾರ ಇನ್ನೂ ಪರಿಹಾರ ಕೊಡದೆ ಕಾಲ ಕಳೆಯುತ್ತಿದೆ. ಅಲ್ಲಿಯ ಜನಗಳಿಗೆ ಮೂಲಭೂತವಾಗಿ ಏನು ಸೌಲಭ್ಯಗಳನ್ನು ಕೊಡಬೇಕಾಗಿತ್ತೋ ಅದನ್ನು ಕೊಡದೇ ಬಹಳ ದೊಡ್ಡದಾದ ಅನ್ಯಾಯವನ್ನು ಮಾಡಿದ್ದಾರೆ. ಪರಿಹಾರ ಧನ ಕೊಡುತ್ತಾರಂತೆ ಜನಗಳು ಇನ್ನೂ ಕಾಯುತ್ತಿದಾರೆ. ಆದರೆ ಸರ್ಕಾರ ಕೊಟ್ಟಿಲ್ಲ. ಇದೇ ರೀತಿಯ ಪ್ರವೃತ್ತಿಯನ್ನು ನೀವು ಮುಂದುವರಿಸಿಕೊಂಡು ಹೋದರೆ ನಾವುಗಳು ಅಸಹಕಾರ ಚಳುವಳಿಯನ್ನು ಮಾಡಬೇಕಾಗುತ್ತದೆ ಮತ್ತು ನೀವು ಜನರ ಪ್ರತಿಭಟನೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದೊದಗುತ್ತದೆ. ಇನ್ನು ಕಳೆದ ಕೆಲವು ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಐತಿಹಾಸಿಕ ಮಳೆ ಬಿದ್ದ ಕಾರಣದಿಂದಾಗಿ ಸಾವಿರಾರು ಕೋಟಿ ರೂ.ಗಳ ಬೆಳೆ ಹಾನಿಯಾಗಿದೆ ಮತ್ತು ನೂರಾರು ಕೋಟಿ ರೂ.ಗಳ ರಸ್ತೆಗಳಿಗೂ ಕೂಡ ಹಾನಿಯಾಗಿ ರಸ್ತೆಗಳು ಹಾಳಾಗಿದೆ. ಬಾಗಲಕೋಟೆ ಮತ್ತು ಬಿಜಾಪುರದ ಜಿಲ್ಲಾಧಿಕಾರಿಗಳು ಈ ರಸ್ತೆಗಳ ರಿಪೇರಿಗಾಗಿ ಸುಮಾರು 6 ರಿಂದ 8ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಮಾಡಿದ್ದರೂ ಕೂಡ ಕೇವಲ 50 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಈ ರೀತಿಯಲ್ಲಿ ನೀವು ಅನ್ಯಾಯ ಮಾಡಿದರೆ ನಾವು ಕಣ್ಣು ಮುಚ್ಚಿಕೊಂಡು ಸುಮ್ಮನೇ ಕೂರಬೇಕೆ? ಇನ್ನು ಇಲ್ಲಿಯವರೆಗೂ ಕೂಡ ಬೆಳೆ ಹಾನಿಗೆ ಸಂಬಂಧಪಟ್ಟಂತೆ ಒಂದು ಪೈಸೆ ಪರಿಹಾರವನ್ನೂ ಕೂಡ ಕೊಟ್ಟಿಲ್ಲ. ಇದರ ಜೊತೆಗೆ ಕಳಪೆ ದರ್ಜೆಯ ಬೀಜಗಳಿಂದ ಮತ್ತು ಗೊಬ್ಬರದ ಕೊರತೆಯಿಂದಾಗಿ ರೈತ ಕಂಗಾಲಾಗಿ ಹೋಗಿದ್ದಾನೆ. ನೀವು ರೈತನ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದು ರೈತನಿಗೆ ಅನ್ಯಾಯ ಮಾಡಿದರೆ ಬರುವ ದಿನಗಳಲ್ಲಿ ನಿಮಗೆ ರೈತ ಶಾಪ ಹಾಕದೇ ಇರಲಾರ. ಇನ್ನು ಬಾಗಲಕೋಟೆಯನ್ನು ನೀವು ಹೊಸ ಜಿಲ್ಲೆಯನ್ನಾಗಿ ಮಾಡಿದ್ದೀರಿ. ನಾನು ಸ್ವಾಗತ ಮಾಡುತ್ತೇನೆ. ಆದರೆ ಇಲ್ಲಿಯವರೆವಿಗೂ ಅಲ್ಲಿಗೆ 30 ಪರ್ಸೆಂಟ್‌ನಷ್ಟೂ ಸಿಬ್ಬಂದಿಯನ್ನು ಕೊಟ್ಟಿಲ್ಲ. ಈ ರೀತಿಯಾದರೆ ಜಿಲ್ಲಾಧಿಕಾರಿಗಳು ಅಲ್ಲಿ ಯಾವ ರೀತಿಯಾಗಿ ಜಿಲ್ಲಾ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತೇನೆ. ಬಿಜಾಪುರ ಮತ್ತು ಬಾಗಲಕೋಟೆಗಳೆರಡೂ ಐತಿಹಾಸಿಕ ಸ್ಥಳಗಳೆಂದು ಹೆಸರುವಾಸಿಯಾಗಿದೆ. ಆದರೆ ಅಲ್ಲಿಗೆ ಸರಿಯಾದ ರಸ್ತೆಗಳ ಸಂಪರ್ಕವಿಲ್ಲ. ಅಲ್ಲಿಗೆ ಬರುವಂಥ ಪ್ರವಾಸಿಗರು ಇಳಿದುಕೊಳ್ಳುವುದಕ್ಕೆ ಸರಿಯಾದ ವ್ಯವಸ್ಥೆಯಿಲ್ಲ.

ಕಳೆದ ನಾಲ್ಕು ವರ್ಷಗಳಿಂದ ಸರ್ಕಾರ ಉತ್ತರ ಕರ್ನಾಟಕವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿರುವುದರ ಜೊತೆಗೆ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳನ್ನೂ ಕೂಡ ಅಲಕ್ಷ್ಯ ಮಾಡಿದೆ. ಇನ್ನು ಮಹತ್ವದ ಎಂದು ವಿಚಾರವನ್ನು ಸದನದ ಮುಂದೆ ತರಬಯಸುತ್ತೇನೆ, ಏಡ್ಸ್ ಭಯಾನಕ ರೋಗವೆಂದು ತಮಗೂ ಗೊತ್ತಿದೆ. ಇದರ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಯಲ್ಲಿ ಮತ್ತು ರೇಡಿಯೋಗಳಲ್ಲಿ ಜನರಿಗೆ ತಿಳಿಸುತ್ತಾರೆ. ಅದಕ್ಕಿಂತಲೂ ದೊಡ್ಡ ರೋಗವಾದ ಮಲೇರಿಯಾ ರೋಗ ನಮ್ಮ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಿಗೆ ತಗಲಿದೆ. ಫೆಲ್ಸಿಫಾರ್ನೋ ಎಂಬುದು ಮನುಷ್ಯನಿಗೆ ಕಚ್ಚಿದಾಗ ಪ್ರಾರಂಭದಲ್ಲಿ ಮೆದುಳುಜ್ವರ ಬರುವುದು ನಂತರದಲ್ಲಿ ದೃಷ್ಟಿಮಾಂದ್ಯತೆ ಉಂಟಾಗುವುದು ಇದಲ್ಲದೇ ಕೆಲವೊಂದು ಸಂದರ್ಭಗಳಲ್ಲಿ ಕಿಡ್ನಿ ಮೇಲೆ ಪರಿಣಾಮವಾಗಿ ಕಿಡ್ನಿಯನ್ನು ಕಳೆದುಕೊಂಡಿರುವಂಥ ಸಾಕಷ್ಟು ಉದಾಹರಣೆಗಳನ್ನು ನಾವು ನೋಡಿದ್ದೇವೆ. ಇದಲ್ಲದೇ ಪಚನಶಕ್ತಿಯೂ ಕಡಿಮೆಯಾಗುತ್ತದೆ. ಸರ್ಕಾರದ ಅಂಕಿಅಂಶಗಳ ಪ್ರಕಾರವೇ ಹೇಳಬೇಕೆಂದರೆ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಎರಡು ಲಕ್ಷ ಜನರು ಮಲೇರಿಯಾ ರೋಗದಿಂದ ಬಳಲುತ್ತಿದ್ದಾರೆ. ದುರ್ದೈವ ಸಂಗತಿಯೆಂದರೆ ಮಲೇರಿಯಾ ನಿರ್ಮೂಲನೆಗೆ ಕಳೆದ ಮೂರು ವರ್ಷಗಳಿಂದ ಯಾವ ಕ್ರಮವನ್ನೂ ಕೂಡ ಈ ಸರ್ಕಾರ ಕೈಗೊಂಡಿಲ್ಲ. ಒಂದು ದಿನವಾದರೂ ಕೂಡ ಔಷದ ಸಿಂಪಡಣೆಯನ್ನು ಮಾಡಲಿಲ್ಲ. ಇದೇ ರೀತಿಯಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಸಾವಿರಾರು ಜನರು ಮಲೇರಿಯಾದಿಂದ ಸಾಯುವಂತಹ ಪರಿಸ್ಥಿತಿ ನಿರ್ಮಾಣಗೊಳ್ಳುತ್ತದೆ. ಈ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ಮತ್ತು ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ನವರ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ತೀವ್ರತರ ಕ್ರಮಗಳನ್ನು ಕೈಗೊಳ್ಳಬೇಕೆಂದು ಮತ್ತೊಮ್ಮೆ ಹೇಳಬಯಸುತ್ತೇನೆ. ಇನ್ನು ಹಲವಾರು ಚಿಕ್ಕಪುಟ್ಟ ಸಮಸ್ಯೆಗಳ ಬಗ್ಗೆ ನಾನು ಇಲ್ಲಿ ಹೇಳಬೇಕೆಂದಿದ್ದೆ. ಆದರೆ ಗಂಭೀರವಾದಂಥ ಸಮಸ್ಯೆಗಳ ಪರಿಹಾರಕ್ಕೇ ಸರ್ಕಾರ ಕ್ರಮಗಳನ್ನು ಕೈಗೊಂಡಿಲ್ಲದಿರುವುದರಿಂದ ಅಧಿಕಾರದಲ್ಲಿ ಈ ಸರ್ಕಾರ ಮುಂದುವರಿಯಲು ನೈತಿಕವಾದ ಹಕ್ಕನ್ನು ಹೊಂದಿಲ್ಲವೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪ್ರಹ್ಲಾದ ಹನುಮಂತಪ್ಪ ಪೂಜಾರಿ (ಬಾಗಲಕೋಟೆ): ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲ ಬಾರಿಗೆ ನನಗೆ ವಿಧಾನಸಭೆಯ ಅಧಿವೇಶನದಲ್ಲಿ ಹೊಸ ಸದಸ್ಯನಾದ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಈ ಸಭೆಯ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಾನೊಬ್ಬ ಹತಭಾಗ್ಯ ಶಾಸಕನಾಗಿದ್ದೇನೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾದ ಉತ್ತರ ಕರ್ನಾಟಕ ಭಾಗದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಆರಿಸಿ

ಬಂದವನಾಗಿದ್ದೇನೆ. ದುರ್ದೈವವಶಾತ್ ಬಾಗಲಕೋಟೆ ನಗರದ ಮೂರ್ನಾಲ್ಕು ಭಾಗಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯ ವ್ಯಾಪ್ತಿಯಲ್ಲಿ ಮುಳುಗಡೆಯಾಗುತ್ತಲಿದೆ. ಅದರ 35 ಹಳ್ಳಿಗಳು ಕೂಡ ಮುಳುಗಡೆಗೆ ಬರುತ್ತಿವೆ. ಈ ಆಲಮಟ್ಟಿ ಯೋಜನೆ 1964ರಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿಯವರಿಂದ ಅಡಿಗಲ್ಲು ಹಾಕಿ ಪ್ರಾರಂಭವಾದಂದಿನಿಂದ ಇವೊತ್ತಿನವರೆಗೆ ಆಮೆ ಗತಿಯಲ್ಲಿ ಕೆಲಸ ಪ್ರಾರಂಭವಾಗಿ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ತೀವ್ರತೆಯನ್ನು ಪಡೆದುಕೊಂಡಿದೆ. ರಾಷ್ಟ್ರದ ಆದಾಯ, ರಾಜ್ಯದ ಆದಾಯ ಹೆಚ್ಚಿಸುವ ಹಾಗೂ ನೀರಾವರಿ ಹಿತಾಸಕ್ತಿಗಾಗಿ ತಮ್ಮ ಲಕ್ಷಾಂತರ ಎಕರೆ ಜಮೀನುಗಳನ್ನು ಹಾಗು ಮನೆಮಠಗಳನ್ನು ಕಳೆದುಕೊಳ್ಳುತ್ತಿರುವ ಆ ಭಾಗದ ಜನರನ್ನು ಇಲ್ಲಿಯವರೆಗಿನ ಯಾವುದೇ ಸರ್ಕಾರಗಳು, ಅಧಿಕಾರಶಾಹಿಗಳು ಗೌರವಿಸಿದ್ದನ್ನು ನಾನು ಕಂಡಿಲ್ಲ. ನಾನು ಕೇವಲ ಇದೊಂದೇ ಸರ್ಕಾರದ ಮೇಲೆ ದೋಷಾರೋಪಣೆ ಮಾಡುತ್ತಿಲ್ಲ. ಸುಮಾರು ನಮ್ಮನ್ನಾಳಿದ ಕಾಂಗ್ರೆಸ್ ಸರ್ಕಾರ ಕೂಡ ಇದಕ್ಕೆ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇವೊತ್ತು ಬಾಗಲಕೋಟೆ ಮತ್ತು ಬಿಜಾಪುರ ಭಾಗದ ಸುಮಾರು 154 ಹಳ್ಳಿಗಳು ಮುಳುಗಡೆಗೆ ಬರುತ್ತಿವೆ. 3 ಲಕ್ಷ ಜಮೀನು ಇವೊತ್ತು ಆ ನೀರಾವಾರಿ ಯೋಜನೆಯಲ್ಲಿ ಮುಳುಗಡೆಗೆ ಬರುತ್ತಿವೆ. ಬಾಗಲಕೋಟೆ ಬೃಹತ್ ನಗರವಾಗಿದ್ದು ಇದು ಏಷ್ಯಾ ಖಂಡದಲ್ಲಿಯೇ ಐತಿಹಾಸಿಕ ನಗರವೆನ್ನುವ ಹೆಸರನ್ನು ಪಡೆದಿದ್ದು ಅದರ ಮೂರ್ನಾಲ್ಕು ಭಾಗಗಳು ಮುಳುಗಡೆಗೆ ಬರುತ್ತಿವೆ. ಇದೊಂದು ಇತಿಹಾಸ. ಬಾಗಲಕೋಟೆ ನಗರ ಮುಳಗಡೆ ಆಗುವ ಚಿಂತನೆ ಪ್ರಾರಂಭವಾಗಿದ್ದು 1985ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಬಾಗಲಕೋಟೆಯನ್ನು ಮುಳುಗಿಸಿ ನವನಗರವನ್ನು ಚಂಡಿಘರ್ ಮಾದರಿಯಲ್ಲಿ ಕಟ್ಟಬೇಕೆಂದು ತಿರ್ಮಾನವನ್ನು ತೆಗೆದುಕೊಂಡರು. ದುರ್ದೈವವಶಾತ್ 15 ವರ್ಷಗಳಾದರೂ ಕೂಡ ಇನ್ನೂ ಅಲ್ಲಿ 100 ಮನೆಗಳನ್ನೂ ಕೂಡ ಕಟ್ಟಲಾಗಿಲ್ಲ. ಸುಮಾರು 11 ಸಾವಿರ ಕಟ್ಟಡಗಳು ಈ ಯೋಜನೆಯಲ್ಲಿ ಮುಳುಗಡೆಯಾಗುತ್ತಲಿವೆ. 12 ಸಾವಿರ ಕುಟುಂಬಗಳು ಇದರಲ್ಲಿ ಪಾಲ್ಗೊಳ್ಳುತ್ತಲಿವೆ. ಒಂದು ಲಕ್ಷ ಜನಸಂಖ್ಯೆಯಲ್ಲಿ ಸುಮಾರು 60 ಸಾವಿರ ಜನಸಂಖ್ಯೆಗೆ ಪರಿಹಾರ ಧನ ಇನ್ನೂ ಕೊಟ್ಟಿಲ್ಲ. 1984 ರಿಂದ ಇಲ್ಲಿಯವರೆವಿಗೆ 14 ವರ್ಷಗಳಲ್ಲಿ ಕೇವಲ 684 ನಿವೇಶನಗಳಿಗೆ ಮಾತ್ರ ಹಕ್ಕುಪತ್ರವನ್ನು ವಿತರಿಸಲಾಗಿದೆ. 2 ಸಾವಿರ ಇಸವಿಯೊಳಗೆ ಈ ನಗರ ಸ್ಥಳಾಂತರಗೊಂಡು ನವನಗರದಲ್ಲಿ ಜನವಸತಿ ಪ್ರಾರಂಭವಾಗಬೇಕಾಗಿದೆ. ದೌರ್ಭಾಗ್ಯದಿಂದ ಇನ್ನೂ ಅಲ್ಲಿ ಯಾವುದೇ ನಾಗರೀಕ ಸೌಲಭ್ಯಗಳು ಸಿಗುತ್ತಿಲ್ಲ. ಸುಮಾರು 3445 ಮನೆಗಳಿಗೆ ಇನ್ನೂ ಪರಿಹಾರ ಧನ ವಿತರಣೆಯಾಗಿಲ್ಲ. ಆ ಮನೆಗಳಲ್ಲಿ ಕೇವಲ 1395 ಮನೆಗಳವರಿಗೆ ಮಾತ್ರ ಪರಿಹಾರಧನ ವಿತರಣೆಯಾಗಿ ಇನ್ನೂ 2050 ಮನೆಗಳವರಿಗೆ ಪರಿಹಾರ ಧನ ವಿರಣೆಯಾಗದೆ ಹಕ್ಕುಪತ್ರ ವಿತರಣೆಯಾಗದೆ ಆ ಜನ ಕಾಯುತ್ತಾ ಕುಳಿತಿದ್ದಾರೆ. ನಮ್ಮ ಹಿರಿಯರು ಕಂಡಿದ್ದಂಥ ನವನಗರ ನಿರ್ಮಾಣದ ಕನಸನ್ನು ನಾವು ನಂಬಿಕೊಂಡು

ಕುಳಿತಿದ್ದೇವೆ. ನಿಮ್ಮ ನಗರವನ್ನು ಮುಳುಗಡೆ ಮಾಡುತ್ತೇವೆ, ಚಂಡೀಗಢ ಮಾದರಿಯಲ್ಲಿ ಹೊಸ ನಗರವನ್ನು ಕಟ್ಟಿಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆಯ ಆಧಾರದ ಮೇಲೆ ಇವತ್ತಿನವರೆಗೂ ನಾವು ಬದುಕುತ್ತಾ ಬಂದಿದ್ದೇವೆ, ದೌರ್ಭಾಗ್ಯವೆಂದರೆ ಮುಂದಿನ ವರ್ಷ ಮುಳುಗಡೆಯಾಗುವ ಹಂತದಲ್ಲಿ ಆ ಜನ ಸ್ಥಳಾಂತರಗೊಳ್ಳಬೇಕಾಗಿದೆ. ಇನ್ನೂ 2,050 ಮನೆಗಳಿಗೆ ಹಕ್ಕುಪತ್ರಗಳನ್ನು ಕೊಟ್ಟಿಲ್ಲ. 2,050 ಮನೆಗಳಿಗೆ ಪರಿಹಾರ ಧನ ವಿತರಣೆಯಾಗಿಲ್ಲ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳನ್ನು ಕೇಳಿದರೆ ನಾವು ಮಾಡುತ್ತಿದ್ದೇವೆ, ಇನ್ನು ಐದಾರು ತಿಂಗಳುಗಳಲ್ಲಿ ನಿವೇಶನವನ್ನು ಕೊಡುತ್ತೇವೆ ಹಾಗೂ ಪರಿಹಾರ ಧನವನ್ನೂ ಕೂಡ ವಿತರಣೆ ಮಾಡುತ್ತೇವೆ ಎಂದು ಹೇಳುತ್ತಾರೆ. ಹಾಗಾದರೆ ನೀವು ಬಾಗಲಕೋಟೆ ನಗರವನ್ನು ಯಾವಾಗ ಮುಳುಗಡೆ ಮಾಡುತ್ತೀರಿ ಎಂದು ಕೇಳಿದಾಗ, ಮುಂದಿನ ಸೆಪ್ಟೆಂಬರ್‌ನಲ್ಲಿ ನೀರು ನಿಲ್ಲುತ್ತದೆ, ಆ ಕ್ಷಣದಲ್ಲಿ ನೀವು ಖಾಲಿ ಮಾಡ ಬೇಕಾಗಿದೆ ಎನ್ನುವ ವರದಿಯನ್ನು ಕೂಡ ಅವರು ಕೊಡುತ್ತಾರೆ. ಇದರ ಜೊತೆಗೆ, ನಾವು ನವನಗರದಲ್ಲಿ ಬದುಕಬೇಕು, ಅಲ್ಲಿ ನಾಗರೀಕ ಜೀವನ ನಡೆಸಬಹುದು ಎನ್ನುವ ಭಾವನೆ ಮತ್ತು ಭರವಸೆ ಕೂಡ ಅಲ್ಲಿ ಮಾಯವಾಗುತ್ತಿದೆ. ಇವತ್ತು ಈ ಸರ್ಕಾರ ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆಯನ್ನು ಹಚ್ಚುತ್ತಿದೆ. ಈ ನೀರಾವರಿ ಯೋಜನೆಯ ಬಗ್ಗೆ ಸರ್ಕಾರ ಎಷ್ಟು ಕಳಕಳಿ ತೆಗೆದುಕೊಳ್ಳುತ್ತಿದೆಯೋ ಅದಕ್ಕಿಂತ ಹೆಚ್ಚಿನ ಕಳಕಳಿಯನ್ನು ಅದರಿಂದ ಬಾಧಿತವಾಗುವಂಥ ಮುಳುಗಡೆಯಲ್ಲಿ ಬರುವಂಥ ಜಮೀನುಗಳ ಬಗ್ಗೆ, ಜನತೆಯ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕಾಗಿತ್ತು. ಇಲ್ಲಿಯವರೆಗೂ ಆ ದಿಸೆಯಲ್ಲಿ ಯಾವುದೇ ಕೆಲಸ ಸರ್ಕಾರದಿಂದ ಆಗಿಲ್ಲ. ಇವತ್ತಿನವರೆಗೆ, ಅಲ್ಲಿ ಯಾವುದೇ ಒಬ್ಬ ವ್ಯಕ್ತಿ ಸ್ವಾವಲಂಬಿಯಾಗಿ ಜೀವನ ನಡೆಸುವ ಚಿತ್ರ ಅಲ್ಲಿ ಕಾಣುತ್ತಿಲ್ಲ. ಇವತ್ತು ಮುಳುಗಡೆ ಸಮೀಕ್ಷೆಯನ್ನು ಅವೈಜ್ಞಾನಿಕವಾಗಿ ಮಾಡಲಾಗಿದೆ. 521 ಎಫ್.ಆರ್.ಎಲ್. ಎನ್ನುವ ಅಡಿಯಲ್ಲಿ ಎಷ್ಟು ಜಮೀನು ಮುಳುಗಬೇಕು, ಎಷ್ಟು ಗ್ರಾಮಗಳು ಮುಳುಗಬೇಕು ಎನ್ನುವ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಅವರಿಂದ ಸ್ಪಷ್ಟ ಉತ್ತರ ಸಿಗುತ್ತಿಲ್ಲ. ಕಳೆದ ವರ್ಷ ಮಹಾಪೂರ ಬಂದಾಗ ಸುಮಾರು ಮೂರೂವರೆ ಸಾವಿರ ಎಕರೆಯಷ್ಟು ಜಮೀನಿನಲ್ಲಿ, ಇನ್ನೂ ಭೂಸ್ವಾಧೀನವಾಗಿಲ್ಲದಂಥ ಕ್ಷೇತ್ರಗಳಿಗೆ ನೀರು ಹೊಕ್ಕು ರೈತರ ಟೀಕು, ಸೂರ್ಯಪಾನ, ಚಿಕ್ಕು, ಲಿಂಬು ಮುಂತಾದ ಗಿಡಗಂಟಿಗಳು ನಾಶವಾದುದನ್ನು ನಾವು ನೋಡಿದ್ದೇವೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳನ್ನು, ಸರ್ಕಾರದ ಮುಖಂಡರನ್ನು, ಮಂತ್ರಿಗಳನ್ನು ಕೇಳಿದಾಗ, ಸಮೀಕ್ಷೆ ಮಾಡಿ ನಾವು ಪರಿಹಾರ ಕೊಡುತ್ತೇವೆ, ನೀವು ಚಿಂತೆ ಮಾಡಬೇಡಿ ಎನ್ನುವ ಭರವಸೆ ಕೊಟ್ಟರು. ಆದರೆ ಇವತ್ತಿನವರೆಗೆ ಒಂದು ಪೈಸೆ ಪರಿಹಾರ ಕೂಡ ಆ ರೀತಿ ಹಾನಿಗೊಳಗಾದ ಜಮೀನಿನವರಿಗೆ ಕೊಟ್ಟಿಲ್ಲ. ಇದು ಸರ್ಕಾರದ ತಪ್ಪಲ್ಲವೇ? ಯಾವ ಜಮೀನು ಮುಳುಗಡೆಯಾಗಬಹುದು, ಯಾವ ವರ್ಷ ಆಗಬಹುದು, ಅದನ್ನು ಮೊದಲೇ ಸ್ವಾಧೀನ ಮಾಡಿಕೊಂಡು ಅದಕ್ಕೆ ಪರಿಹಾರಧನ ಕೊಡತಕ್ಕಂಥ ಕರ್ತವ್ಯ

ಸರ್ಕಾರದ್ದಾಗಿತ್ತಲ್ಲವೇ? ಇದನ್ನು ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಇದರ ಜೊತೆಗೆ, ಗ್ರಾಮೀಣ ಪ್ರದೇಶವನ್ನು ನೋಡಿದಾಗ ಹಾಳು ಹಂಪೆಯ ನೆನಪಾಗುತ್ತದೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಸರಿಯಾದ ಸಂಪರ್ಕ ವ್ಯವಸ್ಥೆ ಇಲ್ಲ, ಇಲ್ಲಿಯವರೆಗೆ ಅಲ್ಲಿ ಪೂಜಾ ಸ್ಥಾನಗಳನ್ನು ಕಟ್ಟಿಲ್ಲ, ಬೀದಿ ದೀಪದ ವ್ಯವಸ್ಥೆ ಇಲ್ಲ. ಯಾರಾದರೂ ಅಲ್ಲಿಗೆ ಹೋದರೆ ನಾವು ಅನಾಗರೀಕವಾದಂಥ ಒಂದು ಹಳ್ಳಿಗೆ ಬಂದಿದ್ದೇವೇನೋ ಎನ್ನುವ ಭಾವನೆ ಬರುವಂಥ ಚಿತ್ರಣ ಅಲ್ಲಿದೆ. ಬಾಗಲಕೋಟೆ ಮತಕ್ಷೇತ್ರದಲ್ಲಿ ಬರುವಂಥ ಮುಗುಳಲೆ ಎನ್ನುವ ಹಳ್ಳಿಯ ಉದಾಹರಣೆಯನ್ನು ಕೊಡುತ್ತಿದ್ದೇನೆ. ಅಲ್ಲಿಗೆ ಇವತ್ತಿನವರೆಗೆ ಸಂಪರ್ಕ ರಸ್ತೆ ಇಲ್ಲ. ಕಳೆದ ವರ್ಷ ಹಾಗೂ ಈ ವರ್ಷ ಅಲ್ಲಿಗೆ ನೀರು ಬಂದಾಗ ಸುಮಾರು 3 ತಿಂಗಳವರೆಗೆ ಆ ಗ್ರಾಮಕ್ಕೆ ಹೋಗಲು ರಸ್ತೆ ಇರಲಿಲ್ಲ. ಇಂಥ ಒಂದು ಸರ್ಕಾರ, ಈ ರೀತಿಯ ಅವ್ಯವಸ್ಥೆಯ ಸರ್ಕಾರ ನಮ್ಮನ್ನು ಆಳಬೇಕೇ? ಮುಳುಗಡೆ ಪ್ರದೇಶಗಳಲ್ಲಿರುವಂಥ ಜನರ ಬಗ್ಗೆ ಸರ್ಕಾರ ಪ್ರಾಮಾಣಿಕ ಚಿಂತನೆ ಮಾಡಬೇಕು ಎನ್ನುವ ಒತ್ತಡವನ್ನು ಒಂದು ನಿಯೋಗದ ಮುಖಾಂತರ ತೆಗೆದುಕೊಂಡು ಬಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡಾಗ, ಸನ್ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಕಂದಾಯ ಸಚಿವರು ಮತ್ತು ಸನ್ಮಾನ್ಯ ನೀರಾವರಿ ಸಚಿವರು ಹೇಳಿದರು, ನಿಮಗೆ ಉಪಯೋಗವಾಗುವ ಹಾಗೆ ನಾವು ಕೆಲಸವನ್ನು ಮಾಡುತ್ತೇವೆ, ಶೇ.25ರಷ್ಟು ಸವಕಳಿ ಮುರಿಯಲಾರದಂತ ಪರಿಹಾರವನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟರು. ಆ ಭರವಸೆ ಭರವಸೆಯಾಗಿ ಉಳಿದಿದೆಯೇ ಹೊರತು ಕಾರ್ಯಗತವಾಗಿಲ್ಲ. ಪರಿಹಾರ ಕೊಡಲು ಮೀನಮೇಷ ಮಾಡುವುದು, ಅಮಾಯಕ ರೈತರಿಗೆ ತೊಂದರೆ ಕೊಡುವುದು, ಆ ಡಾಕ್ಯುಮೆಂಟ್ ತೆಗೆದುಕೊಂಡು ಬಾ, ಈ ಡಾಕ್ಯುಮೆಂಟ್ ತೆಗೆದುಕೊಂಡು ಬಾ ಎನ್ನುವ ಸಬೂಬು ಹೇಳುತ್ತಾ ಅವರಿಗೆ ತೊಂದರೆ ಕೊಡುವುದು ಒಂದು ಭಾಗವಾದರೆ, ಅವರ ಜಮೀನುಗಳಿಗೆ ಪರಿಹಾರಧನ ಕೊಡದೇ ಸತಾಯಿಸುವುದು ಇನ್ನೊಂದು ಭಾಗವಾಗಿ ಅಲ್ಲಿ ಕಾಣುತ್ತಿದ್ದೇವೆ. ಕಳೆದ ಬಾರಿ ಬಂದಂಥ ಮಹಾಪೂರದಲ್ಲಿ ಭೂಸ್ವಾಧೀನವಾಗದೇ ಇದ್ದಂಥ ಜಮೀನಿನಲ್ಲಿ ನೀರು ಹೊಕ್ಕು ಸುಮಾರು 2-3 ಕೋಟಿ ರೂಪಾಯಿಗಳಷ್ಟು ಲುಕ್ಸಾನಾದರೂ ಕೂಡ ಅದರ ಬಗ್ಗೆ ಇವತ್ತಿನವರೆಗೆ ಸರ್ಕಾರ ಚಿಂತನೆ ಮಾಡಿಲ್ಲ. ಭೂಸ್ವಾಧೀನ ಕಾಯಿದೆಯಡಿಯಲ್ಲಿ ಸೆಕ್ಷನ್ 28-ಎ ಯನ್ನು ಇಂಟ್ರೊಡ್ಯೂಸ್ ಮಾಡಲಾಗಿದೆ. ಅದರಡಿಯಲ್ಲಿ ಸುಮಾರು ಸಾವಿರಾರು ಅರ್ಜಿಗಳಿದ್ದು ಅದನ್ನು ವಿಲೇವಾರಿ ಮಾಡಿಲ್ಲ. ಎರಡನೆಯದಾಗಿ, ಭೂಸ್ವಾಧೀನ ಮಾಡುವಂಥ ಸಂದರ್ಭದಲ್ಲಿ, ಜಮೀನಾಗಲೀ, ಮನೆಗಳಾಗಲೀ ನೀರಿಗೆ ಆಹುತಿಯಾಗುವಂಥ ಸಂದರ್ಭದಲ್ಲಿ ಮೊದಲೇ ಎಷ್ಟು ವರ್ಷಗಳ ಮೊದಲು ಪರಿಹಾರವನ್ನು ಕೊಡಬೇಕು ಎನ್ನುವ ವೈಜ್ಞಾನಿಕ ಚಿಂತನೆಯಾಗಬೇಕು, ನಾರ್ಮ್ಸ್ ಆಗಬೇಕು. ನನಗೆ ತಿಳಿದಂತೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆ ನಾರ್ಮ್ಸ್ ಮೂರು ವರ್ಷ ಇದೆ. ಮುಂದಿನ ಸೆಪ್ಟೆಂಬರ್‌ನಲ್ಲಿ ನೀರು ಬರುತ್ತದೆ ಎಂದರೆ ಈ ವರ್ಷ ಪರಿಹಾರಧನ ಕೊಡುವಂಥ ದುಸ್ಥಿತಿ ಇದೆ ಎಂದರೆ ಈ

ಸರ್ಕಾರ ಇರಬೇಕೇ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕೊನೆಯದಾಗಿ, ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ, ಕೊನೆ ಕಾಲದಲ್ಲಾದರೂ ಸ್ವಲ್ಪ ಒಳ್ಳೆಯ ಕೆಲಸವನ್ನು ಮಾಡಿ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ತೊಂದರೆಗೆ ಒಳಗಾದಂಥ ಜನಸಮುದಾಯ ತಮ್ಮ ಮೇಲೆ ವಿಶ್ವಾಸವಿಟ್ಟು ಮತ ಹಾಕಿದ್ದಾರೆ. ತಮ್ಮನ್ನು ಆರಿಸಿ ಕಳುಹಿಸಿದ್ದಾರೆ. ತಮ್ಮ ಮೇಲೆ ಯಾವ ನಂಬಿಕೆಗಳನ್ನು ಇಟ್ಟುಕೊಂಡಿದ್ದರು. ಅವುಗಳಲ್ಲಿ ಸ್ವಲ್ಪವಾದರೂ ತಾವು ಪ್ರಾಮಾಣಿಕವಾಗಿ ಕೆಲಸ ಮಾಡಿ. ಶೇ. 25ರಷ್ಟು ಸವಕಳಿ ಮುರಿಯಲಾರದಂತೆ ಪರಿಹಾರ ಕೊಡುತ್ತೇವೆ ಎನ್ನುವ ವಚನ ಕೊಟ್ಟಿರುವುದನ್ನು ತಾವು ನಿಭಾಯಿಸಿ. ಆ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವ ಯೋಜನೆಯನ್ನೂ ಹಾಕಿಕೊಳ್ಳುತ್ತೇವೆ ಎನ್ನುವ ಒಂದು ಭರವಸೆಯನ್ನು ಕೊಟ್ಟಿದ್ದರು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಪೂಜಾರಿಯವರು ಇದನ್ನು ಪ್ರಸ್ತಾಪ ಮಾಡುತ್ತಾರೆಂದು ತಿಳಿದುಕೊಂಡಿದ್ದೆ. ಮಾಡಲಿಲ್ಲ, ಆದ್ದರಿಂದ ನಾನು ಹೇಳುತ್ತಿದ್ದೇನೆ. ಬಾಗಲಕೋಟೆ ಜಿಲ್ಲೆ ಅಸ್ತಿತ್ವಕ್ಕೆ ಬಂದು ಸುಮಾರು ಒಂದು ವರ್ಷ ಎರಡು ತಿಂಗಳಾಯಿತು. ಇವತ್ತಿನವರೆಗೆ ಅಲ್ಲಿ ಸುಮಾರು ಶೇ.60ರಷ್ಟು ಅಧಿಕಾರಿಗಳನ್ನು ಸರ್ಕಾರ ಪೋಸ್ಟಿಂಗ್ ಮಾಡಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಮುಖ್ಯ ಕಾರ್ಯದರ್ಶಿ ಇಲ್ಲ. ಅಸಿಸ್ಟೆಂಟ್ ಕಮೀಷನರ್ ಇಲ್ಲ. ಕೌನ್ಸಿಲ್ ಸೆಕ್ರೆಟರಿಗಳಿಲ್ಲ ಜಿಲ್ಲಾ ಪಂಚಾಯಿತಿ ಅಸ್ತಿತ್ವಕ್ಕೆ ಬಂದು ಒಂದು ವರ್ಷವಾದರೂ ಶೇ.60ರಷ್ಟು ಅಧಿಕಾರಿಗಳನ್ನು ಹಾಕಲಿಲ್ಲವೆಂದರೆ ಇನ್ನು ನೀವು ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಜಾರಿಗೆ ತರುತ್ತೀರಿ? ಸರ್ಕಾರ ಯಾವ ರೀತಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎನ್ನುವುದನ್ನು ಹೇಳಿ.

ಶ್ರೀ ಪ್ರಹ್ಲಾದ ಹನುಮಂತಪ್ಪ: ಕೊನೆಯದಾಗಿ, ತಮ್ಮ ಮುಖಾಂತರ ಈ ಸದನಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನನಗೆ ಆ ಸರ್ಕಾರ ಈ ಸರ್ಕಾರ ಎಂದು ಯಾವ ಸರ್ಕಾರದ ಮೇಲೂ ಭರವಸೆ ಉಳಿದಿಲ್ಲ, ನಮ್ಮ ಜನಗಳಿಗೂ ಉಳಿದಿಲ್ಲ. ಅಲ್ಲಿಯ ಜನ ಧೈರ್ಯವಾಗಿ ಮನುಷ್ಯರಂತೆ ಬದುಕಬೇಕು ಎನ್ನುವ ವಾತಾವರಣ ನಿರ್ಮಾಣವಾಗಬೇಕು. ಆ ದಿಸೆಯಲ್ಲಿ ಈ ಸದನದಲ್ಲಿರುವ ಎಲ್ಲರೂ ಚಿಂತನೆ ಮಾಡಬೇಕು, ಆ ಜನರಿಗೆ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಾ, ಮಾತನಾಡಲು ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ, ನಮಸ್ಕಾರ.

+ ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಗೌರವಾನ್ವಿತ ಸಭಾಧ್ಯಕ್ಷರೇ, ನಮ್ಮ ಪಕ್ಷದ ನಾಯಕರು ತಂದಿರುವ ಅವಿಶ್ವಾಸ ನಿರ್ಣಯವನ್ನು ಬೆಂಬಲಿಸುತ್ತಾ ಅದಕ್ಕೆ ಪೂರಕವಾಗಿ ಕೆಲವು ಮಾತುಗಳನ್ನಾಡುತ್ತೇನೆ. ಈ ಜನತಾದಳ ಸರ್ಕಾರದಲ್ಲಿ ಮೂರು ರೀತಿಯ ಮಂತ್ರಿಗಳಿದ್ದಾರೆ. ಅದನ್ನು ನಾನು ಸಿ-ಕ್ಯೂಬ್ ($ಸಿ^3$)

ಎಂದು ಹೇಳುತ್ತೇನೆ. ಮೊದಲನೇ ಸಿ ಮಂತ್ರಿಗಳ ಹತ್ತಿರ ಹೋದರೆ ಅವರು ಅಲ್ಪಸ್ವಲ್ಪ ಕಂಪ್ಲೀಟ್ ಮಾಡಿ ಕೊಡುತ್ತಾರೆ. ಎರಡನೇ ಸಿ ಮಂತ್ರಿಗಳ ಹತ್ತಿರ ಹೋದರೆ ಅವರು ಏನೂ ಆಗುವುದಿಲ್ಲ, ಹಾಗಲ್ಲ, ಹೀಗಲ್ಲ ಎಂದು ಕನ್‌ವಿನ್ಸ್ ಮಾಡುತ್ತಾರೆ. ಮೂರನೇ ಸಿ ಮಂತ್ರಿಗಳು ಕನ್‌ಫ್ಯೂಸ್ ಮಾಡಿಬಿಡುತ್ತಾರೆ. ಇಂಥ ಸಿ-ಕ್ಯೂಬ್ ಮಂತ್ರಿಗಳ ಸರ್ಕಾರ ನಿಷ್ಕ್ರಿಯ ಸರ್ಕಾರ ಎನ್ನುವವುದನ್ನು ಸ್ಪಷ್ಟವಾಗಿ ಈ ಸದನದಲ್ಲಿ ಹೇಳಲು ನನ್ನ ನಾಲಿಗೆ ಬಯಸುತ್ತಿದೆ. ಮೈಸೂರು ನಗರ ಮಲ್ಲಿಗೆಯ ನಗರ. ಅಲ್ಲಿ ಇವತ್ತು ಧಾರಾಕಾರವಾಗಿ ಹರಿಯುತ್ತಿದೆ, ಬ್ರಾಂದಿ, ಬೀರುವಿನ ಆಗರ. ಇದಕ್ಕೆ ಕಾರಣ ನಮ್ಮ ಉಪ ಮುಖ್ಯ ಮಂತ್ರಿಗಳಾದ, ಮೈಸೂರಿನ ಉಸ್ತುವಾರಿ ಸಚಿವರು. ನನ್ನ ಕ್ಷೇತ್ರದಲ್ಲಿ ಆಗಿರತಕ್ಕಂಥ ಒಂದು ಘಟನೆಯೆಂದರೆ, ಲೋಗೋಮೆಸ್‌ಗೆ ಬ್ರಾಂದಿಗೆ ಲೈಸೆನ್ಸ್ ಕೊಡಬೇಡಿ ಎಂದು ಆಯುಕ್ತರಿಗೆ ಹೇಳಿದ್ದರೂ ಕೂಡ ಇವತ್ತು ಅಬಕಾರಿ ಅಧಿಕಾರಿಗಳು ಲಂಚಗುಳಿತನದಲ್ಲಿ ಪೂರ್ತಿ ಮುಳುಗಿಹೋಗಿ ಬ್ರಾಂದಿಯನ್ನು ಧಾರಾಳವಾಗಿ ನೀಡುತ್ತಿದ್ದಾರೆಯೇ ವಿನಃ ನಿಜವಾದಂಥ ವಿದ್ಯೆಯನ್ನು ಕೊಡತಕ್ಕಂಥ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಇವರು ಮಾಡುತ್ತಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತಿನ ದಿವಸ ಮೈಸೂರು ನಗರ ತನ್ನದೇ ಆಗಿರತಕ್ಕಂಥ ಪ್ರತಿಷ್ಠೆಯನ್ನು ಹೊಂದಿದ್ದು, ವಿದ್ಯಾವಂತರು ಹೆಚ್ಚಿಗೆ ಇರತಕ್ಕಂಥ ಈ ಜಾಗದಲ್ಲಿ ಇವತ್ತು ಕೇವಲ ಪುಂಡು ಪೋಕರಿಗಳು, ಸರಗಳ್ಳರು ಮತ್ತು ಕುಡಿದ ಅಮಲಿನಲ್ಲಿ ಚಾಕು ಚೂರಿಗಳನ್ನು ಇಟ್ಟುಕೊಳ್ಳತಕ್ಕಂಥ ಒಂದು ಮಟ್ಟಕ್ಕೆ ಹೋಗಬೇಕಾದರೆ ಈ ಬ್ರಾಂದಿಯ ವ್ಯಸನಕ್ಕೆ ಗುರಿಯಾಗಿರತಕ್ಕಂಥ ಈ ಸರ್ಕಾರ; ಖಂಡಿತವಾಗಿ ಈ ಸರ್ಕಾರಕ್ಕೆ ಕೊಡಬೇಕಾದ ಒಂದೇ ಒಂದು ನೈತಿಕ ಹೊಣೆಗಾರಿಕೆಯೆಂದರೆ ಜ್ಞಾನ. ವಿದ್ಯೆ ಎನ್ನತಕ್ಕಂಥ ಗುಪ್ತವಾದಂಥ, ಸುಪ್ತವಾದಂಥ ನಿಧಿಯನ್ನು ನೀಡುವಲ್ಲಿ ಈ ಸರ್ಕಾರ ವಿಫಲವಾಗಿದೆ. ಈವತ್ತು ಧಾರಾಕಾರವಾಗಿ, ಧಾರಾಳವಾಗಿ ಪುಂಡು ಪೋಕರಿಗಳನ್ನು, ಬ್ರಾಂದಿ ಅಂಗಡಿಗಳು ತಲೆ ಎತ್ತುವಂತೆ ಮಾಡುತ್ತಿರತಕ್ಕಂಥ ಈ ಸರ್ಕಾರ ತಾನು ಕೊಟ್ಟಂಥ ಆಶ್ವಾಸನೆಗಳನ್ನು ಅನುಷ್ಠಾನಕ್ಕೆ ತರುತ್ತದೆಯೇ? ಕಾನೂನು, ಸುವ್ಯವಸ್ಥೆಯನ್ನು ಹದಗೆಡಿಸುತ್ತಿದ್ದಾರೆ. ಮನುಷ್ಯನಿಗೆ ಒಂದು ಸಾತ್ವಿಕ, ನೈತಿಕ ಹಿನ್ನೆಲೆ ಇರಬೇಕು. ಮನುಷ್ಯನಿಗೆ ಅಧಿಕಾರ ಬಂದಾಗ, ಅದು ಯಾರಿಂದ ಬಂತು, ಯಾರಿಗಾಗಿ ಈ ಅಧಿಕಾರ ಎಂದು ಅರ್ಥೈಸಿಕೊಂಡು ಅರ್ಥಪೂರ್ಣವಾಗಿ ಸೇವೆ ಮಾಡತಕ್ಕಂಥ ದಿಕ್ಕಿನಲ್ಲಿ ಹೋಗುವಂಥ ಜನ ಪ್ರತಿನಿಧಿಗಳು ಕಡಿಮೆಯಾಗಿರತಕ್ಕಂಥ ಈ ಕಾಲದಲ್ಲಿ ಏನೋ ನಂಜಪ್ಪ, ಬಂದಷ್ಟೇ ಗುಂಜಿಕೊಳ್ಳುತ್ತೇನೆ ಎನ್ನುವ ಮಾತಿಗೆ ಹೊರಟಿರತಕ್ಕಂಥ ಇಂಥ ನಿರ್ಲಿಪ್ತ, ನಿಷ್ಕ್ರಿಯ ಸರ್ಕಾರ ಖಂಡಿತವಾಗಿ ಈ ಸಮಾಜಕ್ಕೆ ಬೇಕಾಗಿಲ್ಲ, ನಮ್ಮ ಕರ್ನಾಟಕಕ್ಕೆ ಬೇಕಾಗಿಲ್ಲ. ಇವತ್ತು ಅವರು ಅಧಿಕಾರಿಗಳ ಕೈಗೊಂಬೆಗಳಾಗಿದ್ದಾರೆ. ಒಬ್ಬ ಮಂತ್ರಿ ಹೇಳಿದರೂ ಅವರ ಮಾತಿಗೆ ಬೆಲೆ ಕೊಡುವುದಿಲ್ಲ. ಅಧಿಕಾರಿಗಳ ಹತ್ತಿರ ಹೋದರೆ ಬಿಸಾಕುತ್ತಾರೆ. ಈಗಾಗಲೇ ಕೆಲಸರು ಇದರ ಬಗ್ಗೆ ಮಾತನಾಡಿದ್ದಾರೆ. ನಾನು ಹಾಗಲ್ಲ, ** ಎಂದು ಐ.ಎ.ಎಸ್.

[illegible] ತೆಗೆದುಹಾಕಲಾಗಿದೆ.

ಅಧಿಕಾರಿಗಳನ್ನು ಹೇಳುತ್ತೇನೆ, ನಾನು ಹೆದರುವುದಿಲ್ಲ.

ಅಧ್ಯಕ್ಷರು: ಆ ಪದಗಳನ್ನು ಬಳಸಬಾರದು. ಅದು ಚೆನ್ನಾಗಿರುವುದಿಲ್ಲ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಆ ಪದಗಳನ್ನು ಬಳಸಬಾರದು ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಅವಿಧೇಯವಾಗಿ ನಡೆದುಕೊಳ್ಳುವಂಥ ಕೆಲವು ಅಧಿಕಾರಿಗಳು ಅದಕ್ಕೂ ಅರ್ಹರಾಗಿರುತ್ತಾರೆ. An officer is a bonded labour. ಅವರು ಅಧಿಕಾರಿಯಾಗಿ ಕೆಲಸ ಮಾಡಬೇಕು, ಜನಪ್ರತಿನಿಧಿಗಳಾದ ನಾವು ಜನಸೇವಕರಾಗಿ ಕೆಲಸ ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಾಂಡೆಡ್ ಲೇಬರ್ ಎನ್ನುವುದು ನಮಗೂ ಸೇರುತ್ತದೆ. ನಾವು ನಾಡಿನ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಬಂದಿರುವಂಥ ಅವರ ಪ್ರತಿನಿಧಿಗಳು. ಆ ಕೆಲಸವನ್ನು ನಾವು ಚೆನ್ನಾಗಿ ಮಾಡಬೇಕು, ಅಧಿಕಾರಿಗಳೂ ಮಾಡುವಂತೆ ನೋಡಿಕೊಳ್ಳಬೇಕು. ಅದು ನಮ್ಮ ಜವಾಬ್ದಾರಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮತದಾರ ಪ್ರಭುಗಳು ನಮ್ಮ ಮಾಲೀಕರು. ಆ ಮಾಲೀಕರಿಗೆ ನಾವು ಏನು ಕೆಲಸ ಮಾಡಬೇಕು ಎನ್ನುವುದನ್ನು ಅರ್ಥೈಸಿಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಆದರೆ ಆ ಅಧಿಕಾರಿಗಳ ಹತ್ತಿರ ಹೋದರೆ ಅವರು ತಮ್ಮದೇ ಆಗಿರತಕ್ಕಂಥ ಅಧಿಕಾರವನ್ನು ತೋರಿಸುತ್ತಾರೆ. ಒಬ್ಬರು ಎಂ.ಎಲ್.ಎ. ಬಂದಿದ್ದಾರೆ ಎನ್ನುವುದನ್ನೂ ನೋಡದೆ ಕೆಲವು ಅಧಿಕಾರಿಗಳು ಸಿಗರೇಟು ಸೇದಿಕೊಂಡು ಕುಳಿತಿರುತ್ತಾರೆ. ಇದು ಸರಿಯೇ? ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಈ ಮೂರೂ ವ್ಯವಸ್ಥೆಗಳು ಮೂರು ದಿಕ್ಕಿಗೆ ಹೋದಾಗ ರಾಜ್ಯ ಸರ್ಕಾರ ಸರಿಯಾಗಿ ನಡೆಯುತ್ತದೆಯೇ? ಸರ್ವತೋಮುಖ ಪ್ರಗತಿಯನ್ನು ಸಾಧಿಸಬೇಕಾದರೆ ಈ ಮೂರು ವ್ಯವಸ್ಥೆಗಳೂ ಪ್ರಾಮಾಣಿಕವಾಗಿ, ಪರಿಶುದ್ಧವಾಗಿ ಕೆಲಸ ಮಾಡಬೇಕು. ಒಬ್ಬ ಉಪಾಧ್ಯಾಯ ತರಗತಿಯ ಮಾನಿಟರ್ ಕೈಯ್ಯಲ್ಲಿ ಮಕ್ಕಳನ್ನು ನೋಡಿಕೊಳ್ಳುವಂತೆ ಹೇಳಿ ಎಲ್ಲೋ ಹೋಗಿ ಕುಳಿತುಕೊಂಡು ಆಟ ಆಡುತ್ತಿರುತ್ತಾನೆ. ಇದು ಈ ದೇಶಕ್ಕೆ ಮಾಡುವ ದ್ರೋಹ. ಒಬ್ಬ ರಾಜಕಾರಣಿಯಾದವನಿಗೆ ಅಧಿಕಾರ ಬಂದಾಗ ತನ್ನ ಸ್ವಾರ್ಥ ಮತ್ತು ತನ್ನ ಸ್ವಂತ ಜನಗಳ ಹಿತವನ್ನು ಬಯಸತಕ್ಕಂಥಾದ್ದು ಒಂದು ಮಹಾ ಪಾಪ. 15-20 ಸಾವಿರ ಸಂಬಳ ತೆಗೆದುಕೊಳ್ಳುವ ಒಬ್ಬ ಅಧಿಕಾರಿ ನಾಲ್ಕು ಕಡತಗಳನ್ನು ವಿಲೇವಾರಿ ಮಾಡಿ, ನಂತರ ಯಾವುದೋ ಒಂದು ಕ್ಲಬ್ಬಿನಲ್ಲಿ ಮೋಜು ಮಾಡುತ್ತಿದ್ದರೆ, ಅದು ಸರಿಯೇ? ಈ ಸರ್ಕಾರಕ್ಕೆ ದಕ್ಷತೆಯೇನಾದರೂ ಇದ್ದರೆ ಅದನ್ನು ಉಪಯೋಗಿಸಿ ನಮ್ಮ ಸಮಾಜದ ಋಣವನ್ನು ತೀರಿಸುವುದಕ್ಕೋಸ್ಕರ ಕೆಲಸ ಮಾಡಬೇಕು. ಅವರಿಗೆ ಕೊಡತಕ್ಕಂಥ ಸಂಬಳಕ್ಕೆ ಅವರು ಕೆಲಸ ಮಾಡಬೇಕು. ನಮಗೂ ಸಂಬಳ ಕೊಡುತ್ತಾರೆ, ಅವರಿಗೂ ಸಂಬಳ ಕೊಡುತ್ತಾರೆ. ಹೊಗೆಸೊಪ್ಪು ತಿನ್ನುವವಳೂ ಕೂಡ ತೆರಿಗೆ ರೂಪದಲ್ಲಿ ಕೊಟ್ಟಿರತಕ್ಕಂಥ ಹಣವನ್ನು ಸಂಬಳದ ರೂಪದಲ್ಲಿ ನಾವೆಲ್ಲರೂ

ತೆಗೆದುಕೊಳ್ಳುತ್ತಿರುವಾಗ ನಾವೆಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಬಾರದೇ? ಸಮಾಜಕ್ಕೆ ನಾವು ಮುಳುವಾಗಬೇಕೇ?

ಅಧ್ಯಕ್ಷರು: ಸ್ವಲ್ಪ ನಿಧಾನವಾಗಿ ಹೇಳಿ. ನಮ್ಮ ಸ್ಟಾಫ್ ಬರೆದುಕೊಳ್ಳಬೇಕು. ನೀವು ಹೇಳಿದ ಮಾತು ಕಡತಕ್ಕೆ ಹೋಗಬೇಕು, ನಾಳೆ ಪತ್ರಿಕೆಗಳಲ್ಲಿ ಶಂಕರಲಿಂಗೇಗೌಡರು ಈ ರೀತಿ ಭಾಷಣ ಮಾಡಿದರು ಎಂದು ಬರಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ನನಗೆ ನೀವೇ ಪತ್ರಿಕೆ. ನಾನು ಯಾವುದಕ್ಕೂ ಹೆದರುವುದಿಲ್ಲ.

ಮಂದಮತಿ ನಿಂದಿಸಲು ಮನಕೆ ತಂದುಕೊಳ್ಳದ ನರನು ಜಾಣನು,
ಸಂಧಿಸಿದ ಕಲಹದಲ್ಲಿ ಶಾಂತಿಯನು ಹೊಂದುವಾತ ಜಾಣನು,
ಬಂದ ಬಹು ಚಿಂತೆಯಲಿ ಧೈರ್ಯ ತಳೆವನತಿ ಜಾಣನು,
ಧರಣಿಯೊಳು ಪರರಿಗೆ ಹೊಣೆಗಾರನಾಗದ ನರನು ಜಾಣನು,
ಧರಣಿಯೊಳು ಹಿರಿದಾದ ಸನ್ಮಾರ್ಗದಲ್ಲಿ ನಡೆವ ನರನು ಜಾಣನು ನೋಡ

ಎನ್ನತಕ್ಕಂಥ ರೀತಿಯಲ್ಲಿ ನಾವು ಜಾಣರಾಗಿ ಕೆಲಸ ಮಾಡುತ್ತಿದ್ದೇವೆಯೇ ವಿನಃ **

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಅಧ್ಯಕ್ಷರೇ, ಆ ಅಜ್ಞಾನಿಗಳು ಎನ್ನುವ ಪದವನ್ನು ಕಡತದಿಂದ ತೆಗೆಯಬೇಕು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಪ್ರಜ್ವಲಿತೋ ಜ್ಞಾನಮಯಂ ಪ್ರದೀಪ ಎನ್ನುವಂತೆ ಜ್ಞಾನದ ಹಣತೆಯಿಂದ ಸಾವಿರಾರು ಜ್ಯೋತಿಗಳನ್ನು ಬೆಳಗಬೇಕಾಗಿರತಕ್ಕಂಥ ಆ ಜ್ಯೋತಿ ಇಲ್ಲಿ ಕುಂದಿದೆ.

ಆದರೆ ಗೋವಿಂದೇಗೌಡ ಪ್ರಾಮಾಣಿಕ, ಪರಿಶುದ್ಧ ಗಾಂಧೀವಾದಿ, ಮಲೆನಾಡಿನ ಗಾಂಧಿ ಎಂದು ಹೆಸರು ಪಡೆದಿರತಕ್ಕಂಥ ಮಂತ್ರಿಗಳಿಗೆ ನಾನು ನನ್ನ ಹೃದಯಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಅವರು ಯಾವ ಪಕ್ಷಕ್ಕೂ ಅಂಟಿಕೊಂಡಿಲ್ಲ. ಏಕೆಂದರೆ ಅಷ್ಟೊಂದು ಶ್ರದ್ಧೆಯಿಂದ, ಅಚ್ಚುಕಟ್ಟಾಗಿ ತಮ್ಮ ಕಾರ್ಯತತ್ಪರತೆಯನ್ನು ಉಪಯೋಗಿಸಿ ಈ ಸಮಾಜದ ಋಣವನ್ನು ತೀರಿಸುತ್ತಿದ್ದಾರೆ. ಎಲ್ಲೆಡೆಗೂ ಜ್ಞಾನದ ದೇಗುಲವನ್ನು ಕೊಡುತ್ತಿದ್ದಾರೆ. ಆದ್ದರಿಂದ ನಾನು ಎಲ್ಲೇ ಇದ್ದರೂ ಕೂಡ ಗೋವಿಂದೇಗೌಡರ ಪರವಾಗಿ ಮಾತನಾಡುತ್ತೇನೆ. ಏಕೆಂದರೆ ಅಧಿಕಾರ ಬಯಸುವವರು ಆ ರೀತಿ ಇರಬೇಕು.

ಶ್ರೀ ಕೆ.ಶ್ರೀನಿವಾಸಗೌಡ: ಹಾಗಾದರೆ ಈ ಅವಿಶ್ವಾಸ ನಿರ್ಣಯ ತಂದಿರುವುದು

** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಯಾರ ಮೇಲೆ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಅವಿಶ್ವಾಸ ನಿರ್ಣಯ ತಂದಿರುವುದು ಸರ್ಕಾರದ ಎಲ್ಲರ ಮೇಲೆ.

ಶ್ರೀ ಬಿ.ಬಿ.ಶಿವಪ್ಪ: ಗೋವಿಂದೇಗೌಡರೊಬ್ಬರನ್ನು ಬಿಟ್ಟು ಬಾಕಿಯವರ ಮೇಲೆ ನಮ್ಮ ಅವಿಶ್ವಾಸ ನಿರ್ಣಯ.

ಶ್ರೀ ಕೆ.ಶ್ರೀನಿವಾಸಗೌಡ: ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆ, ನೀವು ಪರವಾಗಿ ಓಟು ಕೊಡುತ್ತಿರೇನು?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಗೋವಿಂದೇಗೌಡರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರೆ ಬಿ.ಜೆ.ಪಿ.ಯವರು ಓಟು ಕೊಡುತ್ತೀರಾ? ಗೋವಿಂದೇಗೌಡರು ಪ್ರಾಮಾಣಿಕರಾಗಿದ್ದಾರೆ, ಮಾರ್ಗದರ್ಶನ ನೀಡುತ್ತಾರೆ ಎಂದು ಹೇಳುತ್ತಿದ್ದಾರೆ. ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರೆ ಓಟು ಕೊಡುತ್ತಾರೆಯೇ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾಡಿ, ನೋಡೋಣ.

ಶ್ರೀ ಕೆ.ಶ್ರೀನಿವಾಸಗೌಡ: ನೀವು ಓಟು ಕೊಡುತ್ತೇವೆ ಎಂದರೆ ಅದನ್ನೂ ಯೋಚನೆ ಮಾಡುತ್ತೇವೆ. ನೀವು ಹೇಳಿದಿರಿ, ಅದನ್ನು ನಿಮ್ಮ ನಾಯಕರು ಹೇಳಲಿಲ್ಲ. ನಿಮ್ಮ ನಾಯಕರು ಅದನ್ನು ಹೇಳಲಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ತಾಕತ್ತಿದ್ದರೆ ಗೋವಿಂದೇಗೌಡರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ. ಒಬ್ಬ ಮಲೆನಾಡಿನ ಗಾಂಧಿ ಈ ರಾಜ್ಯದ ಮುಖ್ಯಮಂತ್ರಿ ಎಂದು ನಾವು ಹಾಕುತ್ತೇವೆ.

ಶ್ರೀ ಕೆ.ಶ್ರೀನಿವಾಸಗೌಡ: ನೀವು ಹೀಗೆ ಮಾಡಿ, ನಾವು ಸಪೋರ್ಟ್ ಮಾಡುತ್ತೇವೆ ಎಂದು ಮೊದಲು ನಿಮ್ಮ ನಾಯಕರು ಹೇಳಲಿ. ನೀವು ಹೇಳುವುದಲ್ಲ, ಅದು ನಿಮ್ಮ ನಾಯಕರ ಬಾಯಲ್ಲಿ ಬರಲಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಹಾಗೆ ಇವರು ಕುಂಬಳಕಾಯಿ ಕಳ್ಳರು. ಅವರ ಹೆಗಲ ಮೇಲೇ ಅದು ಇರಬೇಕು. ಆದ್ದರಿಂದ ಅವರಿಗೆ ನಾವು ಏಕೆ ಹೇಳಬೇಕು, ನಾವು ಹೇಳಿ ಏನು ಪ್ರಯೋಜನ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಅದು ನಿಮ್ಮ ಸಂಸ್ಕೃತಿ, ನಮ್ಮ ಸಂಸ್ಕೃತಿಯಲ್ಲ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಧರ್ಮದ ಹರಿವು ಮರೆಯಾಗಿ

ವ್ಯವಹಾರವೇ ಜೀವನದ ಜೀವನಾಡಿಯಾಗಬಾರದು. ಮಾನವ ಧರ್ಮ ಧರ್ಮಕ್ಕೆ ಅಂಟಿಕೊಳ್ಳಬೇಕು. ಧರ್ಮೋ ರಕ್ಷಿತೋ ರಕ್ಷಿತಃ ಎನ್ನತಕ್ಕಂಥಾದ್ದು ನಮ್ಮ ಸಂಸ್ಕೃತಿ. ಹೆಂಡವೇ ರಕ್ಷಿತೋ ರಕ್ಷಿತಃ ಎನ್ನುವುದು ನಿಮ್ಮ ಸಂಸ್ಕೃತಿ. ಇದನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ.

ಶ್ರೀ ಯು.ಆರ್.ಸಭಾಪತಿ: ಇವರು ಸ್ವಲ್ಪ ಸ್ಲೋ ಆಗಿ ಹೇಳಿದರೆ ಚೆನ್ನಾಗಿರುತ್ತದೆ. ಬಹಳ ಅರ್ಥಗರ್ಭಿತವಾಗಿರುತ್ತದೆ. ಬಹಳ ವೇಗವಾಗಿ ಹೇಳುತ್ತಿದ್ದಾರೆ. ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಬಿ.ಶಿವಪ್ಪ: ತಾವು ಹೇಳುವುದನ್ನು ಸ್ವಲ್ಪ ನಿಧಾನವಾಗಿ ಹೇಳಿದರೆ ಅವರೂ ಬರೆದುಕೊಳ್ಳುತ್ತಾರೆ. ಇಲ್ಲದಿದ್ದರೆ ನೀವು ಹೇಳುವುದನ್ನು ಅವರು ಬೇರೆ ರೀತಿಯಲ್ಲಿ ಬರೆದುಕೊಳ್ಳುತ್ತಾರೆ

ಅಧ್ಯಕ್ಷರು: ನಿಮ್ಮಂಥ ಹಿಂದುಳಿದ ಸಮಾಜಕ್ಕೆ ಅವರೇನು ಮಾಡುತ್ತಾರೆ. ಅವರು ಮುಂದುವರೆದವರು. ಅವರದ್ದು ಸ್ಪೀಡ್ ಇದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಈ ನಾಡಿನ ಧರ್ಮವನ್ನು, ಸಂಸ್ಕೃತಿಯನ್ನು, ಈ ನಾಡಿನಲ್ಲಿರತಕ್ಕಂಥ ಅತುಳವಾಗಿರತಕ್ಕಂಥ ತನ್ನದೇ ಆಗಿರತಕ್ಕಂಥ ಗಂಭೀರತೆಯನ್ನು ಯಾರು ಅಲ್ಲಗಳೆಯುತ್ತಾರೆ ಅವರು ಅಲೆಮಾರಿಗಳಾಗುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅವತ್ತು ನೀವು ಹೇಳಿದಿರಿ, ತಾಯಿ ನಿಜವಾದ ತಾಯಿ. ನಮಗೆ ಅರಿವಿಲ್ಲದಂಥ ಅಗೋಚರವಾದ ಶಕ್ತಿ ಇದೆ. ಆ ಶಕ್ತಿಯನ್ನು ನಾವು ಪೂಜಿಸಿದಾಗ ನಮಗೆ ಭಕ್ತಿ ಬರುತ್ತದೆ. ನಮ್ಮ ಮನಸ್ಸನ್ನು ಪರಿಪೂರ್ಣ ಮಾಡಿಕೊಳ್ಳಬೇಕಾದರೆ ನಮ್ಮಲ್ಲಿರತಕ್ಕಂಥ ಕೊಳಕು ಮನಸ್ಸನ್ನು ತೆಗೆದುಹಾಕಿ ನಿರ್ಭಯವಾದ, ನಿರ್ಮಲವಾದ ಮನಸ್ಸನ್ನು ಸಮಾಜಕ್ಕೆ ನೀಡಿದಾಗ ಮಾತ್ರ ಬೆಲೆ ಬರುತ್ತದೆ. ಅದನ್ನು ಬಿಟ್ಟು ಒಳಗೊಳಗೇ ಕೊಳಕು ಹೃದಯಿಗಳಾದರೆ ಆ ಹೃದಯಗಳು ಈ ಸಮಾಜಕ್ಕೆ ಒಳ್ಳೆಯದನ್ನು ಮಾಡಲಾರವು. ಆಯಸ್ಸು, ವಿದ್ಯೆ, ಕೆಲಸ,ಹಣ, ಅಧಿಕಾರ ಈ ಐದೂ ತಾಯಿಯ ಗರ್ಭದಲ್ಲೇ ಬರೆದಿರುತ್ತವಂತೆ. ಡಿ.ವಿ.ಜಿ.ಯವರು ಒಂದು ಮಾತನ್ನು ಹೇಳುತ್ತಾರೆ,

''ಅವರೆಷ್ಟು ಬಲವಂತರು ಇವರೆಷ್ಟು ಬಲವಂತರು, ನೀವೆಷ್ಟು ಧನವಂತರು ಎನ್ನುವ ಕೊರಗಿನಲಿ ಬಳಿಕ ನಿನಗೆಷ್ಟಿದೆಯೋ, ಇಲ್ಲವೋ ಎಂದು ಕೊರಗುವುದು ಶಿವನಿಗೆಂತು ತಜ್ಞತೆಯೇ ಮಂಕುತಿಮ್ಮ.''

ಎಂಥ ಅದ್ಭುತವಾದ ಮಾತು. ಅಂಥ ಭಾಗ್ಯ ನಮಗೆ ಬಂದಿದೆ. ಒಂದು ಸಲ ನೀವು ಹೇಳಿದಿರಿ, ಈ ಸದನಕ್ಕೆ ಬರಬೇಕೆಂದು ಎಷ್ಟೋ ಜನ ತಪಸ್ಸು ಮಾಡಿ ತಪಸ್ಸಿನಲ್ಲಿಯೇ ಹೊರಟು ಹೋಗಿದ್ದಾರೆ ಎಂದು. ಅಂಥ ತಪಸ್ಸಿನ ಫಲ ಮತ್ತು ನಾವು ಮಾಡಿರತಕ್ಕಂಥ

ಪೂರ್ವಜನ್ಮದ ಸುಕೃತ ಫಲದಿಂದ ನಾವು ಇಲ್ಲಿಗೆ ಬಂದಿದ್ದೇವೆ. ಆ ಫಲವನ್ನು ಸರಿಯಾಗಿ ಸಸಿ ನೆಟ್ಟು, ಅದಕ್ಕೆ ನೀರು ಹಾಕಿ ಅದನ್ನು ಹೆಮ್ಮರವಾಗಿ ಬೆಳೆಸಬೇಕು.

ಶ್ರೀ ಕೆ.ಶ್ರೀನಿವಾಸಗೌಡ: ಹಾಗಾದರೆ ಜನ ಇವರಿಗೆ ಓಟು ಕೊಟ್ಟಿಲ್ಲವೇ? ಕೇವಲ ಇವರ ಸುಕೃತ ಫಲದಿಂದ ಇವರು ಇಲ್ಲಿ ಶಾಸಕರಾಗಿ ಬಂದಿದ್ದಾರೆಯೇ? ಜನರು ಓಟು ಕೊಟ್ಟಿದ್ದರಿಂದಲೇ ನೀವು ಇವತ್ತು ಶಾಸಕರಾಗಿದ್ದೀರಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಕಾಯಕವೇ ಕೈಲಾಸ. ತೋಡಿದ ಬಾವಿಗೆ ಜಲವೇ ಸಾಕ್ಷಿ, ಮಾಡಿದ ಕೆಲಸಕ್ಕೆ ಮಾನ್ಯತೆಯೇ ಸಾಕ್ಷಿ. ಮೇಯರ್‌ಅನ್ನಾಗಿ ಮಾಡಿದಂಥ ಜನ ಇವತ್ತು ಶಾಸಕರನ್ನಾಗಿ ಮಾಡಿದ್ದಾರೆ. ಮಾತಿಗಿಂಥ ಕೃತಿ ಮೇಲು.

''ಆಡದೇ ಮಾಡುವವನು ರೂಢಿಯೊಳಗುತ್ತಮನು,
ಆಡಿ ಮಾಡುವವನು ಮಧ್ಯಮನು,
ಆಡಿ ತಾ ಮಾಡದವನು ಅಧಮನು ಈ ಲೋಕದಲಿ ಸರ್ವಜ್ಞ''

ಎಂದು ಹೇಳಿದ್ದಾರೆ.

ಆಡದೇ ಮಾಡುವವರು ನಾವು. ಆಡದೇ ಮಾಡುವವರು ರೂಢಿಯೊಳಗುತ್ತಮರು ಎನ್ನುವ ಹಾಗೆ ನಾವು ಉತ್ತಮರು. ಹಾಗಾಗಿಯೇ ನಾವು ಇಲ್ಲಿ ಬಂದು ನಿಂತಿರುವುದು. ನಾನು ಈ ವಿಧಾನಸಭೆಯಲ್ಲಿ ಹೇಳುತ್ತೇನೆ, ಖಂಡಿತವಾಗಿ ನಾನು ಮಾಡಿರತಕ್ಕಂಥ ಕೆಲಸಕ್ಕೆ ಜನ ಬೆಂಬಲ ಕೊಟ್ಟಿದ್ದಾರೆ ಎನ್ನುವುದಕ್ಕೆ 80 ಸಾವಿರ ಓಟುಗಳಲ್ಲಿ 54 ಸಾವಿರ ಓಟುಗಳು ಬಿ.ಜೆ.ಪಿ.ಯ ಪೆಟ್ಟಿಗೆಗೆ ಹಾಕಿರುವುದೇ ಸಾಕ್ಷಿ ಎಂದು. ಅದಕ್ಕೆ ನಾನು ಹೇಳಿದ್ದು, ತೋಡಿದ ಬಾವಿಗೆ ಜಲವೇ ಸಾಕ್ಷಿ, ಮಾಡಿದ ಕೆಲಸಕ್ಕೆ ಮಾನ್ಯತೆಯೇ ಸಾಕ್ಷಿ ಎನ್ನುವ ರೀತಿಯಲ್ಲಿ ಓಟು ಕೊಟ್ಟಿದ್ದಾರೆ. ಜನಗಳಿಗೆ ಮುಖ ತೋರಿಸಿ ಜಿಂಕೆಯ ಹಾಗೆ ಅಲೆದಾಡುವುದು ಮುಖ್ಯವಲ್ಲ. ಜನಗಳ ಸಮಸ್ಯೆಗಳಿಗೆ ಸ್ಪಂದಿಸಬೇಕು. ಮಕ್ಕಳು ಹುಟ್ಟಿದ ಕೂಡಲೇ ಅಳುತ್ತಾರೆ. ಏಕೆಂದು ಒಬ್ಬ ಕವಿ ಹೇಳುತ್ತಾನೆ, ಮಂದಮತಿಗಳ ವಿಶ್ವನಾಟ್ಯಕೆ ಬಂದೆವಲ್ಲಾ ಎಂದು... ತಾಯಿಯ ಗರ್ಭದಿಂದ ಹೊರಬಂದ ತಕ್ಷಣ ಮಗು ಕರ್ಕಶವಾಗಿ ಅಳುತ್ತದೆ. ಅಳುವ ಮಗುವಿಗೆ ತಾಯಿ ಅಕ್ಕರೆಯಿಂದ ಸಕ್ಕರೆಯ ನೀರನ್ನು ಬಾಯಿಗೆ ಹಾಕಿದಾಗ ಮಗು ಅದನ್ನು ಚಪ್ಪರಿಸುತ್ತಾ ಹೇಳುತ್ತದೆ,

''ಹುಟ್ಟಿದರೆ ಬದುಕುವಾಸೆ,
ಬದುಕಿದರೆ ಮದುವೆಯಾಸೆ,
ಮದುವೆಯಾದರೆ ಮಕ್ಕಳ ಆಸೆ,
ಮಕ್ಕಳಾದರೆ ಮನೆಯ ಆಸೆ,
ಮನೆಯಾದರೆ ಮಂತ್ರಿಯಾಗುವ ಆಸೆ,
ಮಂತ್ರಿಯಾದರೆ ದೋಚುವ ಆಸೆ'' ಎಂದು.

12.30 ಪಿ.ಎಂ

ಅಧ್ಯಕ್ಷರು: ತಾವು ಕೊನೆಯಲ್ಲಿ ಹೇಳಿದ್ದು ನನಗೆ ಕೇಳಲಿಲ್ಲ ಅದೇನು ದೋಸೆ ಆಸೆಯೋ ಅಥವಾ ದೋಚುವ ಆಸೆಯೋ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ದೋಚುವ ಆಸೆ ಪರಿಪೂರ್ಣತೆಯನ್ನು ಪಕ್ವತೆಯಲ್ಲಿಟ್ಟುಕೊಂಡಿರುವುದರಿಂದ ಈ ಸರ್ಕಾರದಲ್ಲಿ ಸಭಾಧ್ಯಕ್ಷರಾಗಿ ನೀವಲ್ಲದೆ ಯಾರೂ ಅಧಿಕಾರವನ್ನು ನಡೆಸುವುದಕ್ಕೆ ಆಗುತ್ತಿರಲಿಲ್ಲ. ಇವರೆಲ್ಲರೂ ತಿಮಿಂಗಿಲಗಳಿದ್ದ ಹಾಗೆ, ಒಳಗೆ ಹೋಗುವುದು, ಇದ್ದು ಬರುವುದು, ಆದರೆ ಅದನ್ನು ತಾವು ದೃಡತೆಯಿಂದ, ಏಕತೆಯಿಂದ, ಧೃಡಚಿತ್ತದಿಂದ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸದಸ್ಯರು: ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಮಾನ್ಯ ಶಂಕರಲಿಂಗೇಗೌಡರು ಮಂತ್ರಿಯಾಗುತ್ತೀರೋ ಇಲ್ಲವೊ ಎಂದು ಕೇಳಬೇಕು.

(ಗೊಂದಲ)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಉಳಿದವರೆಲ್ಲಾ, ನೀವುಗಳೆಲ್ಲಾ ಛಿಧ್ರವಾಗಿ ಹೊರಟು ಹೋಗುತ್ತೀರಿ, ಇಲ್ಲಿ ನಾವೇ ಭದ್ರವಾಗಿರುತ್ತೇವೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಅಧ್ಯಕ್ಷರೆ, ತಾವು ನನಗೆ ಅನುಮತಿ ಕೊಟ್ಟರೆ ಮಾನ್ಯ ಸದಸ್ಯರಿಗೆ ಒಂದು ಕವನದ ಮೂಲಕ ಉತ್ತರಿಸಬಯಸುತ್ತೇನೆ. ಏಕೆಂದರೆ, ಮಾನ್ಯ ಸದಸ್ಯರು ಸ್ವಲ್ಪ ಭ್ರಮೆಯಲ್ಲಿದ್ದಾರೆ. ಆ ಭ್ರಮೆ ಏನೆಂಬುದನ್ನು ಅವರು ತಿಳಿದು ಕೊಳ್ಳಬೇಕು.

:: ಜಾನಪದ ಹೇಯ ಗೀತೆಗಳು ::

ಇದು ಒಂದು ಪಾರ್ಟಿಯ ಪದ್ಯ.

ಒಂಟಿಗಾಲಿನ ನೆಂಟ ಕುಂಟುತಾ ನಡೆದಾನಾ
ಊರುಗೋಲೊಂದು ಹಿಡಿದಾನಾ
ಊರುಗೋಲೊಂದು ಹಿಡಿದಾನಾ ದೇಶಕ್ಕೆ
ಭಾರಿ ಆಸರೆ ಕೊಡುತಾನಾ.

ವನವಾಸ ಮುಗಿಸಾನಾ ದರಬಾರ ನಡೆಸಾನಾ
ಉಂಡುಂಟುಪಟ್ಟ ಪೇರ್‍ಯಾನಾ, ಉಂಡುಂಟು ಪಟ್ಟ
ಪೇರ್‍ಯಾನ ಮರುಗಳಿಗೆ ಸೊಂಟ ಚಳಕೇಂದು ಚೀರ್‍ಯಾನಾ

ರಾಯಲ ಸೀಮೆಯವನೆ ರಂಗಮಂಚದವನೆ ಸೊಂಟಕ್ಕೆ
ತಗಚಿ ಕೊಡಬಾರೋ, ಸೊಂಟಕ್ಕೆ ತಗಚಿ ಕೊಡಬಾರೋ
ಸರ್ದಾರ ನಿನ್ನ ಹೆಸರ ಹೇಳಿ ದೀಪ ಉರಿಸೋ

ಇದು ನಿಮ್ಮ ಪರಿಸ್ಥಿತಿ.

ಜಯಜಯತು ಜೋಗವ್ವ ಹೊತ್ತಿ ಒದಗಿದೆಯವ್ವ
ನಿನಾಲ್ಕು ಉದೋ ಉದೋ ಎಂದೆನೆ,
ನಿನಾಲ್ಕು ಉದೋ ಉದೋ ಎಂದೆನೆ, ಕುಣದೆನೆ
ನಿನ್ನ ಹೆಜ್ಜೆಯ ಗೆಜ್ಜೆಯ ನಾನಾದೆನೆ.

ಇದು ನಿಮ್ಮ ಪ್ರಧಾನಿಯವರ ಪರಿಸ್ಥಿತಿ.

ಕಲಸುಮೇಲೋಗರದ ಹಂಗಿನರಮನೆಯಲ್ಲಿ
ಕಮಲದ ಮುಖಿಯರು 18, ಕಮಲ ಮುಖಿಯರು 18
ಕೂಡಿಕೊಂಡು ಹಿಂದು ಮುಂದಾಗಿ ರಥವನ್ನು ಎಳೆದಾರಾ

ಇದು ನಿಮ್ಮ ಪರಿಸ್ಥಿತಿ.

ಸರಸವಾಡುವ ಸಮಯ ಬಲುಸೊಗಸು ಮದುಮಗನೆ
ವಿರಸ ಬಂದರೆ ಮದುವೆ ಮುಗಿಯಿತು, ವಿರಸ ಬಂದರೆ
ಮದುವೆ ಮುಗಿಯಿತು, ಕರಿಮಣಿ ಬಿಚ್ಚಿ ಉದುರಿತೊ
ನೆಲದೊಳಗೆ.

ಕಾಂಚನಮೃಗವನ್ನು ಕಂಡು ಕುಣಿದಾರೋ ಸುಳಿದಾಡಿ,
ಆಸೆಯ ಬಾಣ ನೆಟ್ಟಿತ್ತಲ್ಲೋ, ಆಸೆಯ ಬಾಣ
ನೆಟ್ಟಿತ್ತಲ್ಲೋ ಎಲೆ ರಾಮ, ಸೀತೆಯನ್ನು ಕಾಡಿಗೆ
ಅಟ್ಟಿತ್ತಲ್ಲೋ

ಆ ರೀತಿಯಲ್ಲಿ ಕಾಡಿಗೆ ಅಟ್ಟುವ ಪರಿಸ್ಥಿತಿ ಬಂದಿದೆ. ಇದನ್ನು ಮಾನ್ಯ ಸದಸ್ಯರು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾತೊಂದು ಶೃಂಗಾರ, ನಡತೆಯೊಂದು ಬಂಗಾರ, ಆದಾಗ ಹೃದಯ ಪರಿಪೂರ್ಣ ಬೃಹದಾಕಾರ. ಇದರಲ್ಲಿ ಯಾವುದು ನಿಮಗೆ ಇಲ್ಲ. ಇವೆಲ್ಲಾ ಕೆಲಸಕ್ಕೆ ಬಾರದ ಕವನ, ಕುಳಿತು ಬರೆದಿರುವಂಥದ್ದು ಈ ಕವನ. ಕವನಗಳ ಮಾಲೆ ಇನ್ನೂ ಸಾವಿರವುಂಟು, ಕವನಗಳ ಮಾಲೆ ಇನ್ನೂ ಸಾವಿರವುಂಟು, ಮಾತನಾಡಿದಂತೆ ನಡೆದವನು ಅವನೇ ಲೋಕಕ್ಕೆ ಕಾರಣಕರ್ತ ನೋಡು ಎಂದ,

ಎನ್ನುವಂತಹ ಮಾತು ಒಂದು ಇದೆ. ಮಾತಿಗಿಂತ ಕೃತಿ ಮೇಲು, ಆಡದೆ ಮಾಡಿದವನು ರೂಢಿಯೊಳಗೆ ಉತ್ತಮನು ಎಂದು ಹೇಳುವ ರೀತಿಯಲ್ಲಿ ಬಸವಣ್ಣನವರು ಒಂದು ಮಾತನ್ನು ಹೇಳುತ್ತಾರೆ.

ನೆರೆಕೆನ್ನೆಗೆ ತೆರೆ ಗಲ್ಲಕೆ ಶರೀರ ಗೂಡು ಹೋಗುವ ಮುನ್ನ
ಹಲ್ಲು ಹೋಗಿ ಬೆನ್ನುಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನ್ನೂರಿ ಕೋಲುಹಿಡಿಯುವ ಮುನ್ನ
ಮುಪ್ಪಿಂದೊಪ್ಪುವಳಿಯುವ ಮುನ್ನ, ಮೃತ್ಯು ಮುಟ್ಟದ ಮುನ್ನ
ಪೂಜಿಸು ನನ್ನ ನಿನ್ನ ಪಾದಕಮಲಗಳಲ್ಲಿ ಕೂಡಲಸಂಗಮ ದೇವ

ಎಂದು ಪೂಜ್ಯ ಬಸವಣ್ಣನವರು ಹೇಳಿದ್ದಾರೆ. ಇಂಥ ಪರಿಪಕ್ವವಾಗಿರುವ ಕವನವನ್ನು ಬಿಟ್ಟು ಯಾರೋ ನವ್ಯ ಕವನ ಬರೆದಿದ್ದು ಎಷ್ಟು ಉತ್ತಮ? ಯಾರೊಬ್ಬರು ಒಂದು ನವ್ಯ ಕಾವ್ಯವನ್ನು ರಚಿಸಿದ್ದರು.

ಅಕ್ಕನ ಮಗಳು ಚಿಕ್ಕೋಳು ಎಂತಿದ್ದೆ, ಚಿತ್ತಾರೆ
ಕಾಣೆ ನಿನ್ನ ಮಗಳು, ಬಿಲ್ಪತ್ರೆ, ಮುತ್ತಿನ ಚೆಂಡು ಆಗೋಳೆ,

ಈ ರೀತಿ ಕೆಲಸಕ್ಕೆ ಬಾರದ ಕವನಗಳನ್ನು ಬರೆಯುತ್ತಾರೆ. ನಮ್ಮ ಹೆಣ್ಣುಮಕ್ಕಳಲ್ಲಿರತಕ್ಕಂಥ ಸೌಂದರ್ಯವನ್ನು ಕಟ್ಟುನಿಟ್ಟಾಗಿ ವರ್ಣಿಸುವಂತಹ ಶಕ್ತಿ ಇಲ್ಲ. ಕೇವಲ ಹಾವಾಭಾವಗಳನ್ನು ಅವರ ಅಂಗಾಗಗಳನ್ನು ವರ್ಣಿಸುವಂತಹ ಕವನಗಳನ್ನು ಬರೆಯತಕ್ಕಂಥದ್ದು ಸರಿಯಲ್ಲ. ಹೆಣ್ಣು ಮಕ್ಕಳು ಎಂದರೆ ಹೆಣ್ಣು ಮನುಷ್ಯನ ಬಾಳಿನ ಕಣ್ಣು. ಹೆಣ್ಣು, ಅಕ್ಕನಾಗಿ, ತಂಗಿಯಾಗಿ, ಮಡದಿಯಾಗಿ, ಮಹಾಮಾತೆಯಾಗಿ, ಜಗತ್ನ್ನು ರಕ್ಷಿಸುವಂತಹ ಹೆಣ್ಣು ಮನುಷ್ಯನ ಬಾಳಿನ ಕಣ್ಣು. ಇಂಥ ಕಣ್ಣಿಗೆ ಕಠೋರವಾದ ಚಿತ್ರಹಿಂಸೆ. ದಳ ಸರ್ಕಾರದಲ್ಲಿ ಸಂಜೆಯ ವೇಳೆಯಲ್ಲಿ ನಿರ್ಭಯವಾಗಿ ಒಂಟಿ ಹೆಣ್ಣು ಓಡಾಡುವುದಕ್ಕೆ ಆಗುವುದಿಲ್ಲ. ದಳಗಳೆಲ್ಲಾ ಉದುರಿ ಹೋಗಿವೆ. ಮಧ್ಯದಲ್ಲಿ ಒಂದು ಚೆಂಡು ಮಾತ್ರ ಇದೆ ಅದು ಯಾವಾಗ ಉದುರಿ ಹೋಗುತ್ತದೋ ಗೊತ್ತಿಲ್ಲ. ಇಂತಹ ಕನಿಷ್ಠವಾದ, ಅಹಿತಕರವಾದಂಥ ಕಲ್ಪನೆಗಳನ್ನು, ಭಾವನೆಗಳನ್ನು, ಜನರಲ್ಲಿ ಮೂಡಿಸಿ ಅಂಧಕಾರವನ್ನು ನೀಡುತ್ತಿರುವಂತಹ ದಳದ ಸರ್ಕಾರದಲ್ಲಿ, ದಳಗಳೆಲ್ಲಾ ಉದುರಿ ಹೋಗಿ ಈಗ ಕೇವಲ ಕಿತ್ತಾಟದ ಗೊಂಬೆಗಳಾಗಿದ್ದಾರೆ. ಈ ಗೊಂಬೆಗಳು ಯಾತಕ್ಕೂ ಬರುವುದಿಲ್ಲ. ಕುಣಿಯುವುದಕ್ಕೆ ಆಗುವುದಿಲ್ಲ, ಬಳಸುವುದಕ್ಕೂ ಆಗುವುದಿಲ್ಲ. ಆಡಿಸಿ ನೋಡು ಬೀಳಿಸಿ ನೋಡು ಎನ್ನುವಂತಹ ಮಟ್ಟಕ್ಕೆ ಹೋಗಿದೆ.. ಎಲ್ಲಿಗೆ ಹೋಗುತ್ತದೋ, ಏನು ಮಾಡುತ್ತದೋ, ಉಳಿಯುತ್ತದೋ, ಬೀಳುತ್ತದೋ ಗೊತ್ತಿಲ್ಲ ಇಂಥ ಪರಿಸ್ಥಿತಿಯನ್ನು ಇವತ್ತು ಈ ದಳ ಸರ್ಕಾರ ನಿರ್ಮಾಣ ಮಾಡಿದೆ..

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ: ಆಡಿಸಿ ನೋಡು, ಬೀಳಿಸಿ ನೋಡು ಉರುಳಿ ಹೋಗದು ಆ ಹಾಡು ಪೂರ್ತಿ ಮಾಡಬೇಕು. ಉರುಳಿ ಹೋಗದು.

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ: ಉರುಳಿಹೋಗುವುದಿಲ್ಲ. ಯಾವ ಗಳಿಗೆಯಲ್ಲೂ ಸ್ಥಿರತೆಯಿಂದ ಪಟ್ಟಭದ್ರವಾಗಿ ನಿಲ್ಲಬೇಕು ಅದೇ ನಿಜವಾದ ಸರ್ಕಾರ. ಮನುಷ್ಯನಿಗೆ ಬಹು ಮುಖ್ಯವಾಗಿರುವಂಥದ್ದು ಎಂದರೆ, ಮನ, ಮಾನಸಿಕ ಸ್ಥೈರ್ಯ ಇರಬೇಕು. ಎಚ್ಚರವಿರಬೇಕು ನಡೆನುಡಿಯಲ್ಲಿ, ಮಚ್ಚರವಿರಬೇಕು ಭವಸಂಸಾರದಲಿ, ಹುಚ್ಚರಾಗಿರಬೇಕು ಜನತೆಯ ಕಾಯಕಲ್ಪದಲಿ, ಇಲ್ಲದೆ ಹೋದರೆ ಜನ ಸರಿಯಾದ ರೀತಿಯಲ್ಲಿ ಲಾಠಿಯಲ್ಲಿ ಹೊಡೆಯುತ್ತಾರೆ.

ಆಲೂಗಡ್ಡೆ ಬೆಲೆ ಏರಿಸಿದಿರಿ, ಈರುಳ್ಳಿ ಬೆಲೆ ಏರಿಸಿದಿರಿ, ಬಡಜನಗಳ ಮೇಲೆ ಬ್ರಹ್ಮಾಸ್ತ್ರ ಬಿಟ್ಟು ಅವರ ಬದುಕಿನ ಜೊತೆಗೆ ಚೆಲ್ಲಾಟವಾಡುತ್ತಿರಲ್ಲಾ ನೀವು ಜನತಾದಳವೋ ಅಥವಾ ಜನಪರ ಗೋಳೋ. ಇಂಥ ಅನೀತಿ ಅನ್ಯಾಯದ ಮಾರ್ಗದವರ ಜೊತೆಯಲ್ಲಿ ಒಪ್ಪಂದ ಮಾಡಿಕೊಳ್ಳುವವರು ನಾವಲ್ಲ. ಬಿಜೆಪಿಯವರು ಯಾವಾಗಲೂ ಅನೀತಿ, ಅನ್ಯಾಯ, ಅಧರ್ಮ, ಅನೈತಿಕ, ವಿರುದ್ಧ ಹೋರಾಡುತ್ತೇವೆ. ನಾವು ಎಷ್ಟು ಕಾಲ ಜೀವಿಸಿದೆವು ಎನ್ನುವುದು ಮುಖ್ಯವಲ್ಲ ನಾವು ಹೇಗೆ ಜೀವಿಸುತ್ತೇವೆ. ನಾವು ಎಷ್ಟು ಕಾಲ ಜೀವಸಿದೆವು ಎನ್ನುವು ಮುಖ್ಯವಲ್ಲ ನಾವು ಹೇಗೆ ಜೀವಿಸುತ್ತೇವೆ ಎನ್ನುವುದು ಮುಖ್ಯ. ಇಂಥ ತಳಪಾಯವನು ಹಾಕಿಕೊಂಡಾಗ ಮಾತ್ರ ಮಾನವೀಯತೆಗೆ, ಮನುಷ್ಯನಿಗೆ ಬೆಲೆ ಬರುತ್ತದೆ. ಮಾನವ ಎಂಬ ಮೂರಕ್ಷರದಲ್ಲಿ ಅರ್ಥವಿದೆ, ಮಾ-ಮಾತು, ನ-ನಡತೆ, ವ-ವಜ್ರ. ಅಂದರೆ, ಮಾತು ಮತ್ತು ನಡತೆ ವಜ್ರದಂತಿದ್ದಾಗ ಮಾತ್ರ ಮಾನವನಿಗೆ ಬೆಲೆ ಬರುತ್ತದೆ. ಕೆಲವರು ಹೇಳುತ್ತಾರೆ, ಫಾರೆಸ್ಟ್ ಎಂದರೆ ಮಾನವನು ಅದನ್ನು ಫಾರ್ ರೆಸ್ಟ್ ಎಂದು, ಹಾರ್ಟಿಕಲ್ಚರ್ ಎಂದರೆ ಹಾರ್ಟ್-ಕಲ್ಚರ್ ಎಂದು ಮಾನವ ತಿಳಿದುಕೊಂಡರೆ ಹೇಗೆ? ಇವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಮಾನವ ತನ್ನ ಮನಸ್ಸನ್ನು ಹುಚ್ಚು ಕುದುರೆಯಂತೆ ಬಿಟ್ಟು, ಬಾಳನ್ನು ನುಚ್ಚುನೂರು ಮಾಡಿಕೊಂಡು ದೊರಕಿರುವ ಅಧಿಕಾರದ ಅಮಲಿನಲ್ಲಿ ಜನತಾದಳದ ಮಂತ್ರಿಗಳು ಎಲ್ಲರಿಗೂ ಮಣ್ಣುಮುಕ್ಕಿಸುತ್ತಿದ್ದಾರೆ. ಮಣ್ಣಿನ ಮಕ್ಕಳು ಎಂದು ಹೇಳಿಕೊಂಡು ಜನಸಾಮಾನ್ಯರಿಗೆ ಇವತ್ತು ಬೆನ್ನಿಗೆ ಚೂರಿ ಹಾಕುವಂತಹ ಕೆಲಸ ಮಾಡಿದ್ದಾರೆ. ಜನರ ಬಾಳಿಗೆ ಇವರು ಮಣ್ಣನ್ನೇ ತುಂಬಿದ್ದಾರೆ. ಈ ನಾಡಿನ ಜನತೆಯ ಆಶೋತ್ತರಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವ ಈ ಸರ್ಕಾರ ಇವತ್ತು ಸಂಪೂರ್ಣವಾಗಿ ನಾಶವಾಗಬೇಕು.

(ಗೊಂದಲ)

ಮಾನ್ಯ ಸದಸ್ಯರು: ಉತ್ತರಭಾರತದಲ್ಲಿ ನಾಲ್ಕು ರಾಜ್ಯಗಳಲ್ಲಿ ಇವರ ಪಾರ್ಟಿ ಗತಿ ಏನಾಗಿದೆ? ಇಲ್ಲಿ ಒಳ್ಳೆಯ ಡ್ರಾಮ ಮಾಡುತ್ತಿದ್ದಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ನಮ್ಮ ಧರ್ಮವನ್ನು ನಾವು ಯಾರೊಂದಿಗೂ ಆಳೆಯಬಾರದು. ಧರ್ಮ ಮಾತ್ರ ಖಂಡಿತವಿರಬೇಕು.

ಅಧ್ಯಕ್ಷರು: ನಾವು ನಿಮಗೆ ಅಭಿನಂದನೆಗಳನ್ನು ಸಲ್ಲಿಸಬೇಕು.

ಶ್ರೀ ಹಚ್.ಎಸ್.ಶಂಕರ್‌ಲಿಂಗೇಗೌಡ: ನನ್ನ ರಾಮಾಯಣ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಎಲ್ಲರೂ ರಾಮನಾಗಿರಬೇಕು, ಎಲ್ಲರೂ ಸೀತೆಯಾಗಿರಬೇಕು, ಇಲ್ಲಿ ಲಕ್ಷಗಟ್ಟಲೆ ಜನ ರಾವಣರು ಇದ್ದಾರೆ, ಆದರೆ ರಾಮನೇ ಇಲ್ಲ.

(ಗೊಂದಲ)

ಶ್ರೀ ಅಶ್ವತ್ಥನಾರಾಯಣ ರೆಡ್ಡಿ: ಅಧ್ಯಕ್ಷರೆ, ನಾನೊಂದು ಕ್ರಿಯಾಲೋಪ ಎತ್ತಿ ಮಾತನಾಡುತ್ತೇನೆ. ಮಾನ್ಯ ಸದಸ್ಯರಾದ ಶಂಕರ್‌ಲಿಂಗೇಗೌಡರು ನಮಗೆ ಜ್ಞಾನ ಇದೆಯೋ ಇಲ್ಲವೋ ಆದರೂ ನಮ್ಮನ್ನೆಲ್ಲಾ ** ಎಂದು ಕರೆದರು. ದಯವಿಟ್ಟು ಆ ಪದವನ್ನು ಕಡತದಿಂದ ತೆಗೆದು ಹಾಕಬೇಕು. ನಾವು ಇಲ್ಲಿ ಮೂರು ಮುಖ್ಯ ಪಕ್ಷದವರು ಇದ್ದೇವೆ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ಮೂರು ಪಕ್ಷಗಳಲ್ಲ. ನಾಲ್ಕು ಪಕ್ಷಗಳು. 1) ಜನತಾದಳ (ಪಟೇಲ್) (2) ಜನತಾ ದಳ (ದೇವೇಗೌಡ) (3) ಬಿಜೆಪಿ (4) ಕಾಂಗ್ರೆಸ್.

(ಗೊಂದಲ)

ಮಾನ್ಯ ಸದ್ಯಸರು : ಬಂಗಾರಪ್ಪ ಕಾಂಗ್ರೆಸ್, ಮೊಯ್ಲಿ ಕಾಂಗ್ರೆಸ್, ಧರ್ಮಸಿಂಗ್ ಕಾಂಗ್ರೆಸ್, ಖರ್ಗೆಯವರ ಕಾಂಗ್ರೆಸ್ ಎಂದು ನಾವು ಕರೆಯಬೇಕೇ?

ಶ್ರೀ ಅಶ್ವತ್ಥನಾರಾಯಣ ರೆಡ್ಡಿ: ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವುದು ಬಿಟ್ಟು, ನಾಟಕದಲ್ಲಿ, ಸರ್ಕಸ್‌ನಲ್ಲಿ, ಕೆಲವರು ಇರುತ್ತಾರೆ.. ಆ ಹೆಸರನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಪಕ್ಷದಲ್ಲಿ ಒಬ್ಬರು ಅದಕ್ಕೆ ಲಾಯಕ್ ಆದವರು ಇದ್ದಾರೆ, ಬಿಜೆಪಿಯಲ್ಲಿ ಲಾಯಕ್ ಆದವರು ಒಬ್ಬರಿದ್ದಾರೆ,

(ಗೊಂದಲ)

** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮುಂದಿನ ಚುನಾವಣೆಯಲ್ಲಿ ನಮ್ಮ ಸರ್ಕಾರ ಬರುತ್ತದೆಂದು ಕಾಂಗ್ರೆಸ್ ಮತ್ತು ಬಿಜೆಪಿಯವರು ಹೇಳಿಕೊಳ್ಳುತ್ತಿದ್ದಾರೆ. ಒಂದು ಪಕ್ಷ ಬಿಜೆಪಿಯವರು ಅಧಿಕಾರಕ್ಕೆ ಬಂದರೆ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುತ್ತಾರೋ ಅಥವಾ ಮಾನ್ಯ ಈಶ್ವರಪ್ಪನವರು ಮುಖ್ಯಮಂತ್ರಿ ಆಗುತ್ತಾರೋ ನನಗೆ ಗೊತ್ತಿಲ್ಲ, ಏಕೆಂದರೆ ಇವರ ಕಿತ್ತಾಟದಲ್ಲಿ ಯಾರು ಈ ರಾಜ್ಯದ ಮುಖ್ಯಮಂತ್ರಿಯಾಗುತ್ತಾರೋ ನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ರಾಜ್ಯದಲ್ಲಿ ಮುಂದೆ ಬಿಜೆಪಿ ಅಧಿಕಾರಕ್ಕೆ ಬಂದರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ.

(ಗೊಂದಲ)

ಶ್ರೀ ಅಶ್ವತ್ಥ್‌ನಾರಾಯಣ ರೆಡ್ಡಿ: ಇಷ್ಟು ದಿವಸ ಯಾವುದೇ ಸರ್ಕಾರಗಳು ಬಂದರೂ ಕೂಡ ಹರಿಕಥೆಗೆ ಒಂದು ಮಂತ್ರಿಸ್ಥಾನ ಕೊಟ್ಟಿರಲಿಲ್ಲ. ಒಂದು ಪಕ್ಷ ಬಿಜೆಪಿ ಬಂದರೆ ಮಾನ್ಯ ಶಂಕರ್‌ಲಿಂಗೇಗೌಡರಿಗೆ ಹರಿಕಥೆ ಪ್ರೋತ್ಸಾಹಕ್ಕೆ ಮಂತ್ರಿಯನ್ನಾಗಿ ಮಾಡುವುದು ಸೂಕ್ತವೆಂದು ನಾನು ಅಡ್ವಾನ್ಸ್ ಆಗಿ ಹೇಳಬಯಸುತ್ತೇನೆ.

ಶ್ರೀ ಹೆಚ್.ಎನ್.ಶಂಕರ್‌ಲಿಂಗೇಗೌಡ: ಇದ್ದಂಥವಳು ಏಳು ಓಲೆಗಳನ್ನು ಕಿವಿಗೆ ಹಾಕಿಕೊಂಡಳಂತೆ, ಇಲ್ಲದವಳು ತನ್ನ ಕಿವಿಯನ್ನೇ ಕತ್ತರಿಸಿ ಹಾಕಿದಳಂತೆ. ಅವರಿಗೆ ಜ್ಞಾನದ ಪರಿವೇ ಇಲ್ಲದಿದ್ದರೆ ನಾವು ಏನು ಮಾಡಬೇಕು? ನಾನು ತಮಗೆ ಕೈಮುಗಿದು ಕೇಳುತ್ತೇನೆ ಮಾನ್ಯ ಸದಸ್ಯರು ಹೇಳುವಂತೆ ಹರಿಕಥೆ ಎಂಬ ಪದವನ್ನು ಕಡತದಿಂದ ತೆಗೆದುಹಾಕಿಸಿ.

(ಗೊಂದಲ)

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಆಶ್ವತ್ಥ್‌ನಾರಾಯಣ ರವರು ಹೇಳಿದ್ದು ಸತ್ಯವಾಗಿದೆ, ಆ ಪದವನ್ನು ಬಿಡಬೇಕಾಗುತ್ತದೆ.

ಅಧ್ಯಕ್ಷರು: ಆಯಿತು ನಾನು ಕಡತ ತರಿಸಿ ನೋಡುತ್ತೇನೆ.

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ: ನಮ್ಮ ಹಳೆಯ ಸಂಸ್ಕೃತಿಗಳ ಪರಂಪರೆಯನ್ನು ಮುಂದಿಟ್ಟುಕೊಂಡು ಸಂಸ್ಕೃತಿಯ ತಳಹದಿಯ ಮೇಲೆ ಭಾರತೀಯ ಸಂಸ್ಕೃತಿಯ ಒಂದು ವಿಚಾರ ವಿನಿಮಯವನ್ನು ವೈಚಾರಿಕತೆಯಿಂದ ಮಾತನಾಡಿದ್ದೇನೆ ವಿನಃ ಅರಿವಿಲ್ಲದಿರತಕ್ಕಂಥವರಿಗೆ ತಿಳಿಯದೇ ಹೋದರೆ ನಾವು ಏನು ಮಾಡೋಣ? ಅದು ದೇವೇಗೌಡರ ಚಾವಡಿಯೋ ಅಥವಾ ಪಟೇಲರ ಚಾವಡಿಯೋ ಎಂದು

ಕೆಲವರು ಹೌದಪ್ಪ ಅಥವಾ ಇಲ್ಲಪ್ಪ ಅಂಥವರು ಕೂಡ ಇದ್ದಾರೆ. ದೃಢತೆ, ಸತ್ವಲತೆ, ಸಂಹಿತೆಯನ್ನು ನಾನು ಇಲ್ಲಿ ಬಳಸಿದ್ದೇನೆ, ಇವೆಲ್ಲಾ ಕನ್ನಡ ಪದಗಳಾಗಿರುವುದರಿಂದ ಈ ವೇದಿಕೆಯಲ್ಲಿ ಉಪಯೋಗಿಸಿದ್ದೇನೆ. ಮಾನ್ಯ ಸದಸ್ಯರು ಹೇಳಿರುವ ಪದವನ್ನು ಕಡತದಿಂದ ತೆಗೆದು ಹಾಕಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಸದನದಲ್ಲಿ ಸದಸ್ಯರ ಗೌರವಕ್ಕೆ ಏನಾದರೂ ಚ್ಯುತಿಯನ್ನು ಬರುವಹಾಗೆ ನಡೆದುಕೊಂಡಿದ್ದರೆ ಅದನ್ನು ಮನ್ನಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳುತ್ತೇನೆ. ಆದರೆ ಈ ನಾಡಿನ ದುಃಖ ದುಮ್ಮಾನಗಳನ್ನು ಅರ್ಥಮಾಡಿಕೊಂಡು ಅರ್ಥೈಸಿಕೊಂಡು ಅರ್ಥಪೂರ್ಣಮಾಡಿ ಸೇವೆಯನ್ನು ಮಾಡತಕ್ಕಂಥ ಕೆಲಸವನ್ನು ಅವರು ಮುಂದೆ ಮಾಡಬೇಕೆಂದು ತಮ್ಮ ಮುಖಾಂತರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಹೇಳಿರತಕ್ಕಂಥ ಪರ್ಟಿಕ್ಯುಲರ್ ಪದವನ್ನು ಕಡತದಿಂದ ತೆಗೆದುಹಾಕಿ.

+ ಶ್ರೀ ಜಿ.ಬಿ.ಶಿವಕುಮಾರ್ (ಕೆರಗೋಡು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದವರು ತಂದಿರತಕ್ಕಂಥ ಅವಿಶ್ವಾಸ ನಿರ್ಣಯದ ಬಗ್ಗೆ ನಾನು ಆಡಳಿತ ಪಕ್ಷದ ಸದಸ್ಯನಾಗಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮತ್ತೊಂದು ಪಕ್ಷದವರ ಬೆಂಬಲದಿಂದ ಅವಿಶ್ವಾಸನಿರ್ಣಯವನ್ನು ಮಂಡಿಸಿದ್ದಾರೆ. ಸಾಕಷ್ಟು ಚರ್ಚೆಯನ್ನೂ ಸಹ ಇದರ ಮೇಲೆ ಮಾಡಿದ್ದಾರೆ. ನಮ್ಮ ನಾಯಕರು ಹಾಗೂ ಮಂತ್ರಿಮಂಡಲದ ಇತರ ಮಂತ್ರಿ ಮಹೋದಯರು, ವಿರೋಧಪಕ್ಷದವರು ಹೇಳಿರತಕ್ಕಂಥ ಆಪಾದನೆಗಳಿಗೆ ಸವಿಸ್ತಾರವಾದ ಉತ್ತರವನ್ನು ಕೊಡುತ್ತಾರೆಂದು ನನಗೆ ವಿಶ್ವಾಸ ಇದೆ. ಇವತ್ತು ಮೂಲತಃ ಅವಿಶ್ವಾಸ ನಿರ್ಣಯವನ್ನು ತರಲಿಕ್ಕೆ ಮುಖ್ಯ ಪ್ರೇರೇಪಣೆ ಏನೆಂದರೆ, ನಮ್ಮ ಪಕ್ಷದ ಅಂತರಿಕ ವಿಚಾರ ಎನ್ನತಕ್ಕಂಥದ್ದು, ಇಡೀ ರಾಜ್ಯದ ಜನತೆ ಕಂಡಿದೆ. ಇವತ್ತು ಇದನ್ನೆ ಮೂಲ ಬಂಡವಾಳವನ್ನಾಗಿ ಇಟ್ಟುಕೊಂಡು ಅವಿಶ್ವಾಸ ನಿರ್ಣಯವನ್ನು ತಂದಿದ್ದೀರಿ. ಹಿಂದೆ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕಂಥ ಸಮಯದಲ್ಲಿ ಯಾವ್ಯಾವ ಆರೋಪಗಳನ್ನು ಮಾಡಿದ್ದೀರೋ ಅವೆಲ್ಲಕ್ಕೂ ಕೂಡ ಸರ್ಕಾರ ಹಿಂದೇನೆ ಉತ್ತರವನ್ನು ಕೊಟ್ಟಿದ್ದರೂ ಕೂಡ ಮತ್ತೊಮ್ಮೆ ಅದೇ ವಿಚಾರಗಳನ್ನು ಇಲ್ಲಿ ಪ್ರಸ್ತಾಪಮಾಡಿರುವುದು ಒಂದುಕಡೆ ಆದರೆ, ನಮ್ಮ ಆಡಳಿತಪಕ್ಷದ ಅಂತರಿಕ ವಿಚಾರವನ್ನು ಭಿನ್ನಮತ ಎಂದು ಹೇಳಿಕೊಂಡು ಮೂಲತಃ ನಮ್ಮ ಮನೆಯನ್ನು ಒಡೆದು ಆಳತಕ್ಕಂಥ ನೀತಿಗೆ ಕೈ ಹಾಕುವ ಒಂದು ಕಾರ್ಯಕ್ಕೆ ಯಶಸ್ಸು ದೊರಕುವುದಿಲ್ಲ ಎನ್ನತಕ್ಕಂಥ ಮಾತನ್ನು ಅತಿ ವಿಶ್ವಾಸದಿಂದ ಹೇಳುತ್ತಿದ್ದೇನೆ. ಇವತ್ತು ನಾವು ಪಕ್ಷದ ಶಿಸ್ತಿನ ಸಿಪಾಯಿಗಳು. ನಮ್ಮ ಪಕ್ಷದ ವರಿಷ್ಠರ ಆದೇಶದಂತೆ 13ನೇ ತಾರೀಖು ನಡೆಯುವ ಶಾಸಕಾಂಗ ಪಕ್ಷದ ಸಭೆಯನ್ನು ನಮ್ಮ ಪಕ್ಷದ ಆಂತರಿಕ ವಿಚಾರಕ್ಕೋಸ್ಕರ ಕರೆದಿದ್ದೆವೆ. ಅಲ್ಲಿ ನಮ್ಮ ಪಕ್ಷದಲ್ಲಿರತಕ್ಕಂಥ ಆಂತರಿಕ ವಿಚಾರಗಳನ್ನು ಮತ್ತು ನಮ್ಮ

ಮನೆಯ ಸಂಸಾರದ ಗುಟ್ಟನ್ನು ಅಂದು ನಾವು ಬಗೆಹರಿಸಿಕೊಳ್ಳುತ್ತೇವೆ. ಯಾವ್ಯಾವ ವಿಚಾರಗಳನ್ನು ಮುಂದಿಟ್ಟುಕೊಂಡು ನಮ್ಮ ಪಕ್ಷದಲ್ಲಿ ಒಂದು ರೀತಿಯ ಭಿನ್ನಮತೀಯ ಚಟುವಟಿಕೆ ಆಗಿದ್ದರೂ ಕೂಡ ಅದು ನಮ್ಮ ಮನೆಯ ಸಂಸಾರದ ವಿಚಾರವೆಂದು ತಿಳಿದುಕೊಂಡು ಅದಕ್ಕೆ ಪರಿಹಾರ ಕಂಡುಕೊಳ್ಳುತ್ತೇವೆ ಎನ್ನತಕ್ಕಂಥ ವಿಚಾರವನ್ನು ಹೇಳುತ್ತೇನೆ. ಇವತ್ತು ಪಕ್ಷದ ವರಿಷ್ಠರ ಆದೇಶದಂತೆ ಜನತಾದಳ ಒಂದಾಗಿ ಇವತ್ತು ವಿರೋಧ ಪಕ್ಷದವರು ತಂದಿರತಕ್ಕಂಥ ಅವಿಶ್ವಾಸ ನಿರ್ಣಯವನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡುತ್ತೇವೆ. ಪ್ರಾಯಶಃ ಕಳೆದ ನಾಲ್ಕು ವರ್ಷದಿಂದ ನಮ್ಮ ಆಡಳಿತಪಕ್ಷದಲ್ಲಿ ಕೆಲವು ಆಂತರಿಕ ತಪ್ಪುಗಳಿದ್ದರೂ ಕೂಡ ನಮ್ಮ ಸರ್ಕಾರ ಮಾಡಿರತಕ್ಕಂಥ ಸಾಧನೆಗಳು ಕಳೆದ ಸರ್ಕಾರಕ್ಕಿಂತ ಉತ್ತಮ ಎನ್ನತಕ್ಕಂಥದ್ದನ್ನು ಜನರು ಹಲವಾರು ನಿದರ್ಶನಗಳಿಂದ ತೋರಿಸಿಕೊಟ್ಟಿದ್ದಾರೆ. ಮತ್ತೊಮ್ಮೆ ಕೂಡ ತೋರಿಸಿಕೊಡುತ್ತಾರೆ. ನಮ್ಮ ಹಳ್ಳಿಯಲ್ಲಿ ಒಂದು ಮಾತನ್ನು ಹೇಳತ್ತಾರೆ ಏನೆಂದರೆ, ಹೆಣ ಬೇಯುವಾಗ ಬೀಡಿ ಹಚ್ಚಿ ಕೊಳ್ಳುತ್ತಾನೆ ಎಂದು, ಅಂದರೆ ಅಷ್ಟು ವರ್ಸ್ಟ್ ಆಪರ್‌ಚ್ಯುನಿಸ್ಟ್ ಎಂದು ಅರ್ಥ. ಪ್ರಾಯಶಃ ಆ ಎಲ್ಲಾ ಪ್ರಯತ್ನಗಳಿಗೆ ನಾವೆಲ್ಲಾ ಒಗ್ಗಟ್ಟಾಗಿ ಉತ್ತರ ಕೊಡುತ್ತೇವೆಂದು ಹೇಳಿ ನನಗೆ ಮಾತನಾಡಲು ಅವಕಾಶಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಅವಿಶ್ವಾಸ ನಿರ್ಣಯದ ಚರ್ಚೆಗೆ ಸರ್ಕಾರದಿಂದ ಉತ್ತರ. ಮೊದಲು ಕಂದಾಯ ಮಂತ್ರಿಗಳಾದ ಮಾನ್ಯ ಸೋಮಶೇಖರ್‌ರವರು ಹೇಳಬೇಕು.

+ ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೆ, ಈ ಅಧಿವೇಶನದಲ್ಲಿ ವಿರೋಧಪಕ್ಷಗಳು ನಮ್ಮ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿ, ಅದರ ವಿಚಾರವಾಗಿ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ಪಕ್ಷದ ನಾಯಕರುಗಳು ಮಾತನಾಡಿದ್ದಾರೆ. ಹಾಗೂ ಬಹಳ ತೀಕ್ಷಣವಾಗಿ ಟೀಕೆಯನ್ನೂ ಕೂಡ ಮಾಡಿದ್ದಾರೆ. ಯಾವ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚಿಸಲು ಇಲ್ಲಿ ಸೇರಿದ್ದೇವೆಂದರೆ, ಕರ್ನಾಟಕ ರಾಜ್ಯದಲ್ಲಿ ಹಿಂಗಾರು ಮಳೆಯಿಂದ ಹೆಚ್ಚಿನ ಆಸ್ತಿ ಪಾಸ್ತಿಗಳು ನಷ್ಟವಾಗಿದೆ ಮತ್ತು ಜನರ ಮತ್ತು ಪ್ರಾಣಿಗಳ ಸಾವಿನಿಂದ ತತ್ತರಿಸುವಂತಹ ಕಾಲದಲ್ಲಿ ಈ ಅಧಿವೇಶನವನ್ನು ಸೇರಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಆದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾಡಿದ ಭಾಷಣದಲ್ಲಿ ಮುಕ್ಕಾಲು ಭಾಗ ಪ್ರಕೃತಿ ವಿಕೋಪ ನಿಧಿಯಿಂದ ಯಾವ ರೀತಿ ಹಣ ಬಿಡುಗಡೆ ಮಾಡಿದ್ದೀರಿ ಮತ್ತು ಸರ್ಕಾರದ ವೈಫಲ್ಯಗಳ ಬಗ್ಗೆ ಬಹಳ ತೀಕ್ಷಣವಾಗಿ ಮಾತನಾಡಿದ್ದಾರೆ. ಬಹಶಃ ಬೇರೆ ವಿಚಾರಗಳಿಗಿಂತ ನಮ್ಮ ಕಂದಾಯ ಇಲಾಖೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಟೀಕೆ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ಪ್ರಕೃತಿ ವಿಕೋಪದ ಅಡಿಯಲ್ಲಿ ನಮ್ಮ ಸರ್ಕಾರ ಏನೇನು

ಕಾರ್ಯಕ್ರಮವನ್ನು ಹಾಕಿಕೊಂಡಿದೆ ಮತ್ತು ಏನು ಪರಿಹಾರವನ್ನು ಕೊಟ್ಟಿದ್ದೇವೆ ಇದರ ಬಗ್ಗೆ ಮತ್ತು ಕಂದಾಯ ಇಲಾಖೆ ಬಗ್ಗೆ ಬೇರೆಯವರು ಏನು ಮಾತನಾಡಿದ್ದಾರೆ ಅದರ ಬಗ್ಗೆಯೂ ಸ್ವಲ್ಪ ಉತ್ತರವನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ವರ್ಷ ಪ್ರಕೃತಿ ವಿಕೋಪದಿಂದ ಹೆಚ್ಚಿನ ರೀತಿಯಲ್ಲಿ ನಷ್ಟವನ್ನು ನಮ್ಮ ರಾಜ್ಯದ ಜನ ಅನುಭವಿಸಿದ್ದಾರೆ. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಯಲ್ಲಿ ಮುಂಗಾರು ಮಳೆಯಿಂದ ಬೆಳೆಗಳಿಗೆ ಬಹಳ ಹಾನಿಯಾಗಿದೆ. ಮತ್ತು ಕೀಟದ ಬಾಧೆಯಿಂದ ತೊಗರಿ ಬೇಳೆ ಮತ್ತು ಇನ್ನೂ ಇತರ ಕಾಳುಗಳು ನಷ್ಟವಾಗಿದೆ. ಇದರಬಗ್ಗೆ ಸರ್ಕಾರ ತೀವ್ರ ಗತಿಯಿಂದ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಕೇಂದ್ರಸರ್ಕಾರಕ್ಕೆ ಇದರ ಬಗ್ಗೆ ಒಂದು ಮನವಿಯನ್ನು ಸಲ್ಲಿಸಲಾಗಿತ್ತು. ನಂತರ ಕೇಂದ್ರಸರ್ಕಾರ ಒಂದು ತಂಡವನ್ನು ಅಧ್ಯಯನ ಮಾಡುವುದಕ್ಕೆ ಕಳುಹಿಸಿತ್ತು. ಆ ತಂಡ ತನ್ನ ವರದಿಯನ್ನು ಕೇಂದ್ರಸರ್ಕಾರಕ್ಕೆ ಒಪ್ಪಿಸಿದೆ. ಬಹಳ ಬೇಜವಾಬ್ದಾರಿಯಿಂದ ಈ ಒಂದು ಕಾರ್ಯಕ್ರಮವನ್ನು ನಿರ್ವಹಿಸುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ನಿಜವಾಗಿಯೂ ನನಗಂತೂ ನೋವು ತರತಕ್ಕಂಥ ವಿಚಾರವಾಗಿದೆ. ಕಂದಾಯ ಇಲಾಖೆಯನ್ನು ವಹಿಸಿಕೊಂಡು ಸುಮಾರು 6 ತಿಂಗಳಾಗಿ 7ನೇ ತಿಂಗಳು ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಸಂದರ್ಶನದಲ್ಲಿ ಕಂದಾಯ ಇಲಾಖೆಯನ್ನು ಸೋಮಶೇಖರ್‌ರವರಿಗೆ ಕೊಟ್ಟಿದ್ದೇವೆಂದು ಹೇಳಿದ ತಕ್ಷಣವೇ ಏಪ್ರಿಲ್ ನಾಲ್ಕನೇ ತಾರೀಖು ಕಂದಾಯ ಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದೆ. ಆಗ ಇನ್ನೂ ನೋಟಿಫಿಕೇಷನ್ ಹೊರಡಿಸಿರಲಿಲ್ಲ. ನಾಲ್ಕೈದು ತಿಂಗಳ ಹಿಂದೆ ಬೀದರ್ ಮತ್ತು ಗುಲ್ಬರ್ಗ ಪ್ರದೇಶಗಳಲ್ಲಿ ಬೆಳೆ ನಾಶದಿಂದ ಜನರು ಕಷ್ಟವನ್ನು ಅನುಭವಿಸುತ್ತಿದ್ದರು. ನಾನು ಅದೇ ದಿನ ತಕ್ಷಣ ಬೀದರ್‌ಗೆ ಪ್ರವಾಸ ಮಾಡಿದೆ. ಆ ದಿನ ಎಷ್ಟೋ ಜನ ನನ್ನ ಅಭಿಮಾನಿಗಳು ಹೊಸದಾಗಿ ಮಂತ್ರಿಯಾಗಿದ್ದ ಕಾರಣ ಹೂವಿನ ಹಾರವನ್ನು ಹಾಕುವುದಕ್ಕೆ ಮನೆಯಲ್ಲಿ ಕಾದಿದ್ದರು. ಆದರೂ ನಾನು ಕಾಯಲಿಲ್ಲ. ಮುಖ್ಯವಾಗಿ ಬೀದರ್‌ನಲ್ಲಿ ಯಾರು ಬೆಳೆ ನಾಶದಿಂದ ಸತ್ತಿದ್ದಾರೆ ಎಂಬುದನ್ನು ನೋಡಬೇಕೆಂದು ವೈಯಕ್ತಿಕವಾದಂತಹ ಹಾಗೂ ಸರ್ಕಾರದ ಜವಾಬ್ದಾರಿಯನ್ನು ಹೊತ್ತುಕೊಂಡು ಅವತ್ತು ಭಾನುವಾರ ಆಗಿದ್ದರೂ ಅಲ್ಲಿಗೆ ಹೋಗಿ ಸತ್ತ ಕುಟುಂಬದವರಿಗೆ ಚೆಕ್ ವಿತರಣೆ ಮಾಡಿ,ಅಧಿಕಾರಿಗಳ ಸಭೆಯನ್ನು ಕರೆದು ಏನೇನು ಕಾರ್ಯಕ್ರಮಗಳನ್ನು ಆಗಿದೆಯೆಂದು ನೋಡಿ ಬಂದು ನಂತರ ಕೇಂದ್ರದಿಂದ ಬಂದಂಥ ತಂಡದವರಿಗೆ ವಿವರಣೆಯನ್ನು ಕೊಟ್ಟು ಸುಮಾರು 400 ಕೋಟಿ ರೂಪಾಯಿಗಳ ಒಂದು ಮೆಮೊರಂಡಮ್‌ನ್ನು ಕೇಂದ್ರಕ್ಕೆ ಸಲ್ಲಿಸಿದ್ದೇವೆ. ಕೇಂದ್ರ ತಂಡದವರು ಕೇವಲ 10 ಕೋಟಿರೂಪಾಯಿಗಳನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದ್ದಾರೆಂದು ಕೇಳಿದ್ದೇನೆ. ಆದರೆ, ಇನ್ನು 10 ಕೋಟಿ ರೂಪಾಯಿಗಳೂ ಬಂದಿಲ್ಲ. ಇದು ಆದ ತಕ್ಷಣವೇ ಮತ್ತೆ ಹಿಂಗಾರು ಮಳೆ ಪ್ರಾರಂಭವಾಯಿತು. ಇದು ತಮಗೂ ಗೊತ್ತಿದೆ. ಇದರಿಂದ ಸುಮಾರು 8-10 ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚಿನ ಹಾನಿ ಆಗಿರತಕ್ಕಂಥದ್ದು ವರದಿಯಾಗಿದೆ. 175 ತಾಲ್ಲೂಕುಗಳ ಪೈಕಿ ಸುಮಾರು 40 ತಾಲ್ಲೂಕುಗಳಲ್ಲಿ ಶೇಕಡ 200 ರಷ್ಟು ಹೆಚ್ಚು

ಮಳೆಯಾಗಿದೆ. 173 ತಾಲ್ಲೂಕುಗಳಲ್ಲಿ ಎರಡು ತಾಲ್ಲೂಕುಗಳನ್ನು ಬಿಟ್ಟು ಉಳಿದ ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯಾಗಿದೆ. ಕೆಲವುಕಡೆ ಎಷ್ಟು ಮಳೆ ಬರಬೇಕಾಗಿತ್ತೋ ಅಷ್ಟು ಮಳೆ ಆಗಿದೆ. ಈ ಮಳೆಯಿಂದಾಗಿ ಕೊಡಗು ಮತ್ತು ಮಂಡ್ಯ ಜಿಲ್ಲೆಯಲ್ಲಿ ಮತ್ತು ಐದಾರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಇಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಬೇಕೋ ಅದನ್ನು ಮಾಡುತ್ತಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ ಕೂರ್ಗ್‌ನಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗತಕ್ಕಂತಹ ದಾರಿಯೇ ಮುಚ್ಚಿಹೋಗಿತ್ತು. ಅವರಿಗೆ ಓಡಾಡುವುದಕ್ಕೆ ಬೇರೆ ದಾರಿಯೇ ಇರಲಿಲ್ಲ. ಆಗ ನಾವು ಅವರಿಗೆ ದೋಣಿಗಳನ್ನು ಒದಗಿಸಿಕೊಡುವ ಕಾರ್ಯಕ್ರಮವನ್ನು ಮಾಡಿದ್ದೇವೆ. ಅದೇ ರೀತಿ ಅತಿವೃಷ್ಟಿಯಿಂದಾಗಿ ಬೇರೆಬೇರೆ ಜಿಲ್ಲೆಗಳಲ್ಲಿ ಮನೆಗಳು ಬಿದ್ದಿದೆ, ದನಕರುಗಳು ನಷ್ಟವಾಗಿದೆ, ಜನಗಳು ಪ್ರಾಣಗಳನ್ನು ಕಳೆದುಕೊಂಡಿದ್ದಾರೆ ಈ ಎಲ್ಲಾ ವರದಿಗಳನ್ನು ತರಿಸಿ, ನಾವು ತಕ್ಷಣ ಯಾವುದಾದರೂ ಹಣವಿದ್ದರೂ ಸಹ ಅದನ್ನು ಸತ್ತವರ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಿರ್ದೇಶನವನ್ನು ಮಾಡಿದ್ದೇವೆ. ಸುಮಾರು 310 ಜನರು ನಮ್ಮ ರಾಜ್ಯದಲ್ಲಿ ಈ ಒಂದು ಅತಿವೃಷ್ಟಿಯಿಂದ ಸತ್ತಿರುವುದು ವರದಿಯಾಗಿದೆ. ಇದರ ಜೊತೆಗೆ ಸುಮಾರು ಒಂದೂವರೆ ಲಕ್ಷದಿಂದ ಹಿಡಿದು ಎರಡು ಲಕ್ಷದವರೆಗೆ ಮನೆಗಳು ಈ ಒಂದು ಅತಿವೃಷ್ಟಿಯಿಂದ ಕುಸಿದು ಬಿದ್ದಿದೆ. ಇದರಲ್ಲಿ ಭಾಗಶಃ ಒಂದೂವರೇ ಲಕ್ಷ ಮನೆಗಳು ಕುಸಿದು ಬಿದ್ದಿದೆ. ಸುಮಾರು 5 ಸಾವಿರ ಮನೆಗಳು ಸಂಪೂರ್ಣವಾಗಿ ಬಿದ್ದಿರತಕ್ಕಂಥವನ್ನು ನಾವು ವರದಿಯಲ್ಲಿ ನೋಡಿದ್ದೇವೆ. ಒಂದೂವರೆ ಸಾವಿರ ಸಣ್ಣನೀರಾವರಿ ಟ್ಯಾಂಕ್‌ಗಳು ಒಡೆದು ಇವತ್ತು ನಷ್ಟವಾಗಿದೆ. ಮೂರು ಸಾವಿರ ರಸ್ತೆಗಳು ಹಾಳಾಗಿರುವ ಬಗ್ಗೆ ನಾವು ವರದಿಯಲ್ಲಿ ನೋಡಿದ್ದೇವೆ. ಅಲ್ಲದೆ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಪಾಸ್ತಿಗಳಿಗೆ ಅತ್ಯಂತ ನಷ್ಟವಾಗಿರುವುದನ್ನೂ ಸಹ ನಾವು ನೋಡಿದ್ದೇವೆ. ಅತಿವೃಷ್ಟಿಯಾದಂತಹ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳೂ ತಕ್ಷಣ ಕಾರ್ಯಕ್ರಮವನ್ನು ಕೈಗೊಂಡು ಹಾನಿಗೊಳಗಾದ ಹಳ್ಳಿಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿ ಸತ್ತವರ ಕುಟುಂಬದವರಿಗೆ ತಕ್ಷಣ ಒಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಮನೆಗಳು ಬಿದ್ದಿರುವಂತವರಿಗೆ ತಕ್ಷಣ ಏನು ಸಹಾಯ ಮಾಡಬಹುದು ಅದನ್ನು ಮಾಡಿದ್ದಾರೆ. ನಮ್ಮ ಜಿಲ್ಲಾಮಂತ್ರಿಗಳೂ ಸಹ ಅವರವರ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಜಿಲ್ಲಾಧಿಕಾರಿಗಳು ಹಾಗೂ ಬೇರೆ ಬೇರೆ ಇಲಾಖೆಯ ಅಧಿಕಾರಿಗಳ ಸಭೆಯನ್ನು ನಡೆಸಿ ಪರಿಹಾರ ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡಿದ್ದಾರೆ. ನಮ್ಮ ಸಹದ್ಯೋಗಿಗಳು ಸಹ ಅತ್ಯಂತ ಆಸಕ್ತಿವಹಿಸಿ ಕೆಲಸವನ್ನು ಮಾಡಿದ್ದಾರೆ. ನಮ್ಮ ಜಿಲ್ಲಾ ಸಚಿವರು ಬೀದರ್ ಹಾಗೂ ಬಿಜಾಪುರದವರು ಇರಬಹುದು. ಮಾನ್ಯ ಎಂ.ಪಿ.ಪ್ರಕಾಶ್‌ರವರು ಇರಬಹುದು. ಶ್ರೀ ಮಾಲಿಕಯ್ಯ ಗುತ್ತೇದಾರ್ ಇರಬಹುದು, ಎಲ್ಲರೂ ಮನೆಗಳಿಗೆ ಹೋಗಿ ಚೆಕ್‌ನ್ನು ವಿತರಣೆ ಮಾಡಿದ್ದಾರೆ. ಈ ಒಂದು ಅತಿವೃಷ್ಟಿಯಲ್ಲಿ ಸತ್ತಿರುವಂತಹ ಪ್ರತಿಯೊಬ್ಬರಿಗೂ ಸಹ ನಾವು ಚೆಕ್‌ನ್ನು ವಿತರಣೆ ಮಾಡಿದ್ದೇವೆ. ಮನೆಗಳು ಬಿದ್ದಿರುವಂತಹವರಿಗೂ ಸಹ ನಾವು

ಪರಿಹಾರವನ್ನು ಕೊಟ್ಟಿದ್ದೇವೆ. ಕೇಂದ್ರಸರ್ಕಾರದಿಂದ ಈ 10ನೇ ಹಣಕಾಸಿನ ಆಯೋಗದಲ್ಲಿ ನಮ್ಮ ಸರ್ಕಾರಕ್ಕೆ 40 ಕೋಟಿ ರೂಗಳು ನಿಗದಿಯಾಗಿದೆ. ಕಳೆದ ವರ್ಷ 44 ಕೋಟಿ ರೂ.ಗಳು ಇತ್ತು, ಈ ವರ್ಷ 46 ಕೋಟಿ ರೂಗಳು ಇದೆ. 1997-98ನೇ ಸಾಲಿನಲ್ಲಿ ಈ ಪ್ರಕೃತಿ ವಿಕೋಪ ನಿಧಿಯ ಅಡಿಯಲ್ಲಿ ಸುಮಾರು 70 ಕೋಟಿ ರೂಗಳನ್ನು ನಾವು ಖರ್ಚು ಮಾಡಿದ್ದೇವೆ. ವರ್ಷ 6 ತಿಂಗಳು ಕಳೆದಿದೆ, ಕೇಂದ್ರಸರ್ಕಾರದಿಂದ 3 ತಿಂಗಳಿಗೆ ಒಂದು ಕಂತನ್ನು ಸಿಆರ್‌ಎಫ್‌ನಲ್ಲಿ ಬಿಡುಗಡೆ ಮಾಡುತ್ತಾರೆ. ನಮಗೆ ಈಗಾಗಲೇ ಎರಡು ಕಂತುಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ನಮಗೆ ಈಗ 26 ಕೋಟಿ ರೂಗಳು ಬಂದಿದೆ. ನಮ್ಮ ಸಿಆರ್‌ಎಫ್ ಅಲೋಕೇಷನ್ ಏನಿದೆ ಅದರಲ್ಲಿ 46 ಕೋಟಿ ರೂಗಳಲ್ಲಿ 26 ಕೋಟಿ ರೂಗಳು ನಮಗೆ ಬಂದಿದೆ. ಅದರ ಜೊತೆಗೆ ನಮ್ಮ ಸರ್ಕಾರ ಕೇವಲ 2-3 ತಿಂಗಳುಗಳು ಸೇರಿಸಿಕೊಂಡು 67 ಕೋಟಿ ರೂಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಅತಿವೃಷ್ಟಿಯಿಂದ ಹಾನಿಯಾದ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ನಮ್ಮ ರಾಜ್ಯಕ್ಕಿಂತ ಹೆಚ್ಚು ಹಾನಿಯಾಗಿರುವುದು ಆಂಧ್ರಪ್ರದೇಶ ಎಂದು ತಮಗೆಲ್ಲಾ ಗೊತ್ತಿದೆ. ಆಂಧ್ರದ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳನ್ನು ಒತ್ತಾಯ ಮಾಡಿ ಭೇಟಿ ನೀಡಬೇಕೆಂದು ಕೇಳಿಕೊಂಡರು. ಪ್ರಧಾನ ಮಂತ್ರಿಗಳು ಆಂಧ್ರಪ್ರದೇಶಕ್ಕೆ ಭೇಟಿ ಕೊಡುತ್ತಾರೆಂದು ಗೊತ್ತಾದ ತಕ್ಷಣ ನಮ್ಮ ಮುಖ್ಯ ಮಂತ್ರಿಗಳು ಅವರ ಆರೋಗ್ಯ ಸರಿಯಿಲ್ಲದಿದ್ದರೂ, ಅವರ ಜೊತೆಯಲ್ಲಿ ದೂರವಾಣಿಯ ಮುಖಾಂತರ ಮಾತನಾಡಿ, ಒಂದು ಪತ್ರವನ್ನು ಬರೆದು ತಾವು ಆಂಧ್ರಪ್ರದೇಶಕ್ಕೆ ಭೇಟಿ ಕೊಡುತ್ತಿದ್ದೀರಿ ಎಂದು ತಿಳಿದಿದ್ದೇನೆ. ಆ ಸಂದರ್ಭದಲ್ಲಿ ನಮ್ಮ ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಭೇಟಿ ಕೊಡಬೇಕೆಂದು ಮನವಿಯನ್ನು ಮಾಡಿಕೊಂಡರು. ಇದಾದ ನಂತರ ನನ್ನನ್ನು ಮತ್ತು ಮಾನ್ಯ ಪ್ರಕಾಶ್‌ರವರನ್ನ ನಮ್ಮ ಮುಖ್ಯಮಂತ್ರಿಗಳು ಕಳುಹಿಸಿದರು. ನೀವು ನಮ್ಮ ರಾಜ್ಯದ ಪರಿಸ್ಥಿತಿಯ ಬಗ್ಗೆ ವಿವರಣೆಯನ್ನು ಕೊಡಬೇಕು. ಪ್ರಧಾನಮಂತ್ರಿಗಳ ಮನಸ್ಸನ್ನು ಒಲಿಸಿ ಹೆಚ್ಚು ಹಣವನ್ನು ನೀವು ಪಡೆದುಕೊಳ್ಳಬೇಕೆಂದು ನಿರ್ದೇಶನವನ್ನು ಕೊಟ್ಟ ನಂತರ ನಾವು ಅಲ್ಲಿಗೆ ಹೋದೆವು. ಪ್ರಧಾನ ಮಂತ್ರಿಗಳು ಬಂದ ತಕ್ಷಣ ನಾವಿಬ್ಬರೂ ಅವರನ್ನು ಭೇಟಿ ಮಾಡಿ ಅವರಿಗೆ ಇಂಟರೀಯಮ್ ಪ್ರೊಪೋಸಲ್ ತಕ್ಷಣಕ್ಕೆ ನಷ್ಟವಾಗಿರುವ 300 ಕೋಟಿ ರೂಗಳ ವರದಿಯನ್ನು ನಾವು ಕೊಡುತ್ತಿದ್ದೇವೆ. ಇದರ ಬಗ್ಗೆ ಒಂದು ವಿವರವಾದ ಮೆಮೋರ್‍ಯಾಂಡಮ್‌ನ್ನು ನಾವು ತಯಾರು ಮಾಡುತ್ತಿದ್ದೇವೆ. ಈಗ ತಕ್ಷಣಕ್ಕೆ ಹಣವನ್ನು ಬಿಡುಗಡೆ ಮಾಡಬೇಕೆಂದು ಪ್ರಧಾನಮಂತ್ರಿಯವರನ್ನು ನಾವಿಬ್ಬರೂ ಒತ್ತಾಯ ಮಾಡಿದೆವು. ಪ್ರಧಾನಮಂತ್ರಿಗಳು ಆಂಧ್ರದ ಕೆಲವು ಭಾಗಗಳಿಗೆ ಪ್ರವಾಸ ಮಾಡಿ ಬಂದ ಮೇಲೆ, ನಮ್ಮ ರಾಜ್ಯಕ್ಕೆ 50 ಕೋಟಿ ರೂಗಳನ್ನು ಬಿಡುಗಡೆ ಮಾಡುತ್ತೇವೆಂದು ಘೋಷಣೆಯನ್ನು ಮಾಡಿದರು. ಆಂಧ್ರಕ್ಕೆ ಹೆಚ್ಚು ನಷ್ಟವಾಗಿರುವುದರಿಂದ 200 ಕೋಟಿ ರೂಗಳನ್ನು ಬಿಡುಗಡೆ ಮಾಡುತ್ತೇಂದು ಹೇಳಿದರು. ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಟೀಕೆ ಮಾಡಿದರು, ನಿಮ್ಮ ಸರ್ಕಾರ ಯಾವುದೇ ಕ್ರಮವನ್ನು

ತೆಗೆದುಕೊಂಡಿಲ್ಲ. ಪ್ರಧಾನಮಂತ್ರಿಗಳಿಗೆ ಯಾವುದೇ ಮನವಿಯನ್ನು ಸಲ್ಲಿಸಲಿಲ್ಲ ಎಂದು ಹೇಳಿದರು. ಇದು ಸತ್ಯಕ್ಕೆ ದೂರವಾದುದು. ನಾವು ಹೈದರಾಬಾದ್‌ನಲ್ಲಿ ಪ್ರಧಾನಮಂತ್ರಿಯವರಿಗೆ ಇಂಟೀರಿಯಮ್ ರಿಲೀಫ್ 300 ಕೋಟಿ ರೂಗಳು ಬೇಕಾಗಿದೆ ಎಂದು ಮನವರಿಕೆ ಮಾಡಿದೆವು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರುಗಳೂ ಸಹ ಸಹಾಯ ಮಾಡಿದ್ದಾರೆಂದು ಹೇಳಬಯಸುತ್ತೇನೆ. ಅವರು ಸಹ ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಸಹ ಅಲ್ಲಿಗೆ ಬಂದಿದ್ದರು. ಬೀದರ್ ಜಿಲ್ಲೆಯ ಲೋಕಸಭಾ ಸದಸ್ಯರಾದ ಶ್ರೀ ರಾಮಚಂದ್ರ ವೀರಪ್ಪನವರು ಅಲ್ಲಿಗೆ ಬಂದು ಪ್ರಧಾನಮಂತ್ರಿಗಳನ್ನು ಒತ್ತಾಯ ಮಾಡಿದ್ದಾರೆ. ನೀವು ನಮ್ಮ ಜಿಲ್ಲೆಗೆ ಭೇಟಿ ನೀಡಬೇಕೆಂದು ನಾವೆಲ್ಲರೂ ಒತ್ತಾಯ ಮಾಡಿದ ಮೇಲೆ, ಅವರು ಏರಿಯಲ್ ಸರ್ವೆಯನ್ನು ಅನೌನ್ಸ್ ಮಾಡಿದ ಮೇಲೆ 2-3 ಜಿಲ್ಲೆಗಳನ್ನು ಏರಿಯಲ್ ಸರ್ವೆ ಮಾಡಿ ಹೋದರು. ಪ್ರಧಾನಮಂತ್ರಿಗಳು ಹೋದ ತಕ್ಷಣ ನಾನು ಆ ದಿನ ದೆಹಲಿಯಲ್ಲಿ ಪತ್ರಿಕಾಗೋಷ್ಠಿಯನ್ನು ಕರೆದು ಪ್ರಧಾನಮಂತ್ರಿಗಳನ್ನು ಹಾಗೂ ಕೇಂದ್ರಸರ್ಕಾರವನ್ನು ಸರ್ಕಾರದ ಪರವಾಗಿ ಅಭಿನಂದಿಸಿದ್ದೇನೆ. ನಾವುಗಳು ಬೆಳಿಗ್ಗೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಬೇಕೆಂದು ಪ್ರಯತ್ನ ಮಾಡಿದೆವು. ಆದರೆ ಪ್ರಧಾನಮಂತ್ರಿಗಳು ನಮಗೆ ಸಿಗಲಿಲ್ಲ. ಆದರೂ ಸಹ ನಮ್ಮ ಕೃತಜ್ಞತೆಗಳನ್ನು ಅವರಿಗೆ ಅರ್ಪಿಸಿದ್ದೇವೆ. ಇನ್ನೂ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ನಾವು ಅವರನ್ನು ಕೇಳಿದ್ದೇವೆ. ಸುಮಾರು 7-8 ದಿನಗಳ ಒಳಗಾಗಿ ಎಲ್ಲಾ ಜಿಲ್ಲೆಗಳಿಂದ ಅತಿವೃಷ್ಟಿಯಾದ ಬಗ್ಗೆ ಮಾಹಿತಿಯನ್ನು ತರಿಸಿ ಒಂದು ಮೆಮೋರ್‍ಯಾಂಡಮ್‌ನ್ನು ತಯಾರು ಮಾಡಿದ್ದೇವೆ. ಈ ಮೆಮೋರ್‍ಯಾಂಡಮ್ 100ಕ್ಕೆ 100ರಷ್ಟು ಸರಿಯಾಗಿದೆ ಎಂದು ನಾನು ಹೇಳಿಕೊಳ್ಳುವುದಿಲ್ಲ. ಆದರೆ ಬಹಳ ಅಚ್ಚುಕಟ್ಟಾದ, ಚೆನ್ನಾಗಿರತಕ್ಕಂತಹ ವಿವರಗಳನ್ನು ಕೊಡತಕ್ಕಂತಹ ತಾಲ್ಲೂಕುವಾರು ಚಿತ್ರಗಳನ್ನು ಸೇರಿಸಿ ಅತ್ಯಂತ ಉತ್ತಮವಾದ ಮೆಮೋರ್‍ಯಾಂಡಮ್‌ನ್ನು ನಾವು ತಯಾರು ಮಾಡಿದ್ದೇವೆ. ಆಂಧ್ರಕ್ಕಿಂತ ಕರ್ನಾಟಕ ರಾಜ್ಯದ ಮೆಮೋರ್‍ಯಾಂಡಮ್ ಬಹಳ ಚೆನ್ನಾಗಿದೆ ಎಂದು ಕೆಲವರು ವ್ಯಕ್ತಮಾಡಿದ್ದಾರೆ. ಕೆಲವು ಕಡಿಮೆ ಇರಬಹುದು ಕೆಲವು ಜಾಸ್ತಿ ಇರಬಹುದು. ನಾವು ಮೆಮೋರ್‍ಯಾಂಡಮ್‌ನ್ನು ಬಹಳ ಚೆನ್ನಾಗಿ ತಯಾರು ಮಾಡಿ ಸುಮಾರು 800 ಕೋಟಿ ರೂಗಳ ಮನವಿಯನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಿದ್ದೇವೆ. ಇದಾದನಂತರ ಪ್ರಧಾನಮಂತ್ರಿಗಳನ್ನು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಕೆಲವು ಹಿರಿಯ ಸದಸ್ಯರುಗಳು ದೆಹಲಿಯಲ್ಲಿ ಭೇಟಿ ಮಾಡಿದೆವು. ಅಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರನ್ನು ಭೇಟಿ ಮಾಡಿದೆವು. ನಮ್ಮ ರಾಜ್ಯಕ್ಕೆ ಘೋಷಣೆ ಮಾಡಿರತಕ್ಕಂತಹ ಹಣ ಸಾಕಾಗುವುದಿಲ್ಲ. ಇನ್ನು ಹೆಚ್ಚಿಗೆ ಹಣವನ್ನು ಕೊಡಬೇಕು ಎಂದು ಮನವಿ ಮಾಡುವುದರ ಜೊತೆಗೆ, ತಾವೇನು 50 ಕೋಟಿ ರೂಗಳನ್ನು ಘೋಷಣೆ ಮಾಡಿದ್ದೀರಿ ಆ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದು ನಾವು ದೆಹಲಿಯಲ್ಲಿ ಒತ್ತಾಯ ಮಾಡಿದ್ದೇವೆ. ಮೊನ್ನೆ ಪ್ರಧಾನಮಂತ್ರಿಗಳು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಾಗ

ಮತ್ತೆ ಮುಖ್ಯಮಂತ್ರಿಗಳು ನಾವು ರಾಜಭವನದಲ್ಲಿ ಅವರನ್ನು ಭೇಟಿ ಮಾಡಿ ಈ ತಕ್ಷಣಕ್ಕೆ ತಾವೇನು 50 ಕೋಟಿ ರೂಗಳನ್ನು ಬಿಡುಗಡೆ ಮಾಡಿರುವುದು ನಮಗೆ ಸಾಕಾಗುವುದಿಲ್ಲ. ಇನ್ನು 50 ಕೋಟಿ ರೂಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಮಾಡಿ ಮತ್ತೊಂದು ಮೆಮೋರ್‍ಯಾಂಡಮ್‌ನ್ನು ತಯಾರು ಮಾಡಿದ್ದೇವೆ ಕೇಂದ್ರದಿಂದ ಒಂದು ತಂಡವನ್ನು ಕಳುಹಿಸಿಕೊಡಬೇಕೆಂದು ಕೇಳಿದ್ದೇವೆ. ಅವರು ಈ ತಂಡ ಬರುತ್ತಾ ಇದೆ ಎಂದು ಹೇಳಿದ್ದಾರೆ. ಆದರೆ ಆ ತಂಡ ಇನ್ನೂ ಬಂದಿಲ್ಲ. ಹೀಗಾಗಿ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಏನೇನು ಒತ್ತಾಯ ಮಾಡಬೇಕೋ ಏನೇನು ಮನವಿಯನ್ನು ಸಲ್ಲಿಸಬೇಕೋ ಅವೆಲ್ಲವನ್ನೂ ಸಲ್ಲಿಸಿದ್ದೇವೆ. ಇದರ ಜೊತೆಗೆ ತಕ್ಷಣ ನಾವು ಏನು ಪರಿಹಾರವನ್ನು ಕೊಡಬಹುದು, ಆ ಪರಿಹಾರವನ್ನು ಕೊಡುವುದರಲ್ಲಿ ಯಾವುದೇ ರೀತಿಯಲ್ಲಿ ನಮ್ಮ ಸರ್ಕಾರ ಹಿಂದೆ ಬಿದ್ದಿಲ್ಲ. ನಮ್ಮ ರಾಜ್ಯ ಸರ್ಕಾರದ ವತಿಯಿಂದ ಇರುವ ಹಣದಲ್ಲಿ ಇದುವರೆಗೆ 67 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ನಾವು ಹೋದ ವರ್ಷ ಬೀದರ್ ಮತ್ತು ಗುಲ್ಬರ್ಗಕ್ಕೆ 9 ಕೋಟಿ 65 ಲಕ್ಷ ಗುಲ್ಬರ್ಗಕ್ಕೆ ಬೀದರ್‌ಗೆ 2 ಕೋಟಿ 50 ಲಕ್ಷವನ್ನು ಸೇರಿಸಿ ಒಟ್ಟು 67 ಕೋಟಿ ರೂಗಳನ್ನು ಮಂಜೂರಾತಿ ಮಾಡಿದ್ದೇವೆ. ಅದರಲ್ಲಿ ಫ್ಲಡ್ ರಿಲೀಫ್‌ಗೋಸ್ಕರ ಎಲ್ಲಾ ಜಿಲ್ಲೆಗಳಿಗೆ ಸುಮಾರು 44 ಕೋಟಿರೂಗಳನ್ನು ಬಿಡುಗಡೆ ಮಾಡಿದ್ದೇವೆ. ನಾನು ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರ ಅನುಕೂಲಕೋಸ್ಕರ ಯಾಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಬಗ್ಗೆ ತಕ್ಷಣ ಕಾಪಿಯನ್ನು ಒದಗಿಸಿಕೊಡುತ್ತೇನೆ. ಅದರ ವಿವರಣೆಯನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಸಣ್ಣ ಪುಟ್ಟ ರಸ್ತೆಗಳ ಕೆಲಸಗಳು ಇರಬಹುದು, ಊರಿನ ಬೀದಿಗಳ ರಸ್ತೆಗಳ ರಿಪೇರಿ ಮಾಡುವುದಕ್ಕೆ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್, ಜಿಲ್ಲಾಪಂಚಾಯತ್‌ನವರು ಅವರಲ್ಲಿರತಕ್ಕಂತಹ ಯೋಜನೇತರ ಹಣವನ್ನು ತಕ್ಷಣಕ್ಕೆ ಖರ್ಚು ಮಾಡಬೇಕು.

ಶ್ರೀ ಜಿ.ಬಿ.ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಮೂಲಕ ಕಂದಾಯ ಸಚಿವರಿಗೆ ವಿನಂತಿಮಾಡಿಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಪ್ರಾಯಶಃ ಆದಂತಹ ವಿಚಾರದಲ್ಲಿ ಅವರು ಸೂಕ್ತವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾವೆಲ್ಲಾ ಶಾಸಕರುಗಳು ಪ್ರಸ್ತಾಪ ಮಾಡಿ ಹೇಳಿದ್ದೇವೆ. ಸರ್ಕಾರದಿಂದ ಬರತಕ್ಕಂತಹ ಹಣದ ಮೂಲಕವೇ ಏನು ಈ ಅತಿವೃಷ್ಟಿಯಿಂದ ಆಗಿರತಕ್ಕಂತಹ ಕಾಮಗಾರಿಗಳನ್ನು ದುರಸ್ಥಿ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಜಿಲ್ಲಾ ಪಂಚಾಯತಿಯಿಂದಲೂ ಕೂಡ ಯೋಜನೆ ಹಾಗೂ ಯೋಜನೇತರ ಇರುವುದನ್ನೂ ಕೂಡ ಭರಿಸಿಕೊಂಡು ಆ ಕಾರ್ಯವನ್ನು ಪೂರೈಸಬೇಕೆಂಬುದರ ಬಗ್ಗೆ ಸರ್ಕಾರದಿಂದ ಒಂದು ಮಾರ್ಗಸೂಚಿಯನ್ನು ಕೊಡಬೇಕೆಂಬುದನ್ನು ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

1.00 ಪಿ.ಎಂ

ಅದಕ್ಕೆ ಸ್ಪಷ್ಟವಾದ ಆದೇಶ ಕೊಡದಿದ್ದರೆ ಏನಾಗುತ್ತದೆಂದರೆ, ಪ್ರತಿಯೊಂದು ಕೆಲಸವನ್ನು ಅತಿವೃಷ್ಟಿಯಲ್ಲಿ ಮಾಡುತ್ತಾರೆ. ಚುನಾಯಿತ ಪ್ರತಿನಿಧಿಗಳು ಸುಮ್ಮನೆ ಕೂರತಕ್ಕ ಕಾಲ ಬಂದಿದೆ. ಜಿಲ್ಲಾಪಂಚಾಯಿತಿಯವರು ನಮ್ಮ ಹಣ ಎನ್ನುತ್ತಾರೆ, ತಾಲ್ಲೂಕು ಪಂಚಾಯಿತಿಯವರು ನಮ್ಮ ಹಣವೆಂದು ಹೇಳುತ್ತಾರೆ, ಗ್ರಾಮಪಂಚಾಯಿತಿಯವರು ನಮ್ಮ ಹಣವೆಂದು ಹೇಳುತ್ತಾರೆ; ಶಾಸಕರು ಏನು ಮಾಡಿದರು ಎನ್ನುವ ಪ್ರಶ್ನೆ ಬರುತ್ತದೆ. ಎಲ್ಲಾ ಶಾಸಕರು ಎದುರಿಸತಕ್ಕ ಸಮಸ್ಯೆ ಇದು. ಈ ನಿಟ್ಟಿನಲ್ಲಿ ಸ್ಪಷ್ಟವಾದ ಮಾರ್ಗ ಸೂಚಿಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ವಿರೋಧಪಕ್ಷದ ನಾಯಕರಾದ ಖರ್ಗೆಯವರು ಕೊಟ್ಟಿರತಕ್ಕ ಮಾಹಿತಿ ಅಪೂರ್ಣವಾಗಿದೆ ಇನ್ನು ಹೆಚ್ಚಿಗೆ ಕೊಡಬೇಕೆಂದು ಹೇಳಿದರು. 800ಕೋಟಿ ರೂಪಾಯಿಗೆ ನಮ್ಮ ವರದಿ ನಿಂತಿಲ್ಲ. ಏನು ನಷ್ಟವಾಗಿದೆ ಅದರ ವರದಿ ತರಿಸಿ ಸೆಂಟ್ರಲ್ ಟೀಮ್ ಬರುತ್ತಿದೆ ಅವರಿಗೆ ನಾವು ಮತ್ತೆ ಒಂದು ವರದಿಯನ್ನು ಸಲ್ಲಿಸುತ್ತಿದ್ದೇವೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಅತ್ಯಂತ ಭಾರೀ ಮಳೆ ಬಂದು ಸುಮಾರು 76ಕೋಟಿ ರೂಪಾಯಿ ನಷ್ಟವಾಗಿದೆ. ಸಣ್ಣ ಟ್ಯಾಂಕುಗಳಿಗೆ ನಷ್ಟವಾಗಿದೆ. ರಸ್ತೆಗಳು ಡ್ಯಾಮೇಜ್ ಆಗಿವೆ ಇದು ಸುಮಾರು 295 ಕೋಟಿ ರೂಪಾಯಿಗಳಾಗುತ್ತದೆ. ಬೆಳೆಗಳು 7 ಲಕ್ಷ ಹೆಕ್ಟೇರ್‌ನಲ್ಲಿ ನಷ್ಟವಾಗಿರತಕ್ಕದ್ದು 400 ಕೋಟಿಯಾಗಿದೆ. ಮನೆಗಳು ನಷ್ಟವಾಗಿರತಕ್ಕದ್ದು ಸುಮಾರು 37 ಕೋಟಿ ರೂಪಾಯಿಯೆನ್ನುವ ಅಂದಾಜು ಇದೆ. ಎಲ್ಲಾ ಸೇರಿ 797 ಕೋಟಿ ರೂಪಾಯಿಗೆ ಮೆಮೋರಾಂಡಮ್ ಅನ್ನು 28ನೇ ತಾರೀಖು ಕಳುಹಿಸಿದ್ದೇವೆ. ಕೇಂದ್ರದ ತಂಡ ಬಂದಮೇಲೆ ನಾವು ಹೊಸದಾಗಿ ಲೇಟೆಸ್ಟ್ ಪ್ರಪೋಸಲ್ಸ್ 1226 ಕೋಟಿ ಅಂದಾಜನ್ನು ತಯಾರು ಮಾಡಿದ್ದೇವೆ. ಇದರ ಜೊತೆಗೆ 300ಕೋಟಿ ರೂಪಾಯಿ ಮನೆಗಳಿಗೆ ಸೇರಿರತಕ್ಕದ್ದು. ಇದನ್ನು ನಾವು ಕೇಂದ್ರದ ತಂಡಕ್ಕೆ ಕೊಡುತ್ತಿದ್ದೇವೆ. ಇದರ ಜೊತೆಗೆ ನಮ್ಮ ಸರ್ಕಾರದಿಂದ ಬಿಡುಗಡೆ ಮಾಡಿರತಕ್ಕ ಹಣ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಜಿಲ್ಲೆಗಳಿಗೆ 5 ಕೋಟಿ 98ಲಕ್ಷ ಬಿಡುಗಡೆ ಮಾಡಿದ್ದೇವೆ. ಅಕ್ಟೋಬರ್ ತಿಂಗಳಿನಲ್ಲಿ 43 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ತೊಗರಿ ಬೆಳೆ ನಷ್ಟಕ್ಕೆ ಬೀದರ್ ಮತ್ತು ಗುಲ್ಬರ್ಗಾಕ್ಕೆ ಸುಮಾರು 12 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದರ ಜೊತೆಗೆ ಫೈರ್ ಆಕ್ಸಿಡೆಂಟ್‌ಗೆ 5 ಕೋಟಿ 79 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇಲ್ಲಿಯವರೆಗೆ ಒಟ್ಟು 67 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಜಿಲ್ಲಾವಾರು ತೆಗೆದುಕೊಂಡರೆ ಹೆಚ್ಚು ನಷ್ಟವಾಗಿರತಕ್ಕದ್ದು ಬಿಜಾಪುರ ಜಿಲ್ಲೆ. ಬಿಜಾಪುರ ಜಿಲ್ಲೆಗೆ ಸುಮಾರು 4 ಕೋಟಿ 3ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಗುಲ್ಬರ್ಗಾ ಜಿಲ್ಲೆಗೆ 3 ಕೋಟಿ 82

ಲಕ್ಷ, ರಾಯಚೂರು ಜಿಲ್ಲೆಗೆ 3 ಕೋಟಿ 19 ಲಕ್ಷ ಬೀದರ್ ಜಿಲ್ಲೆಗೆ 2 ಕೋಟಿ 33 ಲಕ್ಷ, ಬಳ್ಳಾರಿ ಜಿಲ್ಲೆಗೆ 2 ಕೋಟಿ ಕೊಪ್ಪಳಕ್ಕೆ 1 ಕೋಟಿ 71 ಲಕ್ಷ, ಮಂಡ್ಯ ಜಿಲ್ಲೆಗೆ 2 ಕೋಟಿ 15 ಲಕ್ಷ, ದಕ್ಷಿಣ ಕನ್ನಡ ಜಿಲ್ಲೆಗೆ 2ಕೋಟಿ 54 ಲಕ್ಷ, ಕೊಡಗು ಜಿಲ್ಲೆಗೆ ಒಂದೂವರೆ ಕೋಟಿ, ಉಡುಪಿ ಜಿಲ್ಲೆಗೆ ಒಂದೂವರೆ ಕೋಟಿ, ಉತ್ತರ ಕನ್ನಡ ಜಿಲ್ಲೆಗೆ 1 ಕೋಟಿ 36 ಲಕ್ಷ, ಶಿವಮೊಗ್ಗ ಜಿಲ್ಲೆಗೆ 1 ಕೋಟಿ 33 ಲಕ್ಷ, ಗದಗ್ ಜಿಲ್ಲೆಗೆ 1 ಕೋಟಿ 19 ಲಕ್ಷ, ಬಾಗಲಕೋಟಿ ಜಿಲ್ಲೆಗೆ 1 ಕೋಟಿ 10 ಲಕ್ಷ, ಧಾರವಾಡ ಜಿಲ್ಲೆಗೆ 1 ಕೋಟಿ 10 ಲಕ್ಷ, ಚಿತ್ರದುರ್ಗ ಜಿಲ್ಲೆಗೆ 1 ಕೋಟಿ 10 ಲಕ್ಷ, ಬೆಳಗಾಂ ಜಿಲ್ಲೆಗೆ 1 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಜೊತೆಗೆ ಲೋಕೋಪಯೋಗಿ ಇಲಾಖೆಯವರಿಗೆ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಸಣ್ಣ ನೀರಾವರಿ ಇಲಾಖೆಗೆ 4 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಆರೋಗ್ಯ ಇಲಾಖೆಗೆ ಔಷಧಿಗಳನ್ನು ಕೊಂಡುಕೊಳ್ಳುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹೀಗೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ ಇದೆಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ಖರ್ಚಾಗಿರತಕ್ಕದ್ದು. ಹೆಚ್ಚು ಹಾನಿ ಎಲ್ಲಿ ಆಗಿದೆ ಅದರ ಬಗ್ಗೆ ಹೇಳಿದ್ದೇನೆ. ಬೇರೆ ಜಿಲ್ಲೆಗಳಿಗೂ ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಾ ಜಿಲ್ಲೆಗಳಿಗೆ ಎಷ್ಟೆಷ್ಟು ಬಿಡುಗಡೆ ಮಾಡಿದ್ದೇವೆ ಎನ್ನುವುದನ್ನು ಆದಷ್ಟುಬೇಗ ಎಲ್ಲಾ ಸದಸ್ಯರುಗಳಿಗೆ ಕೊಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎನ್ನುವುದನ್ನು ಹೇಳಲಿಲ್ಲ.

ಶ್ರೀ ಬಿ.ಸೋಮಶೇಖರ್: ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸುಮಾರು 64 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಬೆಂಗಳೂರು ನಗರ ಜಿಲ್ಲೆಗೆ 97 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಾ ವಿವರಗಳನ್ನು ನಾನು ಒದಗಿಸಿ ಕೊಡುತ್ತೇನೆ.

ಶ್ರೀ ಬಿ.ನಂಜಾಮರಿ: ತುಮಕೂರು ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಎನ್ನುವುದನ್ನು ಹೇಳಬೇಕು.

ಶ್ರೀ ಬಿ.ಸೋಮಶೇಖರ್: ತುಮಕೂರು ಜಿಲ್ಲೆಗೆ ಒಂದು ಕೋಟಿ 13 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾದಿದ್ದೇವೆ. ಪ್ರತಿಯೊಂದು ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ ಎನ್ನುವ ವಿವರವನ್ನು ಬೇಕಾದರೆ ಓದುತ್ತೇನೆ. ಸಮಯ ಜಾಸ್ತಿಯಾಗುತ್ತದೆಂದು ನಾನು ಓದಲಿಲ್ಲ. ತಮಗೆ ಬೇಕಾದರೆ ಸದಸ್ಯರುಗಳ ಅನುಕೂಲಕ್ಕೋಸ್ಕರ ವಿವರ ಒದಗಿಸಿಕೊಡುತ್ತೇನೆ. ಇದರ ಜೊತೆಗೆ ಈಗಾಗಲೇ ಹಣ ಆರ್ಡರ್ ಆಗಿರತಕ್ಕದ್ದನ್ನು ಬಿಡುಗಡೆ ಮಾಡಿದ್ದೇವೆ. ಚೆಕ್‌ಗಳನ್ನು ಜಿಲ್ಲೆಗಳಿಗೆ ಕಳುಹಿಸಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್: ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಪತ್ರಿಕೆಗಳಲ್ಲಿ ಹೇಳಿದ್ದೀರಿ. ಈಗ 64 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ.

ಶ್ರೀ ಬಿ.ಸೋಮಶೇಖರ್: ಮತ್ತೆ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ? ಈಗ ಏನು ಬಿಡುಗಡೆ ಮಾಡಿದ್ದೀರಿ ಅದನ್ನು ಏತಕ್ಕೆ ಕೊಟ್ಟಿದ್ದೀರಿ?

ಶ್ರೀ ಬಿ.ಸೋಮಶೇಖರ್: ತಕ್ಷಣಕ್ಕೆ ಮನೆ ಬಿದ್ದಿರುವುದಕ್ಕೆ ಅದನ್ನು ರಿಪೇರಿ ಮಾಡುವುದಕ್ಕೆ. ಸತ್ತವರಿಗೆ ಪರಿಹಾರ ಕೊಡಲಿಕ್ಕೆ ಕೊಟ್ಟಿದ್ದೇವೆ. ಜೊತೆಗೆ ಜಿಲ್ಲಾಪಂಚಾಯಿತಿಯವರು ಯೋಜನೇತರ ಹಣದಲ್ಲಿ ಆಯಾಯ ಭಾಗಗಳಲ್ಲಿ ಖರ್ಚು ಮಾಡಬೇಕೆಂದು ನಿರ್ದೇಶನ ಮಾಡಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಜಿಲ್ಲಾಪಂಚಾಯಿತಿಯವರು ಹಣ ಖರ್ಚು ಮಾಡಿ ಅಂದರೆ ಅವರು ಯೋಜನೇತರದಲ್ಲಿ ಬಿಲ್ಲು ಕೊಡುವುದಕ್ಕೆ ಆಗಬಹುದು. ಅವರಲ್ಲಿ ಖಂಡಿತಾ ಹಣವಿಲ್ಲ. ಯೋಜನೇತರ ಹಣದಲ್ಲಿ ವೆಚ್ಚಮಾಡಲಿಕ್ಕೆ ಅವರಲ್ಲಿ ಹಣವಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಜಿಲ್ಲಾಪಂಚಾಯಿತಿಯವರು ಯೋಜನೇತರದಲ್ಲಿ ಕಳೆದ ಮೂರು ವರ್ಷಗಳಿಂದ ಒಂದು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಸುಮ್ಮನೆ ಹೇಳಿದರೆ ಹೇಗೆ? ಮೂರು ವರ್ಷಗಳಿಂದ ಒಂದು ಕೆಲಸ ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಅವರಲ್ಲಿ ದುಡ್ಡಿಲ್ಲ.

ಉಪಾಧ್ಯಕ್ಷರು: ಮಂತ್ರಿಗಳು ಉತ್ತರ ಕೊಡುವುದು ಮುಗಿದ ಮೇಲೆ ಉಪ ಪ್ರಶ್ನೆಗಳನ್ನು ಕೇಳಿ. ನಡುನಡುವೆ ಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ಬಿ.ಸೋಮಶೇಖರ್: ಒಂದು ತಪ್ಪು ಮಾಹಿತಿ ಕೆಲವರಲ್ಲಿ ಮೂಡಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸಣ್ಣಪುಟ್ಟ ಚೆಕ್‌ಗಳು ಬ್ಯಾಂಕುಗಳಲ್ಲಿ ಹಣವಿಲ್ಲದೆ ಬೋನ್ಸ್ ಆಗಿದೆಯೆಂದು ಇದೆ. ಗುಲ್ಬರ್ಗಾ ಜಿಲ್ಲೆಗೆ ನಾವು ಈಗಾಗಲೇ 12 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. 6 ಕೋಟಿ ರೂಪಾಯಿಗಳನ್ನು ಈಗಾಗಲೇ ಡ್ರಾ ಮಾಡಿದ್ದಾರೆ. ಕೆಲವು ರೈತರ ಚೆಕ್‌ಗಳು ಬೋನ್ಸ್ ಆಗಿವೆ ಎನ್ನುವುದು ತಪ್ಪು ಮಾಹಿತಿ ನಿಮಗೆ ಇದೆ. ಈಗಾಗಲೇ 6 ಕೋಟಿ ರೂಪಾಯಿ ರೈತರು ಡ್ರಾ ಮಾಡಿದ್ದಾರೆ. ಇನ್ನು 12 ಕೋಟಿ ರೂಪಾಯಿ ಅವರ ಹತ್ತಿರ ಇದೆ. ಆ ಮಾಹಿತಿ ಸರಿಯಿಲ್ಲ.

ಶ್ರೀ ಧರ್ಮಸಿಂಗ್: ಮಾನ್ಯ ಉಪಾಧ್ಯಕ್ಷರೆ, ತೊಗರಿಬೆಳೆ ನಷ್ಟಕ್ಕೆ ಕೊಟ್ಟಿರತಕ್ಕ ಪರಿಹಾರದ ಹಣ 12 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ 6

ಕೋಟಿ ರೂಪಾಯಿ ಡ್ರಾ ಮಾಡಿರುವದು ಅದು ಬೇರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಅತಿವೃಷ್ಟಿ ಏನಾಗಿದೆ ಅದಕ್ಕೆ ಪ್ರಧಾನಮಂತ್ರಿಗಳು 50 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆಂದು ಇದೆ ಅದು ಬಂದಿದೆಯೋ ಇಲ್ಲವೋ? ಅದರಲ್ಲಿ ವಿಶೇಷವಾಗಿ ಇವತ್ತು ಏನು ಮನೆಗಳು ಬಿದ್ದಿವೆ ರಸ್ತೆಗಳು ಹಾಳಾಗಿವೆ ಅದಕ್ಕೆ ನಮ್ಮ ಜಿಲ್ಲೆಗೆ 3 ಕೋಟಿ 82 ಲಕ್ಷ ಬಿಡುಗಡೆ ಮಾಡಿದ್ದೇವೆಂದು ಪ್ರತ್ಯೇಕವಾಗಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಸಚಿವರು ಸದನದಲ್ಲಿ ಸರ್ಕಾರದ ಪರವಾಗಿ ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ. ತಮ್ಮ ಪ್ಲಾನ್ ನಾನ್‌ಪ್ಲಾನ್ ಇರತಕ್ಕದ್ದನ್ನು ಕೂಡಿಸಿಕೊಂಡು 3 ಕೋಟಿ 82 ಲಕ್ಷ ರೂಪಾಯಿ ಗುಲ್ಬರ್ಗಾಕ್ಕೆ ಪ್ರತ್ಯೇಕವಾಗಿ ಕೊಟ್ಟಿದ್ದೇವೆನ್ನುವುದನ್ನು ನಿಖರವಾಗಿ ಖಡಾಖಂಡಿತವಾಗಿ ಹೇಳಬೇಕು.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):ಇದೇ ವಿಚಾರದಲ್ಲಿ ಗುಲ್ಬರ್ಗಾಕ್ಕೆ ಸುಮಾರು 4 ಕೋಟಿ ಕೊಟ್ಟಿದ್ದೇವೆ. ತೊಗರಿಬೆಳೆ ನಷ್ಟವಲ್ಲದೆ 3 ಕೋಟಿ 82 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾನು ಗುಲ್ಬರ್ಗಾಕ್ಕೆ ಭೇಟಿ ಕೊಟ್ಟಿದ್ದೆ. ಗುಲ್ಬರ್ಗಾಟೌನ್‌ನಲ್ಲಿ ಗಂಗಾನಗರವೆಂದು ಇದೆ. ಅಲ್ಲಿ ಎಲ್ಲಾ ಮನೆಗಳು ನೀರಿನಲ್ಲಿ ಮುಗಳುಗಿದ್ದವು. ಇಡೀ ಲೊಕ್ಯಾಲಿಟಿ ಹಾಗೆಯೇ ಆಗಿದೆ. ಇಲ್ಲಿ ಮತ್ತೆ ಮನೆಗಳ ರಿಪೇರಿಗೆ ಹಣ ಕೊಟ್ಟರೆ ಪ್ರಯೋಜನವಾಗುವುದಿಲ್ಲವೆಂದು ಅವರನ್ನು ಅಲ್ಲಿಂದ ಸ್ಥಳಾಂತರ ಮಾಡಿ ಹೊಸದಾಗಿ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಸರ್ಕಾರದ ವತಿಯಿಂದ ಜಮೀನು ಕೊಟ್ಟು ಹುಡ್ಕೋ ಧನಸಹಾಯದಿಂದ ಮನೆಗಳನ್ನು ಕಟ್ಟಿಸಿಕೊಟ್ಟು ಸಹಾಯ ಮಾಡಲಿಕ್ಕೆ ಅವರನ್ನು ಇಲ್ಲಿಂದ ಸ್ಥಳಾಂತರ ಮಾಡಬೇಕು ಅದಕ್ಕೆ ಒಂದು ಶಾಶ್ವತ ಪರಿಹಾರ ಕಂಡುಹಿಡಿಯಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಬಂದಿದ್ದೇನೆ. ಅದೇರೀತಿ ಪ್ರತಿವರ್ಷ ಏನು ಮಳೆಯಿಂದ ಮನೆಗಳು ಮುಳುಗಡೆಯಾಗುತ್ತವೆ ಅಂತಹ ಊರುಗಳನ್ನು ಸ್ಥಳಾಂತರ ಮಾಡುವುದು ಒಂದೇ ದಾರಿ. ಪ್ರತಿವರ್ಷ ಮಳೆ ಬಂದಾಗ ತೇಪೆ ಹಾಕತಕ್ಕ ಕೆಲಸ ಸರಿಯಲ್ಲ ಇದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿಯೆಂದು ಹೇಳಿದ್ದೇನೆ. ಯಾವ ಊರುಗಳು ನೀರಿನಲ್ಲಿ ಮುಳುಗುತ್ತವೆ ಆ ಊರುಗಳನ್ನು ಗುರುತಿಸಿ ಅವುಗಳಿಗೆ ಶಾಶ್ವತ ಪರಿಹಾರ ಮಾಡಲಿಕ್ಕೆ ಯಾವುದಾದರೂ ಒಂದು ಹಣಕಾಸಿನ ಸಂಸ್ಥೆಯಿಂದ ಧನಸಹಾಯ ಪಡೆದು ಪ್ರತ್ಯೇಕವಾದ ಊರುಗಳನ್ನು ಮಾಡಲಿಕ್ಕೆ ಜಾಗ ಮಂಜೂರು ಮಾಡುವುದಕ್ಕೆ ನಮ್ಮಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ತಾವು ಜಿಲ್ಲಾಧಿಕಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂದು ಪಟ್ಟಿ ಓದಿದ್ದೀರಿ. ಅದರಲ್ಲಿ ನಮ್ಮದೇನೂ ಭಿನ್ನಾಭಿಪ್ರಾಯ ಇಲ್ಲ. ಆದರೆ ಯಾವುದೇ ಜಿಲ್ಲಾಧಿಕಾರಿ ಬಂದಿರುವಂಥ ಹಣವನ್ನು ಈ ಪರಿಹಾರಕ್ಕಾಗಿ ಖರ್ಚು ಮಾಡಿದ್ದಾರಾ? ಉದಾಹರಣೆಗೆ ಶಿವಮೊಗ್ಗ ಜಿಲ್ಲೆ. ನಾನು ನಿನ್ನೆ ಮಾತನಾಡಿಕೊಂಡು ಬಂದೆ. ಅದಕ್ಕೆ ನಾನು ಹೇಳುವುದೇನೆಂದರೆ ಡಿ.ಸಿ.ಗಳಿಗೆ ಇರುವ

ದುಡ್ಡನ್ನು ಖರ್ಚು ಮಾಡಿ ಎಂದು ಹೇಳಬೇಕು. ಎಲ್ಲಿಯೂ ಸಹ ಗುಂಡಿಬಿದ್ದ ರಸ್ತೆಗಳನ್ನು ಮುಚ್ಚುವುದಕ್ಕಾಗಲೀ, ಬೆಳೆ ಪರಿಹಾರ ಕೊಡುವಂಥಾದ್ದು ಆಗಲಿ ಪ್ರಾರಂಭವಾಗಿಲ್ಲ. ನೀವು ಸ್ಪಷ್ಟ ನಿರ್ದೇಶನ ಕೊಡುತ್ತೀರಾ? ಮನೆ ಬಿದ್ದವರಿಗೆ ಪ್ರಾರಂಭವಾಗಿ ಹತ್ತು ಸಾವಿರ ರೂಪಾಯಿ ಕೊಡಿ ಮತ್ತು ಅರ್ಧಂಬರ್ಧ ಬಿದ್ದರೆ ಕನಿಷ್ಠ ಐದು ಸಾವಿರ ರೂಪಯಿಗಳನ್ನು ಕೊಡಿ. ಇದು ಸ್ಪಷ್ಟವಾಗಿ ಇಲ್ಲದಿದ್ದರೆ ನೀವು ಭಿಕ್ಷೆ ಕೊಟ್ಟಹಾಗೆ ಕೊಡುತ್ತೀರಿ ಮತ್ತು ಅವನು ಖರ್ಚು ಮಾಡುತ್ತಾನೆ. ಇದರಿಂದ ಏನೂ ಪ್ರಯೋಜನ ಆಗುತ್ತಿಲ್ಲ. ಯಾವುದಾದರೂ ಒಂದು ಜಿಲ್ಲೆಯಲ್ಲಿ ಎಷ್ಟು ಖರ್ಚಾಗಿದೆ ಎಂಬ ಒಂದು ಅಂಕಿಅಂಶ ಕೊಡಿ. ಇಡೀ ರಾಜ್ಯದಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ದಯಮಾಡಿ ಹೇಳಿ. ಆವಾಗ ನಿಮಗೆ ವಾಸ್ತವವಾದ ಸ್ಥಿತಿ ಗೊತ್ತಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಈಗ ಎಷ್ಟು ಹಣ ಖರ್ಚಾಗಿದೆ, ಯಾವ್ಯಾವ ಹೆಡ್‌ಗಳಲ್ಲಿ ಎಷ್ಟೆಷ್ಟು ಬಿಡುಗಡೆ ಆಗಿದೆ ಎನ್ನತಕ್ಕಂಥಾದ್ದರ ಜೊತೆಗೆ, ನಮ್ಮ ಜಿಲ್ಲಾ ಮಂತ್ರಿಗಳು ಹೋಗಿ ನೋಡುವುದರ ಜೊತೆಗೆ ನಾನು ಒಬ್ಬ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳನ್ನು ಪ್ರತಿ ಜಿಲ್ಲೆಗೆ ಡೆಪ್ಯುಟ್ ಮಾಡಿದ್ದೇನೆ. ಪ್ರತಿಯೊಂದು ಜಿಲ್ಲೆಗೆ ಕಾರ್ಯದರ್ಶಿಗಳು ಹೋಗಿ ಅಧಿಕಾರಿಗಳ ಸಭೆನಡೆಸಿ ಎಷ್ಟು ಹಣ ಖರ್ಚಾಗಿದೆ, ಯಾವರೀತಿ ಖರ್ಚು ಮಾಡಬೇಕು, ಯಾವರೀತಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ಸೂಚನೆಯನ್ನು ಅವರಿಗೆ ಕೊಟ್ಟು ಬಂದಿದ್ದಾರೆ. ಮತ್ತೆ ನಮ್ಮ ಜಿಲ್ಲಾಧಿಕಾರಿಗಳು ಪ್ರತಿದಿವಸ ಎಷ್ಟೆಷ್ಟು ಹಣ ಖರ್ಚುಮಾಡಿದ್ದೇವೆ ಎನ್ನುವ ವರದಿಯನ್ನು ಕೊಡಬೇಕು ಎಂದು ನಾವು ಕೇಳಿದ್ದೇವೆ. ಈ ಮಾಹಿತಿಯನ್ನು ಅವರು ಕಳುಹಿಸಿಕೊಡುತ್ತಾರೆ ಮತ್ತು ಅದನ್ನು ನಾನು ಸದಸ್ಯರ ಗಮನಕ್ಕೆ ತರುತ್ತೇನೆ. ಮುಖ್ಯವಾಗಿ ತೆಗೆದುಕೊಳ್ಳತಕ್ಕಂಥ ಪರಿಹಾರಕ್ಕೆ ಏನೂ ತೊಂದರೆ ಇಲ್ಲ. ಈಗಾಗಲೇ 67 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುವುದರ ಜೊತೆಗೆ ನಮ್ಮ ಸಚಿವಸಂಪುಟ ಮತ್ತೆ 11 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಬೇಕು ಎಂಬ ನಿರ್ಧಾರವನ್ನು ನಾನು ತೆಗೆದುಕೊಂಡಿದ್ದೇವೆ. ಇಷ್ಟರಲ್ಲೇ ಜಿಲ್ಲಾಧಿಕಾರಿಗಳ ವರದಿ ಬಂದಮೇಲೆ 11 ಕೋಟಿ ರೂಪಾಯಿಗಳನ್ನು ನಾವು ತಕ್ಷಣ ಬಿಡುಗಡೆ ಮಾಡುತ್ತೇವೆ. ತಾತ್ವಿಕವಾದಂಥ ತೀರ್ಮಾನವನ್ನು ನಮ್ಮ ಸಚಿವಸಂಪುಟದಲ್ಲಿ ತೆಗೆದುಕೊಂಡಿದ್ದೇವೆ. ಮತ್ತೆ ಪ್ರತಿಯೊಂದು ಜಿಲ್ಲೆಯಲ್ಲಿ ನಮ್ಮ ಜಿಲ್ಲಾ ಮಂತ್ರಿಗಳು, ಜಿಲ್ಲಾಧಿಕಾರಿಗಳು ಸಮರೋಪಾದಿಯಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಯಾವುದೇ ರೀತಿಯಲ್ಲಿ ನಾವು ಹಿಂದೆ ಬಿದ್ದಿಲ್ಲ. ಮುಖ್ಯಮಂತ್ರಿಗಳ ಆರೋಗ್ಯ ಸರಿ ಇಲ್ಲದಿದ್ದರೂ ಕೂಡ ಮಂತ್ರಿಗಳು ನಾವು ಏನಿದ್ದೇನೆ, ಏನೇನು ಕೆಲಸ ಮಾಡಬೇಕೋ ಆ ಕೆಲಸಗಳನ್ನು ಮಾಡಿದ್ದೇವೆ. ಅವರು ನಮ್ಮ ಮೇಲೆ ಏನು ಆರೋಪ ಮಾಡಿದ್ದಾರೆ, ಸರ್ಕಾರ ನಿಷ್ಕ್ರಿಯವಾಗಿದೆ, ಏನೂ ಖರ್ಚು ಮಾಡಿಲ್ಲ, ಯಾವ ಕೆಲಸವೂ ಆಗಿಲ್ಲ ಎನ್ನತಕ್ಕಂಥಾದ್ದು ಕೇವಲ ವಿರೋಧ ಮಾಡಬೇಕು ಅಥವಾ ಟೀಕೆ ಮಾಡಬೇಕು ಎನ್ನುವ

ದೃಷ್ಟಿಯಿಂದ ಹೇಳಿರತಕ್ಕಂಥಾದ್ದೇ ಹೊರತು ನಿಜವಾಗಿ ಬೇರೆ ಏನೂ ಇಲ್ಲ. ಕರ್ನಾಟಕ ರಾಜ್ಯದಲ್ಲಿ ವರ್ಕ್ಸ್‌ಗಳಲ್ಲಿ ಆಗಿರತಕ್ಕಂಥ ಕೆಲಸವನ್ನು ತೆಗೆದುಕೊಂಡು ಹೇಳುವುದಾದರೆ 1993-94ರಲ್ಲಿ ಹೆಚ್ಚು ಹಾನಿಯಾಗಿದೆ ಎನ್ನತಕ್ಕದ್ದು ನಮ್ಮ ವರದಿಯಲ್ಲಿದೆ.....

ಶ್ರೀ ಡಿ.ಕೆ.ಶಿವಕುಮಾರ್: ಸ್ವಾಮಿ, ಹಳೆಯದ್ದು ಏಕೆ ಹೇಳುತ್ತಿದ್ದೀರಿ, ಈಗಿನದ್ದು ಹೇಳಿ.ಹಳೆಯ ಕತೆ ಮುಗಿದುಹೋಯಿತಲ್ಲ, ಈಗ ನೀವು ನಮ್ಮ ಕ್ಷೇತ್ರದಲ್ಲಿ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದೀರಲ್ಲಾ, ಅದರ ಬಗ್ಗೆ ಹೇಳಿ. ಹಳೆಯದೆಲ್ಲಾ ಏಕೆ ಹೇಳುತ್ತಿದ್ದೀರಿ?

ಶ್ರೀ ಬಿ.ಸೋಮಶೇಖರ್: ಹೋಲಿಕೆಯನ್ನು ಕೊಡಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ..

ಶ್ರೀಮತಿ ಪ್ರಮಿಳಾ ನೇಸರ್ಗಿ: ಬೆಂಗಳೂರು ನಗರದಲ್ಲಿ ಕೂಡ ಬೇಕಾದಷ್ಟು ಮನೆಗಳು ಬಿದ್ದುಹೋಗಿವೆ. ಅದರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಬಿ.ಸೋಮಶೇಖರ್: ನಮ್ಮ ಸರ್ಕಾರದಿಂದ ಈ ಒಂದು ಆರ್ಥಿಕವರ್ಷದಲ್ಲಿ ಎಷ್ಟು ಖರ್ಚುಮಾಡಿದ್ದೇವೆ ಎಂದು ಹೇಳಿದ್ದೇನೆ. ನಮಗೆ ಇನ್ನೂ ಆರುತಿಂಗಳು ಇದೆ. ಈ ಆರು ತಿಂಗಳಲ್ಲಿ ಸುಮಾರು 67 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಮತ್ತೆ 11 ಕೋಟಿ ಬಿಡುಗಡೆ ಮಾಡುತ್ತಿದ್ದೇವೆ. ಆದರೆ 1993-94ರಲ್ಲಿ ಇದಕ್ಕಿಂತ ಹೆಚ್ಚು ಪ್ರಕೃತಿ ವಿಕೋಪದಿಂದ ಹಾನಿಯಾಗಿದ್ದರೂ ಕೂಡ ಕಾಂಗ್ರೆಸ್ ಸರ್ಕಾರ ಆಗ ಕೇವಲ 62 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಅವತ್ತು ಖರ್ಗೆಯವರು ಅಥವಾ ಧರ್ಮಸಿಂಗ್ ಅವರು ಕಂದಾಯ ಮಂತ್ರಿಗಳಾಗಿದ್ದರೋ ಗೊತ್ತಿಲ್ಲ. ಅವರು ಹೇಳಬೇಕು. ಒಂದು ವರ್ಷ ಪೂರ್ತಿ 1993-94ರಲ್ಲಿ ಪ್ರಕೃತಿ ವಿಕೋಪದಿಂದ ಅಪಾರ ಹಾನಿಯಾಗಿದ್ದರೂ ನೀವು ಬಿಡುಗಡೆ ಮಾಡಿರತಕ್ಕಂಥ ಹಣ ಕೇವಲ 62 ಕೋಟಿ. ನಾವು ಈ 6 ತಿಂಗಳಲ್ಲಿ 67 ಮತ್ತು 11 ಕೋಟಿ ಸೇರಿದರೆ ಸುಮಾರು 80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಹೆಚ್ಚು ಹಣ ಬಿಡುಗಡೆ ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ನಾವು ಮನವಿ ಸಲ್ಲಿಸಿದ್ದೇವೆ. ಏನು 50 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎಂದು ಪ್ರಧಾನ ಮಂತ್ರಿಗಳು ಘೋಷಣೆ ಮಾಡಿದ್ದಾರೆ, ಅದನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು ಎನ್ನತಕ್ಕಂಥ ಮನವಿಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು, ನಮ್ಮ ಯಡಿಯೂರಪ್ಪನವರು ಮತ್ತು ಅವರ ಪಕ್ಷದ ಮುಖಂಡರು ಇದಕ್ಕೆ ಸಹಾಯ ಮಾಡಬೇಕು ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. ಮತ್ತೆ ನಮ್ಮ ಕಂದಾಯ ಇಲಾಖೆಯಲ್ಲಿ, ಮಾನ್ಯ ಜೆ.ಎಚ್.ಪಟೇಲರ ಸರ್ಕಾರ ಬಂದಮೇಲೆ ಬಹಳ ಐತಿಹಾಸಿಕವಾದಂಥ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಬಹುಶಃ ನೀವು ಇಷ್ಟು ವರ್ಷಗಳಿಂದ ನೋಡಿದ್ದೀರಿ. ಜಿಲ್ಲಾ

ಪುನರ್‌ವಿಂಗಡಣೆ ಆಗಬೇಕು, ಹೊಸ ಜಿಲ್ಲೆಗಳನ್ನು ಸ್ಥಾಪನೆ ಮಾಡಬೇಕು. ಹೆಚ್ಚು ಜಿಲ್ಲೆಗಳಿಗೆ ಹೆಚ್ಚು ಹಣಕೇಂದ್ರದಿಂದ ಬರಬೇಕು ಎಂದು ಬೇಡಿಕೆ ಇದ್ದರೂ ಕೂಡ, ಈ ಬಗ್ಗೆ ಎರಡು-ಮೂರು ಕಮಿಟಿಗಳ ರಿಪೋರ್ಟ್ ಇದ್ದರೂ ಕೂಡ ಯಾರೂ ಸಹ ಧೈರ್ಯ ಮಾಡಿರಲಿಲ್ಲ. ಮಾನ್ಯ ಜೆ.ಎಚ್.ಪಟೇಲರು ಬಹಳ ದಿಟ್ಟ ನಿಲುವನ್ನು ತೆಗೆದುಕೊಂಡು ಇವತ್ತು ಎಂಟು ಜಿಲ್ಲೆಗಳನ್ನು ಹೊಸದಾಗಿ ಸ್ಥಾಪನೆ ಮಾಡಿದ್ದು ಈ ಜಿಲ್ಲೆಗಳು ಇವತ್ತು ಕಾರ್ಯನಿರ್ವಹಿಸುತ್ತಿವೆ. ಈ ಜಿಲ್ಲೆಗಳಿಗೆ ನಾವು ಹಣ ವಿತರಣೆ ಮಾಡಿದ್ದೇವೆ. ಬೇರೆ ಎಲ್ಲಾ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಿವೆ. ಹೀಗಾಗಿ ಒಂದು ಐತಿಹಾಸಿಕವಾದಂಥ ತೀರ್ಮಾನ ನಮ್ಮ ಕಂದಾಯ ಇಲಾಖೆಯಲ್ಲಿ ಆಗಿರತಕ್ಕಂಥಾದ್ದು. ಪ್ರಕೃತಿ ವಿಕೋಪದಲ್ಲಿಯಂತೂ ಯಾವುದೇ ವರ್ಷಗಳಲ್ಲಿ ಇಷ್ಟು ಆಸಕ್ತಿ ವಹಿಸಿ ಹಣ ಬಿಡುಗಡೆ ಮಾಡಿರಲಿಲ್ಲ. ಇಷ್ಟೊಂದು ಆಸಕ್ತಿ ವಹಿಸಿ ಜಿಲ್ಲಾ ಮಂತ್ರಿಗಳು, ಜಿಲ್ಲಾಧಿಕಾರಿಗಳು ನಮ್ಮ ಮಂತ್ರಿಗಳು, ನಮ್ಮ ಕಾರ್ಯದರ್ಶಿಗಳು ಯಾರೂ ಸಹ ಇಷ್ಟು ಸಮರೋಪಾದಿಯಲ್ಲಿ ಕೆಲಸ ಮಾಡದೇ ಇದ್ದುದನ್ನು ನಾವು ಮಾಡಿದ್ದೇವೆ. ಜೊತೆಗೆ ಹೊಸದಾಗಿ ಕಾನೂನನ್ನು ನಾವು ತಂದಿರತಕ್ಕಂಥಾದ್ದು ತಮಗೆಲ್ಲರಿಗೂ ಗೊತ್ತಿದೆ. 1991ರಲ್ಲಿ....

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಒಂದು ನಿಮಿಷ ಈಲ್ಡ್ ಆಗಿ. ಏಕೆಂದರೆ ರಾಂಗ್ ಇಂಪ್ರೆಷನ್ ಬರಬಾರದು. 1993-94ರಲ್ಲಿ ಆ್ಯವರೇಜ್ ಎಷ್ಟು ಮಿಲಿಮೀಟರ್ ಮಳೆ ಕರ್ನಾಟಕ ರಾಜ್ಯದಲ್ಲಿ ಬಿದ್ದಿತ್ತು? ಈ ವರ್ಷ ಎಷ್ಟು ಮಿಲಿಮೀಟರ್ ಮಳೆ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ಪ್ರಕೃತಿ ವಿಕೋಪಕ್ಕೆ ತುತ್ತಾದಂಥ ಜಿಲ್ಲೆಗಳಲ್ಲಿ ಬಿದ್ದಿದೆ ಎನ್ನುವುದನ್ನು ತಾವು ಹೇಳಬೇಕು. ಜಾನುವಾರು ಸತ್ತಿದ್ದಕ್ಕೆ ಎಷ್ಟು ಹಣ ತಾವು ಬಿಡುಗಡೆ ಮಾಡಿದ್ದೀರಿ? ಕ್ರಾಪ್‌ಡ್ಯಾಮೇಜ್ ಆಗಿದ್ದಕ್ಕೆ ಎಷ್ಟು ಹಣ ತಾವು ಬಿಡುಗಡೆ ಮಾಡಿದ್ದೀರಿ? ತಾವು ಬಿಡುಗಡೆ ಮಾಡಿದಂಥ ಹಣದಲ್ಲಿ ಎಷ್ಟು ಖರ್ಚಾಗಿದೆ ಎನ್ನತಕ್ಕದ್ದು ಹೇಳಿದರೆ ನಮಗೂ ಸಂತೋಷವಾಗುತ್ತದೆ. ಸುಮ್ಮನೆ ನೀವು ಮಾಡಿಲ್ಲ, ನಾವು ಮಾಡಿದ್ದು ಎಂದು ಹೇಳಿದರೆ ಹೇಗೆ? ಹಳೆಯದನ್ನೂ ನೋಡಿ. ಹತ್ತು-ಹದಿನಾಲ್ಕು ಜಿಲ್ಲೆಗಳಲ್ಲಿ ಸತತವಾಗಿ ಇವತ್ತು ಹತ್ತಾರು ವರ್ಷಗಳಲ್ಲಿ ಬಿದ್ದಿರದೇ ಇರತಕ್ಕಂಥ ಮಳೆ ಬಿದ್ದಿದೆಯಾ ಅಥವಾ ಆವಾಗಲೂ ಸತತವಾಗಿ ಮಳೆ ಬಿದ್ದಿತ್ತಾ? ಅದನ್ನು ಹೇಳಿ ಜಾನುವಾರುಗಳಿಗೆ ಎಷ್ಟು ಹಣ ಸತ್ತಿದ್ದಕ್ಕೆ ಬಿಡುಗಡೆ ಮಾಡಿದ್ದೀರಿ? ಅದನ್ನು ಹೇಳಿದರೆ ನಮಗೂ ಕೂಡ ಸಂತೋಷವಾಗುತ್ತದೆ.

ಶ್ರೀ ರಾಮಲಿಂಗಾರೆಡ್ಡಿ: ಬೆಂಗಳೂರು ನಗರಕ್ಕೆ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿಲ್ಲ. ಇಲ್ಲೇನು ಮಳೆ ಬಿದ್ದಿಲ್ಲವೆ? ಜನರಿಗೆ ಇಲ್ಲಿ ತೊಂದರೆಯಾಗಿಲ್ಲವೇನು? ಇಲ್ಲಿ ಮನೆಗಳು ಬಿದ್ದಿಲ್ಲವೇನು? ಅದೇನೂ ಹೇಳಲೇ ಇಲ್ಲವಲ್ಲಾ.

ಶ್ರೀ ಗೋವಿಂದ ಮುತ್ತಪ್ಪ ಕಾರಜೋಳ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಹೇಳಿದರು ನಾವು ಹೊಸ ಜಿಲ್ಲೆಗಳನ್ನು ಮಾಡಿದ್ದೇವೆ ಎಂದು. ದಯವಿಟ್ಟು ತಾವು ಹೇಳಬೇಕು, 18 ಇಲಾಖೆಗಳಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಅಧಿಕಾರಿಗಳೇ ಇಲ್ಲ, ಸಿಬ್ಬಂದಿ ಕೂಡ ಇಲ್ಲ. ಇದು ಅಸ್ತಿತ್ವಕ್ಕೆ ಬಂದು ಒಂದು ವರ್ಷ ಮೂರು ತಿಂಗಳಾದರೂ ಅಲ್ಲಿ ಏನೂ ವ್ಯವಸ್ಥೆ ಆಗಲಿಲ್ಲ. ಈ ರೀತಿ ಜಿಲ್ಲಾ ಮರುವಿಂಗಡಣೆ ಮಾಡುವುದರಿಂದ ಏನೂ ಅರ್ಥ ಇಲ್ಲ. ಮತ್ತೊಂದು, ಜಿಲ್ಲಾವಾರು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದಾಗ ಯಾವ ಆಧಾರದ ಮೇಲೆ ಮಾಡಿದಿರಿ? ಬೇಡಿಕೆ ಬಂದಿದ್ದು ಎಷ್ಟು ಮತ್ತು ನೀವು ಕೊಟ್ಟಿದ್ದು ಎಷ್ಟು? ಕೆಲವು ಜಿಲ್ಲೆಗಳಿಗೆ ಹೆಚ್ಚು ಮಾಡಿದ್ದೀರಿ, ಕೆಲವು ಜಿಲ್ಲೆಗಳಿಗೆ ಕಡಿಮೆ ಮಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾವು ವಿರೋಧ ಪಕ್ಷದಲ್ಲಿದ್ದೇವೆ ಮತ್ತು ಮಾತುಮಾತಿಗೆ ಹೇಳುತ್ತೇವೆ. ಅವರಿಗೆ ಗೊತ್ತಿದೆ. ಬಾಗಲಕೋಟೆಯಲ್ಲಿ ಒಬ್ಬ ಅಧಿಕಾರಿಯೂ ಇಲ್ಲ ಇಂಪ್ಲಿಮೆಂಟ್ ಮಾಡುವುದಕ್ಕೆ.

ಶ್ರೀ ಗೋವಿಂದ ಮುತ್ತಪ್ಪ ಕಾರಜೋಳ: ಅಲ್ಲಿ ಅಧಿಕಾರಿಗಳನ್ನು ಯಾವಾಗ ನೇಮಿಸುತ್ತೀರಿ ಎಂದು ಹೇಳಬೇಕು. ಹಣ ಬಿಡುಗಡೆ ಮಾಡಿದ್ದು ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಮತ್ತು ಬೇಡಿಕೆ ಬಂದಿದ್ದು ಎಷ್ಟು? ಯಾವ ಆಧಾರದ ಮೇಲೆ ಹಣ ಬಿಡುಗಡೆ ಮಾಡಿದ್ದೀರಿ? ಇವತ್ತು ಬಾಗಲಕೋಟೆಯಲ್ಲಿ 25 ಕೋಟಿರೂಪಾಯಿ ಬೇಕು ಎಂದು ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆ. ಆದರೆ ಬಂದಿರುವುದು ಒಂದು ಕೋಟಿ ಹತ್ತು ಲಕ್ಷ ಮಾತ್ರ. ನನ್ನ ಒಂದೇ ಒಂದು ಕ್ಷೇತ್ರ ಮುಧೋಳದಲ್ಲಿ 3 ಕೋಟಿ 11 ಲಕ್ಷ ಹಾನಿಯಾಗಿದೆ. ಇವತ್ತು ಈರೀತಿ ಹಣ ಬಿಡುಗಡೆ ಮಾಡಿದರೆ ಏನು ಅರ್ಥ ಇದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಕ್ಲಾರಿಫಿಕೇಷನ್ ಆಮೇಲೆ ಮಾಡೋಣ.

ಉಪಾಧ್ಯಕ್ಷರು: ಅವರು ಉತ್ತರ ಮುಗಿಸಲಿ. ಕ್ಲಾರಿಫಿಕೇಷನ್ ಸಂಕ್ಷಿಪ್ತವಾಗಿ ಕೇಳಬೇಕು. ನೀವು ಭಾಷಣ ಮಾಡಿದರೆ ಹೇಗೆ? ಅವರು ಹೇಳಿ ಮುಗಿಸಿದಮೇಲೆ ನೀವು ಕೇಳಬೇಕು. ಅವರು ಉತ್ತರ ಕೊಟ್ಟಾದಮೇಲೆ ನೀವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವು ನಾಲ್ಕೈದು ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡುವವರಿದ್ದೇವೆ. ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಏನೇನು ಹೇಳಿದ್ದಾರೆ ಅದನ್ನೆಲ್ಲಾ ನಾವು ಕೇಳಿದ್ದೇವೆ. ನಾವು ಹೇಳಿಯಾದಮೇಲೆ ಉಪ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳು ಮಾತನಾಡುವವರಿದ್ದಾರೆ. ಅದಾದಮೇಲೆ ಅವರು ಯಾವ ಕ್ಲಾರಿಫಿಕೇಷನ್ ಬೇಕೋ ಕೇಳಲಿ. ಅವೆಲ್ಲದಕ್ಕೂ ನಾವು ದೀರ್ಘವಾದ ವಿವರಗಳನ್ನು ಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಏನು ಹೇಳುತ್ತೀರೋ ಧಾರಾಳವಾಗಿ ಹೇಳಿಕೊಳ್ಳಿ, 13ನೇ ತಾರೀಖಿಗೆ ತೀನ್‌ತೇರಾ ನೌಅಟ್ರಾ ಗೊತ್ತಾಗುತ್ತದೆ.

ಮಾನ್ಯ ಸದಸ್ಯರು: ಬಾಗಲಕೋಟೆ ಜಿಲ್ಲೆಯಲ್ಲಿ ಸುಮಾರು 16 ಹಳ್ಳಿಗಳಲ್ಲಿ ಮಳೆಬಂದು ನೀರು ನುಗ್ಗಿದೆ... ತಿನ್ನುವುದಕ್ಕೆ ಅಲ್ಲಿ ಜೋಳ ಇಲ್ಲವಾಗಿದೆ. ಸರ್ಕಾರದವರು ಪರಿಹಾರ ಕೊಡುವುದಕ್ಕೆ ಆದೇಶ ಕೊಡಬೇಕು.

ಉಪಾಧ್ಯಕ್ಷರು : ನೀವು ನಂತರ ಕೇಳಿ

ಶ್ರೀ ರಾಮಲಿಂಗಾರೆಡ್ಡಿ : ಬೆಂಗಳೂರು ನಗರಕ್ಕೆ ಏನು ಮಾಡಿದ್ದೀರಿ ಎಂದು ಹೇಳಿಬಿಡಲಿ.

ಉಪಾಧ್ಯಕ್ಷರು: ನಂತರ ಹೇಳುತ್ತೇನೆ ಎಂದು ಅವರು ಹೇಳಿದ್ದಾರೆ. ಅವರು ಮೊದಲು ಉತ್ತರ ಹೇಳಿ ಮುಗಿಸಲಿ.

ಶ್ರೀ ಬಿ.ಸೋಮಶೇಖರ್: ಮಾನ್ಯ ಉಪಾಧ್ಯಕ್ಷರೇ, 1993-94ರಲ್ಲಿ ಮಾನ್ಯ ಖರ್ಗೆಯವರ ಸರ್ಕಾರ ಇತ್ತು. ಅವರು ಕೇಳಿದರು, ಆಗ ಎಷ್ಟು ಮಳೆ ಬಿದ್ದಿತ್ತು? ಏನು ಹಾನಿಯಾಗಿತ್ತು ಎಂದು. 1993-94ರಲ್ಲಿ ಸೌತ್ ವೆಸ್ಟ್ ಮಾನ್‌ಸೂನ್‌ನಲ್ಲಿ ಸುಮಾರು 723 ಮಿಲಿಮೀಟರ್ ಮಳೆ. ನಾರ್ತ್ ಈಸ್ಟ್ ಮಾನ್‌ಸೂನ್‌ನಲ್ಲಿ ಸುಮಾರು 316 ಮಿಲಿಮೀಟರ್ ಮಳೆ. 1998ರಲ್ಲಿ 957 ಮಿಲಿಮೀಟರ್ ಮಳೆ. ಕೇವಲ 200 ಚಿಲ್ಲರೆ ವ್ಯತ್ಯಾಸ. ನಾರ್ತ್ ಈಸ್ಟ್‌ಮಾನ್‌ಸೂನ್‌ನಲ್ಲಿ ನಿಮ್ಮದು 316 ಆಗಿದ್ದರೆ, ನಮ್ಮದು 180 ಮಿಲಿಮೀಟರ್. ಅಂದರೆ, ಆ ವರ್ಷಕ್ಕೂ ಈ ವರ್ಷಕ್ಕೂ ಹೋಲಿಕೆ ಮಾಡಿಕೊಂಡರೆ, ಸ್ವಲ್ಪ ಸೌತ್ ವೆಸ್ಟ್ ಮಾನ್‌ಸೂನ್‌ನಲ್ಲಿ ಆಗಿದೆ. ನಾರ್ತ್ ಈಸ್ಟ್ ಮಾನ್‌ಸೂನ್‌ನಲ್ಲಿ ಆಗ ಜಾಸ್ತಿಯಾಗಿದೆ.

ಶ್ರೀ ಟಿ.ಬಿ.ಜಯಚಂದ್ರ: ಮಳೆ ಜಾಸ್ತಿಯಾಗಿದೆ, ಆದರಿಂದ ಹಾನಿಯೂ ಜಾಸ್ತಿಯಾಗಿದೆ ಎಂಬ ಅರ್ಥದಲ್ಲಿ ಇವರು ಹೇಳಿದ್ದು. ನೀವು ಕಂಪೇರ್ ಮಾಡಿ ಹೇಳಿದಿರಲ್ಲಾ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಜನತಾ ದಳದವರು ಅಧಿಕಾರಕ್ಕೆ ಬಂದರೆ ಮಳೆಯೇ ಬರುವುದಿಲ್ಲ, ಯಾವಾಗಲೂ ಬರಗಾಲ ಎಂದು ಹೇಳುತ್ತಿದ್ದರು. ಅದಕ್ಕೋಸ್ಕರ ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಅಧಿಕಾರದಲ್ಲಿ ಅನಾವೃಷ್ಟಿ, ಇಲ್ಲವೇ ಅತಿವೃಷ್ಟಿ. ಮಾನ್ಯ ಉಪಾಧ್ಯಕ್ಷರಿಗೂ ಗೊತ್ತಿದೆ. ನೀವು ಬಂದರೆ ಅನಾವೃಷ್ಟಿ ಇಲ್ಲ ಅತಿವೃಷ್ಟಿ.

ಉಪಾಧ್ಯಕ್ಷರು: ಅದು ನಿಮ್ಮ ಅಭಿಪ್ರಾಯ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ನಿಜ ಹೇಳಿ. ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಅದೇನಾದರೂ ಆಮೇಲೆ ನೋಡೋಣ. ಅವರು ನಿಮಗೆ ಏನೂ ಮಾಡುವುದಿಲ್ಲ. ನೀವು ಉಪಾಧ್ಯಕ್ಷರಿದ್ದೀರಿ.

ಉಪಾಧ್ಯಕ್ಷರು: ಇಲ್ಲ, ಇಲ್ಲ. ಅದು ನಿಮ್ಮ ಅಭಿಪ್ರಾಯ.

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ಕಡೆ ಒಂದು ಗಾದೆ ಇದೆ. ಮಗ ಉಂಡರೆ ಕೇಡಲ್ಲ, ಮಳೆ ಬಂದರೆ ಕೇಡಲ್ಲ ಎಂದು. ಮನೆಗಳು ಬಿದ್ದಿದೆ, ಅದು ನಿಜ. ಆದರೆ, ಮಳೆ ಬಂದರೆ ಕೇಡಲ್ಲ ಎಂಬುದು ನಮ್ಮ ಪೂರ್ವಜನರ ಮಾತೂ ಕೂಡ.

ಶ್ರೀ ಬಿ.ಬಿ.ಶಿವಪ್ಪ: ಮಗ ಉಂಡರೆ ಕೇಡಲ್ಲ, ಒಪ್ಪಿಕೊಳ್ಳುತ್ತೇನೆ. ಆದರೆ, ಮಗ ಅತಿಯಾಗಿ ಉಂಡರೆ ಕೇಡು. ಮಳೆ ಬಂದರೆ ಒಳ್ಳೆಯದು. ಆದರೆ, ಅತೀ ಮಳೆ ಬಂದರೆ, ಒಳ್ಳೆಯದಲ್ಲ.

ಶ್ರೀ ಬಿ.ಸೋಮಶೇಖರ್: ನಾನು ಹೇಳುತ್ತಿರುವುದು 1993-94ರಲ್ಲಿ, ಅಂದರೆ 1-4-93ಯಿಂದ 31-3-94ರ ವರೆಗೆ ಕೇವಲ 62 ಕೋಟಿ ಖರ್ಚು ಮಾಡಿರತಕ್ಕಂತಾದ್ದು. ಆ ವರ್ಷವೂ ಸಹ ನಾರ್ತ್ ಈಸ್ಟ್ ಮಾನ್‌ಸೂನ್‌ನಲ್ಲಿ ಸುಮಾರು 316 ಮಿಲಿಮೀಟರ್ ಬಿದ್ದಿದೆ. ನಮ್ಮದು ಕೇವಲ 180 ಮಿಲಿಮೀಟರ್ ಮಳೆ. ಸೌತ್ ವೆಸ್ಟ್‌ಮಾನ್‌ಸೂನ್‌ನಲ್ಲಿ ಅವರಿಗಿಂತ ನಮ್ಮ ಅವಧಿಯಲ್ಲಿ 200 ಮಿಲಿಮೀಟರ್ ಜಾಸ್ತಿಯಾಗಿರಬಹುದು. ಆಗಲೂ ನಷ್ಟವಾಗಿದೆ. ಪ್ರತಿ ವರ್ಷ ಮಳೆ ಇಲ್ಲದೆ ನಷ್ಟವಾಗುತ್ತದೆ ಇಲ್ಲವೇ ಮಳೆ ಆಗಿಯೂ ನಷ್ಟವಾಗುತ್ತದೆ. ಆದರೆ, ಎಷ್ಟು ನಷ್ಟವಾಗಿದೆ, ಅಷ್ಟನ್ನೂ ಯಾವ ಸರ್ಕಾರವೂ ಬಿಡುಗಡೆ ಮಾಡುವುದಕ್ಕಾಗಿಲ್ಲ. ಲಾಸ್ ಕಾಂಪೆನ್‌ಸೇಷನ್ ಮಾಡುವುದಕ್ಕಾಗುವುದಿಲ್ಲ. ಆದರೂ ನಾನೇನು ಹೇಳುತ್ತಿದ್ದೇನೆಂದರೆ, ನಿಮ್ಮ ಕಾಲದಲ್ಲಿ ಅಷ್ಟು ನಷ್ಟವಾಗಿದ್ದರೂ ಸಹಿತ, ನೀವು ಒಂದು ವರ್ಷಪೂರ್ತಿ ಕೊಟ್ಟಿರತಕ್ಕ ಹಣ ಕೇವಲ 62 ಕೋಟಿ. ನಾವು ಕೇವಲ 6 ತಿಂಗಳಲ್ಲಿ 67 ಕೋಟಿ ರೂಪಾಯಿ ಕೊಟ್ಟಿದ್ದೇವೆ, ಇನ್ನೂ 11 ಕೋಟಿ ರೂಪಾಯಿ ಕೊಡಬೇಕೆಂದು...

ಶ್ರೀ ಜೆ.ಟಿ.ಪಾಟೀಲ್:ಸನ್ಮಾನ್ಯ ಉಪಾಧ್ಯಕ್ಷರೇ, ಇದು ಸರಿಯಲ್ಲ. ಏಕೆಂದರೆ, 50 ವರ್ಷದಲ್ಲಿ ಆಗಲಾರದಷ್ಟು ಮಳೆ ಈ ವರ್ಷ ನಮ್ಮ ಕಡೆ ಆಗಿದೆ. 1993ನೇ ಇಸವಿಯಿಂದ ಹೋಲಿಕೆ ಮಾಡಿದರೆ ಅದು ಹೇಗೆ?

ಶ್ರೀ ಬಿ.ಸೋಮಶೇಖರ್: ಯಾವುದೇ ಸರ್ಕಾರದವರು ಇಷ್ಟೊಂದು ತೀವ್ರಗತಿಯಿಂದ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದ ರೀತಿಯಲ್ಲಿ ನಾವು ತೆಗೆದುಕೊಂಡಿದ್ದೇವೆ. ಹಣ ಬಿಡುಗಡೆ ಮಾಡುವುದರಲ್ಲೂ ಸಹ ಬಹಳ ಧಾರಾಳವಾಗಿ, ಬೇರೆ ಹಣದಲ್ಲಿ ಕಡಿತ ಮಾಡಿದರೂ ಈ ವಿಚಾರದಲ್ಲಿ ಕಮ್ಮಿ ಹಣವನ್ನು ಬಿಡುಗಡೆ

ಮಾಡಿರುವುದಿಲ್ಲ. ಇನ್ನೂ 11 ಕೋಟಿ ರೂಪಾಯಿ ಈಗಾಗಲೇ ಹೋಗುತ್ತಾ ಇದೆ. ಎಲ್ಲಿ ಲಾಸ್ ಆಗುತ್ತಾ ಇದೆ, ಅದರ ವರದಿ ತರಿಸಿಕೊಂಡು ಆಗಿಂದಾಗ್ಗೆ ನಾವು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಮತ್ತು ಸರ್ಕಾರ ಹಿಂದೆ ಬಿದ್ದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಂದಾಯ ಇಲಾಖೆ 100 ಕ್ಕೆ 70ರಷ್ಟು ಜನರಿಗೆ ಸ್ಪಂದಿಸತಕ್ಕ ಇಲಾಖೆ. ಸರ್ವೆ ಡಿಪಾರ್ಟ್‌ಮೆಂಟ್ ಇರಬಹುದು, ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಇರಬಹುದು, ಮತ್ತು ನಮ್ಮ ಕಂದಾಯ ಇಲಾಖೆಯಲ್ಲಿ ಆರ್.ಟಿ.ಸಿ ಕೊಡತಕ್ಕಂತಾದ್ದು, ಖಾತೆ ಮಾಡತಕ್ಕಂತಾದ್ದು ಇರಬಹುದು. ಈ ಇಲಾಖೆಯನ್ನು ನಾವೇನು ಅಭಿವೃದ್ಧಿ ಮಾಡುತ್ತೇವೆ, ಅಷ್ಟೂ ಜನರಿಗೆ ಅನುಕೂಲವಾಗುತ್ತದೆ ಎಂಬುದರಲ್ಲಿ ಸಂದೇಹ ಇಲ್ಲ. ಆ ದೃಷ್ಟಿಯಲ್ಲಿ ನಾವು ಜಿಲ್ಲೆಗಳನ್ನು ಮರು ವಿಂಗಡಣೆ ಮಾಡಿ, ಹೊಸ ಜಿಲ್ಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಅದರ ಜೊತೆಗೆ ಸರ್ವೆ ರೆಕಾರ್ಡ್ಸ್‌ಗಳೇನಿವೆ, ಸನ್ಮಾನ್ಯ ಸಭಾಧ್ಯಕ್ಷರಿಗೂ ಗೊತ್ತಿದೆ. ಎಲ್ಲಾ ಮ್ಯಾಫ್‌ಗಳೂ ಹರಿದು ಹಂಚಿಹೋಗಿದ್ದವು, ನೋಡುವುದಕ್ಕಾಗುವುದಿಲ್ಲ ಎಂಬಂತಿದ್ದವು. ನೂರಾರು ವರ್ಷಗಳಿಂದ ತಯಾರು ಮಾಡಿದ ಟಿಪ್ಪಣಿಗಳು ಇದ್ದವು. ಅದನ್ನು ನಾವು ಕಂಪ್ಯೂಟರೈಸ್ ಮಾಡಿ, ಪ್ರತಿ ಸರ್ವೆ ಆಫೀಸಿನಲ್ಲಿ ಕಂಪ್ಯೂಟರ್‌ಗಳನ್ನಿಟ್ಟು, ವಿತರಣೆ ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ಸುಮಾರು 12 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು, ನಾನು ಅಧಿಕಾರಕ್ಕೆ ಬಂದಮೇಲೆ ಕಳುಹಿಸಿಕೊಟ್ಟಿದ್ದೇವೆ. ಅದನ್ನು ಆದಷ್ಟು ಬೇಗ ಮಂಜೂರಾತಿ ಮಾಡಬೇಕೆಂದು ನಾವು ಒತ್ತಾಯ ತರುತ್ತಿದ್ದೇವೆ. ಜೊತೆಗೆ ರಾಜ್ಯದಲ್ಲಿ ಹೊಸದಾಗಿ ರೀ ಸರ್ವೆ ಮಾಡಬೇಕು, ರಿವಿಜನಲ್ ಸರ್ವೆಮಾಡಬೇಕು ಎನ್ನುವಂತಾದ್ದು ಬಹಳ ವರ್ಷಗಳ ಬೇಡಿಕೆ ಇದ್ದರೂ, ಈ ಕೆಲಸಕ್ಕೆ ಯಾರೂ ಕೈ ಹಾಕಿರಲಿಲ್ಲ. ಇದು ಬಹಳ ದೊಡ್ಡ ಕಾರ್ಯ. ಸುಮಾರು 800 ಕೋಟಿ ರೂಪಾಯಿಗಳು ಬೇಕಾಗತಕ್ಕ ಕಾರ್ಯ. ಅದಕ್ಕೆ ನಮ್ಮ ಸರ್ಕಾರ ಕೈ ಹಾಕಿದೆ. ಈಗಾಗಲೇ, ಅದರ ಮಂಜೂರಾತಿಗೋಸ್ಕರ ಕಳುಹಿಸಿದ್ದೇವೆ. ಅವರು ಕೇಂದ್ರಸರ್ಕಾರದವರ ಜೊತೆಗೆ, ಒಂದು ಪೈಲಟ್ ಪ್ರಾಜೆಕ್ಟ್ ಆಗಿ ಒಂದೆರಡು ತಾಲ್ಲೂಕುಗಳಲ್ಲಿ ತೆಗೆದುಕೊಂಡು, ಇದು ಯಶಸ್ವಿಯಾದರೆ, ರಾಜ್ಯದಲ್ಲಿ ಮುಂದೆ ಯಾವರೀತಿ ತೆಗೆದುಕೊಳ್ಳಬಹುದು ಎನ್ನುವ ಸೂಚನೆ ಕೊಟ್ಟಿದ್ದಾರೆ. ಆ ಕಾರ್ಯಕ್ರಮವನ್ನು ನಾವು ಮಾಡುತ್ತಾ ಇದ್ದೇವೆ. ಜೊತೆಗೆ 1991ನೇ ಇಸವಿಯಲ್ಲಿ ಮತ್ತು 1979ನೇ ಇಸವಿಯಲ್ಲಿ 1974ರಲ್ಲಿ ಬಂದಂಥ ಕಾನೂನು ಉಳುವವನೇ ಒಡೆಯ ಮತ್ತು ಸರ್ಕಾರದ ಜಮೀನಿನಲ್ಲಿ ಯಾರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ, ಅವರಿಗೆ ಪಟ್ಟಾ ಕೊಡತಕ್ಕಂಥದ್ದು. ಈ ಕಾರ್ಯ ಸಂಪೂರ್ಣವಾಗಿ ಆಗಿರಲಿಲ್ಲ. 1974ರಲ್ಲಿಯೇ ಕಾನೂನು ಜಾರಿಗೆ ಬಂದಿದ್ದರೂ ಕೂಡ, ಆ ಕಾನೂನಿನಲ್ಲಿ ಸ್ವಲ್ಪ ತೊಡಕು ಇದ್ದುದರಿಂದ ಸಂಪೂರ್ಣವಾಗಿ ಯಶಸ್ವಿಯಾಗಿ ಮಾಡುವುದಕ್ಕಾಗಿರಲಿಲ್ಲ. ಸರ್ಕಾರದ ಜಮೀನುಗಳ ಬಗ್ಗೆ ಬಗರ್ ಹುಕುಂ ಸಾಗುವಳಿದಾರರಿಗೆ ಅರ್ಜಿ ಹಾಕುವುದಕ್ಕೆ 1991ರೊಳಗೆ ಕೊನೆ ತಾರೀಖು ಇತ್ತು. ಆ ಅವಧಿ ಮುಗಿದು ಹೋಗಿದ್ದರಿಂದ ಎಷ್ಟೋ ಜನ ಅರ್ಜಿಯನ್ನೇ ಹಾಕಿರಲಿಲ್ಲ. ಎಷ್ಟೋ

ಸಹಸ್ರಾರು ಕುಟುಂಬದವರಿಗೆ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ಹೋದ ಅಧಿವೇಶನದಲ್ಲಿ ಆ ಕಾನೂನಿಗೆ ತಿದ್ದುಪಡಿ ತಂದು, ಆ ಕಾಲವನ್ನು ನಾವು ವಿಸ್ತರಣೆ ಮಾಡಿದ್ದೇವೆ. ಯಾರು ಯಾರು ಸರ್ಕಾರದ ಜಮೀನುಗಳಲ್ಲಿ, 4-5 ಎಕರೆಯೊಳಗೆ ಬಡವರು ಸಾಗುವಳಿ ಮಾಡುತ್ತಿದ್ದಾರೆ, ಅಂತಹವರಿಗೆ ಒಂದು ವರ್ಷದೊಳಗಾಗಿ ನಮ್ಮ ಸಾಗುವಳಿ ಚೀಟಿಯನ್ನು ಕೊಡಬೇಕೆಂದು ನಿರ್ದೇಶನ ಕೊಟ್ಟಿದ್ದೇವೆ.

ಶ್ರೀ ಎಂ.ಬಸಪ್ಪ: ಮಾನ್ಯ ಉಪಾಧ್ಯಕ್ಷರೇ, ಬಡವರಿಗೆ ಕೊಟ್ಟಿರತಕ್ಕ ಸೌಲಭ್ಯಗಳಿಗೆ, ನಾನು ಕಂದಾಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ: ಯಾರು 1991ರಲ್ಲಿ ಫಾರಂ ನಂ.50ರಲ್ಲಿ ಅರ್ಜಿ ಹಾಕಿರಲಿಲ್ಲ, ಅವರಿಗೆ ಮತ್ತೆ ಅರ್ಜಿ ಹಾಕುವುದಕ್ಕೆ ಅವಕಾಶ ಕಲ್ಪಿಸಿದ್ದೇವೆಂದು ಮಾನ್ಯಮಂತ್ರಿಗಳು ಹೇಳಿದ್ದಾರೆ. ಅಲ್ಲಿ ಕಾನೂನಿನ ಇನ್ನೊಂದು ತೊಡಕು ಇದೆ. ಇಂತಾದ್ದೇ ಬೆಳೆ ಬೆಳೆಯಬೇಕೆಂಬ ನಿಗದಿ ಇದೆ. 4 ಎಕರೆ 38 ಕುಂಟೆ ಒಳಗೆ ಇರತಕ್ಕ, ಅವನ ಆಸ್ತಿಯೂ ಸೇರಿ, ಎನ್‌ಕ್ರೋಚ್‌ಮೆಂಟ್ ಮಾಡಿದ್ದೂ ಸೇರಿ, ಅದನ್ನುಮಂಜೂರು ಮಾಡಬಹುದೆಂದು ಇದೆ. ಮತ್ತೊಂದರಲ್ಲಿ ಬೆಳೆ ಇಂತಾದ್ದೇ ಬೆಳೆಯ ಬೇಕೆಂದು ಹೇಳುತ್ತಾರೆ. ಕೊಡಗು, ಹಾಸನ, ಚಿಕ್ಕಮಗಳೂರು ಈ ಜಿಲ್ಲೆಗಳಲ್ಲಿ ಕಾಫಿ ಹಾಕುತ್ತಾರೆ. ಈ ಕಾಫಿ, ಏಲಕ್ಕಿ ಬೆಳೆಯನ್ನು. ಭಾರಿ ತೆಗೆಯುತ್ತಾರೆಂದಲ್ಲ. ಆ ಇರುವಂಥ ಜಾಗದಲ್ಲಿ ಕಾಫಿ ಹಾಕುತ್ತಾರೆ. ಈ ರೀತಿ ಕಾಫಿ ಹಾಕಿದ ತಕ್ಷಣ, ನಾವು ರಿಜೆಕ್ಟ್ ಮಾಡುತ್ತೇವೆ. ಕಾಫಿ ಹಾಕಿರುವುದರಿಂದ, ನಿನಗೆ ಅವಕಾಶ ಇಲ್ಲವೆಂದು ಹೇಳುತ್ತೇವೆ. ನಾನು ಎರಡು ಮೂರು ಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಹಿಂದೆ ಇದ್ದ ಮಾನ್ಯ ರೆವಿನ್ಯೂ ಮಂತ್ರಿಗಳು, ತಾವು ಮತ್ತು ಮತ್ತೊಬ್ಬರು ಈ ಮೂರೂ ಜನ, ಇದನ್ನು ಬದಲಾವಣೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದೀರಿ. ಮೊನ್ನೆ ಮಾನ್ಯ ನಾಣಯ್ಯನವರೂ ಬೆಳಗಾಂನಲ್ಲಿ ಭಾಷಣ ಮಾಡುತ್ತಾ ಇದರ ಬಗ್ಗೆ ನಾವು ಈಗಾಗಲೇ ಚಿಂತನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಅದರ ಬಗ್ಗೆ ಏನು ಮಾಡಿದ್ದೀರಿ ಎನ್ನುವುದನ್ನು ಹೇಳಬೇಕು. ಕ್ರಾಫ್ ಇಂತಾದ್ದೇ ಬೆಳೆಯಬೇಕೆಂಬ ನಿಗದಿ ಇದೆ. ನಮ್ಮ, ನಮ್ಮ ಏರಿಯಾದಲ್ಲಿ ಏನು ಬೆಳೆಯಬೇಕೋ, ಅದನ್ನು ಬೆಳೆದುಕೊಳ್ಳುತ್ತೇವೆ. ಎಕರೆ ಮತ್ತೊಂದು ಏನಿದೆ, ಅದಕ್ಕೆ ಬೇಕಾದರೆ ನಿಗದಿಪಡಿಸಿ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಬೆಳಕು ಚೆಲ್ಲಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ದಿನಾಂಕವನ್ನು ಮುಂದುವರೆಸಿದ್ದು, ಇನ್ನೂ ಸರ್ಕಾರಿ ಆದೇಶ ಹೊರಬಿದ್ದಿಲ್ಲ. ಕಳೆದ ವಿಧಾನ ಸಭೆಯಲ್ಲಿ ತಾವು ಹೇಳಿದುದಕ್ಕಿಂತ ಹಿಂದೆ ಹೇಳಿದ್ದು.

ಶ್ರೀ ಬಿ.ಸೋಮಶೇಖರ್: ಮೊದಲನೆಯದಾಗಿ ಕುಮಾರಸ್ವಾಮಿಯವರು ಸ್ಪಷ್ಟೀಕರಣಕ್ಕೆ ಹೇಳುತ್ತೇನೆ. ಈ ಕಾನುನು 1-11-98 ರಿಂದ ಜಾರಿಗೆ ಬಂದಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಶಾಸಕರಿಗೆಲ್ಲಾ ಒಂದೊಂದು ಕಾಪಿ ಕಳುಹಿಸಿಕೊಡಿ. ನಾವು ಜನರಿಗೆ ಹೇಳಬೇಕಲ್ಲಾ.

ಶ್ರೀ ಬಿ.ಸೋಮಶೇಖರ್: ಗೆಜೆಟ್‌ನಲ್ಲಿ ಹೊರಡಿಸಿದ್ದೇವೆ, ಪ್ರತಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದೇವೆ. ಮತ್ತೆ ಇನ್ನೊಂದು ಪ್ರತಿ ತಾಲ್ಲೂಕು ಕಚೇರಿಯಲ್ಲಿ, ಗ್ರಾಮ ಪಂಚಾಯ್ತಿ ಕಚೇರಿಯಲ್ಲಿ ಒಂದು ಪೋಸ್ಟರ್‌ನ್ನು ಮಾಡಿಸಿ, ಈ ಕಾನೂನಿಗೆ ತಿದ್ದುಪಡಿ ತಂದಿದ್ದೇವೆ, ಇದರಿಂದ ಏನು ಅನುಕೂಲವಾಗುತ್ತದೆ ಎಂಬ ಬಗ್ಗೆ ಸರ್ಕಾರದ ನಿರ್ದೇಶನ ಕೊಡುತ್ತಿದ್ದೇವೆ. ಪ್ರತಿ ತಾಲ್ಲೂಕು ಕಚೇರಿಗಳಲ್ಲೂ ಮತ್ತು ಗ್ರಾಮ ಪಂಚಾಯ್ತಿ ಕಚೇರಿಗಳಲ್ಲೂ, ಈ ಕಾನೂನಿನ ಅನುಕೂಲ ಪಡೆಯಲು ಪೋಸ್ಟರ್ಸ್ ಮಾಡಿ ಅಂಟಿಸುತ್ತೇವೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಲಕ್ಷಾಂತರ ಅರ್ಜಿಗಳು ಬಾಕಿ ಇವೆ. ಜನರಿಗೂ ಕಾನೂನು ಗೊತ್ತಾಗಿದೆ. ತಾವು ಪೋಸ್ಟರ್ ಮಾಡಿ ಹಾಕಿದ ತಕ್ಷಣ ಮತ್ತೆ ಇನ್ನೊಂದು 10ಲಕ್ಷ ಅರ್ಜಿಗಳು ಬರುತ್ತವೆ. ನನ್ನ ಅಭಿಪ್ರಾಯದ ಪ್ರಕಾರ ಪೋಸ್ಟರ್ ಆಗತ್ಯ ಇಲ್ಲ. ದಯವಿಟ್ಟು ತಾವು ತಿಳಿಸಿದರೆ ಸಾಕು, ಅವರಿಗೆ ಗೊತ್ತಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಉಪಾಧ್ಯಕ್ಷರೇ, ಈ ಒಂದು ವರ್ಷದೊಳಗೆ ಏನೇನು ಬಾಕಿ ಇದೆ, ಸಮಿತಿಯ ಮುಂದೆ ಇರತಕ್ಕಂತಾದ್ದು ಇರಬಹುದು, ಸಮಿತಿಗೆ ಅರ್ಜಿ ಹಾಕದೇ ಇರತಕ್ಕಂಥ ಪ್ರಕರಣಗಳು ಇರಬಹುದು. ಸಂಪೂರ್ಣವಾಗಿ ವಿತರಣೆಯಾಗಬೇಕು, ಸಾಗುವಳಿ ಚೀಟಿ ಕೊಡಬೇಕೆಂಬುದು ಸರ್ಕಾರದ ಚಿಂತನೆ. ಅದಕ್ಕಾಗಿ ತಿದ್ದುಪಡಿ ತರುತ್ತಿದ್ದೇವೆ. ನಮ್ಮ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ನಿಜವಾಗಿಯೂ ಯಾರು ಅನುಭವದಲ್ಲಿದ್ದಾರೆ, ಸಾಗುವಳಿ ಮಾಡುತ್ತಿದ್ದಾರೆ ಅಂತಹವರನ್ನು ಗುರುತಿಸಿ, ಅರ್ಜಿಗಳನ್ನು ಪಡೆದುಕೊಳ್ಳುವುದಕ್ಕೆ ಮೂರು ತಿಂಗಳ ಅವಧಿಯನ್ನು ಕೊಟ್ಟಿದ್ದೇವೆ.

1.30 ಪಿ.ಎಂ.

ಅಥವಾ ನಮ್ಮ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ನಿಜವಾಗಿಯೂ ಯಾರು ಅನುಭವದಲ್ಲಿದ್ದಾರೆ ಸಾಗುವಳಿ ಮಾಡುತ್ತಿದ್ದಾರೆ ಅಂಥಹವರನ್ನು ಗುರುತಿಸಿ ಅವರಿಂದ ಅರ್ಜಿಗಳನ್ನು ಪಡೆದುಕೊಳ್ಳುವುದಕ್ಕೆ ಮೂರು ತಿಂಗಳ ಅವಧಿಯನ್ನು ನಾವು ಕೊಟ್ಟಿದ್ದೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ, ನಮ್ಮ ಬೀದರ್ ಜಿಲ್ಲೆಗೆ ಇನ್ನೂ ಆ ಸರ್ಕಾರಿ ಆಜ್ಞೆ ಬಂದಿಲ್ಲ. ನಾನು 15 ದಿವಸಗಳ ಹಿಂದೆ ಒಂದು ಮೀಟಿಂಗ್ ತೆಗೆದುಕೊಂಡಿದ್ದೆ ಆ ಸರ್ಕಾರಿ ಆಜ್ಞೆ ಇನ್ನೂ ಬಂದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಜಿ.ಓ.ಆಗಿದೆಯೋ ಅಥವಾ ಇನ್ನು ಮೇಲೆ ಜಿ.ಓ. ಆಗಬೇಕೋ?

ಶ್ರೀ ಬಿ.ಸೋಮಶೇಖರ್: 1-11-98ರಿಂದ ಜಾರಿಗೆ ಬಂದಿದೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ: ನಾನು 15 ದಿವಸಗಳ ಹಿಂದೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಕೇಳಿದಾಗ ಇಲ್ಲ ಯಾವುದೇ ಜಿ.ಓ.ಬಂದಿಲ್ಲ ಎಂದು ಹೇಳಿದರು.

ಶ್ರೀ ಡಿ.ಟಿ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, 5 ವರ್ಷಗಳಿಂದ ಸಮಿತಿಗಳು ನಡೆದು ಆ ಸಮಿತಿ ಸದಸ್ಯರಿಗೆ ಇದುವರೆಗೂ ಟಿ.ಎ, ಡಿ.ಎ. ಸಹ ಬಂದಿಲ್ಲ. ಸರ್ಕಾರದವರು ನೀವು 10 ರೂಪಾಯಿಗಳನ್ನೂ ಸಹ ಇದುವರೆಗೂ ಬಿಡುಗಡೆ ಮಾಡಿಲ್ಲ. ನೀವು ಒಂದು ಆರ್ಡರ್ ಮಾಡಿಬಿಡಿ ನಾವು ಯಾವುದೇ ಟಿ.ಎ.ಡಿ.ಎ ಯನ್ನು ಮೆಂಬರ್ಸ್‌ಗೆ ಕೊಡುವುದಿಲ್ಲ ಎಂದು, ಆಗ ನಾವು ಒಪ್ಪಿಕೊಳ್ಳುತ್ತೇವೆ. ನಾನು ನಮ್ಮಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಸದಸ್ಯರು ಬಂದು ಕೇಳುತ್ತಾರೆ ಏನ್ರಿ ನಮಗೆ ಟಿ.ಎ.ಡಿ.ಎ. ಇಲ್ಲ ಒಂದು ಕಾಫಿ ಇಲ್ಲ ಎಂದು, ಆದ್ದರಿಂದ ತಾವು ದಯವಿಟ್ಟು ಒಂದು ಹೇಳಿಕೆಯನ್ನು ಇಲ್ಲಿ ಮಾಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಮಿಟಿಯವರ ಗಮನಕ್ಕೆ ಕೆಲವು ಪ್ರಕರಣಗಳು ಬಂದಿರುತ್ತವೆ. ಕೆಲವುಕಡೆ ಅರ್ಜಿ ಇಲ್ಲದೇ ಇರುವವರನ್ನೂ ಸ್ಕೇಚ್ ಮಾಡಿರುತ್ತಾರೆ. ಅದನ್ನೆಲ್ಲಾ ಕೊಟ್ಟುಕೊಂಡು ಹೋಗುವುದಕ್ಕೆ ಏನೂ ತೊಂದರೆ ಇಲ್ಲವಲ್ಲಾ ತಮ್ಮ ಕಡೆಯಿಂದ, ಈಗ ಕಮಿಟಿಯವರು ಸ್ಪಾಟ್ ನೋಡಲು ಹೋದಾಗ ಅಥವಾ ಸರ್ವೆಯರ್ ಸ್ಕೇಚ್ ಮಾಡಲು ಹೋದಾಗ ಅರ್ಜಿ ಇಲ್ಲದವರಿಗೂ ಒಂದು ಪ್ಲಾಟ್ ಮಾಡಿರುತ್ತಾರೆ. ಅದನ್ನು ಕಮಿಟಿಯವರೇ ಸೂಪ್ರೋಮೋಟೋ ಮಂಜೂರಾತಿ ಮಾಡುವುದಕ್ಕೆ ಅನುಮತಿ ಕೊಡುತ್ತೀರೋ ಅಥವಾ ನಿಮ್ಮ ಅಧಿಕಾರಿಗಳೇ ಇನ್ಸ್‌ಪೆಕ್ಟ್ ಮಾಡಿ ರಿಪೋರ್ಟ್ ಮಾ ಡಬೇಕೇ ಎನ್ನುವುದನ್ನು ಹೇಳಬೇಕು. ಎರಡನೇಯದು ನಾವು ಒತ್ತಿ ಒತ್ತಿ ಕೇಳುತ್ತಿದ್ದೇವೆ. ಈ ಸೇಂದಿವನದ ಬಗ್ಗೆ ಸರ್ಕಾರದವರು ಏನೂ ಹೇಳುತ್ತಿಲ್ಲ. ವೇಸ್ಟ್ ಸರ್ವ್ ಲ್ಯಾಂಡ್ ಎನು ಇದೆ ಅದನ್ನು ಮಂಜೂರು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಈ ಸಮಿತಿಗಳು ಯಶಸ್ವಿಯಾಗಿ ಕೆಲಸ ಮಾಡಿದರೆ ಈ ಒಂದು ಯೋಜನೆ ಯಶಸ್ವಿಯಾಗಿ ಆಗುತ್ತದೆ. ನಾನು ಈ ಸಂದರ್ಭದಲ್ಲಿ ಏನು ಹೇಳುತ್ತೇನೆ ಅಂದರೆ ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಅವರು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಪದೇ ಪದೇ ಮೀಟಿಂಗ್ ಮಾಡುತ್ತಾರೆ, ಅಧಿಕಾರಿಗಳ ತಲೆಯ ಮೇಲೆ ಕುಳಿತುಕೊಂಡು ಕೆಲಸ ಮಾಡಿಸುತ್ತಾರೆ, ಅಂತಹವರಿಗೆ ನಾವು ಸಾಗುವಳಿ ಚೀಟಿಗಳನ್ನು ತಕ್ಷಣ ಕೊಡುತ್ತೇವೆ. ನಾನು ಮಾನ್ಯ ಸದಸ್ಯರುಗಳಿಗೆ

ಮನವಿ ಮಾಡಿಕೊಳ್ಳುತ್ತೇನೆ, ಕೊನೆಯ ಪಕ್ಷ ಒಂದು ತಿಂಗಳಲ್ಲಿ ಎರಡು ಮೂರು ಸಭೆಗಳನ್ನಾದರೂ ಮಾಡಿ ಇರತಕ್ಕಂಥ ಪ್ರಕರಣಗಳನ್ನು ಇತ್ಯರ್ಥ ಮಾಡಿದರೆ ನಾನು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ, ಎಲ್ಲರಿಗೂ ಆದಷ್ಟು ಬೇಗ ಸಾಗುವಳಿ ಚೀಟಿ ಕೊಡಲು ಅನುಕೂಲವಾಗುತ್ತದೆ. ಸದಸ್ಯರು ಮೀಟಿಂಗ್‌ಗಳನ್ನೇ ಮಾಡದೇ ಇದ್ದರೆ ಆ ಪ್ರಕರಣಗಳು ಇತ್ಯರ್ಥವಾಗುವುದೇ ಇಲ್ಲ. ಮಾನ್ಯ ಅಧ್ಯಕ್ಷರೇ, ನನ್ನ ಅನುಭವದಲ್ಲಿ ಒಂದೊಂದು ವಾರಕ್ಕೆ ಒಂದೊಂದು ತಿಂಗಳಿಗೆ ಇಂತಹವರನ್ನು ಬದಲಾವಣೆ ಮಾಡಿ ಇವರನ್ನು ಸೇರಿಸಿ, ರೀ ಕಾನ್‌ಸ್ಟಿಟ್ಯೂಟ್ ಮಾಡುವುದರಲ್ಲಿಯೇ ಇದೆ ವರ್ಷಾನುಪೂರ್ತಿ. ಯಾವಾಗ ಸಂಪೂರ್ಣವಾದ ಸಮಿತಿ ಸೇರುತ್ತದೆಯೋ ನನಗಂತೂ ಅರ್ಥವಾಗುವುದಿಲ್ಲ. ನಾನು ನನ್ನ ಅನುಭವವನ್ನು ಹೇಳುತ್ತಿದ್ದೇನೆ. ಯಾರು ತೆಗೆಯಿರಿ ಎಂದು ಹೇಳಿರುತ್ತಾರೋ ಅವರಿಗೆ ಆಗುತ್ತದೆ. ಅದಕ್ಕೆ ನಾನು ಹೇಳುತ್ತೇನೆ ಮಾನ್ಯ ಅಧ್ಯಕ್ಷರೇ, ನಾನು ನಿರ್ದೇಶನ ಕೊಡುತ್ತೇನೆ, ಈ ಸಮಿತಿಗಳು ರೆಗ್ಯುಲರ್ ಆಗಿ ಕೂರಬೇಕು, ಒಂದು ತಿಂಗಳಲ್ಲಿ ಎರಡು ಮೂರು ಸಭೆಗಳು ಸೇರಬೇಕು. ಸರ್ವೆ ವೈಜ್ ನಂಬರ್ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್ವೆಯರ್ಸ್ ಇಲ್ಲ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಅದಕೋಸ್ಕರವೇ ನಾವು ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಸರ್ವೆಯನ್ನು ಯಾವ ರೀತಿ ಸ್ಟೆಪ್ ಅಪ್ ಮಾಡಬೇಕು ಎನ್ನುವುದಕ್ಕೆ ಸರ್ಕಾರ ಬೇರೆ ಒಂದು ರೀತಿಯ ಚಿಂತನೆಯನ್ನು ಮಾಡುತ್ತಿದೆ.

ಶ್ರೀ ಬಿ.ಎಸ್.ಯಾಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಿಮ್ಮ ಪಕ್ಷದ ಸದಸ್ಯರನ್ನು ಕೇಳಿ; ಬಹುತೇಕ ಕಡೆ ಸರ್ವೆಯರ್ಸ್ ಇಲ್ಲ. ಏಕೆಂದರೆ ಹೊರಗಡೆ ಪತ್ರಿಕೆಯಲ್ಲಿ ಶಾಸಕರು ಈ ಕಡೆ ಗಮನ ಕೊಡಲಿಲ್ಲ ಎಂದು ಹೋಗಬಾರದು. ಸರ್ವೆಯರ್ಸ್ ಇಲ್ಲದೇ ನಮ್ಮ ಮುಂದೆ ಫೈಲ್ಸ್ ಇಡುತ್ತಿಲ್ಲ ನಾವು ತೀರ್ಮಾನ ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ ಈ ಕೆಲಸ ಆಗುವಾಗ ಪ್ರೈವೇಟ್ ಸರ್ವೆಯರ್ಸ್ ಅನ್ನು ಅಪಾಯಿಂಟ್ ಮಾಡಿಕೊಂಡು ಅವರಿಂದ ಸರ್ವೆ ಮಾಡಿಸಬೇಕೆನ್ನುವ ಯೋಚನೆಯನ್ನೂ ಸಹ ಮಾಡುತ್ತಿದ್ದೇವೆ. ರಿಟೈರ್ಡ್ ಆದವರು ಈ ಸರ್ವೆ ಪೋಡಿ ಕೆಲಸ ಮಾಡಿಕೊಡಬೇಕು ಸಮಿತಿಗೆ, ಅದಕ್ಕೊಂದು ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ. ಇದರ ಉದ್ದೇಶ ಏನೆಂದರೆ ಈ ಕಾನೂನಿನಲ್ಲಿ ಏನೇನು ಎಡರುತೊಡರುಗಳು ಇವೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆ ಎಲ್ಲಾ ಎಡರುತೊಡರುಗಳನ್ನು ನಿವಾರಣೆ ಮಾಡಿ ಯಶಸ್ವಿಯಾಗಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆನ್ನುವುದೇ ನಮ್ಮ ಸರ್ಕಾರದ ಉದ್ದೇಶ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಪ್ರೆಶ್ ಅರ್ಜಿಗಳನ್ನು ಸಮಿತಿಯವರೇ ತೆಗೆದುಕೊಂಡು ಮಾಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಅದನ್ನೆ ನಾನು ಹೇಳುವುದಕ್ಕೆ ಹೊರಟಿದ್ದೇನೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ನಾವು ಪ್ರತಿ ತಿಂಗಳು 3-4 ಮೀಟಿಂಗ್ ಮಾಡುತ್ತಿದ್ದೇವೆ. ಈಗಾಗಲೇ ನಾನು ಹೇಳಿದಂತೆ ಕೊಡಗು, ಹಾಸನ, ಚಿಕ್ಕಮಂಗಳೂರಿನಲ್ಲಿ ಅರ್ಜಿಗಳು ಬಂದಾಗ 4-5 ಅರ್ಜಿಗಳನ್ನು ಮಾತ್ರ ಮಂಜೂರು ಮಾಡುವುದಕ್ಕೆ ಆಗುತ್ತಿದೆ. ಉಳಿದಂತಹ ಅರ್ಜಿಗಳು ರಿಜೆಕ್ಟ್ ಆಗುತ್ತಿವೆ. ಕಾರಣ ಬೆಳೆ ಆ ಬೆಳೆ ಒಂದು ಇಲ್ಲದಿದ್ದರೆ ನಾವು ಗರಿಷ್ಟ ಅರ್ಜಿಗಳನ್ನು ಇತ್ಯರ್ಥ ಮಾಡುತ್ತಿದ್ದೆವು. ನೂರು ಅರ್ಜಿಗಳನ್ನು ಅವತ್ತು ಮೀಟಿಂಗ್‌ಗೆ ಇಟ್ಟುಕೊಂಡರೆ 8-10 ಅರ್ಜಿಗಳ ಮೇಲೆ ಹೋಗುವುದಿಲ್ಲ. ಬಾಕಿ ಎಲ್ಲಾ ಅರ್ಜಿಗಳು ರಿಜೆಕ್ಟ್ ಆಗುತ್ತಿವೆ. ಕಾರಣ ಕಾಫಿ ಗಿಡ ಹಾಕಿದ್ದಾರೆಂದು. ಎಲ್ಲೋ ಒಂದು ಕಾಫಿ ಗಿಡ ಹಾಕಿದ್ದಾನೆಂದು ಎಲ್ಲೋ ಒಂದು ಏಲಕ್ಕಿ ಗಿಡ ಹಾಕಿದ್ದಾನೆಂದು, ಇದಕೋಸ್ಕರವೇ ಅರ್ಜಿಗಳು ರಿಜೆಕ್ಟ್ ಆಗುತ್ತಿವೆ.

ಶ್ರೀ ಬಿ.ಸೋಮಶೇಖರ್: ಈ ಒಂದು ಸಮಸ್ಯೆ ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಬರಬಹುದು. ಮಲೆನಾಡು ಪ್ರದೇಶದಲ್ಲಿ ಬರಬಹುದು. ತುಮಕೂರಿನಲ್ಲಿ ಸೇಂದಿವನದ ಸಮಸ್ಯೆ ಬರಬಹುದು. ಈ ಒಂದು ವ್ಯಾಪ್ತಿಯಲ್ಲಿ ಯಾವ ಯಾವ ಜಮೀನುಗಳನ್ನು ತೆಗೆದುಕೊಳ್ಳಬೇಕೆನ್ನುವುದಕ್ಕೆ ಒಂದು ಕಮಿಟಿ ಆಗಿತ್ತು. ಸಬ್ ಕಮಿಟಿಯವರು ಈ ಕಾಫಿ ಗಿಡಗಳನ್ನು ಯಾರು ಬೆಳೆದಿದ್ದಾರೆ ಸಣ್ಣ ಹಿಡುವಳಿದಾರರು ಸೇಂದಿವನ ಯಾರು ಬೆಳೆದಿದ್ದಾರೆ, ಅವರನ್ನು ಈ ಸಬ್ ಕಮಿಟಿಯವರು ಬಿಟ್ಟಿದ್ದಾರೆ. ಅದನ್ನು ಬಿಟ್ಟು ಶಿಫಾರಸ್ಸು ಮಾಡಿದ ಮೇರೆಗೆ ಆ ಕಾನೂನು ತಿದ್ದುಪಡಿಗೆ ನಾವು ಕುಮ್ಕಿ ಸೊಪ್ಪಿನ ಬೆಟ್ಟ, ತಾಣ ಮತ್ತು ಈ ಪಡ ಜಮೀನು ನಮ್ಮ ಕಡೆ ಎಲ್ಲಾ ಬೀಡು ಜಮೀನು ಎಂದು ಕರೆಯುತ್ತೇವೆ. ಈ ಜಮೀನುಗಳಿಗೆ ಟೈಮ್ ಎಕ್ಸ್‌ಟೆಂಡ್‌ಮಾಡಿದ್ದೇವೆ. ಮಂಗಳೂರು ಕಡೆ ಕುಮ್ಕಿ ಜಮಿನು ಇರಬಹುದು ಮತ್ತು ಕಾಫಿ ಗಿಡ ಬೆಳೆದಿರುವವರು ಮತ್ತು ಸೇಂದಿವನ ಇವೆರಡನ್ನು ಬಿಟ್ಟು ಸಮಿತಿಯವರು ಶಿಫಾರಸ್ಸು ಮಾಡಿರುವದರಿಂದ ತಿದ್ದುಪಡಿಯನ್ನು ನಾವು ತರುವುದಕ್ಕೆ ಆಗಲಿಲ್ಲ. ಅದರ ಬಗ್ಗೆ ನಾವು ಮರುಚಿಂತನೆ ಮಾಡುತ್ತೇವೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ತಾವು ಈಗ ಇದನ್ನು ಏನು ಬಿಟ್ಟಿದ್ದೀರಿ ಆ ಜಾಗ ಅವರಿಗೆ ಮಂಜೂರು ಆಗುವುದಿಲ್ಲ. ಒಂದು ವೇಳೆ ನಾವು ಮಂಜೂರು ಮಾಡಿದರೆ ಅವರು ಜಾಗ ಸಹ ಬಿಡುವುದಿಲ್ಲ. ಅವರು ಈಗಾಗಲೇ ಆ ಜಾಗಗಳಲ್ಲಿದ್ದಾರೆ. ಇದರಿಂದ ಸರ್ಕಾರಕ್ಕೆ ಬರುವ ಆದಾಯ ಸಹ ನಿಂತು ಹೋಗುತ್ತದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಕಾನೂನು ತಿದ್ದುಪಡಿಯೇ ಆಗಬೇಕು. ಈಗ ಏನು ನಾವು ಮೊನ್ನೆ ಮಾಡಿದ್ದೇವೆ, ಆ ರೀತಿಯ ಕಾನೂನು ತಿದ್ದುಪಡಿ ಆಗಬೇಕೇ ಹೊರತು ಈಗ ಇರತಕ್ಕಂಥ ಕಾನೂನಿನ ಅಡಿಯಲ್ಲಿ ಆಗುವುದಿಲ್ಲ. ಈಗ ತಾವು ಹೇಳಿರತಕ್ಕಂಥಾದ್ದನ್ನು ನಾವು ಮತ್ತೆ ಮರು ಪರಿಶೀಲನೆ ಮಾಡುತ್ತೇವೆ. ಮಾನ್ಯ ಮಾಧಸ್ವಾಮಿಯವರು ಒಂದು ಪ್ರಶ್ನೆಯನ್ನು ಕೇಳಿದರು, ಅರ್ಜಿ ಹಾಕದೇ ಇರತಕ್ಕಂಥವರ ಪ್ರಕರಣಗಳನ್ನು ಸಮಿತಿ ಬಿಟ್ಟು ಮಾಡುತ್ತಾರೆಯೇ ಏನು ಎಂದು, ಹೋದ ಸಾರಿ ಆಗಿರತಕ್ಕಂಥ ತೀರ್ಮಾನ ಅರ್ಜಿ ಹಾಕದೇ ಇದ್ದರೂ ಸ್ಥಳಪರಿಶೀಲನೆ ಮಾಡಿ ಅಧಿಕಾರಿಗಳು ಆ ರೇಕಾರ್ಡ್‌ಗಳನ್ನು ಸೃಷ್ಟಿ ಮಾಡಿ ಆ ಅರ್ಜಿ ಸಮಿತಿಯ ಮುಂದೆ ಬರಬೇಕು, ಕಮಿಟಿಯವರ ಮುಖಾಂತರವೇ ತೀರ್ಮಾನವಾಗಬೇಕು. ಆ ರೀತಿಯ ಒಂದು ತಿದ್ದುಪಡಿಯನ್ನು ನಾವು ತಂದಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ತಾವು ಗೆಜೆಟ್‌ನಲ್ಲಿ ಜಿ ಒ ಪ್ರಿಂಟ್ ಮಾಡಿಸಿ. ಆಗ ಎಲ್ಲರಿಗೂ ಗೊತ್ತಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಗೆಜೆಟ್‌ನಲ್ಲಿ ಬಂದಿದೆ. ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೇ, ಈಗ ತಾವು ಜಮೀನು ಮಂಜೂರು ಮಾಡಬೇಕಾದರೆ ಸರ್ಟನ್ ಲ್ಯಾಂಡ್ಸ್ ನಾಟ್ ಟು ಬಿ ಗ್ರ್ಯಾಂಟೆಡ್ ಎನ್ನುವುದರಲ್ಲಿ ಕುಮ್ಕಿ ಜಮೀನು ಸೊಪ್ಪಿನ ಬೆಟ್ಟ, ಸೇಂದಿವನ ಎಲ್ಲಾ ಕೂಡ ಸೇರುತ್ತದೆ. ಆದರೆ ಈಗಾಗಲೇ ಕುಮ್ಕಿ ಮತ್ತು ಸೊಪ್ಪಿನ ಬೆಟ್ಟವನ್ನು ಕೊಡತಕ್ಕಂಥಾದ್ದಕ್ಕೆ ತೀರ್ಮಾನ ಮಾಡಿದ್ದೀರಿ. ಸೇಂದಿವನದ ಬಗ್ಗೆ ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ಸದಸ್ಯರು ಪ್ರಸ್ತಾಪ ಮಾಡಿದಾಗ ತಾವು ಕೊಟ್ಟಿರತಕ್ಕಂಥ ಉತ್ತರ ಏನು? ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ ಅದು ಇತ್ಯರ್ಥವಾಗುತ್ತದೆ ಎಂದು, ನಾನು ಮಾತನಾಡುವಾಗ ಈ ವಿಷಯವನ್ನು ಹೇಳಬೇಕೆಂದು ಇದ್ದೆ ಆದರೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ಮಾನ್ಯ ಮಂತ್ರಿಗಳು ಈ ಸದನದಲ್ಲಿ ಸುಮಾರು 6 ಸಾರಿ ಉತ್ತರವನ್ನು ಕೊಟ್ಟಿರತಕ್ಕಂಥಾದ್ದು ಇದೆ. ಕ್ಯಾಬಿನೆಟ್ ಸಬ್ ಕಮಿಟಿಗೆ ಯಾವಾಗ ಹೋಯಿತು? ಇದು ಇತ್ಯರ್ಥವಾಗಿ ಬರುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕು? ತಾವು ತಿಳಿದುಕೊಳ್ಳಬೇಕು ನನ್ನ ಒಂದೇ ಕ್ಷೇತ್ರದ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಸುಮಾರು 36 ಸಾವಿರ ಎಕರೆಯಲ್ಲಿ ಅಕ್ರಮ ಸಾಗುವಳಿ ಮಾಡಿದ್ದಾರೆ. ಸೇಂದಿವನದಲ್ಲಿ ಅದು ಸುಮಾರು 30-40 ವರ್ಷಗಳಿಂದ ತೆಂಗಿನ ಗಿಡದಲ್ಲಿ ಫಸಲು ಆಗುತ್ತಿದೆ. ಅದು ಅವರಿಗೂ ಕೂಡ ಮಾಲೀಕತ್ವ ಬರಲಿಲ್ಲ ಸರ್ಕಾರಕ್ಕೂ ಕೂಡ ಆದಾಯ ಬರಲಿಲ್ಲ. ಈ ಪರಿಸ್ಥಿತಿ ಇರುವುದರಿಂದ ಇದನ್ನು ಮಾಡುವುದಕ್ಕೆ ಏಕೆ ವಿಳಂಬವಾಗಿದೆ ಎನ್ನುವುದನ್ನು ದಯವಿಟ್ಟು ಹೇಳಬೇಕು. ಮೊನ್ನೆ ರೈತರು ಅರ್ಜಿ ಹಾಕುವುದಕ್ಕೆ ಅವಕಾಶ

ಮಾಡಿಕೊಟ್ಟಿದ್ದೀರಿ ಅದಕ್ಕೆ ನಾವು ನಿಜವಾಗಿಯೂ ಧನ್ಯವಾದಗಳನ್ನು ಸರ್ಕಾರಕ್ಕೆ ಹೇಳಬೇಕು. ಅದರ ಜೊತೆಯಲ್ಲಿಯೇ ಈ ರೀತಿ ತೊಂದರೆ ಆಗಿರತಕ್ಕಂಥಾದ್ದನ್ನು ಅವರಿಗೂ ಕೂಡ ಸಹಾಯವಾಗದೇ ಇರತಕ್ಕಂಥ ಸಂದರ್ಭದಲ್ಲಿ ಅವರಿಗೆ ಸರ್ಟನ್ ಲ್ಯಾಂಡ್ಸ್ ನಾಟ್ ಟು ಬಿ ಗ್ರ್ಯಾಂಟ್‌ಡ್ ಎನ್ನತಕ್ಕಂಥಾದ್ದರಲ್ಲಿ ಅದನ್ನು ಡಿಲೀಟ್ ಮಾಡುವುದರಿಂದ ಬಹುಶಃ ಅದಕ್ಕೆ ತಿದ್ದುಪಡಿ ತರುವಂತಹ ಪ್ರಮೇಯ ಇಲ್ಲ. ಈಗಾಗಲೇ ಕ್ಯಾಬಿನೇಟ್ ಸಬ್ ಕಮಿಟಿಯವರು ಒಂದು ತೀರ್ಮಾನ ಮಾಡಿದ್ದಾರೆ. ಇದರ ಬಗ್ಗೆ ತಾವು ದಯವಿಟ್ಟು ಒಂದು ಕಾರ್ಯಕ್ರಮ ಹಾಕಿಕೊಂಡರೆ ಬಹಳಷ್ಟು ಜನರಿಗೆ ಸಹಾಯವಾಗುತ್ತದೆ ತಮಗೆ ಇನ್ನೂ ಒಳ್ಳೆಯ ಹೆಸರು ಬರುತ್ತದೆ. ತಾವು ಅಧಿಕಾರ ಬಿಟ್ಟು ಹೋಗುವಂತಹ ಸಂದರ್ಭದಲ್ಲಿ ಇದು ಒಂದು ಒಳ್ಳೆಯ ಕೆಲಸವನ್ನಾದರೂ ಮಾಡಿ ಹೋಗಿ ಎಂದು ಹೇಳಿ ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು ಎಕರೆ ನಿಗದಿ ಮಾಡಿದ್ದಾರೆ. ಇಷ್ಟೇ ಎಕರೆ ಅದರ ಮೇಲೆ ಮಾಡುವಂತೆ ಇಲ್ಲ. ಅವನು ಬಡವ. ಅವನದ್ದೇ ಆಸ್ತಿ ಇದ್ದರೂ ಕೂಡ ಅವನು 4 ಎಕರೆ 30 ಗುಂಟೆ ಮೇಲೆ ಹೋಗುವಂತೆ ಇಲ್ಲ. ಆದಾಯ ನಿಗದಿ ಮಾಡಿದ್ದಾರೆ ಇಷ್ಟೇ ಆದಾಯ ಇರಬೇಕು. ಅದರ ಮೇಲೆ ಅವನಿಗೆ ಆದಾಯ ಇದ್ದರೆ ಆ ಅರ್ಜಿಯನ್ನು ಮಂಜೂರು ಮಾಡುವುದಕ್ಕೆ ಆಗುವುದಿಲ್ಲ, ಆ ಅರ್ಜಿ ರಿಜೆಕ್ಟ್ ಆಗುತ್ತದೆ. ಈಗ ಬೆಳೆ ಅವನು ಏನು ಬೆಳೆ ಬೆಳೆದಿದ್ದಾನೆ ಅದನ್ನು ನೋಡಿ ನಾವು ತೀರ್ಮಾನ ಮಾಡಬೇಕು, ನಾನು ಹೇಳಿದಂತೆ ಈ 3-4 ಜಿಲ್ಲೆಗಳಲ್ಲಿ 3 ಎಕರೆಯಲ್ಲಿ ಕಾಫಿ ಗಿಡ ಹಾಕಿದ್ದರೆ ಅದನ್ನು ನಾವು ರಿಜೆಕ್ಟ್ ಮಾಡಬೇಕಾಗುತ್ತದೆ. ತಮಗೂ ಗೊತ್ತಿದೆ 3 ಎಕರೆಯಲ್ಲಿ ಕಾಫಿ ಗಿಡ ಹಾಕಿದರೆ ಅದರಿಂದ ಏನೂ ಪ್ರಯೋನಜವಾಗುವುದಿಲ್ಲ. ಏನೋ ಕಾರಣ ಆ ಜಾಗದಲ್ಲಿ ನಾಲ್ಕು ಕಾಫಿ ಗಿಡ ಹಾಕಿರುತ್ತಾನೆ. ಅದು ಕಾಫಿ ತೋಟ ಎಂದು ಅನಿಸಿಕೊಳ್ಳುವುದಿಲ್ಲ. ಇಂತಹ ಅರ್ಜಿಗಳನ್ನು ನಾವು ರಿಜೆಕ್ಟ್ ಮಾಡುತ್ತಿದ್ದೇವೆ. ನಾವು ಒಂದು ಗುಂಟೆಯನ್ನೂ ಸಹ ಕೊಡುವುದಕ್ಕೆ ಆಗುವುದಿಲ್ಲ. ನಾವು ಪ್ರತಿ ತಿಂಗಳು ಮಿಟಿಂಗ್ ಕರೆದರೂ ಒಂದು ಗುಂಟೆ ಜಾಗವನ್ನು ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಕಾನೂನು ತಿದ್ದುಪಡಿ, ತಜ್ಞರು, ಎಂದು ಹೇಳುತ್ತಿದ್ದಾರೆ. ತಜ್ಞರು ತಿದ್ದುಪಡಿ ಏನೂ ಇಲ್ಲ ಇದರಲ್ಲಿ, ಇರುವುದು ಇಷ್ಟೇ ತಾವು ಎಲ್ಲಾ ವ್ಯವಸ್ಥೆಯಲ್ಲಿ ಜಾಗ ಕೊಡಲಿಕ್ಕೆ ಅವಕಾಶ ಮಾಡಿ ಕೊಡಿ, ಬೆಳೆ ಇರಬೇಕೆಂದು ನಿಗದಿ ಮಾಡಿದ ಮೇಲೆ ಕೊಡುವುದಕ್ಕೆ ಬರುವುದಿಲ್ಲ. ಇದು ದೊಡ್ಡ ವಿಚಾರವೇನಿಲ್ಲವಾದ ಕಾರಣ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಂಡಿದ್ದೇನೆ. ಈ ಸಮಸ್ಯೆಯು ಮೂರು ಜಿಲ್ಲೆಗಳಲ್ಲಿ ಮಾತ್ರ ಇರುವುದರಿಂದಾಗಿ ತಾವುಗಳು ಒಂದು ತೀರ್ಮಾನವನ್ನು ತೆಗೆದುಕೊಳ್ಳಬಹುದು. ತೀರ್ಮಾನವನ್ನು ಯಾವರೀತಿಯಲ್ಲಿ ತೆಗೆದುಕೊಳ್ಳುತ್ತೀರೋ ಅದು ತಮಗೆ ಬಿಟ್ಟದ್ದು. ಈ ಸಂದರ್ಭದಲ್ಲಿ ತಾವುಗಳು ಈ ಒಂದು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಇಲ್ಲಿ ನಮ್ಮ ಅಧಿಕಾರಿಗಳು ತಪ್ಪಾಗಿ ಇಂಟರ್‌ಪಿಟ್ ಮಾಡುತ್ತಾ ಇದ್ದಾರೆ. ನಾವುಗಳೂ ಕೂಡ ಲಾಯರ್‌ಗಳಾಗಿ ಕೆಲಸ ಮಾಡಿದ್ದೇವೆ. ಅದರಲ್ಲಿ ನಾವು ಯಾವ ಪದಗಳನ್ನು ಉಪಯೋಗ ಮಾಡಿದ್ದೇವೆ? ಅನ್-ಆಥರೈಸ್ಡ್ ಆಕ್ಯುಪೇಷನ್ ಎಂದು ಇದೆ. ಅನ್ ಆಥರೈಸ್ಡ್ ಆಕ್ಯುಪೇಷನ್ ಎಂಬ ಪದವನ್ನು ನಾವು ಉಪಯೋಗಿಸಿದ ಮೇಲೆ ಅಲ್ಲಿ ತೆಂಗಿನ ಗಿಡಗಳನ್ನು ಹಾಕಿದ್ದೀರೋ, ಬಾಳೆಗಿಡಗಳನ್ನು ಹಾಕಿದ್ದೀಯೋ ಭತ್ತವನ್ನು ಹಾಕಿದ್ದೀಯೋ ಎಂದು ಯಾರು ಕೇಳಲು ಹೇಳಿದ್ದರು? We used the word unauthorised occupation" ಬಗರ್‌ಹುಕುಂನ್ನು ನಾವು ಮಾಡಿದ್ದೇವೆ. ಅದರಲ್ಲಿ ಒಂದು ವೇಳೆ ಫಸಲನ್ನು ಬೆಳೆಯದೇ ಸುತ್ತ ಬೇಲಿಯನ್ನು ಕಟ್ಟಿಕೊಂಡು, ಸ್ವಾಧೀನ ಇಟ್ಟುಕೊಂಡು, ಹುಲ್ಲನ್ನು ಬೆಳೆಸಿಕೊಂಡು ಇದ್ದರೂ ಕೂಡ ಅದರೊಳಗೆ ಕವರ್ ಆಗುತ್ತದೆ. ಈ ವಿಚಾರದಲ್ಲಿ ಕೆಲವು ಅಧಿಕಾರಿಗಳು ಅನಾವಶ್ಯಕವಾಗಿ ಮಿಸ್-ಇಂಟರ್‌ಪಿಟ್ ಮಾಡುತ್ತಾ ಇದ್ದಾರೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಈಗ 4 ಎಕರೆ 38 ಗುಂಟೆ ಪ್ರದೇಶದಲ್ಲಿ ಒಬ್ಬನ್ನು ಮನೆ ಕಟ್ಟಿಕೊಂಡಿರುತ್ತಾನೆ. ತಿಮ್ಮಪ್ಪನವರು ಹೇಳಿದ ಹಾಗೆ ಬೌಂಡ್ರಿ ಕಟ್ಟಿಕೊಂಡು ಮನೆ ಕಟ್ಟಿಕೊಂಡಿರುತ್ತಾನೆ. ಹೀಗೆ ಮನೆ ಕಟ್ಟಿಕೊಂಡಿದ್ದರೂ ಕೂಡ ಮಂಜೂರು ಮಾಡಲು ಬರುವುದಿಲ್ಲ. ಮನೆಯಲ್ಲಿ ವಾಸ ಇರುವುದರಿಂದ ಆ ಮನೆಯನ್ನು ಕಳೆದು ಅಂಥವರಿಗೆ ಮಂಜೂರು ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಅನ್ ಆಥರೈಸ್ಡ್ ಆಕ್ಯುಪೇಷನ್ ಅಂದರೆ ಏನು ಅರ್ಥ ಎಂಬ ಬಗ್ಗೆ ಡಿಕ್ಷನರಿ ತೆಗೆದುಕೊಂಡು ನೋಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಸೇಂದಿ ಮತ್ತು ಕಾಫಿ ಇಶ್ಯೂಗಳು ಬೇರೆ ಬೇರೆ ಇದೆ. ಶೇಂದಿವನಗಳನ್ನು ಹಿಂದೆ ಡಿ.ಸಿ.ಗಳು ಮಂಜೂರು ಮಾಡಿದ್ದಾರೆ. ಇವೊತ್ತು ಕರ್ನಾಟಕದಲ್ಲಿ ಟಾಡಿ ಇಲ್ಲ, ಈಚಲು ಗಿಡಗಳು ಇಲ್ಲ, ಬಂಜರು ಜಾಗ, ಉಳುಮೆ ಮಾಡಿಕೊಂಡಿರುವ ಜಾಗವನ್ನು ಕೊಡುವುದಕ್ಕೆ ನಿಮಗೇಕೆ ತೊಂದರೆ? ಇವೊತ್ತು ಯಾವುದೇ ಗವರ್ನಮೆಂಟ್ ಲ್ಯಾಂಡಗಳಿಗಿಂತಲೂ ಸೇಂದಿವನಗಳು ತುಂಬಾ ಹೀನಸ್ಥಿತಿಯಲ್ಲಿರುವವು ಆಗಿವೆ. ಅದನ್ನು ಕೊಡುತ್ತಾ ಇಲ್ಲ. ಈ ಜಾಗವು ಕಮರ್ಷಿಯಲ್ ಆಗಿದ್ದರೆ, ಅದರಿಂದ ಬಹಳ ದುಡ್ಡು ಬರುವುದಾಗಿದ್ದರೆ, ನಾನು ವಾದವನ್ನು ಮಾಡುತ್ತಿರಲಿಲ್ಲ.

ಶ್ರೀ ಡಿ.ಎಸ್.ಮಾದಪ್ಪ: ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯಲ್ಲಿ ಕಾಫಿಯ ಜೊತೆಗೆ ಯಾಲಕ್ಕಿಯನ್ನು ಬೆಳೆಯುತ್ತಾರೆ. ಬಹಳ ವರ್ಷಗಳಿಂದ ಅದಕ್ಕೆ ಖಾಯಿಲೆ ಇದೆ. ಅಂಥ ಜಾಗವನ್ನೂ ಕೂಡ ಕೊಡಬಾರದು ಎಂದು ಮಾಡಿದ್ದಾರೆ. ದಯವಿಟ್ಟು ಆ ಜಾಗವನ್ನು ಕೂಡ ಮಂಜೂರು ಮಾಡುವಂತೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ನಗರ ಸಭೆಯ ವ್ಯಾಪ್ತಿಯ ಗಡಿಯಿಂದ ಐದು ಕಿ.ಮಿ. ಒಳಗಡೆ ಬರುವುದಕ್ಕೆ ಖಾಯಂ ಮಾಡುವುದಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ನೀವು ಬಸ್‌ಸ್ಟ್ಯಾಂಡ್‌ನಿಂದ ಐದು ಕಿ.ಮಿ. ಎಂದು ತೆಗೆದುಕೊಳ್ಳುತ್ತೀರೋ ಅಥವಾ ಗಡಿ ಇಂದಲೋ ಎಂಬುದನ್ನು ಹೇಳಬೇಕು. ಅರ್ಜಿ ಹಾಕುವ ಸಂದರ್ಭದಲ್ಲಿ ನಗರ ಸಭೆಯ ಗಡಿ ಎಂದು ಬರುತ್ತದಲ್ಲವೇ? ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರೋ ಅಥವಾ ಈಗ ಗಡಿ ನಿಗದಿ ಮಾಡಿದಂತೆ ನಿಶ್ಚಯಿಸುತ್ತೀರೋ? ಏತಕ್ಕಂದರೆ ಉದಾಹರಣೆಗೆ ಶಿವಮೊಗ್ಗ ಭದ್ರಾವತಿ ಸೇರಿಸಿ ಕಾರ್ಪೋರೇಶನ್ ಮಾಡಿದ್ದಾರೆ. ಅನೇಕ ಹಳ್ಳಿಗಳನ್ನು ಅದಕ್ಕೆ ಈಗ ಸೇರಿಸಿದ್ದಾರೆ. ಅರ್ಜಿ ಹಾಕುವಾಗಿನ ಗಡಿ ಎಂದು ತೆಗೆದುಕೊಳ್ಳುತ್ತೀರೋ ಈಗ ಇರುವ ಗಡಿಯನ್ನು ತೆಗೆದುಕೊಳ್ಳುತ್ತೀರೋ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ನನ್ನ ಹೇಳಿಕೆಯನ್ನು ಪೂರ್ಣಗೊಳಿಸಿದ ಮೇಲೆ ಮಾನ್ಯ ಸದಸ್ಯರು ಕೇಳುವ ಸಮಸ್ಯೆಗಳಿಗೆ ಕ್ಲಾರಿಫಿಕೇಷನ್ ಕೊಡಲು ತಯಾರಿದ್ದೇನೆ. ಮೊದಲನೇದಾಗಿ ಶೇಂದಿ ವನ ಮತ್ತು ಕಾಫಿ ಬೆಳೆಯ ತಕ್ಕಂಥ ಪ್ರದೇಶವನ್ನು ಏಕೆ ಬಿಟ್ಟಿದ್ದೀರಿ ಎಂಬ ವಿಚಾರವನ್ನು ಕೇಳಿದ್ದಾರೆ. ಯಾವ ಯಾವ ಬೆಳೆ ಬೆಳೆಯ ತಕ್ಕಂಥ ಜಮಿನುಗಳನ್ನು ರೆಗ್ಯುಲರೈಸ್ ಮಾಡಬೇಕೆಂಬ ಬಗ್ಗೆ ಒಂದು ಸಚಿವಸಂಪುಟದ ಉಪ-ಸಮಿತಿಯು ರಚನೆಯಾಗಿತ್ತು. ಸಚಿವ ಸಂಪುಟದ ಉಪ-ಸಮಿತಿಯವರು ಯಾವ ಕಾರಣದಿಂದಲೋ ಏನೋ ನನಗೆ ಗೊತ್ತಿಲ್ಲ, ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಆ ಸಂದರ್ಭದಲ್ಲಿ ಕಾಫಿ ಮತ್ತು ಸೇಂದಿ ವನಗಳ ಬಗ್ಗೆ ಪ್ರಸ್ತಾವನೆ ಇದ್ದರೂ ಕೂಡ ಶಿಪಾರಸ್ಸು ಮಾಡಿರಲಿಲ್ಲ. ಹಾಗೆ ಶಿಫಾರಸ್ಸು ಮಾಡಿದ್ದಲ್ಲಿ ನಾವು ಈ ತಿದ್ದುಪಡಿಯಲ್ಲಿ ಅದನ್ನು ಸೇರಿಸುತ್ತಾ ಇದ್ದೆವು. ಅದನ್ನು ಬಿಟ್ಟು ಯಾವ ಯಾವ ಬೆಳೆಗಳಿಗೆ ಸಮಿತಿಯವರು ಶಿಫಾರಸ್ಸು ಮಾಡಿದ್ದಾರೋ ಅದನ್ನು ಸೇರಿಸಿ ನಾವು ತಿದ್ದುಪಡಿಯನ್ನು ತಂದಿದ್ದೇವೆ. ಐದು ಎಕರೆಗಳೊಳಗಡೆ ಇರತಕ್ಕಂಥ ಕಾಫಿ ಮತ್ತು ಸೇಂದಿವನಗಳನ್ನು ಪರಿಶೀಲನೆ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಅದನ್ನು ನಮ್ಮ ಸರಕಾರವು ಪರಿಶೀಲನೆ ಮಾಡುತ್ತದೆ ಎಂದು ಹೇಳಬಯಸುತ್ತೇನೆ. ಮಾನ್ಯ ಈಶ್ವರಪ್ಪನವರು ಪಟ್ಟಣ ಪ್ರದೇಶದೊಳಗಿರತಕ್ಕಂಥ ಜಮೀನನ್ನು ಹೇಗೆ ಮಾಡುತ್ತೀರಿ ಎಂದು ಕೇಳಿದ್ದಾರೆ. ನಮ್ಮಲ್ಲಿ ಈಗ ಸಿ ಡಿ ಪಿ ಏರಿಯಾ ಎಂದು ನಿಗದಿಯಾಗಿದೆ. ಅದು ಬೆಂಗಳೂರಿನಲ್ಲಿ 18 ಕಿ.ಮೀ. ಇರಬಹುದು, ಶಿವಮೊಗ್ಗದಲ್ಲಿ 5 ಕಿ.ಮೀ. ಅಥವಾ 10 ಕಿ.ಮಿ. ಇರಬಹುದೋ ಏನೋ ಗೊತ್ತಿಲ್ಲ; ಹೀಗೆ ಸಿಡಿಪಿ ಏರಿಯಾ ಏನು ನಿಗದಿಯಾಗಿದೆ, ಅದನ್ನು ಬಿಟ್ಟು ಬೇರೆ ಕಡೆಗೆ ನಾವು ರೆಗ್ಯುಲರೈಸ್ ಮಾಡಬೇಕೆಂಬ ನಿಲುವು ಇದೆ. ಅದಕ್ಕೆ ಕಾನೂನಲ್ಲಿ ತಿದ್ದುಪಡಿ ತರಬೇಕಾಗಿತ್ತು. ಹೋದ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರು ಸಿಟಿಪ್ರದೇಶವನ್ನು ಸೇರಿಸಿದರೆ ಅದರಿಂದ ಬಹಳ ಅನಾಹುತವಾಗುತ್ತದೆ ಎಂದು ಹೇಳಿದ್ದರು. ಅದನ್ನು ಬಿಟ್ಟು ಮಾಡಬೇಕೆಂಬುದು

ಸಭೆಯ ಅಭಿಪ್ರಾಯವಾದುದರಿಂದ ಅದನ್ನೂ ಕೂಡ ತಿದ್ದುಪಡಿಯಲ್ಲಿ ತರುತ್ತಾ ಇದ್ದೇವೆ. ಅದನ್ನು ಬಿಟ್ಟುಬೇರೆ ಕಡೆಗಳಲ್ಲಿ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿದೆ. ಇನ್ನು ಬಗರ್ ಹುಕುಂ ಸಾಗುವಳಿದಾರರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬೇಕೆಂಬ ವಿಚಾರದಲ್ಲಿ ಮೂರು ತಿಂಗಳೊಳಗೆ ಐಡೆಂಟಿಫಿಕೇಷನ್ ಆಗಬೇಕು. ಅರ್ಜಿ ಕೊಡಲಿ ಅಥವಾ ಕೊಡದಿರಲಿ. ನಮ್ಮ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಗುರುತಿಸುತ್ತಾರೆ. ಹೀಗೆ ಗುರುತಿಸತಕ್ಕಂಥ ಒಂದು ಪ್ರಕ್ರಿಯೆಯು ಮೂರು ತಿಂಗಳುಗಳೊಳಗಾಗಿ ಆಗುತ್ತದೆ. ರಿಕಾರ್ಡ್ಸ್ ಬಿಲ್ಟ್ ಅಫ್ ಮಾಡತಕ್ಕಂಥಾದ್ದಕ್ಕೆ ಮೂರು ತಿಂಗಳುಗಳು. ಇನ್ನು ಮೂರು ತಿಂಗಳುಗಳ ಕಾಲದಲ್ಲಿ ಸಮಿತಿಗಳು ಕುಳಿತು ತೀರ್ಮಾನ ಮಾಡತಕ್ಕಂಥ ಕೆಲಸವನ್ನು ಮಾಡುತ್ತವೆ. ಇನ್ನು ಒಂದು ವರ್ಷದೊಳಗಾಗಿ ಎಲ್ಲರಿಗೂ ಸಾಗುವಳಿ ಚೀಟಿಯನ್ನು ವಿತರಣೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಶೆಡ್ಯೂಲ್‌ನ್ನು ನಾವು ಹಾಕಿಕೊಂಡಿದ್ದೇವೆ. ಈ ಕಾನೂನು ತಿದ್ದುಪಡಿಯನ್ನು ತಂದಮೇಲೆ ಬಗರ್‌ಹುಕುಂ ಸಾಗುವಳಿಯನ್ನು ಯಾರ್ಯಾರು ಮಾಡುತ್ತಿದ್ದಾರೆ ಅವರುಗಳಿಗೆ ಪಟ್ಟಾವನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ನಾವು ಒಂದು ವರ್ಷದೊಳಗಾಗಿ ಸಮರೋಪಾದಿಯಲ್ಲಿ ಮಾಡುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರೇ, ಯಾಲಕ್ಕಿ ಮತ್ತು ಕಾಫಿ ಬಗ್ಗೆ ಸರಕಾರದ ಸ್ಪಷ್ಟವಾದ ನಿಲವು ಹೇಳಬೇಕು. ಇವೊತ್ತು ಯಾಲಕ್ಕಿ ಬೆಳೆಯುತ್ತಿದ್ದ ಪ್ರದೇಶಗಳು ಸಂಪೂರ್ಣವಾಗಿ ನಾಶವಾಗಿ ಹೋಗಿವೆ. ಅದರ ಬಗ್ಗೆ ತಾವುಗಳು ಸ್ಪಷ್ಟೀಕರಣ ನೀಡಬೇಕು.

ಶ್ರೀ ಬಿ.ಸೋಮಶೇಖರ್: ಇನ್ನೊಂದು ಭಾಗದಲ್ಲಿ ತಿದ್ದುಪಡಿ ತಂದಿರತಕ್ಕಂಥಾದ್ದು ಲ್ಯಾಂಡ್ ರಿಫಾರ್ಮ್ ಆಕ್ಟ್ ಬಗ್ಗೆ. ಗೇಣಿದಾರರಿಗೆ ಸಹಾಯ ಮಾಡಬೇಕೆಂಬ ದಿಸೆಯಲ್ಲಿ ಇದು ಇದೆ. ಯಾರಿಗೆ ಅಂದು ಅರ್ಜಿಯನ್ನು ಸಲ್ಲಿಸಲು ಆಗಲಿಲ್ಲ, ಅಂಥವರು ಸೆಕ್ಷನ್ 77ರ ಪ್ರಕಾರ ಅರ್ಜಿ ಸಲ್ಲಿಸಲು ಆಗಲಿಲ್ಲದವರ ಪ್ರಕರಣಗಳು ಲ್ಯಾಂಡ್‌ಟ್ರಿಬ್ಯೂನಲ್ಲ್ ಮುಂದೆ ಇಲ್ಲ, ಅಂಥವರಿಗೆ ಅರ್ಜಿ ಸಲ್ಲಿಸಲು ಅವಕಾಶ ಇದೆ. ಅಂಥ ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲಿಯೇ 20 ಸಾವಿರ ಪ್ರಕರಣಗಳು ಇವೆ. ಆರ್‌ಟಿಸಿಯಲ್ಲಿ ಸರಕಾರಿ ಜಮೀನು ಎಂದು ಹೋಗುತ್ತಾ ಇದೆ, ಆದರೆ ಅವರು ಆ ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ಇದ್ದಾರೆ. ಅವರು ಗೇಣಿದಾರರಾಗಿದ್ದರೂ ಕೂಡ ಅವರ ಪರವಾಗಿ ತೀರ್ಮಾನ ಮಾಡಲು ಕಾನೂನಿನಲ್ಲಿ ಅಡ್ಡಿ ಇತ್ತು. ಅದಕ್ಕೂ ಕೂಡ ನಾವು ತಿದ್ದುಪಡಿ ತಂದು ಅವರ ಪ್ರಕರಣಗಳನ್ನು ಒಂದೇ ವರ್ಷದೊಳಗಾಗಿ ಲ್ಯಾಂಡ್ ಟ್ರಿಬ್ಯೂನಲ್ ಕಮಿಟಿಗಳು ಇತ್ಯರ್ಥ ಮಾಡಬೇಕೆಂಬ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ಎರಡೂ ಕಾನೂನುಗಳು 1974ರಿಂದ ಇರತಕ್ಕಂಥ ತೊಂದರೆಗಳನ್ನು ನಿವಾರಣೆ ಮಾಡತಕ್ಕಂಥ ಒಂದು ಐತಿಹಾಸಿಕ ತಿದ್ದುಪಡಿಗಳನ್ನು ನಮ್ಮ ಸರಕಾರವು ತೆಗೆದುಕೊಂಡಿದೆ. ಹತ್ತು ವರ್ಷಗಳಿಂದಲೂ ಈ

ಕೆಲಸವು ಆಗಿರಲಿಲ್ಲ. ನಾವು ಈ ಕೆಲಸವನ್ನು ಮಾಡಿ, ಕಾನೂನು ತಿದ್ದುಪಡಿಯನ್ನು ಜನರಿಗೆ ಕೊಟ್ಟು ಅದರ ಜೊತೆಗೆ ಇನ್ನೂ ಕೆಲವು ಅನುಕೂಲಗಳನ್ನು ಮಾಡಿ ಮತ್ತೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂಬ ಮಾತನ್ನು ಮಾನ್ಯ ಜಯಚಂದ್ರರವರಿಗೆ ಹೇಳಬಯಸುತ್ತೇನೆ. ನಾವು ಅಂಥ ಜನಪರ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ನಮ್ಮ ದುರ್ದೈವ ಅಂದರೆ ಸರಕಾರದ ಸಾಧನೆಗಳ ಬಗ್ಗೆ ಸೂಕ್ತ ಪ್ರಚಾರವು ಸಿಗುತ್ತಾ ಇಲ್ಲ. ಈ ಎರಡು ತಿದ್ದುಪಡಿಗಳನ್ನು ತಂದು ಈ ಸಭೆಯಲ್ಲಿ ನಾನು ಭಾಷಣ ಮಾಡಿದ್ದೇನೆ. ಅದನ್ನು ಕೆಲವು ಪತ್ರಿಕೆಗಳು ಬಹಳ ಸಣ್ಣದಾಗಿ ಅದನ್ನು ಪ್ರಕಟಣೆ ಮಾಡಿದ್ದಾವೆ. ಲಕ್ಷಾಂತರ ಜನರಿಗೆ ಅನುಕೂಲ ಆಗತಕ್ಕಂಥ ಕಾನೂನಿನ ತಿದ್ದುಪಡಿಯಾದರೂ ಕೂಡ ಪತ್ರಿಕೆಯ ಒಂದು ಸಣ್ಣ ಕಾಲಂನಲ್ಲಿ ಬರೆಯುತ್ತಾರೆ. ಈಗಾಗಲೇ ಜಿ.ಓ.ಇಶ್ಯೂ. ಮಾಡಿದ್ದೇವೆ, ರೂಲ್ಸ್‌ನ್ನು ಹೊರಡಿಸಿದ್ದೇವೆ, ಗೆಜೆಟ್‌ನಲ್ಲಿ ಪ್ರಕಟಣೆ ಮಾಡಿದ್ದೇವೆ. ಅದು ನಮ್ಮ ಶಾಸಕರಿಗೂ ಇನ್ನೂ ಗೊತ್ತಿಲ್ಲ ಎಂಬ ರೀತಿಯಲ್ಲಿದೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಬಡವರಿಗೆ ಆಗತಕ್ಕಂಥ ಸಹಾಯವನ್ನು ಆದಷ್ಟು ಮುಚ್ಚಿಡತಕ್ಕಂಥ ಪ್ರಯತ್ನವನ್ನು ಮಾಡುತ್ತಾರೆ. ರಾಜ್ಯದಲ್ಲಿನ ಗೇಣಿದಾರರು, ಬಗರ್‌ಹುಕುಂ ಸಾಗುವಳಿದಾರರು ಆದಿಯಾಗಿ ಸಹಸ್ರಾರು ಕುಟುಂಬಗಳಿಗೆ ಈ ಕಾನೂನಿನಿಂದ ಸಹಾಯವಾಗುತ್ತದೆ. ಇದೊಂದು ನಮ್ಮ ಸರಕಾರದ ಮಹತ್ತರವಾದ ಸಾಧನೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. 1986ರಲ್ಲಿ ಒಂದು ಕಾನೂನನ್ನು ತಂದಿದ್ದಾರೆ. ಅದಕ್ಕೆ 1991ರಲ್ಲಿ ನಿಯಮಾವಳಿಗಳನ್ನು ನಾವು ರಚನೆ ಮಾಡಿದ್ದೆವು. ಆದರೆ ಒಂದಲ್ಲ ಒಂದು ಕಾರಣದಿಂದಾಗಿ ಆಕೃಷಿ ಪಾಸ್ ಬುಕ್‌ನ ಹಂಚಿಕೆಯ ಕಾರ್ಯಕ್ರಮವು ಚುರುಕಾಗಿರಲಿಲ್ಲ. ಅದಕ್ಕೆ ಈಗ ಕೆಲವು ಹೊಸ ಮಾಹಿತಿಗಳನ್ನು ಸೇರಿಸಬೇಕಾಗಿದೆ. ಆ ಕಾರ್ಯಕ್ರಮವನ್ನು ಒಂದು ವರ್ಷದೊಳಗಾಗಿ ಮಾಡಬೇಕೆಂದಿದ್ದೇವೆ. ಇದರ ಮೂಲಕ 65 ಲಕ್ಷಗಳಷ್ಟು ಖಾತೆದಾರರಿಗೆ ಪಾಸ್‌ಬುಕ್‌ನ್ನು ತಲುಪಿಸಲ್ಲಿದ್ದೇವೆ. ಈಗಾಗಲೇ ಅಧಿಕಾರಿಗಳ ಒಂದು ಸಮಿತಿಯನ್ನು ಆಂಧ್ರಪ್ರದೇಶಕ್ಕೆ ಕಳುಹಿಸಿಕೊಟ್ಟು ಅಲ್ಲಿ ಯಾವ ಯಾವ ಮಾಹಿತಿಗಳನ್ನು ಪಾಸ್‌ಬುಕ್‌ನಲ್ಲಿ ಸೇರಿಸಿದ್ದಾರೆ ಎಂಬ ಮಾಹಿತಿಗಳನ್ನು ತರಿಸಿದ್ದೇವೆ. ಜೊತೆಗೆ ಹೊಸದಾಗಿ ಸೇರಿಸ ಬೇಕಾಗಿರುವ ಮಾಹಿತಿಗಳನ್ನು ಸೇರಿಸಿ ಒಂದು ಪರಿಪೂರ್ಣವಾಗಿರತಕ್ಕಂಥ ಪಾಸ್‌ಬುಕ್‌ನ್ನು ಪ್ರತಿಖಾತೆದಾರರುಗಳಿಗೂ ಕೊಡಬೇಕೆಂಬ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆ ಕಾರ್ಯಕ್ರಮವು ಎರಡು ತಿಂಗಳೊಳಗಾಗಿ ಕಂದಾಯ ಇಲಾಖೆಯಲ್ಲಿ ಮುಗಿಯುತ್ತದೆ ಎಂದು ಹೇಳಬಯಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಪ್ರತಿಯೊಂದು ತಾಲ್ಲೂಕಿನ ಒಂದು ಸಮಸ್ಯೆಯಿದೆ. ಕೆಲವರು ಸರ್ವೆ ನಂಬರ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಅವರ ಹೆಸರಿಗೆ ಅಲಿನೇಷನ್ ಆಗಲಿಲ್ಲ. ಅಲಿನೇಷನ್ ಆಗದೇ ಇದ್ದರೆ ಯಾವ ಸವಲತ್ತನ್ನೂ ಅವರು ಪಡೆಯಲು ಆಗುವುದಿಲ್ಲ. ಇಂತಹ ಪ್ರಕರಣಗಳು ಎಲ್ಲ ಕಡೆ

ಇವೆ. ನನ್ನ ಒಂದೇ ತಾಲ್ಲೂಕಿನಲ್ಲಿ ನಾಲ್ಕೈದು ಸಾವಿರ ಪ್ರಕರಣಗಳಿವೆ. ಬೆಂಗಳೂರಿನಲ್ಲಿ ಕೆಲವು ಬಡವರು ರೆವಿನ್ಯೂಲ್ಯಾಂಡಿನಲ್ಲಿ ಕಟ್ಟಿಕೊಂಡಿದ್ದಾರೆ. ಅದಕ್ಕೆ ನಾವು ವಿಶೇಷವಾದ ನಿಯಮಾವಳಿಗಳನ್ನು ರಚನೆ ಮಾಡಿ ಇನ್ನೊಂದು ವರ್ಷದೊಳಗಾಗಿ ಎಲ್ಲರಿಗೂ ಖಾಯಂ ಮಾಡುತ್ತೇವೆ. ಸರ್ಕಾರಕ್ಕೆ ಹಣವೂ ಬರುತ್ತದೆ. ಅವರಿಗೆ ಖಾತೆಯೂ ಆಗುತ್ತದೆ. ಆರ್‌ಟಿಸಿ ಕಂಪ್ಯೂಟರೈಜೇಶನ್ ಬಗ್ಗೆ ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಡ್ಯಾಟ ಎಂಟ್ರಿ ನಡೆಯುತ್ತಿದೆ. ಒಂದು ತಿಂಗಳ ಒಳಗಾಗಿ ಅದನ್ನು ಕಳಿಸಬೇಕೆಂದು ಹೇಳಿದ್ದೇವೆ. ಇದರಿಂದ ಒಂದು ನಿಮಿಷದಲ್ಲೇ ಆರಟಿಸಿಯನ್ನು ಇಷ್ಯೂ ಮಾಡಬಹುದಾಗಿದೆ. ಅದಕ್ಕೂ ಕಾರ್ಯಕ್ರಮವನ್ನು ಇವತ್ತು ಹಾಕಿಕೊಂಡಿದ್ದೇವೆ. ಇನ್ನು, ಅಪಿಲೇಟ್ ಟ್ರಿಬ್ಯೂನಲ್‌ನಲ್ಲಿ ತೀರ್ಪುಗಳ ನಕಲು ಕೊಡಬೇಕಾದರೆ ತಿಂಗಳಗಟ್ಟಲೆ ಕಾಯಬೇಕಾಗಿತ್ತು. ಹೈಕೋರ್ಟಿನಲ್ಲೂ ತೀರ್ಪಿನ ಕಾಪಿಕೊಡಲು ಎರಡು ಮೂರು ತಿಂಗಳು ಆಗುತ್ತದೆ. ಆದರೆ ಪ್ರಥಮಬಾರಿಗೆ ಇಡೀ ಭಾರತದಲ್ಲೇ ಮೇಲ್ಮನವಿ ಪ್ರಾಧಿಕಾರದ ತೀರ್ಪುಗಳನ್ನು ಒಂದೇ ನಿಮಿಷದಲ್ಲಿ ಗಣಕೀಕರಣದ ನೆರವಿನಿಂದ ಅಲ್ಲೇ ವಿತರಣೆ ಮಾಡುವಂಥದ್ದು, ಇದು ಮೇನಲ್ಲಿ ಪ್ರಾರಂಭವಾದ ಕಾರ್ಯಕ್ರಮ, ಕೇವಲ ನಾಲ್ಕೇ ತಿಂಗಳಲ್ಲಿ ಪೂರ್ಣವಾಗಿ ಈಗಾಗಲೇ ಉದ್ಘಾಟನೆಯಾಗಿದೆ. ಕರ್ನಾಟಕದ ಹೈಕೋರ್ಟಿನಲ್ಲೂ ಆ ವ್ಯವಸ್ಥೆ ಆಗಿಲ್ಲ. ಇದು ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ತರುವಂತಹ ಕಾರ್ಯಕ್ರಮ. ಬೇರೆ ರಾಜ್ಯಗಳಲ್ಲೂ ಹೀಗೆ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಕಾನೂನು ಪ್ರಕಾರ ಟ್ರಿಬ್ಯೂನಲ್ ಅರ್ಜಿಗಳನ್ನು ಕಡ್ಡಾಯವಾಗಿ ಆಕ್ಯುಪೆನ್ಸ್‌ಗೆ ನೀವು ತಲುಪಿಸಲೇಬೇಕು. ಇದರ ಮೇಲೆ ಅಪೀಲುಗಳು 30-40 ಸಾವಿರ ಬಿದ್ದಿವೆ ದಯವಿಟ್ಟು ಹೈಕೋರ್ಟಿನ ಜೊತೆ ಚರ್ಚಿಸಿ ವಿಶೇಷ ವಿಲೇವಾರಿಗೆ ಕ್ರಮ ಕೈಗೊಳ್ಳಿ, ಹತ್ತತ್ತು ವರ್ಷ ಆಗಿದೆ.

ಶ್ರೀ ಬಿ.ಸೋಮಶೇಖರ್: ಅದನ್ನು ನಾನು ಒಪ್ಪುತ್ತೇನೆ. ಹೈಕೋರ್ಟಿನಲ್ಲಿ ಹತ್ತಾರು ವರ್ಷಗಳಿಂದ ಬಾಕಿ ಇರುವುದರ ಬಗ್ಗೆ ಕಾನೂನಿಗೇ ತಿದ್ದುಪಡಿ ತಂದು...

ಶ್ರೀ ಕಾಗೋಡು ತಿಮ್ಮಪ್ಪ: ಇವೆಲ್ಲಾ ಒಂದು ಸಲ ಮುಕ್ತಾಯವಾದರೆ ಸಾಕಾಗಿದೆ. ಯಾಕೆಂದರೆ ಆರ್ಟಿಕಲ್ 226, 227 ಪ್ರಕಾರ ರಿಟ್ ಹೋಗೇ ಹೋಗುತ್ತಾರೆ. ಇದರ ಬಗ್ಗೆ ಸಾಧಕಬಾಧಕಗಳನ್ನು ಕೂತು ಚರ್ಚೆಮಾಡಿ ಅನಂತರ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ: ಈಗಾಗಲೇ ಟ್ರಿಬ್ಯೂನಲ್‌ಗಳು ಅಪಿಲೇಟ್ ಅಥಾರಿಟಿ ಎಂದಿರುವುದನ್ನು ಅಬಾಲಿಷ್ ಮಾಡಿದ್ದೀರಿ. ಮತ್ತೆ ಅದನ್ನು ತರುವುದಾದರೆ ಏನೂ ಸಹಾಯವಾಗುವುದಿಲ್ಲ. ರಿಟ್ ಹೋಗುವುದನ್ನು ಯಾವ ರೀತೀಲೂ ತಪ್ಪಿಸುವುದಕ್ಕೆ ಆಗುವುದಿಲ್ಲ. ಆದರೆ ಅಲ್ಲಿನ ಪೆಂಡೆನ್ಸಿಯನ್ನು ಕ್ಲಿಯರ್ ಮಾಡಲು ಏನಾದರೂ ಕಾರ್ಯಕ್ರಮ ಹಾಕಿದರೆ ಅದು ಸಹಾಯವಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಈಗಾಗಲೇ ಹೈಕೋರ್ಟಿನ ಜೊತೆ ಮಾತುಕತೆ ನಡೆಸಿದ್ದೇವೆ. ಒಂದು ಪ್ರತ್ಯೇಕ ಪೀಠ ಸೃಷ್ಟಿ ಮಾಡಿ ಈ ಎಲ್ಲಾ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಡಬೇಕಾದ ಜೊತೆಗೆ ಗೇಣಿದಾರರಿಗೆ ಸಹಾಯವಾಗುವ ಏನೇನು ತಿದ್ದುಪಡಿ ಮಾಡಬಹುದೋ ಅವನೆಲ್ಲಾ ಮಾಡಲು ಸಿದ್ಧವಾಗಿದ್ದೇವೆ. ಕಾಗೋಡುತಿಮ್ಮಪ್ಪನವರೇ, ನಾವೂ ನಿಮ್ಮ ಚಿಂತನೆಯಡಿಯಲ್ಲೇ ಬೆಳೆದು ಬಂದಿರುವವರು. ಬಡವರ ಪರವಾಗಿ, ಗೇಣಿದಾರರ ಪರವಾಗಿ, ಶೋಷಿತರ ಪರವಾಗಿ ಹೋರಾಟ ಮಾಡಿಕೊಂಡು ಬಂದಿರುವವರು. ಈಗ ಈ ಎರಡು ಕಾನೂನು ತಿದ್ದುಪಡಿಗಳೇ ಸಾಕು, ತಮ್ಮ ಕಾಲದಲ್ಲಿ ಇವೆಲ್ಲಾ ಆಗಲಿಲ್ಲ. ನಾವು ಮಾಡಿದ್ದೇವೆ. ಅದಕ್ಕೆ ಮೆಚ್ಚಿಗೆ ವ್ಯಕ್ತಮಾಡಿ. ಆದ್ದರಿಂದ ಕಂದಾಯ ಇಲಾಖೆಯಲ್ಲಿ ಏನೇನು ಸಮಸ್ಯೆಗಳಿವೆ ಅವನ್ನು ಪರಿಹಾರಮಾಡುವ ಕಡೆ ನಾವು ಹೆಜ್ಜೆ ಇಟ್ಟಿದ್ದೇವೆ. ನಮ್ಮ ಸರ್ಕಾರ ಹೊಸ ಜಿಲ್ಲೆಗಳನ್ನು ಪ್ರಾರಂಭ ಮಾಡುವುದರ ಜೊತೆಗೆ ಆಡಳಿತವನ್ನು ಹೇಗೆ ಚುರುಕುಗೊಳಿಸಬೇಕು, ಹೊಸ ಯೋಜನೆಗಳನ್ನು ಅನುಷ್ಠಾನ ಕೊಡಬೇಕಾದರೆ ಆಡಳಿತ ಹೈರಾರ್ಕಿಯಲ್ಲಿ ಕೆಲವು ಹಳೇ ಪದ್ಧತಿಗಳೂ ಇವೆ. ಅನೇಕ ಹಂತಗಳಿವೆ. ಒಬ್ಬ ತೀರ್ಮಾನ ಮಾಡುವುದನ್ನು ಇಬ್ಬರು ಮೂವರು ನೋಡುವಂಥದ್ದು ಇದೆ. ತಹಸೀಲ್ದಾರು ಮಾಡುವುದನ್ನೆ ಅಸಿಸ್ಟೆಂಟ್ ಕಮಿಷನರೂ ಮಾಡುತ್ತಾರೆ. ಅವರು ಮಾಡುವುದನ್ನೇ ಜಿಲ್ಲಾಧಿಕಾರಿಗಳು, ವಿಭಾಗಧಿಕಾರಿಗಳೂ ಮಾಡುತ್ತಿದ್ದಾರೆ. ಇಂಥ ಲೆವೆಲ್ಸ್‌ಗಳನ್ನು ನಾವು ತೆಗೆದುಹಾಕಿ, ಒಂದು ಕಚೇರಿಗೂ ಮತ್ತೊಂದು ಕಚೇರಿಗೂ ಪತ್ರವ್ಯವಹಾರಗಳಲ್ಲೇ ವರ್ಷಾನುಗಟ್ಟಲೆ ಆಗುತ್ತದೆ. ಅದನ್ನು ತೆಗೆದು ಆಡಳಿತವನ್ನು ವಿಕೇಂದ್ರಿಕರಿಸುವ, ಜನರ ಬಳಿಗೊಯ್ಯುವ, ಸರಳೀಕರಣ ಮಾಡುವ ಚಿಂತನೆ ನಮ್ಮಲ್ಲಿ ನಡೆಯುತ್ತಾ ಇದೆ. ಆದಷ್ಟು ಬೇಗ ನಾಡಕಚೇರಿಗಳನ್ನು ಪ್ರಾರಂಭ ಮಾಡುವುದು, ಎಲ್ಲಾ ತಾಲೂಕುಗಳಿಗೆ ಅಸಿಸ್ಟೆಂಟ್ ಕಮಿಶನರ್‌ಗಳನ್ನು ನೇಮಿಸುವುದು, ಇದನ್ನೆಲ್ಲಾ ಸರ್ಕಾರ ಯೋಚನೆ ಮಾಡುತ್ತಿದೆ. ನಮ್ಮ ಜೆಎಚ್ ಪಟೇಲರ ಸರ್ಕಾರ ಹಿಂದೆಂದೂ ಮಾಡಿರದ ಕೆಲಸವನ್ನು ಕಂದಾಯ ಇಲಾಖೆಯಲ್ಲಿ ಮಾಡಿ ಇತಿಹಾಸವನ್ನೇ ಸೃಷ್ಟಿಮಾಡಿದೆ. ಇನ್ನೊಂದು ವರ್ಷ ಕಾಲ ಕಾರ್ಯಕ್ರಮಗಳನ್ನು ಜಾರಿಗೆ ಕೊಡುತ್ತೇವೆ, ಇದರಿಂದ ಜನಗಳು ಮೆಚ್ಚುಗೆ ವ್ಯಕ್ತಮಾಡಿ ಮತ್ತೊಂದು ಚುನಾವಣೆಯಲ್ಲೂ ಗೆದ್ದುಬರುತ್ತೇವೆ: ನೀವೇನೂ ಅದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ. ಈಗೇನು ನಮ್ಮ ಮೇಲೆ ಏನು ಅವಿಶ್ವಾಸ ವ್ಯಕ್ತಮಾಡಿದ್ದೀರಿ, ನಾನು ಹೇಳುತ್ತೇನೆ, ಇವೆರಡುಮೂರು ಕೆಲಸಗಳ ಮೇಲೇ ನೀವು ವಿಶ್ವಾಸ ವ್ಯಕ್ತಮಾಡಬೇಕಾಗಿತ್ತು.

ಶ್ರೀ ಎಂ.ಸಿ.ಮಾಧುಸ್ವಾಮಿ: ಎಸಿಗಳನ್ನು ತಾಲ್ಲೂಕಿಗೆ ಹಾಕುವುದು ಏನಾಯಿತು?

ಶ್ರೀ ಬಿ.ಸೋಮಶೇಖರ್: ಅದರ ಬಗ್ಗೆ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ತಕ್ಷಣ ತರುತ್ತಿದ್ದೇವೆ. ನಮ್ಮ ಮುಖ್ಯಮಂತ್ರಿಗಳಿಗೂ ಇದರ ಮಹತ್ವ ಅರ್ಥವಾಗಿದೆ. ನಮ್ಮೆಲ್ಲಾ ಮಂತ್ರಿಗಳಿಗೂ ಇದಾಗಬೇಕೆಂದು ಇದೆ. ನೀವು ತಂದಿರುವ ಅವಿಶ್ವಾಸದಲ್ಲಿ

ಯಾವುದೇ ತಿರುಳಿಲ್ಲ, ನಮ್ಮ ಸರ್ಕಾರ ಅತ್ಯುತ್ತಮವಾಗಿ ಕೆಲಸ ಮಾಡಿದೆ. ನಮ್ಮ ಜೆಎಚ್ ಪಟೇಲರು ಒಳ್ಳೆಯ ಸರ್ಕಾರ ಕೊಟ್ಟಿದ್ದಾರೆ, ಅದು ಇನ್ನೂ ಒಂದು ವರ್ಷ ಕಾಲ ಮುಂದುವರೆಯುತ್ತದೆ. ಮುಂದಕ್ಕೂ ಬರುತ್ತದೆ ಎಂದು ಹೇಳುತ್ತ, ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು): ತಾಲ್ಲೂಕು ಪುನರ್ವಿಂಗಡಣೆ ಬಗ್ಗೆ ರಿ-ಸರ್ವೆ ಮಾಡಬೇಕೆಂದು ಮಾಡಲಾಗುತ್ತಿದೆ. ಯಾವ್ಯಾವ ತಾಲೂಕುಗಳನ್ನು ಇದರಲ್ಲಿ ಸೇರಿಸಲಾಗಿದೆ. ವಿಶೇಷತಃ ನರಸೀಪುರ ತಾಲ್ಲೂಕು ಸೇರಿತ್ತು. ತಾವು ಮೈಸೂರಿಗೆ ಬಂದ ಕಾಲದಲ್ಲಿ ನಾನೂ ಭಾಷಣ ಮಾಡಿ ಅವರಿಗೆ ಧನ್ಯವಾದವನ್ನೂ ಹೇಳಿದ್ದೇನೆ. ಟಿ.ನರಸೀಪುರ ತಾಲ್ಲೂಕು ಸೇರಿದೆಯಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಉಪಾಧ್ಯಕ್ಷರೇ, ನಾವು ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡಿದ್ದೇವೆ, ಅವರು ಉತ್ತರ ಕೊಡುತ್ತಾರೆ. ಇದರಲ್ಲಿ ವಿವರಣೆ ಕೇಳುವುದಾಗಲಿ ಇಲ್ಲ. ಇದೇನು ಬಜೆಟ್ ಭಾಷಣವೇ?

ಶ್ರೀ ಎಂ.ಪಿ.ಪ್ರಕಾಶ್: ಹೌದು, ಇದರಲ್ಲಿ ವಿವರಣೆ ಕೇಳುವಂತಿಲ್ಲ. ಏನಾದರೂ ಇದ್ದರೆ ಮುಖ್ಯಮಂತ್ರಿಗಳಿಂದ ಉತ್ತರ ನೀಡಿದ ಮೇಲೆ ಕೇಳಬಹುದು.

ಶ್ರೀ ಬಿ.ಬಿ.ಶಿವಪ್ಪ: ಸಚಿವರು ಉತ್ತರಿಸುವಾಗ ಏನಾದರೂ ಹೊಳೆದರೆ ತಕ್ಷಣ ಕೇಳುತ್ತೇವೆ ಅಷ್ಟೇ.

ಶ್ರೀ ಕಾಗೋಡು ತಿಮ್ಮಪ್ಪ: ಅವಿಶ್ವಾಸ ನಿರ್ಣಯ ನಾವು ತಂದಿದ್ದೇವೆ. ನಮ್ಮನ್ನು ಒಪ್ಪಬಹುದು, ಒಪ್ಪಿಕೊಳ್ಳದಿರಬಹುದು. ನಾವು ಹೇಳಿದ್ದನ್ನು ಒಪ್ಪಿಕೊಳ್ಳುವುದಾದರೆ ನಿರ್ಣಯಕ್ಕೂ ಅವರು ಬೆಂಬಲ ಕೊಡಬೇಕು ಒಂದುವೇಳೆ ಕೊಡಲಿಲ್ಲ ವಿರುದ್ಧ ಮಾಡೋಣ.

ಶ್ರೀ ಕೆ.ಎನ್.ನಾಗೇಗೌಡ (ಭಾರೀ ನೀರಾವರಿ ಸಚಿವರು): ರೂಲ್ಸ್ ಒಳಗಡೆ ಬಹಳ ಸ್ಪಷ್ಟ ಇದೆ. ಇದು ಅವಿಶ್ವಾಸ ನಿರ್ಣಯವನ್ನು ಮಂಡಿಸಿರುವ ನಿರ್ಣಯ ಇದರಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಬರುವುದಿಲ್ಲ. ರೂಲ್ಸ್ ಪ್ರಕಾರವೇ ಮಾತನಾಡಬೇಕು. ರೂಲ್ಸ್‌ನ್ನು ಬಿಟ್ಟು ಮಾತನಾಡುವುದಕ್ಕೆ ಬಂದಿಲ್ಲ. ನಾವು ಮಾಡಿರುವ ನಿಯಮಾವಳಿ. ಅತ್ಯಂತ ಪ್ರಬಲವಾದ ನಿಯಮಾವಳಿಯನ್ನು ಅವರು ಉಪಯೋಗಿಸಿಕೊಂಡು ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆ. ಇದು ಡಿಮ್ಯಾಂಡ್ ಮೇಲೆ ಚರ್ಚೆಯಲ್ಲ ಅಥವಾ ಬೇರೆ ಕಾಲಿಂಗ್ ಅಟೆನ್‌ಷನ್ ಚರ್ಚೆಯಲ್ಲ. ಅಥವಾ ಬೇರೆ ಬೇರೆ ನಿಯಮಗಳ ಮೇಲೆ ಚರ್ಚೆಯಲ್ಲ ಇದು. ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ತಂದಮೇಲೆ ಅವರ ಭಾಷಣ ಮುಗಿದು ಸರ್ಕಾರವು ಉತ್ತರ ಕೊಡುವವರೆಗೂ

ಅವರು ಮಧ್ಯೆ ಯಾವುದೇ ವಿಧವಾದಂಥ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಿಲ್ಲ. ಅವರು ಅತ್ಯಂತ ಗಂಭೀರವಾಗಿ ತಂದಿರುವ ಕಾಲದಲ್ಲಿ ನಾವು ಅದನ್ನು ಗಂಭೀರವಾಗಿ ಸ್ವೀಕಾರ ಮಾಡಿ ಉತ್ತರ ಮಾಡಬೇಕಾಗುತ್ತದೆ. ಉತ್ತರ ಸರಿ ಇಲ್ಲ ಎನ್ನುವುದು ಬೇರೆ ವಿಚಾರ. ಆದರೆ ಚರ್ಚೆ ಮಾಡುವಾಗ ಮಾತ್ರ ಯಾವುದೇ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟರೆ ನೀವು ಈ ನಿಯಮಾವಳಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದಂತಾಗುತ್ತದೆ.

2 ಪಿಎಂ

+ ಶ್ರೀ ಹೆಚ್.ಡಿ.ರೇವಣ್ಣ (ಮಾನ್ಯ ವಸತಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಹಾಸನ ಜಿಲ್ಲೆಗೆ ಸಂಬಂಧ ಪಟ್ಟಂತೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ತಮ್ಮ ಅನುಮತಿ ಪಡೆದು ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಚನ್ನಪಟ್ಟಣ ಕೆರೆಗೆ ಸಂಬಂಧಪಟ್ಟಂತೆ ಈ ವಿಷಯ ಈಗಾಗಲೇ ರಾಜ್ಯದ ಹೈಕೋರ್ಟಿನಲ್ಲಿ ಇದೆ. ಮಾನ್ಯ ಸದಸ್ಯರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಸದರಿ ಕೇಸಿಗೆ ಸಂಬಂಧಿಸಿದಂತೆ ಮಾನ್ಯ ಶಾಸಕರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ವಕೀಲರಾಗಿರುತ್ತಾರೆ. ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಇದರ ಬಗ್ಗೆ ನಾನು ಹೆಚ್ಚಾಗಿ ಮಾತನಾಡಲು ಬಯಸುವುದಿಲ್ಲ. ಆದರೆ ನಾನು ಒಂದು ವಿಷಯವನ್ನು ಮಾತ್ರ ಸ್ಪಷ್ಟಪಡಿಸಬೇಕಾಗಿದೆ. ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದಮೇಲೆ ಕೆರೆಯನ್ನು ಒಡೆದಿರುವುದಿಲ್ಲ. 300 ಜನ ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ನೋಟೀಸನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ ಕೇವಲ 185 ಜನ ರೈತರಿಂದ ಒಟ್ಟು 160 ಎಕರೆ 26 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 4(1) ನೋಟೀಫಿಕೇಷನನ್ನು ಹೊರಡಿಸಿದೆ. ಇದರಲ್ಲಿ 46 ಜನರು ಎನ್‌ಕ್ವೈರಿಗೆ ತಕರಾರನ್ನು ಕೊಟ್ಟಿದ್ದಾರೆಂದು ನಮ್ಮ ಇಲಾಖೆಯಿಂದ ವರದಿ ಬಂದಿದೆ. ಇನ್ನು 149 ಜನರು ತಕರಾರನ್ನು ಕೊಟ್ಟಿಲ್ಲ. ರೈತರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆಯೇ ಹೊರತು ಅವರಿಗೆ ಮೋಸ ಮಾಡಬೇಕು ಎನ್ನುವ ಉದ್ದೇಶದಿಂದ ಮಾಡಿಲ್ಲ. 3 ಕೋಟಿ ರೂಪಾಯಿ ವೆಚ್ಚದ ಆಂಜನೇಯಪುರ ಏತ ನೀರಾವರಿ ಯೋಜನೆಯನ್ನು ಕಾಂಗ್ರೆಸ್ ಸರ್ಕಾರ ಆರಂಭಿಸಿದ್ದು ಹಿಂದಿನ ಮುಖ್ಯಮಂತ್ರಿಗಳವರು ಯೋಜನೆಯನ್ನು ರದ್ದುಪಡಿಸಿದ್ದಾರೆಂದು ಆರೋಪಿಸಿದ್ದಾರೆ. ಆ ರೀತಿ ಏನಾದರೂ ರದ್ದುನ್ನುಪಡಿಸಿರುವ ಆದೇಶವೇನಾದರೂ ಇದ್ದರೆ ಆ ಕಾಪಿಯನ್ನು ಸದನದ ಮುಂದೆ ಇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಿಂದಿನ ಮುಖ್ಯಮಂತ್ರಿಗಳು ಸಭೆಯಲ್ಲಿ ಇಲ್ಲ. ಅವರು ಬಂದು ಮಾತನಾಡುವುದಕ್ಕಾಗುವುದಿಲ್ಲ. ಹಾಸನದಲ್ಲಿ 1000 ಹಾಸಿಗೆ ಆಸ್ಪತ್ರೆ ಮಂಜೂರಾಗಿದ್ದು 500ಕ್ಕೆ ಇಳಿಸಲಾಗಿದೆ ಎಂದು ಆರೋಪಿಸಿದ್ದಾರೆ. ಆದರೆ ನಮ್ಮ ಸರ್ಕಾರ ಬಂದಮೇಲೆ ಈ ಆಸ್ಪತ್ರೆ ಕೆಲಸವನ್ನು ಪೂರ್ಣವಾಗಿ ಮುಗಿಸಲಾಗಿದೆ. ಹಾಗೂ ಈಗ 6 ಕೋಟಿ ರೂಪಾಯಿ ಹಣವನ್ನು ಈ ಆಸ್ಪತ್ರೆಯ ಇತರೆ ಕೆಲಸಗಳಿಗೆ

ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಮಂಜೂರಾಗಿದ್ದು ಕಾಮಗಾರಿಗೆ ಟೆಂಡರ್‌ನ್ನು ಕರೆಯುವ ಹಂತದಲ್ಲಿದೆ. ಹಾಸನದ ಪಶು ಆಹಾರ ಘಟಕದಲ್ಲಿ ಹೊಳೆನರಸೀಪುರ ಮತ್ತು ಹಾಸನದವರಿಗೆ ಎಲ್ಲಾ ಹುದ್ದೆಗಳನ್ನು ತುಂಬಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಇದು ತಪ್ಪು. ಇದರ ಬಗ್ಗೆ ನಾನು ಮಾಹಿತಿಯನ್ನು ಕೊಡಬೇಕಾದುದು ನನ್ನ ಕರ್ತವ್ಯ. ತಾಂತ್ರಿಕ ಅಧಿಕಾರಿ ಎಂದು ಒಂದು ಹುದ್ದೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಟ್ಟಿದ್ದೇವೆ. ಉಗ್ರಾಣ ಸಹಾಯಾಧಿಕಾರಿ ಎಂದು ಹೇಳಿ ಅದು ಪರಿಶಿಷ್ಟ ಜಾತಿಯವರಿಗೆ ಬರುತ್ತದೆ. ಅದನ್ನು ಹೊಳೆನರಸೀಪುರಕ್ಕೆ ಕೊಟ್ಟಿದೆ. ಲೆಕ್ಕ ಸಹಾಯಕರ ಹುದ್ದೆ ಎಂದು ಎರಡು ಹುದ್ದೆಗಳನ್ನು ಅದರಲ್ಲಿ ಒಂದನ್ನು ದಾವಣಗೆರೆಗೆ ಮತ್ತೊಂದನ್ನು ಮೈಸೂರಿಗೆ ಕೊಟ್ಟಿದೆ. ರಾಜ್ಯದ ವಿವಿಧ ಜಿಲ್ಲೆಗಳವರಿಗೆ ಕೆಲಸ ಕೊಟ್ಟಿದೆ. ಎಲ್ಲಾ ಹುದ್ದೆಗಳನ್ನು ಹೊಳೆನರಸೀಪುರಕ್ಕೆ ಕೊಟ್ಟಿದೆ ಎನ್ನುವುದು ಶುದ್ಧ ತಪ್ಪು. ಈ ಸಭೆಯನ್ನು ಅವರ ಕಕ್ಷಿದಾರರ ಹಿತಕ್ಕೋಸ್ಕರ ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿರವರು ಈ ಸಭೆಯನ್ನು ತಪ್ಪು ದಾರಿಗೆ ಎಳೆಯುವುದು ಸರಿಯಲ್ಲ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದ್ದಾರೆ. ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವ ಅವರ ಅಂತರ್ಗತ ಹಕ್ಕನ್ನು ನಾವ್ಯಾರು ಕಸಿದುಕೊಳ್ಳಲಿಕ್ಕೆ ತಯಾರಿಲ್ಲ. ಬಲವಾಗಿರತಕ್ಕಂಥ ಅಸ್ತ್ರವನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಉಪಯೋಗಿಸಬಹುದು. ಆದರೆ ಉಪಯೋಗಿಸುವ ಸಂದರ್ಭದಲ್ಲಿ ಕೂಡ ಯಾವ ಮಾನದಂಡಗಳನ್ನು ಉಪಯೋಗಿಸಬೇಕಾಗಿತ್ತು, ಅದರ ಬಗ್ಗೆ ಒಂದು ನಿಖರತೆ ಮತ್ತು ಸ್ಪಷ್ಟತೆ ಇರಬೇಕು. ಅದರ ಬಗ್ಗೆ ಅವರಿಗೆ ಅರಿವು ಇಲ್ಲ ಎನ್ನತಕ್ಕಂಥ ಮಾತು ಇಲ್ಲ. ಆಡಳಿತ ಪಕ್ಷದಲ್ಲೂ ಕುಳಿತು ಕೆಲಸ ಮಾಡಿರುವ ಅನುಭವ ಅವರಿಗೆ ಇದೆ. ಆದರೆ ಬೇರೆ ಸಂದರ್ಭದಲ್ಲಿ ಅವರದೇ ಪಕ್ಷದ ಅಧ್ಯಕ್ಷರಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವಾಗ ನಿಯಾಮಾವಳಿಗಳನ್ನು ಎನ್ನುವುದಕ್ಕಿಂತಲೂ ಹೆಚ್ಚಾಗಿ ಯಾವ ತಾತ್ವಿಕ ಹಿನ್ನೆಲೆಯಲ್ಲಿ ಬರಮಾಡಿಕೊಂಡರು ಎನ್ನುವ ವಿಚಾರದಲ್ಲಿ ಕೂಡ ಮಾತನಾಡಿದ್ದಾರೆ. ಇದನ್ನು ಹೇಳಿದರೆ ಪ್ರಾಯಶಃ ಮಾನ್ಯ ಖರ್ಗೆಯವರಿಗೆ ಒಂದು ಮಾರ್ಗದರ್ಶನವಾಗುತ್ತದೆ ಎನ್ನುವ ದಿಸೆಯಲ್ಲಿ ಇದನ್ನು ಹೇಳುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ನವೆಂಬರ್ 24, 1967ರಲ್ಲಿ ಒಂದು ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವಂಥ ಸಂದರ್ಭದಲ್ಲಿ ಸಭೆ ಮುಂದೆ ಅವರು ಏನು ಹೇಳುತ್ತಾರೆ ಎಂದರೆ: "In a motion of no-confidence, what is it we look for? We look for some alternative policy, some broad framework atleast of alternative policy, which the

Government can follow. But when we find not one alternative policy but as many alternative policies as there are parties, and sometimes as there are members in the same party, then I very humbly submit that there is no much sense in such no-confidence motions." ಇದನ್ನು ಹೇಳುವುದರ ಜೊತೆಗೆ ಅಧ್ಯಕ್ಷರಾಗಿ 20 ನೇ ಮಾರ್ಚ್ 67ರಲ್ಲಿ ನೋ ಕಾನ್‌ಫಿಡೆನ್ಸ್ ಮೋಷನ್ ತಂದಂಥ ಸಂದರ್ಭದಲ್ಲಿ ಅವರು ಏನು ಹೇಳುತ್ತಾರೆ ಎಂದರೆ: "No-confidence motions have become such a routine that we are not, at any rate, I am not bothered by their frequency except that by their repeated and unsuccessful use, their utility will be blunted." ಈ ರೀತಿ ಅಸ್ತ್ರವನ್ನು ಬಳಸುವ ಸಂದರ್ಭ ಇದೆಯೇ ವಿನಹ ಬೇರೆ ಸಂದರ್ಭದಲ್ಲಿ ಅಲ್ಲ ಎಂದು ಹೇಳಿದ್ದಾರೆ. ಅವರು ಸರ್ಕಾರವನ್ನು ರಚನೆ ಮಾಡತಕ್ಕ ಸಂದರ್ಭ ಇಲ್ಲ. ಒಂದು ವೇಳೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರಚನೆ ಮಾಡುತ್ತಾರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನದಂಡದ ಬಗ್ಗೆ ಅವರು ಹೇಳುತ್ತಿದ್ದಾರೆ. ನನಗೆ ಗೊತ್ತಾಗಲಿಲ್ಲ. ಬಹುಶಃ ಇವರು ಪಾರ್ಲಿಮೆಂಟರಿ ಪದ್ಧತಿ ಬಗ್ಗೆ ಇಲ್ಲಿ ರೆಫರ್ ಮಾಡುತ್ತಾರೆಂದು ನನಗೆ ಗೊತ್ತಿರಲಿಲ್ಲ. ಆದರೆ ನಾನು ಇಲ್ಲಿ ಹೇಳುತ್ತೇನೆ. 1990-91ನೇ ಇಸವಿಯಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ನಾಲ್ಕು ದಿನ ಚರ್ಚೆ ಆಗಿದೆ. ರೂಲ್ 160ರ ಪ್ರಕಾರ ಮುಖ್ಯಮಂತ್ರಿ ಆಗಿದ್ದ ಶ್ರೀ ಎಸ್.ಬಂಗಾರಪ್ಪನವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತಾವು ಮೂವ್ ಮಾಡಿದ್ದೀರಿ. ಆಗ ಮಾನ್ಯ ಡಿ.ಬಿ.ಚಂದ್ರೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು. ಅದು ಯಾವ ತತ್ವದ ಮೇಲೆ ಮಾಡಿದ್ದೀರಿ? 1993ನೇ ಇಸವಿಯಲ್ಲಿ ಶ್ರೀಮಾನ್ ವೀರಪ್ಪ ಮೊಯಿಲಿಯವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲಾಗಿತ್ತು ಆಗ ಶ್ರೀ ಆರ್.ವಿ.ದೇಶಪಾಂಡೆ ಅವರು ವಿರೋಧ ಪಕ್ಷದ ನಾಯಕರಾಗಿದ್ದರು ಅದು ಯಾವ ತತ್ವದ ಮೇಲೆ, ಮಾನದಂಡದ ಮೇಲೆ ಮಂಡಿಸಲಾಗಿತ್ತು? ಮೂರು ದಿನ ಆಗ ಚರ್ಚೆ ಆಗಿದೆ ನಾನು ವಿಧಾನಸಭೆಯಲ್ಲಿ ಏನು ಪ್ರಕರಣ ಆಗಿದೆ ಅದನ್ನು ಕೇಳುತ್ತಿದ್ದೇನೆಯೇ ಹೊರತು ಪಾರ್ಲಿಮೆಂಟರಿ ವಿಷಯದ ಬಗ್ಗೆ ಉತ್ತರ ಕೊಡುವವರು ಕೊಡುತ್ತಾರೆ. ಇಲ್ಲ ನನ್ನನ್ನು ಅಲ್ಲಿಗೆ ಕಳುಹಿಸಿಕೊಡಿ ನಾನು ಉತ್ತರ ಹೇಳುತ್ತೇನೆ. ಈ ವಿಧಾನ ಸಭೆಯಲ್ಲಿ ನಾವು ಎರಡು ಸಲ ತಮ್ಮ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡಿದ್ದೀರಿ. ಆಗ ಯಾವ ಮಾನದಂಡ ಅಥವಾ ತತ್ವವನ್ನು ಅನುಸರಿಸಿದ್ದೀರಿ ಎಂಬುದನ್ನು ಹೇಳಿ.

ಅಧ್ಯಕ್ಷರು: ನೀವು ಏನೋ ಮುಚ್ಚಿಡುತೀದ್ದೀರಿ. ಜಯಪ್ರಕಾಶ್ ನಾರಾಯಣ್,

ಲೋಹಿಯಾ ಅವರ ಬಗ್ಗೆ ಮಾತನಾಡುವವರು ಇಂದಿರಾಗಾಂಧಿಯ ವಿಚಾರವನ್ನು ಕೋಟ್ ಮಾಡುತ್ತಿದ್ದೀರಿ.

ಶ್ರೀ ಎಂ.ಪಿ.ಪ್ರಕಾಶ್: ನಾನು ಮಾನ್ಯ ವಿರೋಧ ಪಕ್ಷದವರ ಹಕ್ಕನ್ನು ಮೊಟಕುಗೊಳಿಸುವ ಬಗ್ಗೆ ಮಾತನಾಡುತ್ತಿಲ್ಲ. ಅವಿಶ್ವಾಸ ನಿರ್ಣಯವನ್ನು ಮಂಡಿಸುವ ಅವರ ಅಂತರ್ಗತ ಹಕ್ಕನ್ನು ಮೊಟಕುಗೊಳಿಸಬೇಕೆಂದು ಹೇಳಲಿಲ್ಲ. ಅವಿಶ್ವಾಸ ನಿರ್ಣಯ ಗೊತ್ತುವಳಿ ವಿರೋಧ ಪಕ್ಷದವರ ಒಂದು ಪ್ರಬಲವಾದ ಅಸ್ತ್ರ. ಅದನ್ನು ಮಂಡಿಸುವಾಗ ಅದಕ್ಕೆ ಪೂರಕವಾಗಿ ಇವರು ಸರ್ಕಾರ ರಚನೆ ಮಾಡುತ್ತೇವೆಂಬ ನಂಬಿಕೆಯಿಂದ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೋ? ತಾಂತ್ರಿಕವಾಗಿ ಸರ್ಕಾರದ ಲೋಪದೋಷಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಪರ್ಯಾಯವಾಗಿ ಇರತಕ್ಕ ವ್ಯವಸ್ಥೆಯನ್ನು ಮಾಡಿಕೊಂಡು ಮಾಡಿದ್ದಾರಾ ಎಂಬುದು ಗೊತ್ತಾಗಬೇಕು.

ಶ್ರೀ ಟಿ.ಬಿ.ಜಯಚಂದ್ರ: ಅವಿಶ್ವಾಸ ನಿರ್ಣಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ಕಾನೂನಿನ ಪ್ರಕಾರ ಇರಬೇಕು, ನಾವು ಸರ್ಕಾರವನ್ನು ಬೀಳಿಸುತ್ತೇವೆ, ಪರ್ಯಾಯವಾದ ವ್ಯವಸ್ಥೆಯನ್ನು ಇಟ್ಟುಕೊಂಡು ನಿರ್ಣಯವನ್ನು ಮಂಡಿಸಬೇಕೆಂಬ ಆರೋಪವನ್ನು ಮಾಡುತ್ತಿದ್ದೀರಿ. ಇವತ್ತು ನಾವು ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕ ಸಂದರ್ಭದಲ್ಲಿ, ಡಿವಿಜನ್‌ಗೆ ಪ್ರೆಸ್ ಮಾಡುವಂತಹ ಸಂದರ್ಭದಲ್ಲಿ ನಾವು ಬರತಕ್ಕ ಸಂದರ್ಭ ಸಹ ಇದೆ. ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳದೇ ನಾವು ಅವಿಶ್ವಾಸ ನಿರ್ಣಯ ತಂದಿಲ್ಲ. ತಾಂತ್ರಿಕವಾಗಿ ನಾವು ಅವಿಶ್ವಾಸವನ್ನು ತಂದಿದ್ದೇವೆ. ಆ ದಿಸೆಯಲ್ಲಿ ನಾವು ಯಶಸ್ವಿ ಆಗುತ್ತೇವೆ. ಪರ್ಯಾಯ ಸರ್ಕಾರ ಮಾಡತಕ್ಕ ಸಂದರ್ಭ ಬಂದಾಗ ಸರ್ಕಾರದ ವೈಫಲ್ಯಗಳನ್ನು ಈಚೆಗೆ ತರುತ್ತಿದ್ದೇವೆ. ಬಿಜೆಪಿ ಸದಸ್ಯರು ಸಹ ನಮ್ಮ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಡುತ್ತಾರೆ. ಅವರೂ ಸಹ ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ನಾನು ಅವಿಶ್ವಾಸ ನಿರ್ಣಯವನ್ನು ತಂದಿರತಕ್ಕ ಸಂದರ್ಭದಲ್ಲಿ ದೋಷ ಇದೆ ಎಂಬ ಮಾತನ್ನು ಹೇಳಲಿಲ್ಲ. ಯಾವ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡಬೇಕು ಎಂಬ ಬಗ್ಗೆ ಬರೇ ಶ್ರೀಮತಿ ಇಂದಿರಾ ಗಾಂಧಿಯವರೇ ಅಲ್ಲ, ಜವಾಹರ್ ಲಾಲ್ ನೆಹರೂ ಅವರು ಪ್ರಸ್ತಾಪ ಮಾಡಿದ್ದನ್ನು ಹೇಳುತ್ತೇನೆ. ಅವರು 1963ರಲ್ಲಿ ಪ್ರಸ್ತಾಪ ಮಾಡಿದ್ದಾರೆ. 'Intervening in the discussion on 22-8-1963 Jawarharlal Nehru said "That the motion was unreal as the Opposition groups were not in a position to replace the Government." ತಾವೇನಾದರೂ ಬಿಜೆಪಿ ಜೊತೆ ಸೇರಿ ಸರ್ಕಾರ ರಚನೆ ಮಾಡುತ್ತೀರಾ? ಒಂದು ವೇಳೆ ಬಿಜೆಪಿ ಜೊತೆ ಹಿಡನ್ ಏಜೆನ್ಸಿ ಇಟ್ಟುಕೊಂಡಿದ್ದರೆ ನನಗೆ

ಅದು ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: 13ನೇ ತಾರೀಖಿನ ದಿವಸ ಸರ್ಕಾರದ ಭವಿಷ್ಯ ಗೊತ್ತಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ನೀವು ಹೇಳತಕ್ಕದ್ದು ಅಷ್ಟೇ. ನಮ್ಮವರು ಯಾರೂ ಸಹ ಸರ್ಕಾರವನ್ನು ತೆಗೆಯುತ್ತೇವೆ ಎನ್ನುವ ಮಾತನ್ನು ಹೇಳಿಲ್ಲ. 13ನೇ ತಾರೀಖಿನ ದಿವಸದ ಸಭೆ ಇದೆ. ಅದರ ಬಗ್ಗೆ ನಿಮಗೆ ಕುತೂಹಲ ಇರುವದು ಸಹಜ ಕೂಡ. ಆದರೆ ಸರ್ಕಾರವನ್ನು ಬೀಳಿಸುತ್ತೇವೆ ಎಂಬ ಮಾತನ್ನು ಯಾವ ಸನ್ಮಾನ್ಯ ಸದಸ್ಯರೂ ಆಡಿಲ್ಲ. ಆಡಳಿತ ಪಕ್ಷದಲ್ಲಿರುವ ಕೆಲವು ನಾಯಕರು ಮುಂದಿನ ಚುನಾವಣೆಯ ಕಾಲಕ್ಕೆ ಬಲ ಸಂವರ್ಧನೆಗಾಗಿ ನಾಯಕತ್ವ ಬದಲಾವಣೆ ಆಗಬೇಕು ಎಂಬ ಮಾತನ್ನು ಹೇಳಿದ್ದಾರೆ. ಆಂತರಿಕವಾಗಿ ನಮ್ಮಲ್ಲಿ ಕೆಲವು ಸಮಸ್ಯೆಗಳೇನು ಇವೆ, ಅವುಗಳನ್ನು ಪರಿಹಾರ ಮಾಡಿಕೊಂಡು ಪಕ್ಷ ಸಂವರ್ಧನೆ ಮಾಡಿಕೊಂಡು ಮುಂದಿನ ಚುನಾವಣೆಯನ್ನು ಹೇಗೆ ಎದುರಿಸಬೇಕು ಎಂದು ವಿಚಾರಗಳ ಬಗ್ಗೆ ಸಮಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್ಕಾರವನ್ನು ಬೀಳಿಸುತ್ತೇವೆಂದು ಇವರು ಹೇಳುತ್ತಾರೆಯೇ ಹೊರತು ಸ್ವತಃ ಸರ್ಕಾರವನ್ನು ರಚಿಸುವ ಬಗ್ಗೆ ಇವರು ಸ್ಪಷ್ಟವಾಗಿ ಹೇಳಿಲ್ಲ. ಅವಿಶ್ವಾಸ ನಿರ್ಣಯವನ್ನು ಕಾಂಗ್ರೆಸ್ ಮಾತ್ತು ಬಿಜೆಪಿ ಪಕ್ಷದವರು ಮಂಡಿಸಿದ್ದಾರೆ.

ಶ್ರೀ ಆರ್.ಧರ್ಮಸಿಂಗ್: ಗುಲ್ಬರ್ಗಾದಲ್ಲಿ ಮಾನ್ಯ ವೈಜನಾಥ್ ಪಾಟೀಲ್ ಅವರು ಹೇಳಿಕೆ ಮಾಡಿದ್ದಾರೆ. ನಾನೂ ಸಹ ಮುಖ್ಯಮಂತ್ರಿ ಸ್ಥಾನಕ್ಕೆ ಅಭ್ಯರ್ಥಿ ಆಗಿದ್ದೇನೆ ಎಂದು ಹೇಳಿರುವುದು ವರದಿ ಆಗಿದೆಯಲ್ಲಾ.

ಶ್ರೀ ಎಂ.ಪಿ.ಪ್ರಕಾಶ್: ಆದರೆ ಯಾರೂ ಸಹ ಸರ್ಕಾರವನ್ನು ತೆಗೆಯುತ್ತೇವೆಂದು ಹೇಳಿಲ್ಲ. ಮಾನ್ಯ ವೈಜನಾಥ ಪಾಟೀಲ್ ಅವರಾಗಲೀ ಅಥವಾ ಇತರೇ ಯಾವುದೇ ಸದಸ್ಯರುಗಳು ಸರ್ಕಾರವನ್ನು ತೆಗೆಯುವ ಪ್ರಸ್ತಾಪ ಮಾಡೇ ಇಲ್ಲ. 13ನೇ ತಾರೀಖಿನ ದಿವಸದ ಸಭೆಯಲ್ಲಿ ನಮ್ಮ ಆಂತರಿಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಾಗುತ್ತದೆ. ನಿಮಗೆ ಕನಿಷ್ಟ ಪಕ್ಷ ಕನಸು ಕಾಣತಕ್ಕ ಅಧಿಕಾರ ಇದೆ; ನೀವು ಸರ್ಕಾರವನ್ನು ಬೀಳಿಸಿ ಪರ್ಯಾಯ ಸರ್ಕಾರ ರಚನೆ ಮಾಡುತ್ತೇವೆಂದು ಹೇಳುವುದು ಅದು ಭ್ರಮೆ ಆಗುತ್ತದೆ. ಭ್ರಮೆಗಳಲ್ಲಿ ಮನುಷ್ಯ ಇರಬಾರದು. ನಮ್ಮ ಆಡಳಿತ ಯಾವ ಹಂತದಲ್ಲೂ ಹದಗೆಟ್ಟಿಲ್ಲ. ಅಭಿವೃದ್ಧಿ ಕಾರ್ಯಗಳು ನಡೆಯುತ್ತಲೇ ಇವೆ. ಆಂತರಿಕ ಕಲಹದಿಂದ ಅಭಿವೃದ್ಧಿ ಕಾರ್ಯ ಕುಂಠಿತಗೊಂಡಿದೆ, ಸರ್ಕಾರ ಬಿದ್ದು ಹೋಗುತ್ತದೆ; ಅವಿಶ್ವಾಸ ನಿರ್ಣಯ ಮಂಡಿಸುತ್ತೇವೆಂದು ಮಂಡಿಸಿದ್ದೀರಿ. ಸರ್ಕಾರ ಬೀಳುತ್ತದೆ ಎಂದು ತಿಳಿದುಕೊಳ್ಳುವುದು ಕೇವಲ ಭ್ರಮೆ. ಭ್ರಮೆಯಿಂದ ಮನುಷ್ಯ ಬದುಕುವುದಕ್ಕೆ ಸಾಧ್ಯ

ಇಲ್ಲ. ಅಭಿವೃದ್ಧಿ ಕಾರ್ಯಗಳು ಸ್ಥಗಿತ ಆಗಿವೆ ಎಂದು ನೀವು ಆರೋಪ ಮಾಡಿದರೂ ಸಹ ಎಲ್ಲಾ ಜಿಲ್ಲೆಗಳಲ್ಲಿ ಕೆಲಸಕಾರ್ಯಗಳು ನಡೆಯುತ್ತಿರುವುದರಿಂದ ನಮ್ಮ ಸರ್ಕಾರ ಅಸ್ತಿತ್ವದಲ್ಲಿರುವುದನ್ನು ತೋರಿಸುತ್ತದೆ. 1990-91ರಿಂದ 4 ವರ್ಷಗಳ ಕಾಲದಲ್ಲಿ ಮೂರು ಬಾರಿ ಅವಿಶ್ವಾಸ ನಿರ್ಣಯದ ಮಂಡನೆ ಆಗಿದೆ. ಇದು ಪ್ರತಿ ಸರ್ಕಾರದಲ್ಲಿ ಅವಿಶ್ವಾಸ ನಿರ್ಣಯ ಮಂಡಿಸುವುದು ಇರುತ್ತದೆ. ಅವಿಶ್ವಾಸ ನಿರ್ಣಯವನ್ನು ತರುವುದು ನಿಮಗೆ ಇರುವ ಹಕ್ಕು, ಅಧಿಕಾರ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದರೂ ಟೀಕೆಗಳನ್ನು ಮಾಡುವುದು ನಿಮ್ಮ ಅಸ್ತ್ರವಾಗಿ ಬಳಕೆ ಮಾಡಿಕೊಂಡಿದ್ದೀರಿ. ಆದರೆ ನಾನು ಹೇಳುತ್ತಿರುವುದು ಆ ಅಸ್ತ್ರವನ್ನು ದುರ್ಬಳಕೆ ಪರ್ಯಾಯ ಸರ್ಕಾರದ ವ್ಯವಸ್ಥೆ ಇಲ್ಲದೇ ಮಾಡಿಕೊಂಡಿದ್ದೀರಿ, ವಿವೇಚನಾ ರಹಿತವಾಗಿ ಅದನ್ನು ಬಳಸತಕ್ಕ ಪ್ರಯತ್ನ ಮಾಡುತ್ತಿದ್ದೀರಿ ಎಂಬ ಮಾತನ್ನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಸರ್ಕಾರದ ಮೇಲೆ 23 ಛಾರ್ಜುಗಳನ್ನು ಪಟ್ಟಿ ಮಾಡಿ ಸರ್ಕಾರ ಮುಂದುವರಿಯಲು ಹಕ್ಕಿಲ್ಲ ಎಂದು ಪ್ರತಿಪಾದನೆ ಮಾಡಿದ್ದಾರೆ. ಇದರ ಜೊತೆಗೆ ಸರ್ಕಾರ ನಿರ್ವೀರ್ಯ ಆಗಿದೆ ಎಂಬ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕಂದಾಯ ಇಲಾಖೆಯ ಮುಖಾಂತರ ಪ್ರಕೃತಿ ವಿಕೋಪದಿಂದ ನೊಂದವರಿಗೆ ಪರಿಪೂರ್ಣವಾಗಿ ಯಾವುದೇ ಸರ್ಕಾರ ಪರಿಹಾರ ನೀಡಲು ಸಾಧ್ಯವಾಗುವುದಿಲ್ಲ. ಸರ್ಕಾರ ಇರತಕ್ಕ ಸಂಪನ್ಮೂಲಗಳ ಇತಿಮಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಲೋಪದೋಷಗಳು ಆಗುವುದು ಸಹಜ. ಒಂದು ವೇಳೆ ತನ್ನ ಇತಿಮಿತಿಯೊಳಗೆ ಆಗಿರತಕ್ಕ ಲೋಪ ದೋಷಗಳನ್ನು ಗುರುತಿಸಿಕೊಳ್ಳತಕ್ಕ ಅಂತರ್ಗತ ಶಕ್ತಿ ಸರ್ಕಾರಕ್ಕೆ ಇರುತ್ತದೆ.ಅಬ್ರಹಾಂ ಲಿಂಕನ್ ಅವರ ಮಾತನ್ನು ಈ ಸಂದರ್ಭದಲ್ಲಿ ಹೇಳುವುದು ಸೂಕ್ತ. ಅವರ ಅಭಿಪ್ರಾಯದ ಪ್ರಕಾರ ಎಲ್ಲಾ ಸಂದರ್ಭದಲ್ಲಿ ಸರ್ಕಾರಗಳು ತಪ್ಪು ಮಾಡುವುದಿಲ್ಲ. ಯಾವುದೇ ಸರ್ಕಾರ ಪರಿಪೂರ್ಣವಾಗಿ ಎಲ್ಲಾ ವಿಷಯಗಳಲ್ಲಿ ಇರುವುದಕ್ಕೆ ಸಾಧ್ಯವೂ ಆಗಲಾರದ ಸಂದರ್ಭಗಳು ಅನಿವಾರ್ಯವಾಗಿ ಬರುತ್ತವೆ. ಒಂದೊಂದು ವೇಳೆ ಪರಿಸ್ಥಿತಿಯ ವೈಪರೀತ್ಯದಿಂದ ಇವು ಸಂಭವಿಸುತ್ತವೆ ಎಂದು ಅರ್ಥ ಮಾಡಿಕೊಳ್ಳಬೇಕು. ಅಂದರೆ, ನಿಮ್ಮ ದೃಷ್ಟಿಯಲ್ಲಿ ನಮ್ಮ ಸರ್ಕಾರ ಅಸ್ತಿತ್ವದಲ್ಲಿಲ್ಲ, ನಿಷ್ಕ್ರಿಯವಾಗಿ ಕೆಲಸ ಮಾಡುತ್ತಿದೆಯೆಂದು ಇದ್ದರೂ ಕೂಡ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಮಾಜ ಯಾವಗಲೂ ಕೂಡ ಅದಕ್ಕಾಗಿ ಅವಕಾಶ ಕಲ್ಪಿಸಿಕೊಡುವುದಿಲ್ಲ. ಪ್ರಜಾತಂತ್ರ ವ್ಯವಸ್ಥೆಯೊಳಗಡೆ ನಾವು ಕೆಲಸ ಮಾಡುವ ಸಂದರ್ಭದಲ್ಲಿ ತುಲನಾತ್ಮಕವಾಗಿ ತಾವು ಯೋಚಿಸಬೇಕು. ಎಷ್ಟರಮಟ್ಟಿಗೆ ನಾವು ಸಾಧನೆ ಮ್ಹಾಡುವುದಕ್ಕೆ ಸಾಧ್ಯವಿದೆ, ಭ್ರಷ್ಟಾಚಾರ ಪ್ರಕರಣವಿರಬಹುದು, ಸರ್ಕಾರದಲ್ಲಿ ನಿಷ್ಕ್ರಿಯವಾದ ಪ್ರತಿಕ್ರಿಯೆ ಬಂದಿರುವುದು ಇರಬಹುದು. ಆದರೆ, ಇದೆ ಇಡೀ ಸರ್ಕಾರದ ಒಂದು ಸಮಗ್ರ ಚಿತ್ರಣ ಕೊಡುವುದಕ್ಕೆ ಸಾಧ್ಯವಿಲ್ಲ. ಇತಿಮಿತಿಯಲ್ಲಿರುವ ಸಂಪನ್ಮೂಲಗಳನ್ನು

ರೂಢಿಸಿಕೊಂಡಿರುವ ಸಂದರ್ಭದಲ್ಲಿ ಈ ಕೆಲಸ ಮಾಡತಕ್ಕಂಥ ವ್ಯವಸ್ಥೆಯಲ್ಲಿ ನಾವಿದ್ದೇವೆ. ಕುಡಿಯವ ನೀರಿನ ಸೌಲಭ್ಯ ಒದಗಿಸುವ ವಿಷಯಕ್ಕೆ ಬಂದಾಗ, ಕುಡಿಯುವ ನೀರಿಗೆ ಸಂಬಂಧಿಸಿದಂತೆ ಒಂಭತ್ತನೇ ಪಂಚವಾರ್ಷಿಕ ಯೋಜನೆ ಅಂತ್ಯದವರೆಗೆ ರಾಜ್ಯದ ಎಲ್ಲಾ ಗ್ರಾಮಗಳಿಗೆ ಅಗತ್ಯವಿರುವ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಕೊಡುವಲ್ಲಿ ಎರಡು ಪಟ್ಟು ಹೆಚ್ಚಿಗೆ ಕೆಲಸ ಮಾಡಿದ್ದೇವೆ. ಅವರು ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದಂಥ ಸಮಯದಲ್ಲಿ ಹಾಕಿಕೊಂಡ ಕಾರ್ಯಕ್ರಮಗಳು ಹಾಗೂ ನಾವು ಅಧಿಕಾರಕ್ಕೆ ಬಂದ ನಂತರ ಹಾಕಿಕೊಂಡ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಅಂಕಿ-ಅಂಶಗಳ ಮೂಲಕ ಹೇಳುವುದಾದರೆ 1994-95ರಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಅವರು ವೆಚ್ಚ ಮಾಡಿದಂಥ ಹಣ ರೂ.60-26 ಕೋಟಿ, 95-96ರಲ್ಲಿ ರೂ.77-60 ಕೋಟಿ, 96-97ರಲ್ಲಿ ರೂ.85-35 ಕೋಟಿ, 97-98ರಲ್ಲಿ ರೂ.98-73 ಕೋಟಿಗಳಾಗಿದ್ದರೆ, ಪ್ರಸಕ್ತ ವರ್ಷ ರೂ.34.47 ಕೋಟಿ ಖರ್ಚು ಮಾಡಿದ್ದೇವೆ. ಮಳೆಗಾಲ ಮುಗಿದ ನಂತರ ಸಂಪೂರ್ಣ ಕೆಲಸ ಮಾಡುತ್ತೇವೆ. ಕೇಂದ್ರ ಹಾಗೂ ರಾಜ್ಯ ವಲಯದಿಂದ ಬರುವ ಹಣವನ್ನು ತೆಗೆದುಕೊಂಡು ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಖರ್ಚು ಮಾಡಲಾಗುತ್ತಿದೆ. 1994ರ ಡಿಸೆಂಬರ್ ತಿಂಗಳಿನಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೂರು ತಿಂಗಳುಗಳ ಸಮಯ ಹೊರತುಪಡಿಸಿದರೆ 1994-95ರಲ್ಲಿ ಕೇಂದ್ರ ಹಾಗೂ ರಾಜ್ಯ ವಲಯದಿಂದ ಖರ್ಚು ಮಾಡಿದಂಥ ಹಣ ರೂ.113.38 ಕೋಟಿ, 1995-96ರಲ್ಲಿ ಅಧಿಕಾರಕ್ಕೆ ಬಂದಾಗ ನಾವು ಖರ್ಚು ಮಾಡಿದ್ದು ರೂ.164.96 ಕೋಟಿ, 96-97ರಲ್ಲಿ ರೂ.170.59 ಕೊಟಿ ಹಾಗೂ 1997-98ರಲ್ಲಿ ರೂ.206.43 ಕೋಟಿ ಮತ್ತು ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ ಖರ್ಚಾಗಿರುವುದು ರೂ.66.27 ಕೋಟಿಗಳು. ಅದೇ ರೀತಿ ವಿಶ್ವಬ್ಯಾಂಕ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆಗಳನ್ನು ನಾವು ಸಂಪೂರ್ಣವಾಗಿ ಮುಗಿಸಿರುತ್ತೇವೆ. ಕೊಳವೆಬಾವಿ ಯೋಜನೆಯಲ್ಲಿ 94-95ರಲ್ಲಿ 826 ಕೊರೆಸಿದ್ದರೆ 95-96ರಲ್ಲಿ 898, 96-97ರಲ್ಲಿ 748 ಹಾಗೂ 97-98ರಲ್ಲಿ 1,101 ಕೊಳವೆಬಾವಿಗಳನ್ನು ಕೊರೆಸಲಾಗಿದೆ. ಅದೇ ರೀತಿ ಕಿರು ನೀರು ಸರಬರಾಜು ಯೋಜನೆಯಲ್ಲಿ 94-95ರಲ್ಲಿ ತಮ್ಮ ಸರ್ಕಾರ ಅಧಿಕಾರವಿದ್ದಂಥ ಕಾಲದಲ್ಲಿ 1,224 ಇದ್ದರೆ, 95-96ರಲ್ಲಿ 1,351 96-97ರಲ್ಲಿ 1,353 ಹಾಗೂ 97-98ರಲ್ಲಿ 1,624. ಇನ್ನು ಕೈಪಂಪು ಅಳವಡಿಸುವಿಕೆಯಲ್ಲಿ 94-95ರಲ್ಲಿ 4,654 ಸಾಧನೆಯಾಗಿದ್ದರೆ, 95-96ರಲ್ಲಿ 7,927, 96-97ರಲ್ಲಿ 7,605 ಹಾಗೂ 97-98ರಲ್ಲಿ 6,684. ಇದನ್ನು ಸಾಧನೆಯೆಂದು ಹೇಳದಿದ್ದರೆ ಮತ್ತ್ಯಾವುದಕ್ಕೆ ಸಾಧನೆಯೆಂದು ಕರೆಯುತ್ತಾರೆ? ನಮಗಿಂತಲೂ ದಕ್ಷವಾದ ಸರ್ಕಾರ ಬರಲೆಂಬ ಬಗ್ಗೆ ತಮ್ಮೆಲ್ಲರ ಆಶಯವಿದ್ದರೆ ಇನ್ನೂ ಒಳ್ಳೆಯ ಸರ್ಕಾರ ಬರಲಿ. ಜನರಿಗೆ ಅದರಿಂದ ಒಳ್ಳೆಯದಾಗುತ್ತದೆಂದರೆ ಅದರ ಬಗ್ಗೆ ಯಾರ ತಕರಾರೂ ಇಲ್ಲ. ನಮ್ಮ ಸರ್ಕಾರ ತಿದ್ದಿಕೊಳ್ಳತಕ್ಕಂಥಾದ್ದು ಏನೂ ಇಲ್ಲವೆಂಬ ಮಾತು, ಹುಸಿ ಅಹಂಕಾರವಾಗಲೀ ಇಲ್ಲ. ಆದರೆ, ನಿಮ್ಮ ಅವಧಿಯಲ್ಲಿ ನೀವು ಮಾಡಿರುವ

ಕಾರ್ಯಗಳಿಗಿಂತಲೂ ಭೌತಿಕವಾಗಿ ಮತ್ತು ಆರ್ಥಿಕವಾಗಿ ಹೆಚ್ಚು ಸಾಧನೆ ಮಾಡಿದ್ದೇವೆ. ಆರ್ಥಿಕ ಸಾಧನೆಯಲ್ಲಿ ಹಣಕಾಸಿನ ಖರ್ಚನ್ನು ಹೋಲಿಸಿದಾಗ ನಾವು ಖಂಡಿತವಾಗಿಯೂ ಕನ್ನಡ ನಾಡಿನ ಜನತೆಗೆ ನ್ಯಾಯ ಒದಗಿಸಿಕೊಟ್ಟಿದ್ದೇವೆ. ಆದರೆ, ನಾವು ಮಾಡಬೇಕಾಗಿರುವ ಕೆಲಸ ಇನ್ನು ಬೇಕಾದಷ್ಟಿದೆ. ದಿವಂಗತ ಪಂಡಿತ ಜವಹರಲಾಲ್ ನೆಹರೂರವರು ಹೇಳುತ್ತಿದ್ದರು: We have got many promises to keep. Long way to go." ನಾವು -ನೀವೆಲ್ಲರೂ ಕೂಡ ಭರವಸೆಯನ್ನು ಇನ್ನೂ ಈಡೇರಿಸಬೇಕಾಗಿರುವುದು ಇದೆ. ಇನ್ನೂ ಬಹಳ ದೂರ ಸಾಗಬೇಕಾಗಿದೆ. ವಿಶ್ವಬ್ಯಾಂಕ್ ನೆರವಿನ ಯೋಜನೆಯಲ್ಲಿ 94-95ರಲ್ಲಿ ಕೇವಲ 4 ಕೋಟಿ 23 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, 95-96ರಲ್ಲಿ 26 ಕೋಟಿ 65 ಲಕ್ಷ, ಅದೇ ರೀತಿ 96-97ರಲ್ಲಿ 45 ಕೋಟಿ 57 ಲಕ್ಷ, 97-98ರಲ್ಲಿ 42 ಕೋಟಿ 25 ಲಕ್ಷವಾದರೆ, 98-99ರಲ್ಲಿ ಇಲ್ಲಿಯವರೆಗೆ ನಾವು 44 ಕೋಟಿ 72 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಮುಂಬರುವ ಮಾರ್ಚಿ ತಿಂಗಳೊಳಗೆ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ನಾವು ಅಧಿಕಾರಕ್ಕೆ ಬಂತ ನಂತರ ಇಲ್ಲಿಯವರೆಗೆ 163 ಕೋಟಿ 42 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ: ತಾವು ಓದುತ್ತಿರುವ ಸ್ಟೇಟ್‌ಮೆಂಟನ್ನು ನಮಗೆ ಕಳುಹಿಸಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಅಗತ್ಯವಾಗಿ ಕಳುಹಿಸಿಕೊಡುತ್ತೇನೆ. ಇದರ ಮಾಹಿತಿ ತಮಗೆ ಒದಗಿಸಲಾಗಿರುವ ಪುಸ್ತಕದಲ್ಲಿಯೇ ಇದೆ. 1989ರಲ್ಲಿ ವಿಶ್ವಬ್ಯಾಂಕ್ ಜೊತೆ ತಾವು ಒಪ್ಪಂದಕ್ಕೆ ಬಂದಿದ್ದೀರಿ. ಆದರೆ, 1993ರಲ್ಲಿ ಇದನ್ನು ಅನುಷ್ಠಾನಗೊಳಿಸುವಂಥ ಕಾರ್ಯ ಪ್ರಾರಂಭವಾಗಿ 1994-95ರ ಕಾಲಕ್ಕೆ ಖರ್ಚಾಗಿದ್ದು ಕೇವಲ 4 ಕೋಟಿ 25 ಲಕ್ಷ ಮಾತ್ರ. ಅದಕ್ಕೆ ಬೇರೆ ರೀತಿಯ ಕಾರಣಗಳಿವೆ, ನೀವೇ ನೇರವಾಗಿ ಅದಕ್ಕೆ ಹೊಣೆಗಾರರೆಂದು ಹೇಳುವುದಿಲ್ಲ. ಸಾಲ ಕೊಡುವ ಮನುಷ್ಯ ತನ್ನ ಮರ್ಜಿಯಿಂದ ಅನೇಕ ಷರತ್ತುಗಳನ್ನು ಹಾಕಿರುತ್ತಾನೆ. ಆದರೆ, ಅದನ್ನು ಹೇಗೆ ನಿಭಾಯಿಸಬೇಕೆಂಬುದನ್ನು ಅನುಭವದ ಮೂಲಕ ಕಲಿಯಬೇಕಾಗುತ್ತದೆ. ಈ ಸರ್ಕಾರ ನಿಷ್ಕ್ರಿಯವಾಗಿದೆಯೆಂದು ಹೇಳುವುದಾದರೆ, ಭೌತಿಕವಾಗಿ ಹಾಗೂ ಆರ್ಥಿವಾಗಿ ಇಷ್ಟು ಪ್ರಮಾಣದಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಿದೆಯೆಂದು ಗೊತ್ತಾದಾಗ ಇದು ನಿಷ್ಕ್ರಿಯೆಯ ಪ್ರತೀಕವೇ? ನೀವು ಕಾಮಾಲೆ ಕಣ್ಣಿನಿಂದ ನೋಡುವುದಾದರೆ ನಮ್ಮ ಆಕ್ಷೇಪವೇನೂ ಇಲ್ಲ. ನೀವು ನಮ್ಮಿಂದ ಅಭಿವೃದ್ಧಿ ಕೆಲಸಗಳಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಬರಬೇಕೆಂದು ಬಯಸುವುದಾದರೆ ಅದಕ್ಕೆ ಸ್ವಾಗತವಿದೆ. ಆದರೆ, ಈ ಸರ್ಕಾರ ಕೆಲಸ ಮಾಡಿಲ್ಲ, ಈ ಕ್ಷಣದಲ್ಲಿಯೇ ಅಧಿಕಾರ ಬಿಟ್ಟು ಸರ್ಕಾರ ಹೊರಟು ಹೋಗಬೇಕೆನ್ನುವುದಾದರೆ ನಾವು ಕನ್ನಡ ನಾಡಿನ ಜನತೆಗೆ ಅಪಮಾನ ಮಾಡಿದಂತೆ. ಅವರು ಕಳೆದ ಚುನಾವಣೆಯಲ್ಲಿ ನಿಮ್ಮನ್ನು ತಿರಸ್ಕರಿಸಿ ನಮಗೆ ರಾಜ್ಯದ ಆಡಳಿತ ನಡೆಸಲು ಅಧಿಕಾರ ಕೊಟ್ಟಿದ್ದಾರೆ. ಮಾನ್ಯ

ದೇವೇಗೌಡರು ಮುಖ್ಯಮಂತ್ರಿಗಳಾಗಿ ಹಾಗೂ ಜೆ.ಹೆಚ್.ಪಟೇಲರು ಉಪಮುಖ್ಯಮಂತ್ರಿಗಳಾಗಿ ಕೆಲಸ ಮಾಡುವಂತೆ ನಮ್ಮ ಜನತಾದಳಕ್ಕೆ ಕನ್ನಡ ನಾಡಿನ ಜನರು ಅಧಿಕಾರ ಕೊಟ್ಟಾಗ ಐದು ವರ್ಷಗಳ ಕಾಲದ ಅವಧಿಯನ್ನು ಸಂಪೂರ್ಣವಾಗಿ ಮುಗಿಸಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವೇ ವಿನಾ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂಬ ದುರಾಸೆಯಲ್ಲ. ಆ ಕಾರಣಕ್ಕಾಗಿ ಇದು ನಿಷ್ಕ್ರಿಯ ಸರ್ಕಾರವೆಂದು ಪ್ರಚಾರ ಮಾಡುವುದರ ಮೂಲಕ ಅವರು if they refuse to see, we cannot help. ಅವರು ಕಣ್ಣಿಗೆ ಕಂಡದ್ದನ್ನು ನೋಡಬೇಕು. ಹಾಗೆಯೇ ನಿರ್ಮಲ ಕರ್ನಾಟಕ ಯೋಜನೆ ಬಹಳ ಯಶಸ್ವಿಯಾಗಿದೆಯೆಂದು ಹೇಳುವುದಿಲ್ಲ. ಡಿಸ್ರೇಲಿ ಹೇಳುತ್ತಾನೆ: "We have to educate our masters." ನಮ್ಮಲ್ಲಿ ಆಳುವ ಪ್ರಭುಗಳು ಜನತೆಗೆ ವಿದ್ಯೆ ಕಲಿಸಬೇಕಾದ ಅಗತ್ಯವಿದೆ. ಈ ಅಗತ್ಯತೆಯಿದ್ದಾಗ ನಿರ್ಮಲ ಕರ್ನಾಟಕ ಯೋಜನೆಯನ್ನು ತತ್‌ಕ್ಷಣ ಜಾರಿಗೊಳಿಸುತ್ತೇವೆಂದರೆ ಆಗುವುದಿಲ್ಲ. ಆದುದರಿಂದ, ಜನಜೀವನದ ಅಭಿಪ್ರಾಯ ಮತ್ತು ನಡವಳಿಕೆಗಳಲ್ಲಿ ಅದು ಯಾವಾಗಲೂ ಹಾಸು ಹೊಕ್ಕಾಗಿ ಬರಬೇಕಾದ ವಾತಾವರಣವನ್ನು ಸೃಷ್ಟಿಸಬೇಕಾದ ಅಗತ್ಯವಿದೆ. ಗಾಂಧಿ ಜಯಂತಿಯಂದು ನಿರ್ಮಲ ಕರ್ನಾಟಕ ಯೋಜನೆಯನ್ನು ಪ್ರಾರಂಭಿಸಿದಾಗ 94-95ರಲ್ಲಿ 25,886 ಶೌಚಾಲಯ ನಿರ್ಮಾಣವಾಗಿತ್ತು. ಅದೇ ರೀತಿ 95-96ರಲ್ಲಿ 1,26,835, 96-97ರಲ್ಲಿ 1,68,902, 97-98ರಲ್ಲಿ 1,49,056 ಹಾಗೂ 1998-99ನೇ ಸಾಲಿನಲ್ಲಿ ಇಲ್ಲಿಯವರೆಗೆ 55,102 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಹಾಗೂ ಮುಂಬರುವ ವರ್ಷದ ಅಕ್ಟೋಬರ್ ತಿಂಗಳ ವೇಳೆಗೆ ಹಮ್ಮಿಕೊಂಡಿರುವ ಯೋಜನೆಯನ್ನು ಸಂಪೂರ್ಣವಾಗಿ ಮುಗಿಸುತ್ತೇವೆ. ಇದರ ಜೊತೆಗೆ ತಾವೇ ಕಳೆದ ಸಲ ಒಪ್ಪಿಗೆ ಕೊಟ್ಟಿರುವಂತೆ ಪಂಚಾಯಿತಿಯ ಮೂರು ವ್ಯವಸ್ಥೆಯ ಹಂತಗಳಲ್ಲಿರುವ ಸದಸ್ಯರುಗಳಿಗಾಗಿ ಎಂಭತ್ತೈದು ಸಾವಿರಕ್ಕಿಂತಲೂ ಹೆಚ್ಚಾಗಿ ಶೌಚಾಲಯ ವ್ಯವಸ್ಥೆಯನ್ನು ಕಟ್ಟಿಸಿ ಕೊಟ್ಟಿದ್ದು, ಪ್ರಾಯಶಃ ಶೇಕಡಾ 10ರಷ್ಟು ಸದಸ್ಯರುಗಳಿಗೆ ಮಾತ್ರ ಶೌಚಾಲಯದ ವ್ಯವಸ್ಥೆ ಮಾಡಿಕೊಟ್ಟಿರುವುದಿಲ್ಲ. ಕಾರಣ, ಅವರುಗಳನ್ನು ಅನರ್ಹಗೊಳಿಸಲಾಗುವುದೆಂದು ಕಾನೂನಿಗೆ ತಿದ್ದುಪಡಿ ತಂದಿದ್ದು ಅದು ಕಾನೂನಾಗಿದೆ. ಪ್ರತಿಯೊಬ್ಬ ಸದಸ್ಯನೂ ಒಂದು ಕೌಟುಂಬಿಕ ಶೌಚಾಲಯವನ್ನು ಕಟ್ಟಿಕೊಂಡು ಇತರರಿಗೆ ಮಾದರಿಯಾಗಬೇಕೆನ್ನುವ ಆಶಯ ಕಾನೂನಿನ ಹಿಂದಿತ್ತು. ಆದರೆ, ಅದು ದುರುಪಯೋಗವಾದಾಗ ಈ ಬಗ್ಗೆ ಒಂದು ಶಾಸನ ತಂದು ಅವರನ್ನು ಅನರ್ಹಗೊಳಿಸಬೇಕೆಂಬ ಉದ್ದೇಶವಿಲ್ಲ. ಈಗಾಗಲೇ, ಈ ರೀತಿಯ ಸುಮಾರು 75,000-80,000ದಷ್ಟು ಶೌಚಾಲಯಗಳನ್ನು ಕಟ್ಟಿಸಿದ್ದು, ಡಿಸೆಂಬರ್ ತಿಂಗಳು ಕಳೆದ ನಂತರ ಹೊಸದಾಗಿ ಚುನಾಯಿತರಾಗಿ 85,000 ಜನರು ಆರಿಸಿ ಬರುತ್ತಾರೆ. ಬಹಳಷ್ಟು ಜನರು ಈ ಚುನಾವಣೆಗಳು ನಡೆಯುವುದಿಲ್ಲವೆಂಬ ರೀತಿಯಲ್ಲಿದ್ದಾರೆ. ನನಗೆ ಕೊಟ್ಟಿರುವ ಸಮಯವನ್ನು ಉಪಯೋಗಿಸಿಕೊಂಡು ಈ ಸದನದಲ್ಲಿ ಈ ಸಂದರ್ಭದಲ್ಲಿ ಹೇಬಯಸುವುದೇನೆಂದರೆ,

ಜನವರಿಯ ಮೊದಲ ವಾರದಲ್ಲಿ ಚುನಾವಣಾ ಆಯುಕ್ತರ ಮೂಲಕ ಪಂಚಾಯಿತಿ ಚುನಾವಣೆಯ ಅಧಿಸೂಚನೆ ಹೊರಬೀಳುತ್ತದೆ, ಜನವರಿ ಅಂತ್ಯದಲ್ಲಿ ಚುನಾವಣೆಯಾಗುತ್ತದೆ. ಆದುದರಿಂದ, ಈ ಕುರಿತು ಮಾಡಬೇಕಾದ ಸಿದ್ಧತೆಗಳಿವೆ. ಇದರ ಜೊತೆಗೆ ಯಾರು ಚುನಾವಣೆಯಲ್ಲಿ ನಾಮಪತ್ರಗಳನ್ನು ಸಲ್ಲಿಸುತ್ತಾರೋ, ನಾಮಪತ್ರ ಸಲ್ಲಿಸತಕ್ಕಂಥವರು ಇಂತಿಷ್ಟು ಶೌಚಾಲಯವನ್ನು ಹಂಚಿದ್ದೇವೆಂಬ ಸರ್ಟಿಫಿಕೇಟನ್ನು ಗ್ರಾಮ ಪಂಚಾಯಿತಿಯಿಂದ ತರಬೇಕಾಗುತ್ತದೆ.

2.30 ಪಿಎಂ

ಆದುದರಿಂದ ಈ ಸಂದರ್ಭವನ್ನು ಉಪಯೋಗ ಮಾಡಿಕೊಂಡು ರಾಜ್ಯದ ಜನರಲ್ಲಿ ಇದರ ಬಗ್ಗೆ ಅರಿವನ್ನು ಮೂಡಿಸಲು ಹೇಳಬಯಸುತ್ತೇನೆ. ನಾಳೆ ದಿವಸ ಚುನಾವಣೆಯ ಸಂದರ್ಭದಲ್ಲಿ ನಾಮಪತ್ರವನ್ನು ಸಲ್ಲಿಸತಕ್ಕ ಯಾವುದೇ ಅಭ್ಯರ್ಥಿಯಾಗಲಿ ಸುಲಬ್ ಶೌಚಾಲಯವನ್ನು ಕಟ್ಟಿಸಬೇಕು ಎನ್ನತಕ್ಕದ್ದು ನಮ್ಮ ನಿಯಮ. ಆ ನಿಯಮದ ಅನುಗುಣವಾಗಿ ಮುಂದುವರೆಯಬೇಕು ಎಂಬ ವಿಚಾರವನ್ನು ಹೇಳಬಯಸುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮನೆಗಳನ್ನು ಕಟ್ಟಿಸಿಕೊಡುವ ವಿಚಾರದಲ್ಲಿ ಬಹಳವಾಗಿ ಹೇಳಿದ್ದಾರೆ. ಬಡವರಿಗೆ ಉಚಿತವಾಗಿ ಮನೆಗಳನ್ನು ಕಟ್ಟಿಸಿಕೊಡಬೇಕು ಎಂಬ ಬಗ್ಗೆ ಮೊದಲು ಚಿಂತನೆ ಮಾಡಿದವರು ದಿವಂಗತ ದೇವರಾಜಅರಸುರವರು. ಮೊದಲು ನಾನು ಅವರನ್ನು ಅಭಿನಂದಿಸಬಯಸುತ್ತೇನೆ. ತಮ್ಮ ಅವಧಿಯಲ್ಲಿ ಕಟ್ಟಿಸಿರುವ ಆಶ್ರಯ ಮನೆಗಳು ಎಷ್ಟು, ಈಗ ನಮ್ಮ ಕಾಲದಲ್ಲಿ ಕಟ್ಟಿಸಿರುವ ಮನೆಗಳು ಎಷ್ಟು ಎಂಬ ಬಗ್ಗೆ ವಸತಿ ಸಚಿವರಾದ ಮಾನ್ಯ ರೇವಣ್ಣನವರು ತಮಗೆ ಮಾಹಿತಿ ನೀಡುತ್ತಾರೆ. ಇಂದಿರಾಆವಾಸ್ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ 1994-95ರಲ್ಲಿ ಪೂರ್ಣಗೊಂಡಿರುವ ಮನೆಗಳ ಸಂಖ್ಯೆ 13,911, ಅದಕ್ಕೆ ಖರ್ಚು ಮಾಡಿರುವ ಹಣ ಕೇವಲ 21.36 ಕೋಟಿ ರೂಪಾಯಿಗಳು. ನಾವ್ಯಾರಾದರು ಈ ರೀತಿ ಮಾಡಿದರೆ ಇವರದ್ದು ಮೇಲ್ಜಾತಿಯವರ ಪಕ್ಷ, ಬಡವರ ವಿರೋಧದ ಪಕ್ಷ, ಬಡವರ ಬಗ್ಗೆ ಇವರಿಗೆ ಕಾಳಜಿ ಇಲ್ಲ ಎಂಬ ಮಾತುಗಳನ್ನು ಹೇಳುತ್ತೀರಿ. ಈ ಪದ್ಧತಿ ಎಲ್ಲಾ ಕಾಲದಲ್ಲೂ ನಡೆದು ಬಂದಿದೆ. ಈ ರೀತಿ ಡಿಸ್ ಇನ್‌ಫರ್‌ಮೇಷನ್ ಕ್ಯಾಂಪ್ ಸದಾ ಕಾಲದಲ್ಲೂ ನಡೆದಿರತಕ್ಕದ್ದು. ಕೆಲವು ಜನರನ್ನು ಬಹಳ ಕಾಲ ಮೋಸ ಮಾಡಬಹುದು, ಎಲ್ಲರನ್ನೂ ಸ್ವಲ್ಪ ಕಾಲ ಮೋಸ ಮಾಡಬಹುದು, ಎಲ್ಲರನ್ನು ಎಲ್ಲಾ ಕಾಲದಲ್ಲೂ ಮೋಸ ಮಾಡಲು ಆಗುವುದಿಲ್ಲ ಎಂಬುದಕ್ಕೆ ನಾವು 1983 ಮತ್ತು 85 ರಲ್ಲಿ ಚುನಾವಣೆಯಲ್ಲಿ ಗೆದ್ದದ್ದಕ್ಕೆ ಸಾಕ್ಷಿ, ಹಾಗೆಯೇ 1991ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಗೆದ್ದಿದ್ದಕ್ಕೆ ಸಾಕ್ಷಿ. ತಾವುಗಳು ಬೇರೆಯವರಿಗೆ ಮೇಲ್ಜಾತಿಯವರ ಪಕ್ಷವೆಂದು ಗೂಬೆಕೂರಿಸುವ ಪ್ರಯತ್ನವನ್ನು ಉದ್ದೇಶಪೂರ್ವಕವಾಗಿಯೋ ದುರುದ್ದೇಶಪೂರ್ವಕವಾಗಿಯೋ ಮಾಡಿದ್ದೀರಿ. ತಮ್ಮ ಕಾಲದಲ್ಲಿ ಕೇವಲ 21.36 ಕೋಟಿ ಇಂದಿರಾ ಆವಾಸ್ ಕಾರ್ಯಕ್ರಮದಲ್ಲಿ ಖರ್ಚು ಮಾಡಿದ್ದರೆ, ನಮ್ಮ ಕಾಲದಲ್ಲಿ 1995-97ರಲ್ಲಿ 58.13

ಕೋಟಿಗಳನ್ನು ಈ ಕಾರ್ಯಕ್ರಮದಲ್ಲಿ ಖರ್ಚು ಮಾಡಿ 37,460 ಮನೆಗಳನ್ನು ಕಟ್ಟಿಸಿದ್ದೇವೆ. 1996-97ರಲ್ಲಿ 84.85 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 45,503 ಮನೆಗಳನ್ನು 1997-98ರಲ್ಲಿ 97.6 ಕೋಟಿ ಖರ್ಚು ಮಾಡಿ 43,522 ಮನೆಗಳನ್ನು ಕಟ್ಟಿಸಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದವರನ್ನೂ ಅಭಿನಂದಿಸುತ್ತೇನೆ. ಇದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಮಾರ್ಗದರ್ಶನವನ್ನೂ ಮಾಡಿದ್ದೇವೆ. ಬಯಲುಸೀಮೆಗಳಲ್ಲಿ ಪ್ರದೇಶಕ್ಕೆ ಅನುಗುಣವಾಗಿ ಯೂನಿಟ್ ಕಾಸ್ಟ್ 14,200 ರೂಪಾಯಿಗಳು ಇತ್ತು. ಆಗ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಮಾನ್ಯ ಕೃಷ್ಣಾರೆಡ್ಡಿಯವರು ಮಾನ್ಯ ಮುಖ್ಯ ಮಂತ್ರಿಗಳ ಆದೇಶದ ಮೂಲಕ ಹಣವನ್ನು ಕ್ರೋಢೀಕರಿಸಿ ರಾಜ್ಯ ಸರ್ಕಾರದಿಂದ ಐದು ಸಾವಿರ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಮಾಡಿದಮೇಲೆ ಪ್ರತಿಯೊಂದು ಮನೆಗೆ ಯೂನಿಟ್ ಕಾಸ್ಟ್‌ನ್ನು ಕೇಂದ್ರಸರ್ಕಾರದವರು 20 ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದರು. ಆಗ ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದರು. ಆ ರೀತಿ ಹೆಚ್ಚು ಮಾಡಿದ್ದರೂ ಸಹ ನಾವು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮನೆಗಳನ್ನು ಕಟ್ಟಿಸಿದ್ದೇವೆ. ಆದರೆ ನಮಗೆ ಇನ್ನೂ ತೃಪ್ತಿಯಾಗಿಲ್ಲ. ನಮ್ಮ ಸರ್ಕಾರಕ್ಕಾಗಲಿ, ಮುಖ್ಯಮಂತ್ರಿಗಳಿಗಾಗಲಿ ಈ ಕಾರ್ಯಕ್ರಮದ ಸಾಧನೆ ಬೆನ್ನುಚಪ್ಪರಿಸಿಕೊಳ್ಳುವಂಥ ಸಾಧನೆಯಂತಾಗಿಲ್ಲ. ನಾವೇ ಸರ್ವೆ ಮಾಡಿರುವಂತೆ, ಇನ್ನೂ 19 ಲಕ್ಷ ಜನರು ನಮಗೆ ಮನೆಗಳು, ನಿವೇಶನಗಳನು ಇಲ್ಲವೆಂದು ಅರ್ಜಿಯನ್ನು ಕೊಟ್ಟಿದ್ದಾರೆ. ಸೂರು ಇಲ್ಲದಂಥ, ಅದರ ಬಗ್ಗೆ ಅರ್ಜಿಯನ್ನೇ ಕೊಡಲಾರದಂಥ ಅನೇಕ ಜನರು ದೇಶದಲ್ಲಿದ್ದಾರೆ. ಅವರುಗಳೆಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡುವ ಅವಶ್ಯಕತೆ ಇದೆ. ಇದಕ್ಕಾಗಿ ಮುಖ್ಯಮಂತ್ರಿಯವರು ಎರಡು ತಿಂಗಳ ಹಿಂದೆ ಎಲ್ಲರ ಜೊತೆಗೆ ಚರ್ಚೆಮಾಡಿ ಕನಿಷ್ಟ ಒಂದು ಲಕ್ಷ ಹೆಚ್ಚುವರಿ ಮನೆಗಳನ್ನು ಕಟ್ಟಿಸಬೇಕೆಂದು ಯೋಚನೆ ಮಾಡಿ ಇದಕ್ಕಾಗಿ ಹಣವನ್ನು ಹೇಗೆ ಒದಗಿಸಬಹುದು ಎಂಬ ಬಗ್ಗೆ ಹಣಕಾಸು ಸಚಿವರು ಮತ್ತು ಉಪಮುಖ್ಯಮಂತ್ರಿಗಳಿಗೆ ಮಾಹಿತಿ ಕೋರಿದ್ದಾರೆ. ಒಂದು ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆ ಎಂಬ ನಮ್ಮ ಮಾತನ್ನು ತಾವು ಬಡಾಯಿ ಮಾತು ಎಂದಾದರೂ ಹೇಳಬಹುದು ಇಲ್ಲವೇ ಮುಂದಿನ ಚುನಾವಣೆಯ ಮೇಲೆ ಕಣ್ಣಿಟ್ಟು ಈ ಮಾತನ್ನು ಹೇಳುತ್ತಿದ್ದೀರೆಂದಾದರೂ ಹೇಳಬಹುದು. ಆದರೆ ಆಶ್ರಯ ಸಮಿತಿಯ ಅಧ್ಯಕ್ಷರಾಗಿ ತಾವುಗಳೇ ಇರುತ್ತೀರಿ. ಎಲ್ಲವನ್ನೂ ಕೇವಲ ಚುನಾವಣೆಯ ದುಷ್ಟಿಯಿಂದಲೇ ಮಾಡುತ್ತೇವೆಂದಲ್ಲ, ಆದರೆ ಅದನ್ನು ಮಾಡುವಾಗ ಸ್ವಲ್ಪಮಟ್ಟಿಗೆ ಸ್ವಾರ್ಥತೆ ಇರಬಹುದು. ಯಾವುದಾದರೂ ಕಾರ್ಯಕ್ರಮವನ್ನು ಮಾಡಿದಂಥ ಸಂದರ್ಭದಲ್ಲಿ ಅದರ ಪ್ರತಿಫಲವು ನೇರವಾಗಿ ಫಲಾನುಭವಿಗಳಿಗೆ ಸಲ್ಲಿದ್ದರೂ, ಅದರ ಹೊರ ಭಾಗ ನಮಗೆ ಲಾಭವಾಗಬಹುದು. ಎಣ್ಣೆಯನ್ನು ಅಳೆಯುವಾಗ ಎಣ್ಣೆಯನ್ನು ಅಳೆದು ಹಾಕಬಹುದು, ಆದರೆ ಕೈಗೆ ಅಂಟಿರುವುದನ್ನು ನೆಕ್ಕಿಕೊಳ್ಳಬಹುದು. ಅಂದರೆ, ಒಂದು ಲಕ್ಷ ಮನೆಗಳನ್ನು ಕಟ್ಟಿಸಿದ್ದೇವೆ ಎಂಬ ಶಹಭಾಸ್‌ಗಿರಿಯಿಂದ ಮತ್ತೆ ಜನರು ನಮ್ಮನ್ನು ಆರಿಸಿ ಅಧಿಕಾರಕ್ಕೆ ತರಬಹುದು,

ಆದರೆ ಒಂದುಲಕ್ಷ ಮನೆಗಳನ್ನು ಕಟ್ಟಿಸಬೇಕು ಎಂಬುದು ಅಧಿಕಾರಕ್ಕೆ ಬರಬೇಕೆಂದಲ್ಲ, ಸಾಧ್ಯವಾಗಿರುವ ಸಂಪನ್ಮೂಲಗಳಲ್ಲಿ ನಮ್ಮ ಆದ್ಯತೆಗಳನ್ನು ಗುರುತಿಸಿ ಕಡೆಯ ಪಕ್ಷ ಸೂರನ್ನೇ ಇಲ್ಲದಿರುವವರಿಗೆ ಸ್ವಲ್ಪಮಟ್ಟಿಗೆ ಸಹಾಯವನ್ನು ಮಾಡಿ ಘನತೆಯಿಂದ ಬದುಕತಕ್ಕ ಅವಕಾಶವನ್ನು ಕಲ್ಪಿಸಿಕೊಡುವಂಥಹದ್ದೇ ನಮ್ಮ ಉದ್ದೇಶವಾಗಿದೆಯೇ ವಿನಹಃ ಅದಕ್ಕೆ ಪರ್ಯಾಯವಾದ ಅರ್ಥವನ್ನು ಕಲ್ಪಿಸುವುದು ಸರಿಯಲ್ಲ. ನಮ್ಮ ಸರ್ಕಾರ ಸಮಗ್ರ ಗ್ರಾಮೀಣ ಯೋಜನೆಯ ಬಗ್ಗೆ ಅತ್ಯಂಥ ಕಾಳಜಿಯನ್ನು ಹೊಂದಿದೆ. ನಮ್ಮ ಸರ್ಕಾರ ಬಡವರ ಪರವಾಗಿರುವ ಸರ್ಕಾರ. ಮಾನ್ಯ ಅಬ್ದುಲ್ ನಜೀರ್ ಸಾಬ್‌ರವರ ಮಾತನ್ನೇ ಮತ್ತೆ ಉಚ್ಚರಿಸುವುದಾದರೆ, ಕಟ್ಟ ಕಡೆಯ, ದಟ್ಟ ದರಿದ್ರನ ಪರವಾಗಿ ಸರ್ಕಾರ ಇರಬೇಕು ಎಂದು ಹೇಳುತ್ತಿದ್ದರು. ಐ.ಆರ್.ಡಿ.ಪಿ. ಯೋಜನೆಯ ಅಡಿಯಲ್ಲಿ ನೀಡಲಾದ ಸಾಲದ ಬಗ್ಗೆ ತಮ್ಮ ಗಮನಕ್ಕೆ ತರುವುದಾದರೆ, 1994-95ರಲ್ಲಿ ನೀಡಲಾದ ಸಾಲದ ಮೊತ್ತ 61.24 ಕೋಟಿ, ನೀಡಲಾದ ಸಹಾಯದ ಮೊತ್ತ 43.54 ಕೋಟಿ, 1995-96ರಲ್ಲಿ ಸಹಾಯದ ಮೊತ್ತ 55.75 ಕೋಟಿ, 1996-97ರಲ್ಲಿ 63.83 ಕೋಟಿ, 1997-98ರಲ್ಲಿ 54.71 ಕೋಟಿ ಸಹಾಯವನ್ನು ಕೊಟ್ಟಿದ್ದೇವೆ. ನಮ್ಮಲ್ಲಿ ಲೀಡ್ ಬ್ಯಾಂಕ್‌ಗಳು ಯಾವ ರೀತಿಯಾಗಿ ಅಸಹಕಾರ ಮಾಡುತ್ತವೆಂಬುದು ತಮಗೆಲ್ಲರಿಗೂ ಗೊತ್ತು. ಇದರ ಬಗ್ಗೆ ಮಾನ್ಯ ಶಿವರಾಮ್‌ರವರು ಮತ್ತು ಇತರೆ ಸದಸ್ಯರುಗಳು ಮಾತನಾಡಿದ್ದಾರೆ. ಸಹಾಯ ಮೊತ್ತದಲ್ಲಿ ಸಬ್ಸಿಡಿಯನ್ನು ಹಿಡಿದುಕೊಂಡು ಬಿಡುತ್ತಾರೆ, ಉಳಿದುದ್ದನ್ನು ಕೊಡುತ್ತಾರೆ. ಸಬ್ಸಿಡಿ ಭಾಗವನ್ನು ತಮ್ಮಲ್ಲಿ ಡಿಪಾಜಿಟ್ ಇಟ್ಟುಕೊಂಡಿರುವುದಕ್ಕೆ ಬಡ್ಡಿಯನ್ನು ಕೊಡುತ್ತಾರೆ, ಆ ಬಡ್ಡಿ ಏನೇನೂ ಸಾಲದು, ಆದರೆ ಬೇರೆ ವಿಭಾಗಕ್ಕೆ ಹಾಕುವ ಬಡ್ಡಿಯ ದರವೇ ಬೇರೆ. ಈ ಪದ್ಧತಿ ಕಳೆದ ಎರಡು ವರ್ಷಗಳಿಂದ ಬಂದಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪದೇ ಪದೇ ಸುತ್ತೋಲೆಗಳ ಮೂಲಕ ವಸೂಲಾತಿಯನ್ನು ಸಾಲ ವಿತರಣೆಗೆ ಸಂಬಂಧವನ್ನು ಕಲ್ಪಿಸಬಾರದೆಂದು ಸೂಚನೆ ನೀಡಿದೆ. ಆದರೂ ಬ್ಯಾಂಕ್‌ನ ಮ್ಯಾನೇಜರ್‌ಗಳು ನಮಗೆ ವಸೂಲಾತಿಯಲ್ಲಿ ಕಡಿಮೆ ಮಾಡಿದ್ದೀರೆಂದು ಮೇಲಿನಿಂದ ಸುತ್ತೋಲೆ ಬರುತ್ತದೆ, ಸೂಚನೆ ಬರುತ್ತದೆಂದು ಹೇಳುತ್ತಾರೆ. ಈ ಕಾರಣಕ್ಕಾಗಿ ನಾವು ಸಾಲವನ್ನು ಕೊಡುವುದಿಲ್ಲ ಸಬ್ಸಿಡಿ ಭಾಗವನ್ನು ಇಟ್ಟುಕೊಂಡು ಉಳಿದ ಭಾಗವನ್ನು ಕೊಡುತ್ತೇವೆಂದು ಹೇಳುತ್ತಾರೆ. ಲೀಡ್ ಬ್ಯಾಂಕ್‌ಗಳನ್ನು ಸುಧಾರಿಸಲೂ ಬೇಕಾಗಿದೆ. ತೆಗೆದುಕೊಂಡಿರುವ ಸಾಲವನ್ನು ಮರುಪಾವತಿ ಮಾಡಬೇಕೆಂದೂ ಸಹ ನಿಯಮಗಳಿದೆ. ದಕ್ಷಿಣ ಕನ್ನಡ ಭಾಗದಲ್ಲೇನು ಸಾಲವನ್ನು ಬಹಳ ದಕ್ಷತೆಯಿಂದ ಹಿಂದಿರುಗಿಸುತ್ತಾರೆ ಅದು ನಮ್ಮ ಭಾಗಗಳಲ್ಲಿ ಆಗುತ್ತಿಲ್ಲ. ಇದನ್ನು ದುಃಖದಿಂದ ಮತ್ತು ನಾಚಿಕೆಯಿಂದ ಹೇಳಿಕೊಳ್ಳಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟೇ ಕಡುಬಡವ ಸಾಲವನ್ನು ತೆಗೆದುಕೊಂಡಾಗ ಮರುಪಾವತಿ ಮಾಡುತ್ತಾನೆ. ವಸೂಲಾತಿಗೆ ಸಂಬಂಧಪಟ್ಟಂತೆ ರಿಟ್ ಆಫ್ ಡಿಮ್ಯಾಂಡ್," ಅಥವಾ ಬಿಲ್ ಆಫ್ ಡಿಮ್ಯಾಡ್ ಬರಲಿ ಎಂದು ಅವರು ಕಾಯುವುದಿಲ್ಲ. ಆ ರೀತಿ ಏನಾದರು ಅಕಸ್ಮಾತಾಗಿ ಬಂದರೆ ಅದು ಅಪಮಾನವೆಂದು

ಭಾವಿಸುತ್ತಾರೆ. ಆದರೆ ನಮ್ಮ ಬಯಲು ಸೀಮೆಯಲ್ಲಿ ಆ ರೀತಿ ಮನೋಭಾವನೆ ಕಡಿಮೆ ಇದೆ. ಐಆರ್.ಡಿ.ಪಿ. ಕಾರ್ಯಕ್ರಮದಲ್ಲಿ ನಾವು ಹಿಂದಿನ ಸರ್ಕಾರಕ್ಕಿಂತ ಹೆಚ್ಚು ಕೆಲಸವನ್ನು ಮಾಡಿದ್ದೇವೆಂದು ಹೇಳಬಯಸುತ್ತೇನೆ.

ಶ್ರೀ ಎಂ.ಬಸಪ್ಪ: ಮಾನ್ಯ ಅಧ್ಯಕ್ಷರೇ, ಲೀಡ್ ಬ್ಯಾಂಕ್‌ನ ಸಿಬ್ಬಂದಿಗಳು ಬಡವರ್‍ಯಾರಾದರು ಬ್ಯಾಂಕ್‌ಗೆ ಹೋದರೆ ಮುಖವನ್ನೇ ಕೊಟ್ಟು ಮಾತನಾಡುವುದಿಲ್ಲ. ಹತ್ತಾರು ಸಲ ಹೋಗಿ ಕೇಳಿದರೂ ಅವನ ಸಮಸ್ಯೆಯ ಬಗ್ಗೆ ಗಮನಹರಿಸುವುದಿಲ್ಲ. ಐಆರ್‌ಡಿಪಿ ಫಲಾನುಭವಿಗಳಿಗೆ ಲೀಡ್ ಬ್ಯಾಂಕ್‌ನವರು ಆದಷ್ಟು ಕಷ್ಟವನ್ನು ಕೊಡುತ್ತಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರ ಅಭಿಪ್ರಾಯವೇನಿದೆ ಇದೇ ಅಭಿಪ್ರಾಯ ಸರ್ಕಾರದ್ದೂ ಆಗಿದೆ. ಲೀಡ್ ಬ್ಯಾಂಕ್‌ನ ಸಿಬ್ಬಂದಿಗಳು ಪ್ರಾಯಶಃ ಜನಾರ್ಧನಪೂಜಾರಿಯವರ ಮಾತನ್ನು ಮಾತ್ರ ಅರ್ಥ ಮಾಡಿಕೊಳ್ಳಬಹುದೆಂದು ಅನ್ನಿಸುತ್ತದೆ. ನಾವು ನಾಗರೀಕವಾಗಿ ಹೇಳುವ ಮಾತನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲವೆಂದು ಭಾವಿಸುತ್ತೇನೆ. ಅಂದರೆ ಪೂಜಾರಿಯವರು ಅನಾಗರೀಕವಾಗಿ ಹೇಳಿದರು ಎಂದಲ್ಲ. ನಮ್ಮಲ್ಲಿ ಎಲ್ಲವೂ ಸರಿಯಾಗಿದೆ ಎಂಬುದಿಲ್ಲ. ಜಿಲ್ಲಾಪಂಚಾಯಿತಿಯಲ್ಲಿ ಅನೇಕ ಕಡೆಗಳಲ್ಲಿ ಲೋಪದೋಷಗಳಾಗಿರುವ ಬಗ್ಗೆ ಹಣದ ದುರುಪಯೋಗವಾಗಿರುವ ಬಗ್ಗೆ ಪ್ರತಿ ಸಂದರ್ಭದಲ್ಲೂ ಪತ್ರಿಕೆಗಳಲ್ಲಿ ಬರುತ್ತವೆ. ಆದನ್ನು ತಡೆಗಟ್ಟಲು ನಿಯಮಾವಳಿಗಳನ್ನೇನು ಮಾಡಬೇಕೋ ಅದನ್ನು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಇಲ್ಲಿರುವ ಮೂಲಭೂತವಾದ ತಪ್ಪು ಏನಿದೆ ಎನ್ನುವುದಕ್ಕೆ ಬಹಳ ಒಂದು ಒಳ್ಳೆಯ ಶುಭಾಷಿತವಿದೆ, ಅದೇನೆಂದರೆ "Obedience to values which is enforced not by machinery of justice but by a national ethos is the ultimate guarantee of a clean public life. What India today badly needs and sadly lacks is not political leadership but moral leadership which can lead to a renaissance of true Indian culture. For the re-birth of morality in Indian Parties, the period of gestation will prove lengthy and the delivery promises to be painful. But you can dedicate your life to a greater cause." ಇಲ್ಲಿ ಗೆಸ್ಟೇಷನ್ ಪಿರಿಯಡ್ ಗಜಗರ್ಭದ ಅವಧಿಯಾಗಬಹುದು, ಇದರಲ್ಲಿ ನಮ್ಮದೇ ಆದಂಥ ಐತಿಹಾಸಿಕವಾದ ಅನೇಕ ಕಾರಣಗಳಿವೆ. ಅದು ನಮ್ಮನ್ನು ಈ ಒಂದು ಶ್ರೇಣೀಕೃತ ಸಮಾಜದ ವ್ಯವಸ್ಥೆಯಲ್ಲಿ ಕ್ರಿಯಾತ್ಮಕವಾಗಿ ಜನ ಸಮೂಹವನ್ನು ತೊಡಗಿಸಿಕೊಳ್ಳದೇ ಇರತಕ್ಕಂಥ ಕಾರಣವೂ ಕೂಡ ಇದೆ. ಆದ್ದರಿಂದ ಇದರ ಬಗ್ಗೆ ನಮ್ಮ ಇಲಾಖೆಯವರು ಯೋಚನೆಯನ್ನು ಮಾಡಿ ನಾವು ಪಾರದರ್ಶಕತೆಯನ್ನು ತರಬೇಕು

ಎನ್ನುವಂತಹ ಸಂದರ್ಭದಲ್ಲಿ, ಸುಮಾರು ಎಲ್ಲಾ ಜಿಲ್ಲಾ ಪಂಚಾಯತ್‌ಗಳಲ್ಲಿ, ಕೆಲವೊಂದನ್ನು ಮಾತ್ರ ನಾನು ಇಲ್ಲಿ ತೋರಿಸುತ್ತಿದ್ದೇನೆ, ನಾವು ಪ್ರತಿಯೊಬ್ಬರೂ ಕೂಡ ವಾರ್ತಾಪತ್ರವನ್ನು ಮಾಡಬೇಕೆಂದು ಪ್ರತಿಯೊಂದು ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟಿದ್ದೇವೆ. ಈ ಜಿಲ್ಲಾ ಪಂಚಾಯತಿಯಲ್ಲಿ ಯಾರಾದರೂ ಕೂಡ ಇದಕ್ಕೆ ಸಂಬಂದಿಸಿರತಕ್ಕಂಥ ವಿಷಯಗಳು ಇದ್ದರೆ, ಅದರ ಬಗ್ಗೆ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಹಾಕಿಕೊಳ್ಳಬಹುದು, ಅಥವಾ ಅದಕ್ಕೆ ಸರಿಯಾಗಿರತಕ್ಕ ಫೋರಂಗಳಲ್ಲಿ ಕೆಲಸ ಮಾಡಿ ಅದನ್ನು ಪ್ರಶ್ನೆ ಮಾಡಬಹುದು. ಬಾಗಲಕೋಟೆ ಜಿಲ್ಲಾ ವಾರ್ತಾ ಪತ್ರದಲ್ಲಿ ಹುನಗುಂದ ತಾಲ್ಲೂಕು ಮರುಳಕೊಪ್ಪ ಗ್ರಾಮದಲ್ಲಿ ಒಂದು ಲಕ್ಷ ಲೀಟರ್ ಸಾಮರ್ಥ್ಯದ ಎತ್ತರ ಮಟ್ಟದ ಜಲ ಸಂಗ್ರಹಾಲಯ ನಿರ್ಮಾಣ ಇದರ ಅಂದಾಜು ಮೊತ್ತ 10.45 ಲಕ್ಷ ರೂ. ಏಜೆನ್ಸಿ ಹೆಸರು: ಶ್ರೀ ಎಂ.ಎಂ.ಕೇಂಗಿ ಹುನಗುಂದ ತಾಲ್ಲೂಕು ರಕ್ಕಸಗಿ ಗ್ರಾಮದಲ್ಲಿ 50 ಸಾವಿರ ಲೀಟರ್ ಸಾಮರ್ಥ್ಯದ ಎತ್ತರ ಮಟ್ಟದ ಜಲ ಸಂಗ್ರಹಾಲಯ ನಿರ್ಮಾಣ, ಅಂದಾಜು ಮೊತ್ತ 5 ಲಕ್ಷ 85 ಸಾವಿರ ರೂ.ಗಳು, ಕೊಟ್ಟಿರುವ ಏಜೆನ್ಸಿ : ರೇಣುಕ ಕನ್‌ಸ್ಟ್ರಕ್ಷನ್ಸ್ ಈ ರೀತಿಯಾಗಿ ಪ್ರತಿಯೊಂದರ ವಿವರಗಳನ್ನು ಕೊಟ್ಟಿದ್ದಾರೆ. ಈ ರೀತಿ ವಿವರಗಳನ್ನು ಪಕ್ರಟಿಸುವುದನ್ನು ಪ್ರತಿ ಜಿಲ್ಲಾ ಪಂಚಾಯಿತಿಗಳಲ್ಲಿ ಅಕ್ಟೋಬರ್ 2ನೇ ತಾರೀಖಿನ ದಿವಸ ಪ್ರಾರಂಭ ಮಾಡಿದ್ದೇವೆ. ತುಮಕೂರು ಹಾಗೂ ಇತರ ಎಲ್ಲಾ ಜಿಲ್ಲಾ ಪಂಚಾಯಿತಿಗಳೂ ಇದರಲ್ಲಿ ಸೇರಿವೆ. ಇದರ ಮೂಲಕವೇ ನಾವೆಲ್ಲಾ ಸಾಧಿಸಿದ್ದೇವೆ ಎಂದಲ್ಲ. ಆದಷ್ಟು ಮಟ್ಟಿಗೆ ಪಾರದರ್ಶಕತೆಯನ್ನು ತರಬೇಕು ಎನ್ನುವಂತಹ ಪ್ರಯತ್ನದಲ್ಲಿ ಇದೊಂದು ಸಣ್ಣ ಹೆಜ್ಜೆಯಾಗಿದೆ. ಅದರಂತೆ ಎಲ್ಲಾ ಜಿಲ್ಲಾ ಪಂಚಾಯಿತಿಗಳೂ ಕೂಡ ಈ ರೀತಿಯಾದಂತಹ ವಾರ್ತಾ ಪತ್ರಗಳನ್ನು ಪ್ರತಿಯೊಂದು ಕಡೆಗೂ ಬಿಡುಗಡೆ ಮಾಡಿದ್ದಾರೆ. ಸಂಬಂದಿಸಿದಂತಹ ಪ್ರತಿಯೊಬ್ಬರೂ ಕೂಡ ಈ ವಾರ್ತಾ ಪತ್ರಿಕೆಯನ್ನು ನೋಡಿ, ಯಾರಿಗೆ ಅವರು ಸ್ವಜನ ಪಕ್ಷ ಮಾಡಿದ್ದಾರೆ ಅಥವಾ ಯಾರ ಪರವಾಗಿ ಹೆಚ್ಚು ಒಲವನ್ನು ತೋರಿಸಿದ್ದಾರೆ ಅಥವಾ ಎಲ್ಲಿ ಈ ಕೆಲಸ ಆಗುತ್ತಿದೆ ಎಂಬುದನ್ನೂ ಕೂಡ ನಾವು ನೋಡಲೇಬೇಕಾಗಿರತಕ್ಕಂಥ ಕಾರಣಕ್ಕಾಗಿ ಈ ಪಾರದರ್ಶಕತೆಯನ್ನು ತಂದಿದ್ದೇವೆ. ಸೋಷಿಯಲ್ ಆಡಿಟಿಂಗ್ ಕಾನ್‌ಸೆಫ್ಟ್ ಅನ್ನೂ ಕೂಡ ತಂದು ಇಂಟ್ರಡ್ಯೂಸ್ ಮಾಡಿದ್ದೇವೆ. ಅದಕ್ಕೆ ಸಂಬಂಧಪಟ್ಟಿರುವಂತೆ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಕೆಲವು ಅಧ್ಯಕ್ಷರುಗಳನ್ನು ಮತ್ತು ಸದಸ್ಯರುಗಳನ್ನು ನೇಮಕಾತಿ ಮಾಡಿದ್ದೇವೆ. ಆದರೆ ನಾನು ಈಗಾಗಲೇ ಹೇಳಿದಂತೆ ಇದು ನಮ್ಮ ನಿಯಮಾವಳಿಗಳ ಮೂಲಕ ಅಥವಾ ನಾವು ಯಾವುದಾದರೂ ಕೋರ್ಟ್ ಕಛೇರಿಗಳ ಮೂಲಕವಾಗಲೀ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬೇಕಾಗಿರತಕ್ಕಂಥದ್ದಲ್ಲ. ಇಡೀ ಜನ ಸಮೂಹ ಇಂತಹ ನಿಯಂತ್ರಣಕ್ಕೆ ಒಳಪಡಿಸಲಿಕ್ಕೆ ತನ್ನದೇ ಆದಂತಹ ಇಚ್ಛಾ ಶಕ್ತಿಯನ್ನು ತೋರಿಸಬೇಕಾದಂತಹ ಅಗತ್ಯ ಕೂಡ ಇದೆ. ಮಾನ್ಯ ಅಧ್ಯಕ್ಷರೇ, ಉದ್ಯೋಗ ಭರವಸೆ ಯೋಜನೆಯಲ್ಲಿ ಇದು ಬಹಳ ಮುಖ್ಯವಾಗಿರತಕ್ಕಂಥ ಯೋಜನೆಯಾಗಿದೆ. ಬಡವರಿಗೆ

ಉದ್ಯೋಗ ಕಲ್ಪಿಸಿಕೊಡತಕ್ಕಂಥ ಯೋಜನೆ ಇದಾಗಿದೆ. ಒಟ್ಟು ಯೋಜನೆಯ ವೆಚ್ಚ 1994-95ರಲ್ಲಿ 80.24 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದರೆ, 1995-96ರಲ್ಲಿ 121.45 ಕೋಟಿ ರೂ.ಗಳನ್ನು ನಾವು ಖರ್ಚು ಮಾಡಿದ್ದೇವೆ. 1996-97ರಲ್ಲಿ 143.7 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. 1997-98ರಲ್ಲಿ 166.28 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಈಗ 1998-99ರಲ್ಲಿ 50.70 ಲಕ್ಷ ರೂ.ಗಳನ್ನು ಸೆಪ್ಟೆಂಬರ್ ಅಂತ್ಯದವರೆಗೆ ಖರ್ಚು ಮಾಡಿದಂತಹ ಮಾಹಿತಿಯನ್ನು ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಅಂದರೆ ಬಡವರ ಪರವಾಗಿ ಇರತಕ್ಕಂಥ ಈ ಕಾರ್ಯಕ್ರಮಗಳಲ್ಲಿ ಇದೊಂದು ಕ್ರಿಯಾತ್ಮಕವಾಗಿರತಕ್ಕಂಥ, ಚಲನಶೀಲವಾಗಿರತಕ್ಕಂಥ ಸರ್ಕಾರವಾಗಿರುವುದರಿಂದ ಹೆಚ್ಚು ಪ್ರಗತಿಯನ್ನು, ಯಾರಿಗೆ ಅಗತ್ಯ ಇದೆಯೋ ಆ ಜನ ವರ್ಗಕ್ಕೆ ಕೊಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇದು ಬೇರೆ ಬೇರೆ ಕಾರಣಗಳಿಗಾಗಿ.....

ಶ್ರೀ ಕೆ.ಜಯರಾಂಶೆಟ್ಟಿ: ಉದ್ಯೋಗ ಭರವಸೆ ಯೋಜನೆಗೆ ಕೇಂದ್ರ ಸರ್ಕಾರ ಹಣ ಕೊಡುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಈ ಯೋಜನೆಯಲ್ಲಿ ಪಾಲ್ಗೊಳ್ಳುತ್ತವೆ. ಕೇಂದ್ರ ಸರ್ಕಾರವೆಂದ ತಕ್ಷಣವೇ ನಿಮ್ಮ ಪಕ್ಷದ್ದು, ರಾಜ್ಯ ಸರ್ಕಾರ ಎಂದರೆ ನಮ್ಮ ಪಕ್ಷದ್ದು ಅನ್ನುವಂತಹದ್ದು ಬಾಲಿಶವಾದುದು. ಸರ್ಕಾರ ಅಂದರೆ ಅದು ಜನಕ್ಕೆ ಸಂಬಂಧಪಟ್ಟಿದ್ದು. ಅದು ಭಾರತೀಯರ ಸರ್ಕಾರವಾದರೆ ಇದು ಕನ್ನಡಿಗರ ಸರ್ಕಾರ. ನಾವು ನಮ್ಮದೇ ಆದಂತಹ ಕಾರಣಗಳಿಗಾಗಿ ಜೆ.ಹೆಚ್.ಪಟೇಲ್ ಸರ್ಕಾರವೆಂದು ಹೇಳುತ್ತೇವೆ, ವಾಜಪೇಯಿಯವರ ಸರ್ಕಾರ ಎಂದು ಹೇಳುತ್ತೇವೆ. ಆದರೆ ಮೂಲದಲ್ಲಿ ಅದು ಭಾರತೀಯರ ಸರ್ಕಾರ. ಅದು ಪಕ್ಷವೆಂದು ಕೂಡಲೇ ಅದ್ಯಾವುದೋ ಶತ್ರು ಪಕ್ಷವಲ್ಲ ಅಲ್ಲಿ ಇರತಕ್ಕಂಥದ್ದು. ಅದು ನಮ್ಮ ಜನಗಳ ಮಿತ್ರ ಪಕ್ಷ. ಆ ಮೂಲಕವಾಗಿ ನಾವು ಯೋಚನೆ ಮಾಡಿದಾಗ ಕೇಂದ್ರ ಸರ್ಕಾರವೂ ಹಣ ಕೊಟ್ಟಿದೆ, ನಾವೂ ಕೊಟ್ಟಿದ್ದೇವೆ.

ಶ್ರೀ ಕೆ.ಜಯರಾಂಶೆಟ್ಟಿ: ನೀವು ಸಾಧನೆ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ.

ಶ್ರೀ ಎಂ.ಪಿ.ಪ್ರಕಾಶ್: ಹೌದು, ನಾವು ಸಾಧನೆ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಸದಸ್ಯರು ಕೇಂದ್ರ ಸರ್ಕಾರ ಹಣ ಕೊಟ್ಟಿದೆ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಕೇಂದ್ರ ಸರ್ಕಾರ ನಮಗೆ ಹಣವನ್ನು ಕೊಡುತ್ತದೆ ಎಂದಿಟ್ಟುಕೊಳ್ಳಿ, ನಾವು ಅದನ್ನು ಖರ್ಚು ಮಾಡದೇ ಇದ್ದರೆ? ನಿಮ್ಮ ಭಾಷೆಯಲ್ಲಿಯೇ ಮಾತನಾಡುವುದಾದರೆ, ನಿಷ್ಕ್ರಿಯ ವಾಗಿದ್ದರೆ ಏನಾಗುತ್ತಿತ್ತು? ನೀವೇನು ಅವಿಶ್ವಾಸ ಗೊತ್ತುವಳಿಯನ್ನು ತಂದು, ನಾವು ಈ ಕೂಡಲೇ ತೊಲಗಿ ಹೋಗಬೇಕೆಂದು ಹೇಳಿ ಜನ ಆದೇಶಕ್ಕೆ ವಿರುದ್ಧವಾಗಿ ತಾವೇನು ತಂದಿದ್ದೀರಿ, ನಾವೇ ಖರ್ಚು ಮಾಡದೇ ಇದ್ದಿದ್ದರೆ? ಕೇಂದ್ರ ಸರ್ಕಾರ ಹಣ

ಕೊಡಬಹುದು. ದೇವರು ಮಳೆ ಕೊಡುತ್ತಾನೆ, ಗಾಳಿ ಕೊಡುತ್ತಾನೆ, ಭೂಮಿ ಕೊಟ್ಟಿದ್ದಾನೆ, ನಾವು ದುಡಿಯದಿದ್ದರೆ ಬೆಳೆ ಬರಲಿಕ್ಕೆ ಸಾಧ್ಯವಿಲ್ಲ. ಹಾಗೆಯೇ ಕೇಂದ್ರ ಸರ್ಕಾರ....

ಹೆಚ್.ಸಿ.ಬಾಲಕೃಷ್ಣ: ತಾವು ಇನ್ನೂ ಹೆಚ್ಚು ದುಡ್ಡು ಖರ್ಚು ಮಾಡಿದ್ದರೆ ಇನ್ನೂ ಹೆಚ್ಚಿಗೆ ಹಣವನ್ನು ತರತಕ್ಕಂಥ ಒಂದು ಕೆಲಸವನ್ನು ನೀವು ಮಾಡಬಹುದಾಗಿತ್ತು. ಪಕ್ಕದ ರಾಜ್ಯದಲ್ಲಿ ಆ ಒಂದು ಕೆಲಸವನ್ನು ಮಾಡಿದ್ದಾರೆ. ಅದರ ಬಗ್ಗೆ ದಯಮಾಡಿ ಗಮನ ಹರಿಸಿ ಎಂದು ಕೋರುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ನಾನು ಮಾನ್ಯ ಸದಸ್ಯರಾದ ಬಾಲಕೃಷ್ಣರವನ್ನು ಅಭಿನಂದಿಸುತ್ತೇನೆ. ಅಂದರೆ ನೀವು ಇನ್ನೂ ಹೆಚ್ಚು ಕೆಲಸ ಮಾಡಿ ಎಂದು ಹೇಳಿ ನಮ್ಮನ್ನು ಹುರಿದುಂಬಿಸಿದ್ದೀರಿ, ಅದಕ್ಕಾಗಿ ನಾವು ಸಂತೋಷ ಪಡುತ್ತೇವೆ. ಆದ್ದರಿಂದ ನೀವು ಅವಿಶ್ವಾಸದ ಪರ ಇಲ್ಲವೆಂದು ನಾನು ನಂಬಿದ್ದೇನೆ. ಏಕೆಂದರೆ, ಈಗಾಗಲೇ ನಾವು ಉದ್ಯೋಗ ಭರವಸೆ ಯೋಜನೆಯ ವಿವರಗಳನ್ನು ನೀಡಿದ್ದೇನೆ. ನಾವು ಈ ಎಲ್ಲವನ್ನೂ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಿಲ್ಲ. ಮಾನ್ಯ ಶಿವರಾಂರವರು ಮಾತನಾಡುವಾಗ ಬಹಳ ಒಳ್ಳೆಯ ಸಲಹೆಯನ್ನು ನಮಗೆ ಕೊಟ್ಟರು. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ನೀವು 85 ಕೋಟಿ ರೂ.ಗಳ ಒಂದು ಯೋಜನೆಯನ್ನು ತಯಾರು ಮಾಡುತ್ತೀರಿ. 14 ಕೋಟಿ ರೂ.ಗಳ ಪಾಯಿಂಟ್ ಡಿಸ್‌ಚಾರ್ಜ್ ಅನ್ನತಕ್ಕಂಥದ್ದರ ಬಗ್ಗೆ ಮತ್ತು ಪಾಯಿಂಟ್ ರೀಚಾರ್ಜ್ ಎಂಬ ಬಗ್ಗೆ ನೀವು ಮಾಡಿಸಿದಿರಿ. ಆದರೆ ರೈತನಿಗೆ ಸಂಬಂಧಪಟ್ಟರತಕ್ಕಂಥದ್ದನ್ನು ನೀವು ಮಾಡುತ್ತಿಲ್ಲ ಅಂತ ಹೇಳಿದಿರಿ. ಪ್ರತಿ ಸಂದರ್ಭದಲ್ಲಿಯೂ ಕೂಡ 100 ಕೋಟಿ ರೂ.ಗಳನ್ನು ನಮ್ಮ ಉದ್ಯೋಗ ಭರವಸೆ ಯೋಜನೆಯ ಕೆಳಗೆ ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಿಮಗೆಲ್ಲಾ ಗೊತ್ತಿದ್ದಂತೆ ಜಲಾನಯನ ಪ್ರದೇಶಗಳನ್ನು ಅಭಿವೃದ್ಧಿ ಮಾಡಿ ಕೊಡತಕ್ಕಂಥದ್ದು ಅತ್ಯಂತ ಮುಖ್ಯ. ಅದರಲ್ಲಿ ಹನುಮಂತರಾವ್ ಸಮಿತಿಯ ಪ್ರಕಾರ ನೂರಕ್ಕೆ ಐವತ್ತರಷ್ಟನ್ನು ನಾವು ಸಮಪಾತಳಿ ಯೋಜನೆಗಳನ್ನು ಹಾಕಿಕೊಳ್ಳತಕ್ಕಂಥದ್ದು, ಸಾಮಾಜಿಕ ಅರಣ್ಯ ನಿರ್ಮಾಣ ಮಾಡುವಂತಾದ್ದು, ಹೊಲಗಳಲ್ಲಿ ನಾವು ಹೊಂಡಗಳನ್ನು ನಿರ್ಮಿಸುವಂತಾದ್ದು, ಹರಿದು ಹೋಗುವಂತಹ ಮೇಲ್ಮೆಯನ್ನು ತಡೆಹಿಡಿಯತಕ್ಕಂಥದ್ದು, ಒಳ್ಳೆಯ ಪ್ರಗತಿ ಪರವಾಗಿರತಕ್ಕಂಥ ಬೇಸಾಯದ ಕೃಷಿಯ ರೀತಿ ರಿವಾಜುಗಳನ್ನು ಅಳವಡಿಸಿಕೊಳ್ಳತಕ್ಕಂಥದ್ದು, ಇವೆಲ್ಲದರ ಮೂಲಕವಾಗಿ ನಾವು ಜಲಾನಯನ ಪ್ರದೇಶವನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯತೆ ಆಗುತ್ತದೆ. ಆ ಜಲಾನಯನ ಅಭಿವೃದ್ಧಿ ಆಗತಕ್ಕಂಥದ್ದು, ಅದರ ಪ್ರತಿ ಫಲ ತೆಂಗಿನ ಮರ ಇದ್ದಂತೆ. ಮಧುಗಿರಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಸಮಾರಂಭವೊಂದರಲ್ಲಿ ಅಲ್ಲಿದ್ದ ಜನ ತಮಗೆ ಸರ್ಕಾರ ವಿದ್ಯುಚ್ಛಕ್ತಿಯನ್ನು ಕೊಡಲಿಲ್ಲವಲ್ಲಾ ಎಂಬ ಮಾತನ್ನು ಹೇಳಿದಾಗ ಅವರು ಒಂದು ಮಾತನ್ನು ಬಹಳ ತಮಾಷೆಯಾಗಿ ಹೇಳಿದರು. ನೀವು

ಟೊಮ್ಯಾಟೋವನ್ನು ಬೆಳೆದು ಕೊಡಿ ಎಂದು ನನಗೆ ಹೇಳಿದರೆ ಮೂರು ತಿಂಗಳಿನಲ್ಲಿ ನಿಮಗೆ ಬೆಳೆದು ಕೊಡುತ್ತೇನೆ. ಆದರೆ ತೆಂಗಿನಕಾಯಿ ನಿಮಗೆ ಬೇಕು ಎನ್ನುವುದಾದರೆ ಕನಿಷ್ಟ ಪಕ್ಷ ಎಂಟು ವರ್ಷಗಳು ನೀವು ಅದಕ್ಕೆ ಕಾಯಬೇಕಾಗುತ್ತದೆ. ಹಿಂದಿನ ಸರ್ಕಾರ ಒಂದೇ ಒಂದು ಮೆಗಾವ್ಯಾಟ್‌ನ ವಿದ್ಯಚ್ಛಕ್ತಿಯನ್ನು ಹೆಚ್ಚು ಮಾಡದೇ ಇರುವುದರಿಂದ ಕಳೆದ 3-4 ವರ್ಷಗಳಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಇದು ಅನಿವಾರ್ಯವಾಗಿರತಕ್ಕಂಥ ಸತ್ಯಗಳು. ನಮ್ಮ ಉದ್ಯೋಗ ಭರವಸೆ ಯೋಜನೆಯಡಿ ಶೇಕಡ 50ರಷ್ಟನ್ನು ಜಲಾನಯನ ಪ್ರದೇಶದಲ್ಲಿ ಖರ್ಚು ಮಾಡಿದಾಗ ಅದರ ನಿರೀಕ್ಷಿತವಾದಂತಹ ಫಲ ಸ್ವಲ್ಪ ಮಟ್ಟಿಗೆ ತಡವಾಗುತ್ತದೆ. ಮಳೆಗಾಲಕ್ಕೆ ಕಡಿಮೆಯಾಗಿರುತ್ತದೆ, ಮಳೆಗಾಲ ಬಂದಮೇಲೆ ಅದು ಇಂಗಬೇಕು, ಮತ್ತೆ ಅಂತರ್ಜಲ ಉಕ್ಕಬೇಕು. ಈ ಅಂತರ್ಜಲ ಉಕ್ಕುವ ಪ್ರಕ್ರಿಯೆಗಳ ಜೊತೆ ಜೊತೆಗೇ ನಾವು ಕೈಗಾರಿಕೆ, ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆಗಳಿಗಾಗಿ ಅದನ್ನು ಹೆಚ್ಚು ನಾವು ಬಳಸುತ್ತಿದ್ದೇವೆ. ಅದನ್ನು ನಾನು ದುರ್ಬಳಕೆ ಎಂದೂ ಕೂಡ ಕರೆದೆ. ತಾವು ಅದಕ್ಕೆ ದುರ್ಬಳಕೆ ಎಂಬ ಪದ ಬಳಸಬೇಡಿ ಎಂದು ಹೇಳಿದಿರಿ. ಪ್ರತಿಯೊಬ್ಬರಿಗೂ ಕೂಡ ಈ ಸ್ಪರ್ಧಾತ್ಮಕ ಯುಗದಲ್ಲಿ ನಾನು ಶ್ರೀಮಂತನಾಗಬೇಕು ಎಂದು ಬಯಸುವುದು ನಿಜ. ಆದರೆ ಬಯಸುವಂತಹ ವೇಗದಲ್ಲಿ ಇಲ್ಲಿ ಪ್ರಾಯಶಃ ನಮ್ಮ ಪರಿವರ್ತನವಾದಿಗಳು ಮತ್ತು ಪರಿಸರವಾದಿಗಳೇನಿದ್ದಾರೆ, ಇಲ್ಲಿ ಸಂಘಟಿತವಾಗಿ ದೊಡ್ಡ ದೊಡ್ಡ ನಗರಗಳಲ್ಲಿ ಕೆಲಸ ಮಾಡತಕ್ಕಂಥ ಪರಿಸರವಾದಿಗಳು ಇಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲಿ ಅವರು ಕೆಲಸ ಮಾಡತಕ್ಕಂಥದ್ದರ ಕಡೆಗೆ ಲಕ್ಷ್ಯವನ್ನು ಕೊಟ್ಟಿಲ್ಲವೆಂದು ನಾನು ಹೇಳುತ್ತಿದ್ದೇನೆ. ಅವರು ಮಾಡಬಾರದು ಅನ್ನತಕಂಥ ಮಾತೇನೂ ಅಲ್ಲ. ಪರಿಸರವಾದಿಗಳು ಹೆಚ್ಚಿನ ಪ್ರಮಾಣದಲ್ಲಿ ಬರಬೇಕಾಗಿರತಕ್ಕಂಥದ್ದು ಮುಂದಿನ ಯುಗಗಳಲ್ಲಿ. ಅಥವಾ ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ. ಇದೇ ಪ್ರಮಾಣದಲ್ಲಿ ನಮ್ಮ ಜನಸಂಖ್ಯೆ ಹೆಚ್ಚಾದರೆ, ಇದೇ ಪ್ರಮಾಣದಲ್ಲಿ ಕೃಷಿ ಮತ್ತು ಕೈಗಾರಿಕೆಗಾಗಿ ಅಂತರ್ಜಲವನ್ನು ಬಳಸುವಂತಹ ಪ್ರಮಾಣ ಮಿತಿ ಮೀರಿದರೆ, ಒಂದು ದಿವಸ ನಮಗೆ ಕುಡಿಯುವ ನೀರಲ್ಲ, ಯಾವ ಕಾರಣಕ್ಕಾಗಿಯಾದರೂ ನೀರಿಲ್ಲದ ಒಂದು ನಾಡನ್ನು ಕಟ್ಟಬೇಕಾಗುತ್ತದೆ. ಆದ್ದರಿಂದ ಅದೊಂದು ಜಲಕ್ಷಾಮವೂ ಆಗುವಂತಹದ್ದು ಇದೆ. ಪ್ರಾಯಶಃ ಈ ಜಲಕ್ಷಾಮ ಆಗದಂತಹ ಸಂದರ್ಭಗಳಲ್ಲಿ ಬೇಕಾಗಿರತಕ್ಕಂಥದ್ದು, ಪರಿಸರವಾದಿಗಳೂ ಕೂಡ ಇದರಲ್ಲಿ ಸಹಕಾರ ಕೊಡತಕ್ಕಂಥದ್ದು ಇದೆ. ಜಲಾನಯನ ಪ್ರದೇಶಗಳಿಗೆ ನಾವು ಪ್ರತಿ ವರ್ಷ 100 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದೇವೆ. ಇದರ ಜೊತೆಗೆ ತಾವು ಕಪ್ಪು ಮತ್ತು ಬೂದು ಪ್ರದೇಶಗಳ ಬಗ್ಗೆ ಪ್ರಸ್ತಾಪಿಸಿದಿರಿ. ಆ ಬಗ್ಗೆ ಬಹಳ ಮುಖ್ಯವಾದಂತಹ ಸಲಹೆಯೊಂದನ್ನು ತಾವು ಕೊಟ್ಟಿದ್ದೀರಿ. ಆ ಬಗ್ಗೆ ನಾನು ನಮ್ಮ ಇಲಾಖೆಯ ಕಾರ್ಯದರ್ಶಿಗಳೊಡನೆ ನಿನ್ನೆ ಮಾತನಾಡಿದ್ದೇನೆ. 72 ತಾಲ್ಲೂಕುಗಳು ಮತ್ತು ಈ ರೀತಿಯಾಗಿ ಖರ್ಚು ಮಾಡಬೇಕಾದಂತಹ 175 ತಾಲ್ಲೂಕುಗಳಲ್ಲಿ

ಮಾನಿಟರಿಂಗ್ ಸೆಲ್ ಅನ್ನು ಇಡಬೇಕೆಂದು ಮಾನ್ಯ ಶಿವರಾಂರವರು ಸಲಹೆ ಮಾಡಿದ್ದಾರೆ. ಹಣವನ್ನು ಏನೋ ನೀವು ಖರ್ಚು ಮಾಡುತ್ತಿರುವುದು ನಿಜ, ಖರ್ಚು ಮಾಡಿದ್ದು ಯಾವ ರೀತಿ ಖರ್ಚಾಗಿದೆ, ಅದರ ಪ್ರತಿಫಲ ಸಿಕ್ಕಿದೆಯೋ ಇಲ್ಲವೋ ಎಂಬುದರ ವಿಶ್ಲೇಷಣೆ ಆಗಬೇಕು ಎನ್ನುವಂತಾದ್ದನ್ನು ತಾವು ಹೇಳಿದ್ದೀರಿ. ಆಡಳಿತದಲ್ಲಿನ ಈ ಕೊರತೆಯನ್ನು ತಾವು ಎತ್ತಿ ತೋರಿಸಿದ್ದೀರಿ. ಮಾನಿಟರಿಂಗ್ ಸೆಲ್ ಅನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ನಾವು ನಿಮ್ಮ ಸಲಹೆಯನ್ನು ಸ್ವೀಕಾರ ಮಾಡಿದ್ದೇವೆ. ಆದರೆ ನೀವು ಹೇಳಿದಂತೆ ಈಗಾಗಲೇ ನಾವು 72 ತಾಲ್ಲೂಕುಗಳನ್ನು ಗುರುತಿಸಿ, ಅಂತರ್ಜಲದ ಪುನಃ ಶ್ಚೇತನದ ಕಾರ್ಯಕ್ರಮಕ್ಕಾಗಿ 85 ಕೋಟಿ ರೂ.ಗಳ ಹೊಸ ಯೋಜನೆಯನ್ನು ಅಂತರ ಗಂಗಾ ಎನ್ನುವಂತಹ ಹೆಸರಿಟ್ಟು ಈಗಾಗಲೇ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈ ಅಂತರಗಂಗೆಯನ್ನು ಉಕ್ಕಿಸುವಂಥದ್ದು ಅವಶ್ಯಕವಾಗಿದೆ, ಈಗ ಅದಕ್ಕೊಬ್ಬ ಭಗೀರಥ ಬೇಕಾಗಿದೆ. ಆ ಭಗೀರಥನ ಪಾತ್ರವನ್ನು ಮಾನ್ಯ ಸುರೇಶ್‌ಕುಮಾರ್‌ರವರು ಮಾಡುತ್ತಾರೋ ಅಥವಾ ಮಾನ್ಯ ಯಡಿಯೂರಪ್ಪನವರು ಮಾಡುತ್ತಾರೋ ನನಗೆ ಗೊತ್ತಿಲ್ಲ. ನೀವೇನಾದರೂ ಆ ರೀತಿ ಭಗೀರಥ ಪ್ರಯತ್ನವನ್ನು ಮಾಡಿದರೆ ನಮ್ಮ ಅಂತರಗಂಗೆಯನ್ನು ಉಕ್ಕಿಸಲಿಕ್ಕೆ 85 ಕೋಟಿ ರೂ.ಗಳನ್ನು ನಿಮ್ಮ ಪ್ರಭಾವವನ್ನು ಬೀರಿ, ಮಾನ್ಯ ಬಾಬಾಗೌಡ ಪಾಟೀಲ್‌ರಿಂದಲೇ ಅಥವಾ ಮಾನ್ಯ ವಾಜಪೇಯಿಯವರಿಂದಲೋ ನನಗೆ ಮಂಜೂರಾತಿಯನ್ನು ಮಾಡಿದರೆ ಇಡೀ ನಾಡು ನಿಮಗೆ ಋಣಿಯಾಗಿರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಇದು ನಿಮ್ಮ ಕೈಯ್ಯಲ್ಲಿದೆ. ದಯಮಾಡಿ ತಾವು ಆ ಕೆಲಸವನ್ನು ಮಾಡಿದರೆ ನಮ್ಮ 72 ತಾಲ್ಲೂಕುಗಳಲ್ಲಿಯೂ ಕೂಡ ಈ ಒಳ್ಳೆಯ ಕೆಲಸವಾಗುತ್ತದೆ. ಅದರ ಪರಿಣಾಮ 4-6 ವರ್ಷಗಳಲ್ಲಿ ಬರಬಹುದು. ಇದಲ್ಲದೇ ಕಳೆದ 6 ತಿಂಗಳಿನಲ್ಲಿ ಒಟ್ಟು 7 ಬಂಜರು ಭೂಮಿ ಅಭಿವೃದ್ಧಿ ಯೋಜನೆಗಳನ್ನು ನಾವು ಕೇಂದ್ರ ಸರ್ಕಾರದಿಂದ ಮಂಜೂರಾತಿ ಮಾಡಿಸಿಕೊಂಡಿದ್ದೇವೆ. ಈ ಸರ್ಕಾರ ಕ್ರಿಯಾತ್ಮಕ ಸರ್ಕಾರ ಆಗದೇ ಇದ್ದರೆ, ಹಿಂದಿನ ಐದು ವರ್ಷದ ಅವಧಿಯಲ್ಲಿ ಬಂಜರು ಭೂಮಿ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆ ಇರಲಿಲ್ಲ. ಆದರೆ ಇವತ್ತು ಪ್ರತಿ 100ಕ್ಕೆ ಐದು ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ 73ರಿಂದ 80 ಲಕ್ಷ ರೂಪಾಯಿಗಳನ್ನು ಹಣ ಬಿಡುಗಡೆ ಮಾಡುತ್ತೇವೆ. ಅದರ ಮೂಲಕ ಐದು ವರ್ಷಗಳಲ್ಲಿ ಮಾಡಬೇಕಾಗಿರತಕ್ಕಂತಹ ಖರ್ಚಿಗೆ 35 ಕೋಟಿ ರೂಪಾಯಿಗಳನ್ನು ಬಿಜಾಪುರ, ಬೆಳಗಾವಿ, ಗುಲ್ಬರ್ಗ, ಬಳ್ಳಾರಿ, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಏನು ಇವತ್ತು ಯಾವಾಗಲೂ ಬರ ಪೀಡಿತ ಪ್ರದೇಶಗಳಾಗಿರುತ್ತವೆ, ನೀರು ಕಡಿಮೆ ಇರತಕ್ಕಂತಹ ಪ್ರದೇಶ, ಮಳೆ ಅಭಾವವಿರತಕ್ಕಂತಹ ಪ್ರದೇಶಗಳಲ್ಲಿ ಈಗಾಗಲೇ ನಾವು ಲೋನ್ ಕೊಟ್ಟಿದ್ದೇವೆ. ಬಂಜರು ಭೂಮಿ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಕೇಂದ್ರ ಸರ್ಕಾರದಲ್ಲಿವೆ ಅದನ್ನೂ ಕೂಡ ನಮಗೆ ಒದಗಿಸಿಕೊಡಬೇಕು ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಇಎಎಸ್‌ನಲ್ಲಿ

ಇತ್ತೀಚೆಗೆ ನಾವು ಖರ್ಚು ಮಾಡಿರತಕ್ಕಂಥದ್ದರಲ್ಲಿ ನಾವು ಈಗಾಗಲೇ ಹೇಳಿದಂತೆ we have to educate our masses. In addition to it, we have to get ourselves educated also. ಇಎಎಸ್‌ನಲ್ಲಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರತಕ್ಕಂಥದ್ದು ಏನಿದೆ, ಅದನ್ನು ನಾವು ಜಲಾನಯನ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹೆಚ್ಚಿಗೆ ಹಣ ಹಾಕಲಿಕ್ಕೆ ಕೊಡುವುದಿಲ್ಲ. ಅಂಗನವಾಡಿ ಕಟ್ಟಡ, ಶಾಲಾ ಕಟ್ಟಡ ಅಗತ್ಯವಿದೆ ನಿಜ, ಆದರೆ ಇವುಗಳಿಗೆ ಬೇರೆ ಮೂಲದಿಂದ ಹಣ ಬರುತ್ತದೆ. ಆದರೆ ಜಲಾನಯನ ಪ್ರದೇಶದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಣ ಬರುವುದಿಲ್ಲ. ಅದು ಶಾಶ್ವತವಾಗಿ ಮಾಡಬೇಕಾಗಿರತಕ್ಕಂತಹ ಕರ್ತವ್ಯವಾಗಿರುವುದರಿಂದ ಅದನ್ನು ಮಾಡಲೇಬೇಕಾಗುತ್ತದೆ. ಆ ವಿಚಾರದಲ್ಲಿ ಇದು ನಿಷ್ಕ್ರಿಯವಾಗಿರತಕ್ಕಂತಹ ಸರ್ಕಾರ ಅಲ್ಲ. ನನ್ನ ಇಲಾಖೆಗೆ ಮಾತ್ರ ನಾನು ಸೀಮಿತ ಪಡಿಸಿ ಬೇರೆ ಇಲಾಖೆಗಳಿಗೆ ನಮ್ಮ ಸನ್ಮಾನ್ಯ ಸಚಿವರು ಮಾತನಾಡುತ್ತಾರೆ. ಕೊನೆಗೆ ಒಂದು ಮಾತು ಹೇಳುತ್ತೇನೆ, ನಮ್ಮ ಸರ್ಕಾರ ಯಾವಾಗಲೂ ಕೂಡ ಯಾವುದೇ ತರಹದ ಸವಾಲುಗಳನ್ನು ಸ್ವೀಕರಿಸುವಲ್ಲಿ ಹಿಂದು ಮುಂದು ನೋಡುವುದಿಲ್ಲ. Rudyard Kipling ರವರು ಬಹಳ ವರ್ಷಗಳ ಹಿಂದೆ ಬಂದು 'If' ಅನ್ನುವಂತಹ ಒಂದು ಪದ್ಯ ಬರೆದರು. ಆ 'If' ಅನ್ನುವಂತಹ ಪದ್ಯ ಅಕ್ಷರಶಃ ಮಾನ್ಯ ಜೆ.ಹೆಚ್.ಪಟೇಲರ ಸರ್ಕಾರಕ್ಕೆ ಅನ್ವಯವಾಗುತ್ತದೆ.

"If you can talk with crowd and keep your virtue
or walk with the kings and not lose the common
touch, yours is the earth and everything that
is in it and which is more you will be a man
my son.
If you can keep your head when all doubt you and
are losing their tongues blaming it on you;
If you can trust yourself when all men doubt you,
but make allowance for their doubtings too

If there are any doubtings.............."

I think this is an opportunity that your kindself has given to them. But, certainly Sir, we will prove it ourselves. If you can trust yourself, we trusted ourselves, in our capacity, in our transparency, even the capacity to do something, and that is the mandate that we have got it.

"......and all men may be doubting it, but make allowance for their doubtings....." ಆದ್ದರಿಂದ ಈಗಾಗಲೇ ನೀವು ಅವರಿಗೆ ಅಲೋಯನ್ಸ್ ಮಾಡಿಕೊಟ್ಟಿದ್ದೀರಿ ಆದರೆ ಈ ವಿಚಾರಗಳನ್ನು ತಾವು ತಿಳಿದುಕೊಳ್ಳುವ ಸಹನೆ ಇದ್ದರೆ, ದಯಮಾಡಿ ನೀವು ನಮ್ಮ ಜೊತೆ ಇರುತ್ತೀರೆಂದು ಹೇಳುತ್ತಾ, ಇದನ್ನು ವೇದಾಂತೀಕರಿಸಿ ನಮ್ಮ ದೌರ್ಬಲ್ಯಗಳನ್ನು ವೇದಾಂತದಲ್ಲಿ ಮುಳುಗಿಸುತ್ತೇವೆಂದು ಅಲ್ಲ. ಅಪರಿಪೂರ್ಣವಾದ ವ್ಯವಸ್ಥೆ ನಮ್ಮ ಮೊಂಡಾದಂತಹ ಶಸ್ತ್ರಾಸ್ತ್ರಗಳ ನಡುವೆ ನಾವು ಮಾಡುವಂತಹ ಕಾರ್ಯ ವಿಧಾನದಲ್ಲಿ ನಮಗೆ ಸಂಪೂರ್ಣವಾಗಿ ತೃಪ್ತಿ ಸಿಕ್ಕಿದೆ ಎಂದು ಅಲ್ಲ, ಆದರೆ ಇರುವ ಇತಿ ಮಿತಿಗಳಲ್ಲಿ ನಾವು ಒಳ್ಳೆಯ ಕೆಲಸ ಮಾಡಿದ್ದೇವೆ ಎನ್ನುವುದಕ್ಕೆ. ಪಾಲ್ಕಿವಾಲರವರು ಹೇಳಿರುವಂತಹ ಒಂದು ಮಾತು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. "Who gave unto themselves the constitution, but not the ability to keep it, who inherited a resplendent heritage, but not the wisdom to cherish it, who suffer and endure in patience without the perceptions of their potentials." ಈ ತರಹದ ದೌರ್ಬಲ್ಯ ಮತ್ತು ನ್ಯೂನತೆಗಳು ನಡೆಯುವಂತಹ ಸಮಾಜದಲ್ಲಿ ನಮ್ಮದೇ ಆದ ಇತಿ ಮಿತಿಗಳಲ್ಲಿ ನಾವು ಮಾಡುತ್ತೇವೆ. ಅಂತರ್ಗತವಾದ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳು ಬರುವುದು ಸಹಜ. ನಮ್ಮ ಇತಿಹಾಸ ಹೇಳಿದೆ, ಭಿನ್ನಾಭಿಪ್ರಾಯಗಳನ್ನು; ಯಾವಾಗಲೂ ಸರಿಪಡಿಸಿಕೊಂಡಿದ್ದೇವೆ. ಅದು ಇತ್ತೀಚಿನ ಇತಿಹಾಸ ಆದ್ದರಿಂದ ನಮ್ಮ ಭಿನ್ನಾಭಿಪ್ರಾಯದಿಂದ ನೀವು ಸಂತೋಷಪಡಬೇಕಾದುದು ಇಲ್ಲ ನಾವೂ ಅಂತಹ ತಪ್ಪನ್ನು ಮಾಡಿದ್ದೇವೆ. ನಿಮ್ಮ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯ ಬಂದಾಗ ಈಗ ಏನೋ ಬಿದ್ದೇ ಬಿಡುತ್ತೇವೆಂದೂ ಆದರೆ ನಿಮಗೆ ಅಂತರ್ಗತವಾದ ಒಂದು ಶಕ್ತಿ ಇದೆ. ನಿಮ್ಮ ವರಿಷ್ಠರು ಏನೇ ಮಾತು ಹೇಳಿದರೂ ಕೂಡ ನಿಮ್ಮ ಭಿನ್ನಾಭಿಪ್ರಾಯವನ್ನು ಮರೆತು ನೀವು ಕಲೆತು ಬಿಡುತ್ತೀರಿ. ಸರ್ಕಾರವನ್ನು ನೀವು ಕಳೆದುಕೊಳ್ಳುವುದಿಲ್ಲ. ಕಾಂಗ್ರೆಸ್‌ನಿಂದ ನಾವೂ ಪಾಠ ಕಲಿತಿದ್ದೇವೆ. ನಮ್ಮ ಹಿಂದಿನ ಅವತಾರಗಳಿಂದ ನಾವು ಏನೂ ಆಗುವುದಿಲ್ಲ, ಸರ್ಕಾರ ಹೋದರೆ ಜನಗಳಿಗೆ ನಾವು ಅನ್ಯಾಯ ಮಾಡಿದಂತಾಗುತ್ತದೆ ಎನ್ನುವುದರಿಂದ, ನಮ್ಮ ಭಿನ್ನಾಭಿಪ್ರಾಯಗಳ ಮೂಲಕ ಅಕಸ್ಮಾತ್ ಏನಾದರೂ ಇದ್ದರೆ ನೀವು ಸಂತೋಷ ಮತ್ತು ಖುಷಿ ಪಡುವುದು ಏನೂ ಇಲ್ಲ. ಅದು ಇವತ್ತೇ ಮುಕ್ತಾಯವಾಗುತ್ತದೆ. ಇವತ್ತು ಏನು ಅವಿಶ್ವಾಸ ನಿರ್ಣಯ ತಾವು ಮಂಡಿಸಿದ್ದೀರಿ, ಅದು ಸಂಪೂರ್ಣವಾಗಿ ವಿಫಲವಾಗುತ್ತದೆ ಎನ್ನುವ ಮಾತನ್ನು ಹೇಳಿ ಇದು ಒಂದು ಕ್ರಿಯಾತ್ಮಕವಾದ ಚಟುವಟಿಕೆಯಿಂದ ಕೂಡಿದ, ಜನಗಳಿಗೆ ಸದಾ ಕಾಲ ಜವಾಬ್ದಾರಿಯಿಂದ ಇರುವ ಸರ್ಕಾರ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಭಿನ್ನಾಭಿಪ್ರಾಯ ಅಥವಾ ಕನ್‌ಫ್ರಾಂಟೇಷನ್ ಎನ್ನತಕ್ಕಂಥದ್ದು ಏನಾದರೂ ಇದ್ದರೆ ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲೂ ಕೂಡ ಇತ್ತು, ಆಗ ನಾಯಕರು ನಾಯಕರ ಮಧ್ಯೆ ಇದ್ದು ಕನ್‌ಫ್ರಂಟೇಷನ್ ಆಗಿತ್ತು, ಆದರೆ ನಿಮ್ಮಲ್ಲಿರುವ ಕನ್‌ಫ್ರಂಟೇಷನ್ ರಾಜ್ಯ ಮತ್ತು ಕೇಂದ್ರ ಹೈಕಮಾಂಡ್ ಮಧ್ಯೆ ಇರತಕ್ಕಂಥದ್ದು. ಆ ರೀತಿ ಇರುವುದರಿಂದ....

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ರಾಜ್ಯದ ಜನತಾದಳ ಇದೇ ಹೈಕಮಾಂಡ್. ನಿಮಗೆ ಹೈಕಮಾಂಡ್ ಇದೆ, ನಾನು ಅಕಸ್ಮಾತ್ ಹೇಳಿದರೆ ವೈಯಕ್ತಿಕವಾಗಿ ಎಷ್ಟು ಸಿಟ್ಟು ಆಗುತ್ತೀರಿ, ನಿಮ್ಮ ಇತಿಹಾಸದಲ್ಲಿ ಲಕೋಟೆ ಮುಖ್ಯಮಂತ್ರಿಗಳಾಗುತ್ತಾರೆ. ಅಲ್ಲಿ ಅವರು ಏನೋ ಆಯ್ಕೆ ಮಾಡಿ ಕೊಟ್ಟಿರುತ್ತಾರೆ. ಬಹುಮತದಿಂದ ನಿಮ್ಮ ಇಚ್ಛೆಯಿಂದ ಆಗಿರತಕ್ಕಂಥದ್ದು ಅಲ್ಲ. ನೀವು ಏನು ಹಿರಿಯರ ಮಾತಿಗೆ ಬೆಲೆ ಕೊಡುತ್ತೀರಿ, ಆ ಶಿಸ್ತನ್ನು ನಾವೂ ಕಲಿಯಬೇಕಾಗುತ್ತದೆ. ನಾವು ಯಾವುದೇ ಕಾರಣದಿಂದ ಪಕ್ಷವನ್ನು ಉಳಿಸಬೇಕಾಗುತ್ತದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಯಾರೆಂದು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ಉತ್ತರ ಪ್ರದೇಶದಲ್ಲಿ ರಾತ್ರೋ ರಾತ್ರಿ ಒಬ್ಬ ಮುಖ್ಯ ಮಂತ್ರಿಯನ್ನು ಈ ರೀತಿಯಾಗಿ ಬದಲಾಯಿಸಿದ ಉದಾಹರಣೆಯನ್ನು ತಾವು ಇನ್ನೂ ನೋಡಬಹುದು.

+ ಶ್ರೀ ಕೆ.ಎನ್.ನಾಗೇಗೌಡ(ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು): ಮಾನ್ಯ ಸಭಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ತಂದಂತಹ ಅವಿಶ್ವಾಸ ನಿರ್ಣಯದ ಬಗ್ಗೆ ನಮ್ಮ ಹಿರಿಯರಾದ ಪ್ರಕಾಶ್‌ರವರು ಬಹಳ ವಿಶ್ಲೇಷಣೆ ಮಾಡಿದ್ದಾರೆ. ಬಹುಶಃ ಆರು ದಿವಸಗಳ ಕಾಲ ಈ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾದುದು ಇದೇ ಪ್ರಥಮ ಎಂದು ನಾನು ಅಂದುಕೊಂಡಿದ್ದೇನೆ. ಹಾಗೆಯೇ 10ನೇ ವಿಧಾನ ಸಭೆಯಲ್ಲಿ ಮೂರು ಸಾರಿ ಅವಿಶ್ವಾಸ ನಿರ್ಣಯ, ಒಂದು ಸಾರಿ ಅವಿಶ್ವಾಸ ನಿರ್ಣಯ ಮಂಡಿಸಿದ್ದೂ ಕೂಡ ಇತಿಹಾಸದ ದಾಖಲೆಯಲ್ಲಿ ಉಳಿದಿದೆ. ಪಾರ್ಲಿಮೆಂಟಿನ ಲೋಕಸಭೆಯ ಎರಡು-ಮೂರು ಜನರಲ್ ಸೆಕ್ರೆಟರಿಗಳ ವಿಚಾರದ ಬಗ್ಗೆ ಮಾತನಾಡುತ್ತೇನೆಂದು ತಮ್ಮಲ್ಲಿ ಕೇಳಿದೆ, ಅದಕ್ಕೆ ತಾವು ಅನುಮತಿ ಕೊಡಲಿಲ್ಲ. ಅದು ನಾನು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಈ ಅಸ್ತ್ರವನ್ನು ಬಳಸತಕ್ಕಂತಹ ಕಾಲದಲ್ಲಿ ಸಾರ್ವಜನಿಕ ಮಹತ್ವ ಉಳ್ಳಂತಹ ಒಂದೇ ಒಂದು ಮುಖ್ಯವಾದ ವಿಷಯವಾದರೂ ಬೇಕು. ಈ 26, 30 ಮತ್ತು 40 ವಿಚಾರಗಳನ್ನು ಕ್ರೋಢೀಕರಿಸಿಕೊಂಡು ನೀವು ರಾಜೀನಾಮೆ ಕೊಡಿ, ನೀವು ಇಲ್ಲಿರುವುದಕ್ಕೆ ಯೋಗ್ಯರಲ್ಲ ಕುಡಿಯುವ ನೀರು ಕೊಟ್ಟಿಲ್ಲ, ಪವರ್ ಕೊಟ್ಟಿಲ್ಲ, ಅನ್ನುವುದಕ್ಕಲ್ಲ ಅವಿಶ್ವಾಸ ನಿರ್ಣಯ, ಅವಿಶ್ವಾಸ ನಿರ್ಣಯದ ಮಹತ್ವವನ್ನು ಪಾರ್ಲಿಮೆಂಟಿನ ಪರಂಪರೆಯಲ್ಲಿ ಬೆಳೆದಂತಹ ಜನರು ವಿಶ್ಲೇಷಣೆ ಮಾಡಿದರು,

ಇಂದಿರಾಗಾಂಧಿಯವರ ವಿಚಾರವನ್ನು ಪ್ರಕಾಶ್‌ರವರು ಇಲ್ಲಿ ಹೇಳಿದರು. ಅಂತಹ ಹತ್ತಾರು ನಿದರ್ಶನಗಳನ್ನು ನಾವು ಇಲ್ಲಿ ಕೊಡಬಹುದು. ಆದರೆ ಇದು ಹಾಸ್ಯಾಸ್ಪದ ಆಗಬಾರದು. ಯಾವ ಅವಿಶ್ವಾಸ ನಿರ್ಣಯವನ್ನು ತರುತ್ತೀರಿ, ಅದು ಹಾಸ್ಯಾಸ್ಪದ ಆಗಬಾರದು. ಏಕೆಂದರೆ, ಅತ್ಯಂತ ಗಂಭೀರವಾದ ಎಲ್ಲಾ ಕಾರ್ಯಕ್ರಮಗಳ ಚರ್ಚೆಯನ್ನು ಬದಿಗೊತ್ತಿ ಆರು ದಿವಸಗಳ ಕಾಲ ನಾವು ಚರ್ಚೆ ಮಾಡುವಾಗ ಅದರ ರಾಜಕೀಯ ಮಹತ್ವ, ಅದರ ಆರ್ಥಿಕ ಮಹತ್ವ ಅದು ಒಂದು ಸಾಮಾಜಿಕ ಮಹತ್ವ ಎಷ್ಟಿರಬೇಕು ಅನ್ನತಕ್ಕಂಥದ್ದನ್ನು ಅವಿಶ್ವಾಸ ನಿರ್ಣಯ ತಂದವರು ಸರಿಯಾಗಿ ಗ್ರಹಿಸಲಿಲ್ಲವೆಂದು ನನಗನ್ನಿಸುತ್ತದೆ. ಭಾರತ ದೇಶದ ರಾಜಕೀಯ ಪಕ್ಷಗಳಲ್ಲಿ ಯಾವ ಪಕ್ಷದಲ್ಲಿ ಒಡಕಿಲ್ಲ, ಯಾವ ಪಕ್ಷದಲ್ಲಿ ಭಿನ್ನಾಭಿಪ್ರಾಯವಿಲ್ಲ ಎಂಬುದನ್ನು ಈ ನಿರ್ಣಯವನ್ನು ಮಂಡಿಸಿರತಕ್ಕಂತಹ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಯಡಿಯೂರಪ್ಪನವರು ಹೇಳಿದರೆ, ಬಹಳ ಸಂತೋಷ. ಕರ್ನಾಟಕ ರಾಜಕೀಯದಲ್ಲಿ ಒಳ್ಳೆಯ ಪರಂಪರೆಯನ್ನು ಹಾಕಿಕೊಂಡು ಬಂದಂತಹ ರಾಜ್ಯ. ಬಹಳ ವರ್ಷಗಳ ಕಾಲ ನಾನೂ ಕಾಂಗ್ರೆಸ್‌ನಲ್ಲಿದ್ದೆ. ತದ ನಂತರ ರಾಜಕೀಯ ಪಕ್ಷಗಳು ಆಳುವುದೇ, ಇವತ್ತು ಜನತಾದಳದಲ್ಲಿ ಭಿನ್ನಾಭಿಪ್ರಾಯಗಳಿವೆ, ಆ ಭಿನ್ನಾಭಿಪ್ರಾಯ ಇದೆ ಎಂದು ಪತ್ರಿಕೆಗಳಲ್ಲಿ ಬಂದ ಒಂದೇ ಒಂದು ಕಾರಣಕ್ಕೋಸ್ಕರ ಇವತ್ತು ಅವಿಶ್ವಾಸ ನಿರ್ಣಯ ತಂದಿರತಕ್ಕಂಥದ್ದು ನೀವು. ಇನ್ನು ಬೇರೆ ಯಾವುದೇ ಕಾರಣವಿಲ್ಲ. ಆಡಳಿತಾತ್ಮಕವಾಗಿ ತಂದಿರತಕ್ಕಂತಹ ಅವಿಶ್ವಾಸ ನಿರ್ಣಯವಲ್ಲ ಇದು. ಇದು ರಾಜಕೀಯವಾಗಿ ತಂದಿರತಕ್ಕಂತಹ ನಿರ್ಣಯ. ಆ ರಾಜಕೀಯವಾಗಿ ತಂದಿರತಕ್ಕಂತಹ ನಿರ್ಣಯಕ್ಕೆ ನಿಮಗೆ ನೀವು ತಂದಿರತಕ್ಕಂತಹ ರಾಜಕೀಯ ಪಕ್ಷಗಳಿಗೆ ನಿಮ್ಮ ನಿಮ್ಮ ಹಿನ್ನಲೆಯನ್ನೂ ನೋಡಿಕೊಳ್ಳುವುದು ಸೂಕ್ತ. ಒಂದು ಪಕ್ಷ ನಾನು ದೇವರಾಜ ಅರಸ್‌ರವರನ್ನು 1972ರಿಂದ ನೋಡುತ್ತಾ ಬಂದಿದ್ದೇನೆ. ದೇವರಾಜ ಅರಸ್‌ರವರು 1972ರಲ್ಲಿ ಮುಖ್ಯಮಂತ್ರಿಯಾದರು, ಮುಖ್ಯಮಂತ್ರಿಯಾದ ನಾಲ್ಕೇ ತಿಂಗಳಲ್ಲಿ ಭಿನ್ನಾಭಿಪ್ರಾಯ ಪ್ರಾರಂಭವಾಯಿತು. ನಾನು ಸುಮಾರು 1996ರಿಂದ ದೇವರಾಜು ಅರಸ್‌ರವರನ್ನು ಬಲ್ಲೆ, ನಾಲ್ಕು ತಿಂಗಳಲ್ಲಿ ಸಿದ್ದವೀರಪ್ಪನವರು ಇನ್ನು ಅನೇಕ ಸ್ನೇಹಿತರು ಸನ್ಮಾನ್ಯ ಖರ್ಗೆಯವರು ಆಗ ಪ್ರೈಮರಿ ಎಜ್ಯುಕೇಷನ್ ಮಿನಿಸ್ಟರ್ ಆಗಿದ್ದರು. ಧರ್ಮ್‌ಸಿಂಗ್‌ರವರು ಆಗ ತಾನೇ ಬಂದಿದ್ದರು. ಈ ಹಿನ್ನೆಲೆ ಎಲ್ಲಾ ಗಮನಿಸಿದರೆ ಐದು ತಿಂಗಳಲ್ಲಿ ಭಿನ್ನಾಭಿಪ್ರಾಯ ಪ್ರಾರಂಭವಾಯಿತು. ಅದನ್ನು ಅವರು ಮರೆತರು. ತದನಂತರ ಮಾನ್ಯ ಇಂದಿರಾಗಾಂಧಿಯವರು ಬಂದು ಇದೇ ಪ್ಯಾಲೇಸ್ ಒಳಗಡೆ ದೇವರಾಜು ಅರಸ್‌ರವರು ಕರೆದಂತಹ ಲೆಜಿಸ್ಲೇಚರ್ ಪಾರ್ಟಿಯಿಂದ ಹೊರ ಬಂದು ಒಬ್ಬರೇ ಕುಮಾರ ಕೃಪದಲ್ಲಿ, ಅವರೂ ಚಂದ್ರೇಗೌಡರು, ಎಫ್.ಎಮ್.ಖಾನ್ ಮತ್ತು ನಾನೂ ಕುಳಿತಿದ್ದನ್ನು ಇವರು ಮರೆತರು.

3 ಪಿ.ಎಂ

ರಾಜಕಾರಣದಲ್ಲಿ ಯಾವ ರೀತಿಯಲ್ಲಿ ಭಿನ್ನಾಭಿಪ್ರಾಯಗಳು ಬರುತ್ತವೆ ಎಂಬುದನ್ನು ಅವರು ಮರೆತರು. ಮುನಿಯಪ್ಪನವರು ಮಾತನಾಡುವಾಗ ದೇವೇಗೌಡರು ರೈಲ್ವೆ ಸ್ಟೇಷನ್‌ನಲ್ಲಿ ಭಾಷಣ ಮಾಡಿದರು ಎಂದರು. ಆದರೆ ರಾಜೀವ್ ಗಾಂಧಿಯವರು ಏರ್‌ಪೋರ್ಟ್‌ನಿಂದಲೇ ಅಂದಿನ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲರನ್ನು ತೆಗೆಯಿರಿ ಎಂದು ಹೇಳಿದ್ದನ್ನು ನೀವು ಮರೆತುಬಿಟ್ಟಿರಿ. ಇವೆಲ್ಲವನ್ನು ಮರೆತಿರುವ ನಿಮಗೆ ಜೆ.ಹೆಚ್.ಪಟೇಲ್ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತರುವ ನೈತಿಕ ಹಕ್ಕು ಇಲ್ಲ. ಇಂಥ ನಿರ್ಣಯವನ್ನು ತರುವಾಗ ರಾಜಕೀಯ ಪಕ್ಷಗಳಲ್ಲಿ ನೀವು ನಡೆದುಕೊಂಡು ಬಂದಿರುವ ದಾರಿಯನ್ನು ನೋಡಬೇಕಾಗಿತ್ತು. ಹಿಂದೆ ದೇವರಾಜಅರಸು ಮತ್ತು ಗುಂಡೂರಾಯರ ಸರ್ಕಾರ ಯಾವ ರೀತಿಯಲ್ಲಿ ಬದಲಾವಣೆಯಾಯಿತು ಎಂಬುದನ್ನು ಮಾನ್ಯ ಖರ್ಗೆಯವರು ಮರೆತರೆ? ಬಿ.ಜೆ.ಪಿ.ಯವರು ದೆಹಲಿ ಸರ್ಕಾರದಲ್ಲಿ ಮೂವರು ಮುಖಿಯಮಂತ್ರಿಗಳಾಗಿದ್ದನ್ನು ಮರೆತರೆ? ಅವಿಶ್ವಾಸ ನಿರ್ಣಯವನ್ನು ಮಂಡಿಸುವಂಥ ರಾಜಕೀಯ ಉದ್ದೇಶವನ್ನಿಟ್ಟುಕೊಂಡ ಇವರುಗಳು ಮೊದಲು ಇವರು ನಡೆದುಕೊಂಡು ಬಂದಿರುವ ದಾರಿಯನ್ನು ಮತ್ತು ರಾಷ್ಟ್ರೀಯ ಪಕ್ಷಗಳೊಳಗೆ ಕೆಲಸ ಮಾಡುತ್ತಿದ್ದೇವೆ ಎಂಬ ಹಿನ್ನೆಲೆಯನ್ನು ಮರೆತರು. ಇವೆಲ್ಲವನ್ನೂ ಮರೆತು ಹಾಸ್ಯಾಸ್ಪದವಾಗಿ ಇಂಥ ನಿರ್ಣಯವನ್ನು ತಂದ ಇವರನ್ನು ಕರ್ನಾಟಕದ ಜನರು ನಿಜವಾಗಿಯೂ ಕ್ಷಮಿಸುವುದಿಲ್ಲ. ಆದುದರಿಂದ ನಗೆಪಾಟಲು ನಿರ್ಣಯವಾಗಿದೆಯೆಂದು ನಾವು ರಾಜಕೀಯವಾಗಿ ಆಡಿದರೆ ಅವರು ಅನ್ಯಥಾ ಭಾವಿಸಬಾರದು. ಏಕೆಂದರೆ ಇವರು ಜವಾಬ್ದಾರಿಯರಿತು ಅವಿಶ್ವಾಸ ನಿರ್ಣಯವನ್ನು ಮಂಡಿಸುವ ಮುಂಚೆಯೇ ವಿಚಾರ ಮಾಡಬೇಕಾಗಿತ್ತು. ಏಕೆಂದರೆ ಇಂಥ ಮಹತ್ತರ ನಿರ್ಣಯವನ್ನು ಮಂಡಿಸುವುದಕ್ಕೆ ಇದು ಸರಿಯಾದ ಸಮಯವೂ ಅಲ್ಲ, ಸರಿಯಾದ ರಾಜಕೀಯ ಕಾರಣವೂ ಕೂಡ ಇಲ್ಲ, ನಿರ್ಧಿಷ್ಟವಾದ ಸಾರ್ವಜನಿಕ ಮಹತ್ವವೂ ಇದರಲ್ಲಿ ಇಲ್ಲ, ಈ ರೀತಿಯಲ್ಲಿ ಮಹತ್ತರ ಕಾರಣ ಯಾವುದೂ ಇಲ್ಲದಿರುವಂಥ ಸಮಯದಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳವರು ಅವಿಶ್ವಾಸ ನಿರ್ಣಯವನ್ನು ಮಂಡಿಸಿ ನಮಗೆ ಬುದ್ಧಿ ಹೇಳುವುದಕ್ಕೆ ಹೊರಟಿದ್ದಾರೆ. ಆ ಬುದ್ಧಿ ಏನೆಂದರೆ ನಮ್ಮ ಪಕ್ಷದವರೆಲ್ಲರನ್ನೂ ಒಟ್ಟಾಗಿ ಒಂದುಗೂಡಿರಿ ಎಂದು ಹೇಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಅಷ್ಟು ತಿಳುವಳಿಕೆ ಇಲ್ಲದ ಜನರು ಕರ್ನಾಟಕ ರಾಜ್ಯದಲ್ಲಿ ಇಲ್ಲ. ಆದುದರಿಂದ ನೀವು ತಂದಿರುವ ಅವಿಶ್ವಾಸ ನಿರ್ಣಯ ಹಾಸ್ಯಾಸ್ಪದ ನಿರ್ಣಯವಾಗಿದೆ. ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ನಾವೆಲ್ಲರೂ ರಾಜಕೀಯ ಪಕ್ಷಕ್ಕೆ ಸೇರಿದ ರಾಜಕಾರಣಿಗಳಾಗಿದ್ದೇವೆ. ನಿಯಮಾವಳಿಯಡಿಯಲ್ಲಿ ಕೆಲಸ ಮಾಡುತ್ತೇವೆ. We all politicians. Political parties, Council of Ministers under the Constitution ಇಂಥ ಒಂದು ಹಿನ್ನೆಲೆಯೊಳಗೆ ಮಾತನಾಡುವಾಗ ರಾಜಕೀಯವಾಗಿ ನಾಲ್ಕು ಮಾತುಗಳನ್ನು ಆಡದಿದ್ದರೆ ತಪ್ಪಾಗುತ್ತದೆ. ಆ ರೀತಿ

ಹೇಳದಿದ್ದರೆ ನಾವು ತಂದಿರುವ ಅವಿಶ್ವಾಸ ನಿರ್ಣಯ ಸರಿಯಾಗಿದೆ ಎನ್ನುವ ಭಾವನೆಯನ್ನು ವಿರೋಧ ಪಕ್ಷದವರು ತಳೆಯುತ್ತಾರೆ. ಆ ರೀತಿ ಭಾವಿಸಿಕೊಂಡರೆ ತಪ್ಪಾಗುತ್ತದೆಯಾದ ಕಾರಣ ಕಾಂಗ್ರೆಸ್‌ನವರು ತಮ್ಮ ಬೆನ್ನಹಿಂದೆ ನಡೆದಿರುವ ಬದಲಾವಣೆಗಳನ್ನು ಗುರುತಿಸಿಕೊಳ್ಳಬೇಕಾಗಿತ್ತು. 1972ರಲ್ಲಿ ಮತ್ತು 1980ರಲ್ಲಿ ಏನಾಯಿತು, 1989ರಲ್ಲಿ ಏನಾಯಿತು ಮತ್ತು ತದನಂತರ ಬಂಗಾರಪ್ಪನವರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆದದ್ದು, ತದನಂತರ ವೀರಪ್ಪಮೊಯ್ಲಿಯವರನ್ನು ತೆಗೆಯುವುದಕ್ಕೆ ಪ್ರಯತ್ನಪಟ್ಟಿದ್ದು, ಹೀಗೆ ಈ ಎಲ್ಲಾ ಪ್ರಯತ್ನಗಳನ್ನು ಕಾಂಗ್ರೆಸ್‌ನವರು ನೆನಸಿಕೊಂಡಾಗ ನಿಜವಾಗಿಯೂ ಇಂಥ ಅವಿಶ್ವಾಸ ನಿರ್ಣಯವನ್ನು ಕಾಂಗ್ರೆಸ್‌ನವರು ತರಬಾರದು. ಇಂಥ ನಿರ್ಣಯವನ್ನು ತರುವುದಕ್ಕೆ ಮಹತ್ವ ವಿಚಾರವೂ ಇರಲಿಲ್ಲ ಎನ್ನುವ ಸೂಕ್ಷ್ಮವಾದ ವಿಚಾರವನ್ನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ನಾಗೇಗೌಡರೆ, ಕರೆಕ್ಟಾಗಿ ತಾವು ಇದ್ದೀರಾ? ಒಂದು ಗಾದೆ ಮಾತನ್ನು ಹೇಳುತ್ತಾರೆ. ಅದೇನೆಂದರೆ, ಲೈಫ್‌ಲಾಂಗ್ ಆಗಿ ಕೊನೆಗೆ ಜೋಗಿತ್ತಿ ಆಗಿದ್ದಳಂತೆ. ಆ ರೀತಿ ನೀವು ಬೇರೆಯವರಿಗೆ ಬುದ್ಧಿ ಹೇಳುವುದಕ್ಕೆ ಹೋಗಬೇಡಿ. ನೀವು ಆಲಮಟ್ಟಿ ಮತ್ತು ಕಾವೇರಿ ಬಗ್ಗೆ ಏನು ಹೇಳಬೇಕೋ ಅದನ್ನು ಹೇಳಿ. ಪೊಲಿಟಿಕಲ್ ಬ್ಯಾಗ್ರೌಂಡ್ ಬಗ್ಗೆ ಅವರು ಹೇಳಲಿ. ನಾವು ಹೇಳಿದ್ದೇವೆ. ಅವರು ಹೇಳುವುದಕ್ಕೂ ನಾವು ಮುಂದೆ ಉತ್ತರ ಕೊಡುತ್ತೇವೆ.

ಶ್ರೀ ಕೆ.ಎನ್.ನಾಗೇಗೌಡ: ಖರ್ಗೆಯವರೆ, ನಾನೇನೂ ಈ ಮನೆಯ ಸದಸ್ಯನಲ್ಲವೆ? ನೀವು ತಪ್ಪು ಮಾಡಿರುವುದನ್ನು ಹೇಳುವುದಕ್ಕೆ ನಮಗೂ ಹಕ್ಕಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾರು ತಪ್ಪು ಮಾಡಿದ್ದಾರೆ ಎಂಬುದನ್ನು ಜನರು ನಿರ್ಣಯ ಮಾಡುತ್ತಾರೆ. ನಾಳೆಯೇ ಮಾಡದಿದ್ದರೂ ಕೂಡ ಇನ್ನೆಂಟು ತಿಂಗಳಾದ ಮೇಲಾದರೂ ಮಾಡೇ ಮಾಡುತ್ತಾರೆ. ಅದನ್ನು ಈಗಾಗಲೇ ಪಾರ್ಲಿಮೆಂಟ್ ಚುನಾವಣೆಯಲ್ಲಿ ಮಾಡಿತೋರಿಸಿದ್ದಾರೆ. ಎ.ಪಿ.ಎಂ.ಸಿ. ಚುನಾವಣೆಯಲ್ಲಿ ಮಾಡಿ ತೋರಿಸಿದ್ದಾರೆ. ಅನೇಕ ಬೈ-ಎಲೆಕ್ಷನ್‌ನಲ್ಲೂ ತೋರಿಸಿದ್ದಾರೆ. ಇನ್ನೂ ಎಷ್ಟು ಜನರಿಂದ ಸಪೋರ್ಟ್‌ನ್ನು ನೀವು ಕೇಳುತ್ತಿದ್ದೀರಿ? ಇನ್ನೂ ನಿಮ್ಮ ಕಡೆ ಜನಾಭಿಪ್ರಾಯವಿದೆಯೇ?

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರೆ, ಇಲ್ಲಿಯೇ ಮಾನ್ಯ ಶರಣಪ್ಪನವರು ಮತ್ತು ಅಮರೇಗೌಡರವರು ಇದ್ದಾರೆ. ಮೊನ್ನೆ ಮೊನ್ನೆ ನಡೆದ ತಾಲ್ಲೂಕು ಪಂಚಾಯತ್ ಉಪ ಚುನಾವಣೆಯಲ್ಲಿ ಜನತಾದಳದವರು ಅದ್ಭುತವಾದ ಜಯವನ್ನು ಗಳಿಸಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಉಪ ಚುನಾವಣೆಗಳಾಗಿವೆ ಎಷ್ಟು ಕಡೆ ನೀವು ಗೆದ್ದಿದ್ದೀರಿ ಎಂಬುದನ್ನು ಹೇಳಿ. ಒಟ್ಟಾರೆ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ಪಂಚಾಯತ್ ಚುನಾವಣೆಗಳು

ಇದುವರೆಗೆ ಎಷ್ಟಾಗಿವೆ, ಒಟ್ಟು ಎಷ್ಟು ಸೀಟುಗಳಿಗೆ ಚುನಾವಣೆಯಾಗಿದೆ ಮತ್ತು ನೀವು ಅದರಲ್ಲಿ ಎಷ್ಟು ಸೀಟ್‌ಗಳನ್ನು ಗೆದ್ದಿದ್ದೀರಿ ಎಂಬುದನ್ನು ಹೇಳಿ. ನಿಮಗೆ ಬಹುಮತವಿದ್ದರೆ ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರೆ, ಒಟ್ಟು 175 ತಾಲ್ಲೂಕು ಪಂಚಾಯತಿಗಳಲ್ಲಿ 136 ತಾಲ್ಲೂಕು ಪಂಚಾಯತಿಗಳು ಜನತಾದಳದವರ ಅಧಿಕಾರದಲ್ಲಿವೆ. ಆದರೆ ಈಗೇನು ಚರ್ಚೆ ನಡೆಯುತ್ತಿದೆ ಆ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ಲಿಂಗಸಗೂರು ಮತ್ತು ಕುಷ್ಠಗಿ ತಾಲ್ಲೂಕಿಗೆ ನಡೆದಂಥ ಉಪ ಚುನಾವಣೆಯಲ್ಲಿ ಎರಡೂ ಕಡೆಗಳಲ್ಲಿ ಜನತಾದಳದ ಅಭ್ಯರ್ಥಿಗಳು ಪ್ರಚಂಡ ವಿಜಯವನ್ನು ಸಾಧಿಸಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇವರಿಬ್ಬರ ಮಾತುಗಳನ್ನು ಕೇಳಿ ನಗಬೇಕೋ ಅಥವಾ ಅಳಬೇಕೋ ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಇತ್ತೀಚೆಗೆ ಜನಗಳು ಕೊಟ್ಟಿರುವ ತೀರ್ಮಾನದ ಪ್ರಕಾರ ಲೋಕಸಭೆಯ 28 ಸ್ಥಾನಗಳಲ್ಲಿ 16 ಸ್ಥಾನಗಳನ್ನು ಪಡೆದ ಬಿ.ಜೆ.ಪಿ. ಮತ್ತು ಲೋಕಶಕ್ತಿ ಪಕ್ಷಗಳವರಾದ ನಾವುಗಳು ಈ ಕಡೆ ಕುಳಿತಿದ್ದೇವೆ. ನಾವು ಪ್ರಥಮ ಸ್ಥಾನಲ್ಲಿದ್ದೇವೆ. ಆದುದರಿಂದ ಜನಗಳು ಯಾವ ತೀರ್ಮಾನ ಮಾಡಬೇಕಾಗಿತ್ತೋ ಅದನ್ನೇ ಮಾಡಿದ್ದಾರೆ. ಇನ್ನು ಮುಂದೆಯೂ ಕೂಡ ಏನು ತೀರ್ಮಾನ ತೆಗೆದುಕೊಳ್ಳಬೇಕೆಂದು ಈಗಾಗಲೇ ನಿಶ್ಚಯ ಕೂಡ ಮಾಡಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಚುನಾವಣೆಗಳ ಬಗ್ಗೆ ಮಾತನಾಡಲಿಲ್ಲ. ನಿಯಮಾವಳಿಗಳಲ್ಲಿ ಯಾವ ನಿಯಮಗಳಿವೆ ಅದನ್ನು ನೀವು ಯಾವ ರೀತಿಯಲ್ಲಿ ಬೆಳೆಸಿದ್ದೀರಿ ಎಂಬ ಬಗ್ಗೆ ಹೇಳಿದೆ. ಚುನಾವಣೆ ಬಗ್ಗೆ, ಚುನಾವಣೆ ಫಲಿತಾಂಶಗಳ ಬಗ್ಗೆ ನಾನು ಮಾತನಾಡಲಿಲ್ಲ. ನೀವು ನಮ್ಮ ಸದನದ ನಿಯಮವನ್ನು ಹಾಸ್ಯಾಸ್ಪದವಾಗಿ ಯಾವ ರೀತಿಯಲ್ಲಿ ಬಳಸಿಕೊಂಡಿದ್ದೀರಿ ಎಂಬುದಕ್ಕೆ ನಾನು ಉದಾಹರಣೆಗಳನ್ನು ಕೊಟ್ಟೆ ವಿನಹ ಚುನಾವಣೆಗಳ ಬಗ್ಗೆ ನಾನು ಪ್ರಸ್ತಾಪ ಮಾಡಲಿಲ್ಲ. ಇನ್ನು ಖರ್ಗೆಯವರು ನನಗೆ ಕಾವೇರಿ ಮತ್ತು ಆಲಮಟ್ಟಿ ಬಗ್ಗೆ ಮಾತನಾಡಿರಿ ಎಂದು ಹೇಳಿದರು. ನಾನು ಕಾವೇರಿ ವಿಚಾರವಾಗಿ ಒಂದೆರಡು ಮಾತುಗಳಲ್ಲಿ ಹೇಳಲಿಚ್ಛಿಸುತ್ತೇನೆ. ಮಾನ್ಯ ಡಿ.ಆರ್.ಪಾಟೀಲ್‌ರವರು ಮಾತನಾಡುವಾಗ ನೀವು ತೆಗೆದುಕೊಂಡ ತೀರ್ಮಾನದಿಂದ ಏನು ಅನುಕೂಲಗಳಾಯಿತು ಎಂದರು. ಅಧ್ಯಕ್ಷರೆ, ಎಲ್ಲರಿಗೂ ತಿಳಿದಿರುವ ಹಾಗೆ ತಮಿಳ್ನಾಡಿನವರು ಕಾವೇರಿ ಬಗ್ಗೆ ಸುಪ್ರೀಂಕೋರ್ಟ್‌ಗೆ ಮನವಿ ಕೊಟ್ಟಮೇಲೆ 1992 ರಿಂದ 1998ರವರೆಗೆ ಅಲ್ಲಿ ಈ ವ್ಯಾಜ್ಯವಿತ್ತು. ಇದನ್ನು ಅವರು ತಿಳಿದುಕೊಳ್ಳಬೇಕು. ಮಾನ್ಯ ವೀರಪ್ಪಮೊಯ್ಲಿಯವರು ಭಾಷಣ ಮಾಡುತ್ತಾ ನಾವು ನಮ್ಮ ಕಾಲದಲ್ಲಿ ಇಂಟರೀಮ್ ಅವಾರ್ಡ್‌ನ್ನು ಒಪ್ಪಿಕೊಳ್ಳಲಿಲ್ಲವೆಂದು ಹೇಳಿದರು. ಆದರೆ ಈಗ ಅವರು ಸದನದಲ್ಲಿ ಹಾಜರಿಲ್ಲ. ನಾನು ಈಗ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆ್ಯಕ್ಟ್ ಪ್ರತಿಯನ್ನು ತಂದಿದ್ದೇನೆ. ಅದರಲ್ಲಿ ಹೇಳಿರುವಂತೆ

ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆ್ಯಕ್ಟ್ ಪ್ರಕಾರ, ಅಂದು ಮಾನ್ಯ ಜಯಲಲಿತಾರವರು ಉಪವಾಸ ಸತ್ಯಾಗ್ರವನ್ನು ಕುಳಿತಿದ್ದಾಗ, ಮಾನ್ಯ ಶುಕ್ಲಾರವರು ಇಲ್ಲಿಗೆ ಬಂದಾಗ, ನಾವು ಆಲ್ ಪಾರ್ಟಿ ಡೆಲಿಗೇಷನ್ ದೆಹಲಿಗೆ ಹೋಗಿ ಪಿ.ವಿ.ನರಸಿಂಹರಾಯರಿಗೆ ಕಾವೇರಿ ವಿಚಾರದಲ್ಲಿ ನೋಟಿಫಿಕೇಷನ್ ಮಾಡಬೇಡಿ ಎಂದೆವು. ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಖರ್ಗೆಯವರಿಗೆ ಈ ವಿಚಾರ ಜ್ಞಾಪಕವಿರಬಹುದು. ಆಲ್ ಪಾರ್ಟಿ ಡೆಲಿಗೇಷನ್ ದೆಹಲಿಗೆ ಹೋಗಿ ನೋಟಿಫಿಕೇಷನ್ ಮಾಡಬೇಡಿ ಎಂದು ಹೇಳಿ ಬಂದರೂ ಕೂಡ ಎರಡ್ಮೂರು ದಿವಸಗಳಲ್ಲಿಯೇ ನೋಟಿಫಿಕೇಷನ್ ಮಾಡಿಬಿಟ್ಟರು. ವಾಟಾಳ್‌ರವರಿಗೂ ಗೊತ್ತಿರಬಹುದು. ಆ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆ್ಯಕ್ಟ್ 7ರಲ್ಲಿ ಸ್ಪಷ್ಟವಾಗಿ ಏನು ಹೇಳಲಾಗಿದೆಯೆಂದರೆ ಅದು ಅಕ್ಸೆಪ್ಟ್ ಎನ್ನುವ ಮಾತನ್ನು ಹೇಳಿದ್ದಾರೆ. ಒಂದು ಬಾರಿ ನೋಟಿಫಿಕೇಷನ್ ಆದಮೇಲೆ ಅದರ ವ್ಯಾಲಿಡಿಟಿ ಏನು ಎನ್ನುವುದನ್ನು ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅದಾದಮೇಲೆ ನಾವು ಅನೇಕ ವಿಚಾರಗಳನ್ನು ಟ್ರಿಬ್ಯುನಲ್ ಮುಂದೆ ವಾದ ಮಾಡಿಕೊಂಡು ಬಂದಿದ್ದೇವೆ. ಅದಾದಮೇಲೆ ಪುನಃ ಸ್ಕೀಮ್ ಮಾಡಬೇಕು ಎನ್ನುವ ವಿಚಾರ ಬಂದಾಗ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಚೀಫ್ ಜಸ್ಟೀಸ್ ಆಫ್ ಸುಪ್ರೀಂಕೋರ್ಟ್‌ನವರು ಕೇಂದ್ರ ಸರ್ಕಾರಕ್ಕೆ ಸ್ಕೀಮ್ ಮಾಡುವ ಬಗ್ಗೆ ಅಂತಿಮವಾದಂಥ ಸೂಚನೆಯನ್ನು ಕೊಟ್ಟರು. ಆಗ ಕೇಂದ್ರ ಸರ್ಕಾರ ನಮ್ಮೆಲ್ಲರನ್ನೂ ಕರೆಸಿ ಪ್ರಾಧಿಕಾರ ಮಾಡುವ ಬಗ್ಗೆ ಚರ್ಚೆ ಮಾಡಿತು. ಆಗ ಖರ್ಗೆಯವರ ವಿದೇಶ ಪ್ರವಾಸದಲ್ಲಿದ್ದರು. ಯಡಿಯೂರಪ್ಪನವರು ಹಾಜರಿರಲಿಲ್ಲ. ಆ ಸಭೆಯಲ್ಲಿದ್ದ ರೆಕಾರ್ಡ್ಸ್‌ಗಳನ್ನೆಲ್ಲಾ ಇಲ್ಲಿಗೆ ತಂದಿದ್ದೇನೆ. ಅಂದಿನ ಸಭೆಯಲ್ಲಿ ಧರ್ಮಸಿಂಗ್‌ರವರು ಮತ್ತು ಜಯಚಂದ್ರರವರು ಇದ್ದರು. ಆ ಸಭೆಯಲ್ಲಿದ್ದ ಇವರ ಮುಂದೆ ಉಪ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಕಾವೇರಿ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ನಾಲ್ಕು ಅಂಶಯಗಳನ್ನು ಓದಿದರು. ಆಗ ಎಲ್ಲಾ ಪಕ್ಷದ ಮುಖಂಡರು ಅದನ್ನು ಒಪ್ಪಿಕೊಂಡರು. ಯಡಿಯೂರಪ್ಪನವರು ಆಗ ವಿದೇಶಪ್ರವಾಸದಲ್ಲಿದ್ದರು. ಆದರೆ ಹಿರಿಯರುಗಳಾದ ನಂಜೇಗೌಡರು, ರಾಜಶೇಖರಮೂರ್ತಿಯವರು ಕೃಷ್ಣರವರು, ಅನಂತಕುಮಾರ್‌ರವರು, ವೀರಪ್ಪಮೊಯಿಲಿಯವರು ಇದ್ದರು. ಕಾವೇರಿ ವಿಚಾರ ಬಂದಾಗ ಖರ್ಗೆಯವರು ವಿದೇಶದಲ್ಲಿದ್ದರು. ವಾಟಾಳ್‌ರವರು ಇರಲಿಲ್ಲ. ಯಾರ್‍ಯಾರು ಮುಖಂಡರು ಆ ಸಭೆಯಲ್ಲಿದ್ದರು. ಅವರ ಮುಂದೆ ಕಾವೇರಿ ಪ್ರಾಧಿಕಾರ ಮಾಡುವ ವಿಚಾರಕ್ಕೆ ಸಂಬಂಧಪಟ್ಟಂತೆ ಒಪ್ಪಿಗೆ ಪಡೆಯಲು ನಾಲ್ಕು ಅಂಶಗಳನ್ನು ಸಿದ್ಧರಾಮಯ್ಯನವರು ಓದಿದರು. ಇದರಲ್ಲಿ ಮೊದಲನೆ ಅಂಶವೆಂದರೆ There will be a Authority duly constituted comprising of Prime Minister and the Chief Ministers of the State concerned, ಇದಕ್ಕೆ ಎಲ್ಲರೂ ಒಪ್ಪಿಗೆಯನ್ನು ಕೊಟ್ಟರು. ಎರಡನೆಯ ಅಂಶದಲ್ಲಿ ಏನು ಹೇಳಿದರೆಂದರೆ, There

will be a scheme for giving effect of the Interim Award, ಅದಕ್ಕೂ ಕೂಡ ಎಲ್ಲಾ ನಾಯಕರುಗಳು ತಮ್ಮ ಒಪ್ಪಿಗೆಯನ್ನು ಕೊಟ್ಟರು. ಇನ್ನು ಮೂರನೆಯ ಅಂಶವಾದ under the Authority, there will be a Monitoring Committee, ಅದಕ್ಕೂ ಕೂಡ ಎಲ್ಲರೂ ತಮ್ಮ ಒಪ್ಪಿಗೆಯನ್ನು ಕೊಟ್ಟರು. Than monitoring Committee is only to assist the Authority. ಅದಕ್ಕೂ ಕೂಡ ಎಲ್ಲರೂ ಒಪ್ಪಿಕೊಂಡರು. ಈ ನಾಲ್ಕು ಅಂಶಗಳಿಗೂ ವಿರೋಧ ಪಕ್ಷದವರ ಒಪ್ಪಿಗೆಯನ್ನು ಪಡೆದ ಮೇಲೆಯೇ ನಾವು ಪ್ರಧಾನಿಗಳ ಬಳಿಗೆ ಹೋಗಿದ್ದು. ಪ್ರಧಾನಿಗಳ ಬಳಿಗೆ ಹೋಗಿ ನಾಳೆ ಬರುವುದಾಗಿ ಅನುಮತಿಯನ್ನು ಪಡೆದು ಬಂದೆವು. ಪ್ರಧಾನಿಗಳು ಕೂಡ ನಮಗೆ ನಾಳೆ ಬನ್ನಿ ಎಂದು ಕಾಲಾವಕಾಶವನ್ನು ಕೊಟ್ಟರು. ಮಾರನೇ ದಿನ ಬೆಳಿಗ್ಗೆ ಈ ನಾಲ್ಕು ಅಂಶಗಳಿಗೆ ಎಲ್ಲರ ಒಪ್ಪಿಗೆಯನ್ನು ಪಡೆದುಕೊಂಡೆವು. ಇದರ ಬಗ್ಗೆ ವೀರಪ್ಪ ಮೊಯ್ಲಿಯವರು ಹೊಳೆನರಸೀಪುರದಲ್ಲೋ ಅಥವಾ ಹಾಸನದಲ್ಲೋ ಸ್ವಾಗತ ಮಾಡಿದ್ದೇನೆಂದು ಸ್ಟೇಟ್‌ಮೆಂಟ್ ಕೂಡ ಮಾಡಿದರು. ಆದರೆ ಮಾರನೇ ದಿನ ಬೆಳಿಗ್ಗೆ ಇವರು ರಾಜಕೀಯ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಜನರು ಇದಕ್ಕೆ ಒಪ್ಪಲಿಲ್ಲ ಎಂದಾಗ ವಾಟಾಳ್ ನಾಗರಾಜ್‌ರವರು ಮೀಟಿಂಗ್ ಕರೆದರು, ಡಿ.ಬಿ.ಚಂದ್ರೇಗೌಡರು ಅದಕ್ಕೆ ಅಟೆಂಡ್ ಆದರು. ಇದಲ್ಲದೇ ಖರ್ಗೆಯವರು, ಧರ್ಮಸಿಂಗ್ ಮತ್ತು ಹೆಚ್.ಕೆ.ಪಾಟೀಲ್‌ರವರು ಮೀಟಿಂಗ್ ಕರೆದರು. ಮಂಡ್ಯದ ರೈತರೆಲ್ಲರನ್ನೂ ಸೇರಿಸಿಕೊಂಡು ಮೀಟಿಂಗ್ ಕರೆದರು. ಆದರೆ ಜನರು ಈ ನಾಲ್ಕು ಅಂಶಗಳನ್ನು ಒಪ್ಪಿಕೊಂಡರು. ಯಾವ ಮಾತುಕತೆಗೋಸ್ಕರ ಬಹಳ ವರ್ಷಗಳಿಂದ ನಾವು ಕೇಳುತ್ತಿದ್ದೇವೋ ಅದಕ್ಕೆ ಫೋರಂ ಪ್ರಾರಂಭವಾಯಿತು. ನಮ್ಮಲ್ಲಿರುವ ಡಿಸ್ಪೂಟ್‌ಗಳನ್ನು ಸಾರ್ಟ್‌ಔಟ್ ಮಾಡಿಕೊಳ್ಳಲು ನಮ್ಮಲ್ಲಿರುವ ಡಿಫರೆನ್ಸ್‌ಸ್‌ಗಳನ್ನು ಸಾರ್ಟ್‌ಔಟ್ ಮಾಡಿಕೊಳ್ಳಲು ಒಂದು ಪ್ರಾಧಿಕಾರ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಯಿತು. ನಾವು ಮತ್ತು ವಿರೋಧ ಪಕ್ಷದವರಾದ ನೀವು ಕುಳಿತು ಮಾತನಾಡಿದಾಗ ಮಾನಿಟರಿಂಗ್ ಕಮಿಟಿಗೆ ಒಪ್ಪಿಕೊಂಡೆವು. ಎಲ್ಲಾ ರಿಸರ್ವಾಯರ್‌ಗಳನ್ನು ತೆಗೆದುಕೊಳ್ಳಬೇಕು ಎಂದು ಒರಿಜಿನಲ್ ಸ್ಕೀಮಿನಲ್ಲಿತ್ತು. ಆ ಪ್ರಶ್ನೆಯೇ ಇಲ್ಲಿ ಬರಲಿಲ್ಲ. ಆ ಕ್ಲಾಸ್ ಹೋಯಿತು. ಮಾನಿಟರಿಂಗ್ ಅಥಾರಿಟಿ ಸ್ಟ್ಯಾಚುಟರಿ ಅಥಾರಿಟಿ ಇರಕೂಡದೆಂದು ಮಾನ್ಯ ವೀರಪ್ಪ ಮೊಯ್ಲಿಯವರು ಹೇಳಿದರು. It will be a Assisting Body to the main Authority, ಅದನ್ನೂ ಒಪ್ಪಿಕೊಂಡರು. ತಮಿಳುನಾಡಿನವರು ಬಹಳ ವಾದ ಮಾಡಿದರು. ಆದರೆ ಅದನ್ನು ಒಪ್ಪಿಕೊಂಡರು. ಕೋರ್ಟ್‌ನಿಂದ ಹೊರಬಂದದ್ದು ಒಂದು ಸಾಧನೆ. ಒರಿಜಿನಲ್ ಸ್ಕೀಮಿನಲ್ಲಿ ಇದ್ದಂಥಾದ್ದು ಎರಡನೇ ಸಾಧನೆ. ಮಾನಿಟರಿಂಗ್ ಕಮಿಟಿಗೆ ಒಂದು ಸ್ಟ್ಯಾಚುಟರಿ ಬಾಡಿ ಇರಬೇಕು ಎಂದು ಲೀಗಲ್ ಆಗಿ ಏನಿತ್ತು ಅದು ಮೂರನೆಯ ಸಾಧನೆ. ಈ ಅಥಾರಿಟಿ ಡಿಸ್ಪೂಟ್ ಸಾರ್ಟ್‌ಔಟ್ ಮಾಡಿಕೊಳ್ಳಲು ಸಿಕ್ಕಿರತಕ್ಕಂಥ ಒಂದು ಫೋರಂ ಎನ್ನುವುದು ನಾಲ್ಕನೆಯ ಹಾಗೂ

ದೊಡ್ಡ ಸಾಧನೆ ಎಂದು ನಾನು ಭಾವಿಸುತ್ತೇನೆ. ಕಳೆದ ಮೀಟಿಂಗ್‌ನಲ್ಲಿ ಬಂದಂಥ ಲೀಗಲ್ ಆಗಿರತಕ್ಕಂಥ ಟೆಕ್ನಿಕಲ್ ಮ್ಯಾಟರ್ ಎಂದರೆ ಮೆಷರಿಂಗ್ ಪಾಯಿಂಟ್ ಬೆಳಗೊಂಡ್ಲು ಆಗಬೇಕೇ ಅಥವಾ ಮೆಟ್ಟೂರು ಆಗಬೇಕೇ ಎನ್ನುವುದು. ಮೆಷರ್‌ಮೆಂಟ್ ಬೆಳಗೊಂಡ್ಲುವಿನಲ್ಲಿ ಆಗಬೇಕೆಂದು ನಾವು ವಾದ ಮಾಡಿದಾಗ ತಮಿಳುನಾಡಿನವರು ಮೆಟ್ಟೂರಿನಲ್ಲಿ ಮಾಡಬೇಕೆಂದು ಹೇಳಿದರು. ಆಗ ನಮ್ಮ ಮುಖ್ಯಮಂತ್ರಿಯವರು, ನಾವು 205 ಟಿ.ಎಂ.ಸಿ.ನೀರನ್ನು ಬೆಳಗೊಂಡ್ಲುವಿನಿಂದ ಮೆಟ್ಟೂರಿಗೆ ಬಿಡುತ್ತೇವೆ, ಆದರೆ ತಮಿಳುನಾಡಿನವರು 200 ಟಿ.ಎಂ.ಸಿ. ಎಂದು ಹೇಳುತ್ತಾರೆ, ಅದನ್ನು ಒಪ್ಪುವುದು ಹೇಗೆ ಎನ್ನುವ ಒಂದು ಅಂಶವನ್ನು ಹೇಳಿದರು. ಕೂಡಲೇ ಪ್ರಧಾನ ಮಂತ್ರಿಯವರು ಮೆಥಡ್ ಅಂಡ್ ಮೆಷರ್‌ಮೆಂಟ್ ಯಾವುದೆಂದು ತೀರ್ಮಾನ ಮಾಡಲು ಪ್ರಧಾನ ಮಂತ್ರಿಯರಿಗೆ ಆಥರೈಸ್ ಮಾಡಿ ಎಂದರು, ಅದರಂತೆ ಮಾಡಿದೆವು. ಮೆಷರ್‌ಮೆಂಟ್ ಏರಿಯಾ ಯಾವುದಾಗಬೇಕು, ಮೆಷರ್‌ಮೆಂಟನ್ನು ಬೆಳಗೊಂಡ್ಲುವಿನಲ್ಲಿ ತೆಗೆದುಕೊಳ್ಳಬೇಕೇ ಅಥವಾ ಮೆಟ್ಟೂರಿನಲ್ಲಿ ತೆಗೆದುಕೊಳ್ಳಬೇಕೇ ಎನ್ನುವ ವಾದವಿದ್ದು ಈ ಬಗ್ಗೆ ಬಹಳ ವರ್ಷಗಳಿಂದ ಚರ್ಚೆಯಾಗುತ್ತಿತ್ತು. ಈಗ ಪ್ರಧಾನ ಮಂತ್ರಿಯವರು, ನಾನು ಮೆಥಡ್ ಅಂಡ್ ಮೆಷರ್‌ಮೆಂಟನ್ನು ತೀರ್ಮಾನ ಮಾಡುತ್ತೇನೆ ಎಂದು ಹೇಳಿದರೆ ನೀವು ನಂಬುವುದಿಲ್ಲವೇ? ಪ್ರಧಾನ ಮಂತ್ರಿಯವರು ಮಾಡುವುದು ಬೇಡ ಎಂದರೆ ಮತ್ತೆ ಯಾರು ಬೇಕು? ಯಾರೇ ಪ್ರಧಾನ ಮಂತ್ರಿಗಳಾಗಿರಲಿ, ಇವತ್ತು ವಾಜಪೇಯಿಯವರು ಇರಬಹುದು, ನಾಳೆ ಮತ್ತೊಬ್ಬರು ಬರಬಹುದು. ನಾನು ಅಧ್ಯಕ್ಷತೆ ವಹಿಸಿಕೊಂಡು, ನಾಲ್ಕು ರಾಜ್ಯದ ಮುಖ್ಯ ಮಂತ್ರಿಗಳನ್ನು ಕರೆಸಿಕೊಂಡು ಇಂಟರೀಮ್ ಅವಾರ್ಡ್‌ನಲ್ಲಿರತಕ್ಕಂಥ ಸಮಸ್ಯೆಗಳನ್ನು ಮತ್ತು ಭಿನ್ನಾಭಿಪ್ರಾಯನ್ನು ಸಾರ್ಟ್‌ಔಟ್ ಮಾಡುತ್ತೇನೆ ಎಂದು ಪ್ರಧಾನ ಮಂತ್ರಿಯವರು ಹೇಳಿದರೆ, ಅದಕ್ಕೆ ನಿಮಗೆ ನಂಬಿಕೆ ಇಲ್ಲವೆಂದರೆ ನಿಮಗೆ ಡೆಮಾಕ್ರಸಿಯಲ್ಲಿ ನಂಬಿಕೆ ಇಲ್ಲ. ಇಂಥ ವಿಚಾರಗಳನ್ನು ನೀವು ಒಪ್ಪಿಕೊಳ್ಳುವುದಿಲ್ಲ ಎಂದು ತೀರ್ಮಾನವಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರ, ಕಾವೇರಿ ವಿಚಾರದಲ್ಲಿ 90 ವರ್ಷಗಳಿಂದ ಇದ್ದಂಥ ವ್ಯಾಜ್ಯಕ್ಕೆ ಕದನ ವಿರಾಮವನ್ನು ಕೊಟ್ಟಿದೆ ಮತ್ತು ನಿಜವಾಗಿ ಕಷ್ಟದಲ್ಲಿರುವ ರೈತರು ಪ್ರಾಧಿಕಾರದ ಮುಂದೆ ಬರಬಹುದು ಎಂದು ಆಗಿರುವ ತಾತ್ವಿಕ ತೀರ್ಮಾನವೇ ಈ ಸರ್ಕಾರದ ದೊಡ್ಡ ಸಾಧನೆ. ಈ ಸಾಧನೆಗಾಗಿ ನಾವು ರಾಜೀನಾಮೆ ಕೊಟ್ಟು ಹೋಗಬೇಕೇ? ನಾವು ಆರ್ಡಿನೆನ್ಸ್ ಮಾಡಿ ಸುಪ್ರೀಂ ಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡೆವೇ? ಏತಕ್ಕಾಗಿ ನಾವು ರಾಜೀನಾಮೆ ಕೊಡಬೇಕು? ಇವತ್ತು ತಾವು ಕಾವೇರಿ ವಿಚಾರದಲ್ಲಿ ಬಹಿರಂಗವಾಗಿ ಎಲ್ಲಾ ಪ್ರಯತ್ನವನ್ನು ಮಾಡಿದಿರಿ. ಮಂಡ್ಯದಲ್ಲಿ ಪ್ರಯತ್ನ ಮಾಡಿದರು, ಬೆಂಗಳೂರಿನಲ್ಲಿ ಪ್ರಯತ್ನ ಮಾಡಿದರು, ಆದರೆ ಜನ ಅದಕ್ಕೆ ಬೆಂಬಲ ಕೊಡಲಿಲ್ಲ. ಎಲ್ಲಾ ಕಡೆ ಮೀಟಿಂಗ್ ಮಾಡಿದರು, ಎಲ್ಲಾ ಪ್ರಯತ್ನಗಳನ್ನು ಮಾಡಿದರು.

ಶ್ರೀ ಹೆಚ್.ಎನ್.ನಂಜೇಗೌಡ: ಆವತ್ತಿನ ಕಾಲದಲ್ಲಿ ಆರ್ಡಿನೆನ್ಸ್ ಮಾಡಿದ್ದು ಸರಿ. ಆದರೆ ಸಮಸ್ಯೆ ಬಂದಾಗ, ಆ ಸಮಸ್ಯೆಗೆ ತಕ್ಕ ಉತ್ತರವನ್ನು ಆ ಕಾಲದಲ್ಲಿ ನೀಡಬೇಕಾಗುತ್ತದೆ. ಇವತ್ತು ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರವಿದ್ದು, ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿರುವುದರಿಂದ ಇದು ಇಷ್ಟಕ್ಕೆ ಬಂದಿದೆ. ಇಲ್ಲದಿದ್ದರೆ ಇದು ಈ ಹಂತಕ್ಕೂ ಬರುತ್ತಿರಲಿಲ್ಲ. ಇದರಲ್ಲಿ ಮುಚ್ಚುಮರೆ ಏನಿಲ್ಲ. ಬಹುಶಃ ನರಸಿಂಹರಾಯರು ಇದ್ದಿದ್ದರೆ ಇನ್ನೂ ಎಳೆದಾಡುತ್ತಿದ್ದರು. ಬೇರೆಯವರು ಬಂದಿದ್ದರೆ ಈ ಮಾತುಕತೆಯೂ ಆಗುತ್ತಿತ್ತೋ, ಇಲ್ಲವೋ ಎನ್ನುವದೂ ಗೊತ್ತಿಲ್ಲ. ಆದ್ದರಿಂದ ಯಾರೂ ಬೆನ್ನು ತಟ್ಟಿಕೊಳ್ಳುವುದು ಬೇಡ. ಕೇಂದ್ರದಲ್ಲಿ ಸಹೃದಯತೆ ಇರತಕ್ಕಂಥ ಸರ್ಕಾರ ಇರುವುದರಿಂದ ಇದು ಆಯಿತು ಎಂದು ಹೇಳಬಹುದು.

ಶ್ರೀ ಕೆ.ಎನ್.ನಾಗೇಗೌಡ: ಆ ಪ್ರಾಧಿಕಾರ ಸೂಪರ್‌ವೈಸರಿ ಬಾಡಿ ಆಗುವುದಕ್ಕೆ ಬದಲಾಗಿ ಒಂದು ಡಿಸ್ಪ್ಯೂಟ್ ರಿಸಾಲ್ವಿಂಗ್ ಫೋರಂ ಆಯಿತು ಎನ್ನುವುದು ನಮ್ಮ ದೊಡ್ಡ ಸಾಧನೆ ಎನ್ನತಕ್ಕಂಥಾದ್ದನ್ನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆರ್ಡಿನೆನ್ಸ್ ಇಷ್ಯೂ ಮಾಡಿ ಸುಪ್ರೀಂ ಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡೆವೇ ಎಂದು ಹೇಳಿದರು. ನಾನು ಅವರನ್ನು ಕೇಳುತ್ತೇನೆ, ಆರ್ಡಿನೆನ್ಸ್ ಇಷ್ಯೂ ಮಾಡಬೇಕು, ಕೇಂದ್ರ ಸರ್ಕಾರದ ಪ್ರಪೋಸಲನ್ನು ಒಪ್ಪಬಾರದು ಎಂದು ರಾತ್ರಿ ಎರಡು ಗಂಟೆಯವರೆಗೂ ಕುಳಿತು ವಾದ ಮಾಡಿದವರು, ಇವತ್ತು ಇದನ್ನು ವಾದಿಸುತ್ತಿದ್ದಾರಲ್ಲಾ, ಇದಕ್ಕೆ ನನಗೆ ನಾಚಿಕೆಯಾಗಬೇಕೋ, ಅವರಿಗೆ ನಾಚಿಕೆಯಾಗಬೇಕೋ ಎನ್ನುವುದನ್ನು ನೀವೇ ಹೇಳಿ ಅಧ್ಯಕ್ಷರೇ.

ಶ್ರೀ ವಾಟಾಳ್ ನಾಗರಾಜ್: ಈ ಸದನವನ್ನು ತಪ್ಪುದಾರಿಗೆಳೆಯುತ್ತಿದ್ದೀರಿ.

ಶ್ರೀ ಡಿ.ಆರ್.ಪಾಟೀಲ್: ತಾವು ಪದೇ ಪದೇ, ಈ ಪ್ರಾಧಿಕಾರ ಡಿಸ್ಪ್ಯೂಟ್ ರಿಸಾಲ್ವ್ ಮಾಡಲು ಕಾನ್ಸ್ಟಿಟ್ಯೂಟ್ ಆಗಿದೆ ಎನ್ನುವಂಥ ಕಲ್ಪನೆಯನ್ನು ಜನರಿಗೆ ಕೊಡುತ್ತಿದ್ದೀರಿ. ಈ ಪ್ರಾಧಿಕಾರ ಡಿಸ್ಪ್ಯೂಟ್ ರಿಸಾಲ್ವ್ ಮಾಡಲು ಆಗಿದೆಯೋ ಅಥವಾ ಇಂಟರಿಮ್ ಅವಾರ್ಡನ್ನು ಇಂಪ್ಲಿಮೆಂಟ್ ಮಾಡಲು ಆಗಿದೆಯೋ ಎನ್ನುವುದನ್ನು ನಂಜೇಗೌಡರು ದಯವಿಟ್ಟು ಸ್ಪಷ್ಟವಾಗಿ ಹೇಳಲಿ. 11 ಲಕ್ಷ 20 ಸಾವಿರ ಎಕರೆಗೆ ನೀರಾವರಿಯನ್ನು ಸೀಮಿತಗೊಳಿಸಬೇಕು ಎಂದು ಆಗಿರುವ ಇಂಟರೀಮ್ ಅವಾರ್ಡನ್ನು ನಾವು ಒಪ್ಪಿಲ್ಲ ಎಂದು ನಾಗೇಗೌಡರು ಹೇಳುತ್ತಾರೆ. ಅದನ್ನು ಈ ಪ್ರಾಧಿಕಾರದಲ್ಲಿ ಒಪ್ಪಿದ್ದಾರೋ ಅಥವಾ ಒಪ್ಪಿಲ್ಲವೋ, ಒಪ್ಪಿಲ್ಲದಿದ್ದರೆ ಯಾವ ರೀತಿ ಕನ್‌ಕ್ಲೂಷನ್ ತೆಗೆದುಕೊಂಡಿರಿ, ಅದರ ಬಗ್ಗೆ ಏನು ಡಾಕ್ಯುಮೆಂಟ್ ಇದೆ ಎನ್ನುವುದರ ಬಗ್ಗೆ ದಯವಿಟ್ಟು ಬೆಳಕು ಚೆಲ್ಲಿದರೆ ನಮಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಕೆ.ಎನ್.ನಾಗೇಗೌಡ: ಆಗಲೇ ನಾನು ಹೇಳಿದೆ, ಆ ಪ್ರಾಧಿಕಾರ ಡಿಸ್ಪ್ಯೂಟ್

ರಿಸಾಲ್ವಿಂಗ್ ಬಾಡಿ ಎನ್ನತಕ್ಕಂಥಾದ್ದರಲ್ಲಿ ಯಾವುದೇ ಡಿಸ್ಪ್ಯೂಟ್ ಇಲ್ಲ. ಈಗಾಗಲೇ ಅದರ ಒಂದು ಸಭೆ ನಡೆದಿದ್ದು, ಆ ಸಭೆಯಲ್ಲಿ ಬಹಳ ಮಹತ್ವವಾದಂಥ ಒಂದು ವಿಚಾರ ಚರ್ಚೆಯಾಗಿದೆ. ಅದೇನೆಂದರೆ, ಬೆಳಗುಂಡ್ಲುವಿನಲ್ಲಿ ಮೆಷರ್‌ಮೆಂಟ್ ತೆಗೆದುಕೊಳ್ಳಬೇಕು ಎಂದು ನಾವು, ಮೆಟ್ಟೂರಿನಲ್ಲಿ ಮೆಷರ್‌ಮೆಂಟ್ ತೆಗೆದುಕೊಳ್ಳಬೇಕು ಎಂದು ತಮಿಳುನಾಡಿನವರು ಬಹಳ ವರ್ಷಗಳಿಂದ ವಾದ ಮಾಡುತ್ತಿದ್ದು, ಡಿಸ್ಪ್ಯೂಟ್ ಉಂಟಾಗಿತ್ತು. 16 ಟಿ.ಎಂ.ಸಿ. ನೀರನ್ನು ಜಾಸ್ತಿ ಬಿಟ್ಟಿದ್ದೇವೆ ಎಂದು ನಾವು ಹೇಳಿದರೆ, 8 ಟಿ.ಎಂ.ಸಿ. ಕಡಿಮೆ ಬಿಟ್ಟಿದ್ದಾರೆ ಎಂದು ತಮಿಳುನಾಡಿನವರು ಹೇಳುತ್ತಿದ್ದರು. ಮೆಷರಿಂಗ್ ಪಾಯಿಂಟ್ ಯಾವುದಾಗಬೇಕು ಎಂದು ಡಿಸ್ಪ್ಯೂಟ್ ಇರತಕ್ಕಂಥಾದ್ದರಲ್ಲಿ ಓಟಿಂಗ್ ಬೇಡ ಎಂದು ಹೇಳಿ ಅದನ್ನು ರಿಸಾಲ್ವ್ ಮಾಡುವುದಕ್ಕೆ ಪ್ರಧಾನ ಮಂತ್ರಿಯವರಿಗೆ ಅಧಿಕಾರ ಕೊಟ್ಟಿರುವುದು. It is only a dispute resolving forum. Again I am mentioning it is a legal word..... ಇನ್ನು ತುಮಕೂರಿನ ಹೇಮಾವತಿ ಯೋಜನೆಯ ಬಗ್ಗೆ ವೀರಪ್ಪ ಮೊಯ್ಲಿಯವರು ಬಹಳಷ್ಟು ಹೇಳಿದರು. ಆ ಭಾಗದಿಂದ ಬಂದಿರುವ ಕಾಂಗ್ರೆಸ್ ಸದಸ್ಯರಾದ ಮುದ್ದಹನುಮೇಗೌಡರು, ನಾರಾಯಣ್‌ರವರು ಮತ್ತು ಜಯಚಂದ್ರರವರು ಇಲ್ಲಿದ್ದಾರೆ. ತುಮಕೂರಿನ ಬುಗಡನಹಳಿ ಕೆರೆಯನ್ನು ನಾವು ಮಾಡಿದ್ದೇವೆ ಎಂದು ಹೇಳಿದರು. ಯಾರು ಮಾಡಿದ್ದಾರೆ ಎನ್ನುವುದನ್ನು ತಾವು ಮೂರು ಜನರೂ ನೋಡಿದ್ದೀರಿ. ನಾವು ಅಧಿಕಾರಕ್ಕೆ ಬಂದ ಮೇಲೆ 1995ರಿಂದ 1998ರವರೆಗೆ ನಾಲ್ಕು ವರ್ಷಗಳಲ್ಲಿ ತುಮಕೂರಿಗೆ ಸುಮಾರು 336 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. 180ರವರೆಗೆ ನಮ್ಮ ಸರ್ವೆ, ವಗ್ಗೈರೆ ಮತ್ತೊಂದನ್ನು ಮುಗಿಸಿದ್ದು, 120ರವರೆಗೆ ಲೈನಿಂಗನ್ನು ಬಿಟ್ಟು ಉಳಿದೆಲ್ಲಾ ಸಿ.ಡಿ.ವರ್ಕ್ಸ್ ಮುಗಿಸಿದ್ದು, ತುಮಕೂರಿಗೆ ನೀರನ್ನು ತಂದುಕೊಟ್ಟದ್ದು ನಾವೇ ಅಥವಾ ನೀವೇ, 120 ರಿಂದ 140-150ರವರೆಗೆ ಕೆಲಸ ಮಾಡುತ್ತಿರತಕ್ಕಂಥಾದ್ದು ನಾವೇ ಅಥವಾ ಬೇರೆಯವರೇ ಎನ್ನುವುದನ್ನು ಅವರ ಆ ಮೂರು ಜನ ಕಾಂಗ್ರೆಸ್ ಸದಸ್ಯರೇ ಹೇಳಬೇಕು. ಏಕೆಂದರೆ 20 ದಿವಸಗಳ ಹಿಂದೆ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಎಲ್ಲಾ ಕೆಲಸವನ್ನು ತೋರಿಸಿದ್ದೇವೆ. ಕಾವೇರಿಯ ಪ್ಲಾನ್ ಸ್ಕೀಂ ಇರುವಂಥಾದ್ದು 2556 ಕೋಟಿ ರೂ.ಗಳು. 1994ರವರೆಗೆ ಸುಮಾರು 753 ಕೋಟಿ ಖರ್ಚಾಗಿತ್ತು. ನಾವು ಅಧಿಕಾರಕ್ಕೆ ಬಂದ ಮೇಲೆ 1994ರಿಂದ 1998ರವರೆಗೆ ಪ್ಲಾನ್ ಸ್ಕೀಮಿನಲ್ಲಿರುವ 2556 ಕೋಟಿ ರೂ.ಗಳಲ್ಲಿ ಕಾವೇರಿಗೆ 1,202 ಕೋಟಿ ರೂ.ಖರ್ಚು ಮಾಡಿದ್ದೇವೆ. ತುಮಕೂರಿನ ಹೇಮಾವತಿಗೆ 336 ಕೋಟಿ ರೂ.ಖರ್ಚು ಮಾಡಿದ್ದೇವೆ, ಗೊರೂರಿಗೆ 292 ಕೋಟಿ ರೂ. ಖರ್ಚು ಮಾಡಿದ್ದೇವೆ, ಮೈಸೂರು ಸೌತ್‌ಗೆ 603 ಕೋಟಿ ರೂ. ಖರ್ಚು ಮಾಡಿದ್ದೇವೆ. ಅವರ ಕಾಂಗ್ರೆಸ್ ಶಾಸಕರನ್ನೇ ಕೇಳುತ್ತೇನೆ, ಅವರ ಕ್ಷೇತ್ರದಲ್ಲಿ ಯಾರ ಕಾಲದಲ್ಲಿ ಇಷ್ಟು ಕೆಲಸ ನಡೆಯಿತು ಎಂದು. ಕಾಂಗ್ರೆಸ್‌ನವರು ಕೆಲಸ ಮಾಡಲಿಲ್ಲ ಎಂದು ವೈ.ಕೆ.ರಾಮಯ್ಯನವರು ರಸ್ತೆಯ ಮೇಲೆ ಚಳುವಳಿ ಮಾಡಿದರು. ನಾವು ಕೆಲಸವನ್ನು ಮಾಡಲು ಪ್ರಾರಂಭ ಮಾಡಿದ

ಮೇಲೆ ಕಾಂಗ್ರೆಸ್ಸಿಗೆ ಸೇರಿಕೊಂಡಿದ್ದಾರೆ. ಯಾವ ಸರ್ಕಾರ ನೀರಿನ ಸಲುವಾಗಿ ತುಮಕೂರಿಗೆ ಸುಮಾರು 330 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆಯೆಂದು ತಮ್ಮ ಕಣ್ಣಿನಿಂದ ನೋಡಿದ್ದೀರಿ. ಇಷ್ಟು ಕೆಲಸ ಮಾಡಿದ್ದಕ್ಕೆ ನಾವು ರಾಜೀನಾಮೆ ಕೊಡಬೇಕೇ?

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಸದನದಲ್ಲಿ ಮಾತನಾಡುತ್ತಿದ್ದಂಥ ಸಂದರ್ಭದಲ್ಲಿ ಕೃಷ್ಣ ಜಲ ಭಾಗ್ಯ ನಿಗಮದ ಮಾದರಿಯಲ್ಲಿ ಕಾವೇರಿ ಬೇಸಿನ್‌ಗೂ ಕೂಡ ಕಾವೇರಿ ಜಲಭಾಗ್ಯ ನಿಗಮವನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದೆ. ಆ ಸಂದರ್ಭದಲ್ಲಿ ಮಾನ್ಯ ಸಚಿವರು ಸದನದಲ್ಲಿ ಇರಲಿಲ್ಲ. ಈ ಬಗ್ಗೆ ಏನಾದರೂ ಚಿಂತನೆ ಮಾಡುತ್ತೀರಾ ಎಂಬುದನ್ನು ದಯವಿಟ್ಟು ಹೇಳಬೇಕು.

ಅಧ್ಯಕ್ಷರು: ನಾಗೇಗೌಡರೇ, ನೀವು ಆದಷ್ಟು ಬೇಗ ಮಾತನಾಡಿ, ಯೀಲ್ಡ್ ಆದರೆ ಇನ್ನೂ ನಾಲ್ಕೈದು ಜನ ಮಿನಿಸ್ಟರ್‌ಗಳು ಮಾತನಾಡುವುದಿದೆ. ಸಮಯ ಬಹಳ ಕಡಿಮೆ ಇದೆ.

ಶ್ರೀ ಕೆ.ಎನ್.ನಾಗೇಗೌಡ: ವರುಣಾ ನಾಲೆಗೆ ಇಲ್ಲಿಯವರೆಗೆ 176 ಕೋಟಿ ರೂಪಾಯಿಗಳು ಖರ್ಚಾಗಿದೆ. ಆ 176 ಕೋಟಿ ರೂ.ಗಳಲ್ಲಿ 1990 ರಿಂದ 1994ರ ವರೆಗೆ 35 ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಳೆದ 4 ವರ್ಷದಲ್ಲಿ 121 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇವರ ಕೈಯಲ್ಲಿ ಒಂದು ತೂಬನ್ನು ಸರಿ ಮಾಡುವುದಕ್ಕೆ ಆಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಕೇವಲ ಒಂದು ಕೆನಾಲ್‌ಗೆ 180 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದನ್ನು ನಾವು ನೋಡಿದ್ದೇವೆ. ಸರ್.ಎಂ.ವಿಶ್ವೇಶ್ವರಯ್ಯನವರು ಕೆ.ಆರ್.ಎಸ್. ಡ್ಯಾಮಗೆ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿದರು. ಆದರೆ ಆ ವಿಶ್ವೇಶ್ವರಯ್ಯ ನಾಲೆಯ ಆಧುನಿಕರಣಕ್ಕೆ ನೀವು 180 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಿರಿ ಇದಕ್ಕೆ ನಾವು ತಮಗೆ ಶಹಭಾಸ್‌ಗಿರಿ ಕೊಟ್ಟಿದ್ದೇವೆ! ನೀವು ಯಾರನ್ನು ಉದ್ಧಾರ ಮಾಡುವುದಕ್ಕಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡಿದಿರಿ? ಅಲ್ಲಿ ಕೆಲಸ ನಡೆದಿರುವ ಮಟ್ಟಕ್ಕೂ ಮತ್ತು ಇಲ್ಲಿ ಖರ್ಚು ಮಾಡಿರುವ ಹಣಕ್ಕೂ ಸಂಬಂಧವೇ ಇಲ್ಲ. ನೀವು ಹಣಕ್ಕೆ ಬೆಲೆಯೇ ಇಲ್ಲದ ರೀತಿ ಖರ್ಚು ಮಾಡಿರುವುದು ನಮಗೆ ಗೊತ್ತಿದೆ. ಅವತ್ತಿನ ಸೀಮೆಂಟಿಗೆ ಎಷ್ಟು ರೇಟ್ ಇತ್ತು? ಅವತ್ತಿನ ಸ್ಟೀಲ್‌ಗೆ ಎಷ್ಟು ರೇಟ್, ಇವತ್ತಿನ ಸ್ಟೀಲ್‌ಗೆ ಎಷ್ಟು ರೇಟ್ ಎಂದು ಲೆಕ್ಕ ಹಾಕಿಕೊಂಡು ಇಷ್ಟು ಹಣ ಖರ್ಚು ಮಾಡಿದ್ದೇವೆಂದು ಹೇಳುವುದಕ್ಕೆ ಹೋಗಬೇಡಿ. ಅಲ್ಲಿ ಆದ ಕೆಲಸದ ಕ್ವಾಲಿಟಿಯನ್ನು ಕಾಪಾಡಿದ್ದೀರಾ? ರಾತ್ರೋರಾತ್ರಿಗೆ 220 ಜನರಿಗೆ ಪೀಸ್ ವರ್ಕ್ ಮಾಡಿದ್ದು, ಇತ್ಯಾದಿ

ನಮಗೆ ಗೊತ್ತಿದೆ. ಸುಮ್ಮನೆ ಕತೆ ಹೇಳುವುದು ಬೇಡ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಒಂದು ತೂಬನ್ನು ರಿಸಾಲ್ವ್ ಮಾಡುವುದಕ್ಕೆ ಅವರ ಕೈಯಿಂದ ಆಗಲಿಲ್ಲ. ಇಬ್ಬರೂ ಕೂಡ ಅಲ್ಲಿಯವರೇ ಇದ್ದರು. ನಮ್ಮ ಸರ್ಕಾರ ಬಂದ ಮೇಲೆ ರಿಸಾಲ್ವ್ ಮಾಡಿ, ಆ ತೂಬಿನ ಕೆಲಸ ಮಾಡಿ ಸುಮಾರು 80 ಸಾವಿರ ಎಕರೆಗೆ ನೀರು ಕೊಡತಕ್ಕಂಥ ಯೋಜನೆ ಮಾಡಿದೆವು. ಇಂಥ ಹತ್ತಾರು ಉದಾಹರಣೆಗಳನ್ನು ಕೊಡಬಲ್ಲೆವು. 1969ರಲ್ಲಿ ಒಂದು ಪ್ರಾಜೆಕ್ಟ್‌ನ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಲಾಯಿತು. ಇದು ಶ್ರೀ ವರದೇಗೌಡರ ಕ್ಷೇತ್ರದಲ್ಲಿ ಇದೆ. ಇದನ್ನು ಕಂಪ್ಲೀಟ್ ಮಾಡಿ 4 ವರ್ಷದಲ್ಲಿ 90 ಸಾವಿರ ಎಕರೆಗೆ ನೀರು ಕೊಟ್ಟಿದ್ದೇವೆ. ಇನ್ನು ನಬಾರ್ಡ್‌ನ ಸಹಾಯವನ್ನು ಪಡೆದುಕೊಂಡು ಬೆಣ್ಣೆತೊರ, ಲೊಯರ್‌ಮುಲ್ಲ ಮತ್ತು ಅಮರ್ಜಾ ನೀರಾವರಿ ಯೋಜನೆಯ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಲೋಯರ್‌ಮುಲ್ಲ ಶ್ರೀ ವೈಜನಾಥ ಪಾಟೀಲರ ಕ್ಷೇತ್ರದಲ್ಲಿ ಇದೆ. ಅಮರ್ಜಾ ಯೋಜನೆ ಶ್ರೀ ಸುಭಾಷ್ ಗುತ್ತೇದಾರರ ಕ್ಷೇತ್ರದಲ್ಲಿ ಬರುತ್ತದೆ. ಅಮರ್ಜಾ ಯೋಜನೆಗೆ 63 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಗೇಟ್ ಹಾಕಿಸಿಕೊಟ್ಟಿದ್ದೇವೆ. ಅಲ್ಲಿ ಕೆಲಸ ಆಗಿದೆಯೋ ಅಥವಾ ಇಲ್ಲವೋ ಎನ್ನುವುದನ್ನು ಮಾನ್ಯ ಖರ್ಗೆಯವರೇ ಬೇಕಾದರೆ ಅವರ ಹತ್ತಿರ ಕೇಳಬಹುದು. ಲೋಯರ್‌ಮುಲ್ಲ ಯೋಜನೆಯ ಕೆಲಸ ಬಹಳ ವರ್ಷಗಳಿಂದ ನಿಧಾನವಾಗಿ ನಡೆದಿದ್ದು,ನಾವು ಅದಕ್ಕೆ 74 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರು ಕೊಡುತ್ತಿದ್ದೇವೆ. ಯಾರ‍್ಯಾರ ಕ್ಷೇತ್ರದಲ್ಲಿ ನೀರಾವರಿ ಕೆಲಸವಾಗಿದೆ ಎನ್ನುವುದಕ್ಕೆ ಈ ಸದನವೇ ಸಾಕ್ಷಿಯಾಗಿದೆ. 84 ಕೋಟಿ ರೂಪಾಯಿಗಳನ್ನು ನಾವು ಬೆಣ್ಣೆತೊರಾ ಯೋಜನೆಗೆ ಖರ್ಚು ಮಾಡಿದ್ದೇವೆ. ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗೆ ಸುಮಾರು 359 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಬಾಗೂರು ನವಿಲೆ ಸುರಂಗ ಮಾರ್ಗದ ಬಗ್ಗೆ ಈಗಾಗಲೇ ನಾನು ಸಾಕಷ್ಟು ವಿವರಣೆ ನೀಡಿದ್ದೇನೆ. ಬಾಗೂರು ನವಿಲೆ ವಿಚಾರದ ಬಗ್ಗೆ ಮಾತುಕತೆಗೆ ಕರೆಯಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಸರ್ಕಾರದಿಂದ ಅಭ್ಯಂತರವಿಲ್ಲ. ಆದರೆ ಒಂದು ಷರತ್ತನ್ನು ಹಾಕಬೇಕಾಗುತ್ತದೆ. ಅದೇನೆಂದರೆ, ರೈತರಿಗೆ ಮಾತ್ರ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಅಲ್ಲಿ ರೈತರಿಗೆ ಪರಿಹಾರ ಕೊಡತಕ್ಕಂಥ ಸಮಸ್ಯೆ ಇಲ್ಲ. ರೈತರಿಗೆ ಬೇಕಾಗಿರತಕ್ಕಂಥ ಲಿಫ್ಟ್ ಇರಿಗೇಷನ್, ಪಕ್ಕದ ಹಳ್ಳಿಗೆ ಬೇಕಾಗಿರುವಂಥ ಪವರ್, ಲೈನ್ ಪಕ್ಕದಲ್ಲಿ ಯಾರ ಭೂಮಿಯನ್ನು ಸರ್ಕಾರ ವಹಿಸಿಕೊಂಡಿದೆ ಅವರಿಗೆ ಪರಿಹಾರ ಕೊಡುವಂಥದ್ದು, ಇವುಗಳ ಸಲುವಾಗಿ ಮಾತ್ರ ಮಾತುಕತೆಗೆ ಕರೆಯುತ್ತೇನೆ. ಮಾತುಕತೆಗೆ ಕರೆಯುವುದು ರೈತರಿಗೆಲ್ಲಾ ಪರಿಹಾರ ಕೊಡುವುದಕ್ಕೆ ಎಂದು ತಿಳಿದುಕೊಳ್ಳಬಾರದು. ಯಾವ ರೀತಿಯಾಗಿ ಪರಿಹಾರ ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡುತ್ತೇನೆ. ಮಾನ್ಯ ಪುಟ್ಟಣ್ಣಯ್ಯನವರು ಸಲಹೆ ಕೊಟ್ಟಂತೆ ಮಾತುಕತೆಗೆ ಕರೆಯುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಪರಿಹಾರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಾದರೆ, ಅವರು ಮಾತುಕತೆಗೆ ಏಕೆ ಬರುತ್ತಾರೆ? ಅರ್ಹರಾದರಿಗೆ ಪರಿಹಾರ ಕೊಡೋಣ. ಅಲ್ಲಿ ರಿಡ್ಜ್‌ನ ಆ ಕಡೆ 100 ಮೀಟರ್ ಈ ಕಡೆ 100 ಮೀಟರ್ ಜಾಗ ಹೋಗಿರುತ್ತದೆ. ಇಂತಹ ಪ್ರದೇಶದಲ್ಲಿ ಸ್ಪಷ್ಟವಾಗಿ ತೊಂದರೆ ಆಗಿರುತ್ತದೆ. ಅಂಥವರಿಗಾದರೂ ಪರಿಹಾರ ಕೊಡಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ಪ್ರಾಮುಖ್ಯವಾದ ಪ್ರಶ್ನೆ ಏನೆಂದರೆ ಅಲ್ಲಿ ಪರಿಹಾರ ಕೊಡುವಂಥದ್ದಾಗಿರುತ್ತದೆ. ಅದರಲ್ಲಿ ಎರಡನೇ ಮಾತು ಇಲ್ಲ. ಮಾತುಕತೆ ಮಾಡುವುದರ ಮೂಲಕ ಯಾವಯಾವುದಕ್ಕೆ ಪರಿಹಾರ ಕೊಡಬೇಕು ಎಂಬುದರ ಬಗ್ಗೆ ನಿರ್ಧಾರ ಮಾಡಿ. ಪರಿಹಾರ ಕೊಡತಕ್ಕಂಥದ್ದು ಇಲ್ಲವೆಂದು ಹೇಳುವುದು ಬೇಡ.

ಶ್ರೀ ಕೆ.ಎನ್.ನಾಗೇಗೌಡ: ರಿಡ್ಜ್‌ನ ಎರಡೂ ಕಡೆ 100 ಮೀಟರ್‌ನಷ್ಟು ನೀವು ಅಕ್ವೈಯರ್ ಮಾಡಿಕೊಳ್ಳಿ ಎನ್ನುವ ಒಂದು ಪ್ರಪೋಸಲ್ ಕೊಡಲಾಗಿತ್ತು. ಆ ಪ್ರಪೋಸಲನ್ನು ನಾವು ಸಮಿತಿಯ ಮುಂದೆ ಇಟ್ಟಿದ್ದೆವು. ಇದರ ಬಗ್ಗೆ ಮಾತುಕತೆ ಮಾಡಿ ಏನು ಮಾಡಬೇಕೆಂಬುದರ ಬಗ್ಗೆ ನಿರ್ಧಾರ ಮಾಡೋಣ. ಇನ್ನು ಆಲಮಟ್ಟಿ ವಿಚಾರದ ಬಗ್ಗೆ ನಾವು ಸಾಕಷ್ಟು ಸಲ ಪ್ರಸ್ತಾಪ ಮಾಡಿದ್ದೇವೆ. ರಾಜ್ಯ ಸರ್ಕಾರದ ಕ್ರೆಡಿಬಿಲಿಟಿ ಈಸ್ ಲಾಸ್ಟ್ ಎಂದು ಮಾನ್ಯ ಮೊಯಿಲಿಯವರು ಹೇಳಿದರು. ಆ ಸ್ಟೇಟ್ ಗವರ್ನ್‌ಮೆಂಟ್ ಕ್ರೆಡಿಬಿಲಿಟಿಯನ್ನು ಎಸ್ಟಾಬ್ಲಿಷ್ ಮಾಡಿದೆ. ಆ ಕ್ರೆಡಿಬಿಲಿಟಿಯನ್ನು ಎಸ್ಟಾಬ್ಲಿಷ್ ಮಾಡಿರುವುದರಿಂದಲೇ ಆಂಧ್ರದವರು ಇಂಥದ್ದರಲ್ಲಿ ಪಾಲಿಟಿಕ್ಸ್ ಮಾಡುತ್ತಾರೆ ಎನ್ನುತಕ್ಕಂಥದ್ದನ್ನು ಎಸ್ಟಾಬ್ಲಿಷ್ ಮಾಡಿದೆ. ಈಗ ಅವರು ಅಂದರೆ ಆಂಧ್ರದವರು ರಾಜಕೀಯವಾಗಿ ಮಾತನಾಡುವುದಿಲ್ಲ. 1996ರಲ್ಲಿ ಮಾತ್ರ ಆಂಧ್ರದ ಹೈದ್ರಾಬಾದ್‌ನಲ್ಲಿ ಕೋರ್ಟ್ ಸ್ಟೇ ಕೊಟ್ಟುಬಿಟ್ಟಿತ್ತು. ನಂತರ ನಾವು ಸುಪ್ರೀಂಕೋರ್ಟಿಗೆ ಹೋಗಿ ಆ ಸ್ಟೇಯನ್ನು ವೆಕೇಟ್ ಮಾಡಿಸಿ, ಇನ್ನೂ ಕೂಡ ಆ ಕೇಸ್ ಪೆಂಡಿಂಗ್‌ನಲ್ಲಿ ಇದೆ. ಆದ್ದರಿಂದ ನಮ್ಮ ವಾದ ಏನು ಇದೆ, ಅಫಿಡವಿಟ್‌ನಲ್ಲಿ ನಾವು ಏನು ಕೊಟ್ಟಿದ್ದೇವೆ, ಆ ಅಫಿಡವಿಟ್‌ನ ಪ್ರಕಾರ ನಾವು ನಡೆದುಕೊಂಡಿದ್ದೇವೆ. ಕರ್ನಾಟಕದಿಂದ ಸುಪ್ರೀಂ ಕೋರ್ಟಿಗೆ ಅಫಿಡವಿಟ್‌ನಲ್ಲಿ ನಾವು ಏನು ಪ್ರೋಗ್ರಾಂ ಕೊಟ್ಟಿದ್ದೇವೆ ಅದು ಎಲ್ಲಿಯೂ ವಯಲೇಷನ್ ಆಗಿಲ್ಲ ಅನ್ನತಕ್ಕಂಥ ಕ್ರೆಡಿಬಿಲಿಟಿ ಎಸ್ಟಾಬ್ಲಿಷ್ ಮಾಡಿರುವುದರಿಂದ ಡಿಸೆಂಬರ್ 1ನೇ ತಾರಿಖು ಹಿಯರಿಂಗ್ ಇದೆ. ಆ ಹಿಯರಿಂಗ್‌ನಲ್ಲಿ ಡೆಫನೆಟ್ ಆರ್ಡರ್ಸ್ ಬರುತ್ತದೆ, ನಮ್ಮ ಪ್ರಾಬ್ಲಮ್ಸ್, ಮತ್ತು ನಾವು ಮಾನ್ಸೂನ್‌ಗೆ ನೀರನ್ನು ಆ ಡ್ಯಾಮ್‌ನಲ್ಲಿ ನಿಲ್ಲಿಸಬೇಕು ಎನ್ನತಕ್ಕಂಥದ್ದನ್ನು ನಮ್ಮ ಅಡ್ವೋಕೇಟ್ಸ್ ಸುಪ್ರೀಂಕೋರ್ಟಿನಲ್ಲಿ ಹೇಳಿದ್ದಾರೆ. ಅದರ ಆಧಾರದ ಮೇಲೆ ಅವತ್ತು ಅದನ್ನು ಮಾಡುತ್ತೇವೆಂದು ನಾನು ಅಂದುಕೊಂಡಿದ್ದೇನೆ. ಇನ್ನು ಪುನರ್‌ವಸತಿ ಬಗ್ಗೆ ಬಹಳ ಜನ ಮಾತನಾಡಿದರು. ಆಲಮಟ್ಟಿ ಜಲಾಶಯಕ್ಕೋಸ್ಕರ ಸುಮಾರು 1 ಲಕ್ಷದ 85 ಸಾವಿರ

ಎಕರೆ ಭೂಮಿ ಅಕ್ವೈಯರ್ ಮಾಡಲಾಗಿದೆ. 207 ರೈತರಿಗೆ ನಾವು ಪುನರ್‌ವಸತಿ ಕಲ್ಪಿಸಬೇಕಾಗಿದೆ. ಬಹುಶಃ 1994ರಿಂದ 98ರ ರೆಗೆ 6 ಕೋಟಿ ರೂಪಾಯಿ, 20 ಕೋಟಿ ರೂಪಾಯಿ, 15 ಕೋಟಿ ರೂಪಾಯಿ ಈ ರೀತಿ ಕೊಡುತ್ತಾ ಇದ್ದೆವು. 1994ರ ಪುನರ್‌ವಸತಿಗಾಗಿ ಕಳೆದ ವರ್ಷ 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಫಸ್ಟ್ ಗವರ್ನ್‌ಮೆಂಟ್ ಆರ್ಡರನ್ನು 19-6-1998ರಂದು ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಮೀಟಿಂಗ್ ಕರೆದು ರೇಟ್ ಬಗ್ಗೆ ಮಾತನಾಡಿ, ಹೊರಡಿಸಿದರು. ಬಾಗಲಕೋಟೆಯಲ್ಲಿ ಒಂದು ಕೆಲಸ ಕೂಡ ಆಗಿರಲಿಲ್ಲ. ನಾವು ಬಾಗಲಕೋಟೆಯಲ್ಲಿಯ ಕುಟುಂಬಗಳಿಗೆ ಕೊಡಬೇಕಾದ ಪರಿಹಾರವನ್ನು ಕೊಟ್ಟಿದ್ದೇವೆ. ಇಲ್ಲಿಯೂ ಕೂಡ ಪರಿಹಾರ ಕೊಟ್ಟಿದ್ದೇವೆ. ಸುಮಾರು 600-700 ಕೋಟಿ ರೂಪಾಯಿಗಳನ್ನು ಕಳೆದ ಸುಮಾರು 4-5 ವರ್ಷಗಳಲ್ಲಿ ಪರಿಹಾರ ರೂಪವಾಗಿ ರೈತರಿಗೆ ಕೊಟ್ಟಿದ್ದೇವೆ. ವಿಶೇಷವಾಗಿ ಡಿಪ್ರೀಸಿಯೇಷನ್‌ನ್ನು ಬಿಟ್ಟು ಬಾಕಿ ಎಲ್ಲಾ ಕ್ರಮವನ್ನು ಮಾಡಿರತಕ್ಕಂಥ ಸರ್ಕಾರವೇ ಈ ಸರ್ಕಾರವಾಗಿದೆ. ಬಹುಶಃ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರು ಆದಂಥವರು ಜನ ಅಲ್ಲಿ ಇದ್ದಾರೆ. ಈ ಒಂದು ಸಾಧನೆಯನ್ನು ಈ ಸರ್ಕಾರ ಮಾಡಿದೆ, ಪುನರ್‌ವಸತಿ ಕಾರ್ಯಕ್ರಮದಲ್ಲಿ ಇಷ್ಟು ಹಣವನ್ನು ಕೊಟ್ಟಿದ್ದಾರೆ, ಎಂದು ಹೇಳಿ ಅವರು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿದ್ದಾರೆ.

3.30 ಪಿಎಂ

ಡಿಪ್ರೀಷಿಯೇಷನ್ ಒಂದನ್ನು ಬಿಟ್ಟು ಬಾಕಿ ಎಲ್ಲವನ್ನೂ ಮಾಡಿದ್ದೇವೆ. ಡಿಪ್ರೀಷಿಯೇಷನ್ ಮಾಡಬೇಕಾದರೆ ಸುಮಾರು ಇನ್ನೂರು-ಮುನ್ನೂರು ಕೋಟಿ ಹೆಚ್ಚು ಬೇಕಾಗಬಹುದು ಎಂದು ನಾವು ಇದರ ಬಗ್ಗೆ ಆಲೋಚನೆ ಮಾಡಿರುವುದರಿಂದ, ನಾವು ಅದರ ಬಗ್ಗೆ ಇನ್ನೂ ತಳ್ಳಿಹಾಕಿಲ್ಲ. ಅವರು ಕೊಟ್ಟಂಥ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿದ್ದೇವೆ. ಕೊನೆಯದಾಗಿ ಕೃಷ್ಣಾ ಬಗ್ಗೆ ಹೇಳುವುದಾದರೆ, ಮಾನ್ಯ ಸದಸ್ಯರು ಅಲ್ಲಿ ಏನೂ ಕೆಲಸವಾಗಿಲ್ಲ, ಎಲ್ಲಾ ಕೆಲಸ ನಿಂತು ಹೋಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾವು ಈ ಬಗ್ಗೆ ಈಗಾಗಲೇ ಒಂದು ಸರ್ಕಾರ ಆದೇಶವನ್ನು ಹೊರಡಿಸಿದ್ದೇವೆ. ಅದೇನೆಂದರೆ, ಉಳಿದಿರತಕ್ಕಂಥ ಎಲ್ಲಾ ಕೆಲಸಗಳನ್ನು ಮುಗಿಸಲು 1268 ಕೋಟಿ ರೂಪಾಯಿಗಳಿಗೆ ಪ್ರಿ-ಕ್ವಾಲಿಫಿಕೇಷನ್ ಕರೆದಿದ್ದೇವೆ. ಇನ್ನೆರಡು ವರ್ಷಗಳಲ್ಲಿ ಉಳಿದಿರತಕ್ಕಂಥ ಎಲ್ಲಾ ಕ್ರಿಟಿಕಲ್ ಕೆಲಸಗಳನ್ನು ಮುಗಿಸಲು ಸುಮಾರು ಐದು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಿ, ಪುನರ್ ವ್ಯವಸ್ಥೆ, ಸಿವಿಲ್ ವರ್ಕ್, ಹೀಗೆ ಎಲ್ಲಾ ಕೆಲಸ ಮುಗಿಸಬೇಕೆಂದು ಸರ್ಕಾರಿ ಆದೇಶವನ್ನು ಹೊರಡಿಸಿದ್ದೇವೆ. ಯು.ಕೆ.ಪಿ.ಯನ್ನು ಹೊರತುಪಡಿಸಿ ಒಂದು ಕೆಲಸ ನಿಗಮವನ್ನೂ ಕೂಡ ನಾವು ಪ್ರಾರಂಭಿಸಿದ್ದೇವೆ. ಇಲ್ಲಿಯವರೆಗೆ ಕೃಷ್ಣಾ ಭಾಗ್ಯ ನಿಗಮಕ್ಕೆ 1800 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದ್ದೇವೆ. ಈ ಸಂಬಂಧವಾಗಿ ಮಾನ್ಯ ಮೊಯ್ಲಿಯವರು ಬಡ್ಡಿಯ ದುಡ್ಡಿನಲ್ಲಿ ಕೊಟ್ಟಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿದರು. ಮಾನ್ಯ

ಮೊಯ್ಲಿಯವರೇ, ತಮಗೆ ಹೇಳುವುದಾದರೆ 1800 ಕೋಟಿ ರೂಪಾಯಿಗಳನ್ನು ಬಡ್ಡಿಯ ದುಡ್ಡನ್ನು ಕೊಟ್ಟಿರುವುದು ಕೇವಲ 330 ಕೋಟಿ ರೂಪಾಯಿಗಳು ಮಾತ್ರ. ಬಾಕಿ ಎಲ್ಲಾ ಹಣವನ್ನು ನಿಗಮಕ್ಕೆ ಖರ್ಚು ಮಾಡಿದ್ದೇವೆ. ಇದರ ಜೊತೆಗೆ ಇನ್ನೂ 480 ಕೋಟಿ ರೂಪಾಯಿಗಳ ಹಣ ಸಂಗ್ರಹಣೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಈ ಸಂಬಂಧವಾಗಿ ಈಗಾಗಲೇ ಐವತ್ತು ಕೋಟಿ ರೂಪಾಯಿಗಳು ಬಂದಿವೆ. ಮಲಪ್ರಭಾ-ಘಟಪ್ರಭಾ ಈ ಭಾಗಕ್ಕೆ ಹೊಸ ನೀರಾವರಿ ಮಾಡಬೇಕೆಂದು ಆಲೋಚಿಸಿ ಮುಂದಿನ ಡಿಸೆಂಬರ್-ಜನವರಿಯೊಳಗೆ ಯು.ಕೆ.ಪಿ.ಯನ್ನು ಹೊರತುಪಡಿಸಿದಂತೆ ಒಂದು ಹೊಸ ನಿಗಮ ಸ್ಥಾಪನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈ ವರ್ಷ 1551 ಕೋಟಿ ರೂಪಾಯಿಗಳ ಯು.ಕೆ.ಪಿ.ಗೆ ಖರ್ಚು ಮಾಡಬೇಕು ಎನ್ನುವ ಗುರಿಯನ್ನು ಹೊಂದಿರುವುದರಿಂದ ಎಲ್ಲೂ ಈ ಭಾಗದಲ್ಲಿ ಕೆಲಸ ನಿಂತಿಲ್ಲ. ಎಲ್ಲಾ ಕಡೆ ಟೆಂಡರ್ ಕರೆದಿದ್ದೇವೆ. ಜನವರಿ-ಫೆಬ್ರವರಿಯೊಳಗೆ ಯು.ಕೆ.ಪಿ.ಗೆ ಸಂಬಂಧಪಟ್ಟಂತೆ ಎಲ್ಲಾ ಸಿವಿಲ್ ವರ್ಕ್‌ಗಳಿಗೆ ಏಜೆನ್ಸಿಯನ್ನು ಫೈನಲೈಸ್ ಮಾಡುತ್ತೇವೆ. ಇವತ್ತು ಎಲ್ಲಾ ಕೆಲಸಗಳೂ ಅತ್ಯಂತ ವೇಗವಾಗಿ ನಡೆಯುತ್ತಿವೆ ಎಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ...

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ನಮ್ಮ ಮುಖ್ಯಮಂತ್ರಿಗಳ ಹಾಗೂ ನಮ್ಮ ಮಂತ್ರಿ ಮಂಡಲದ ಮೇಲೆ ಮಂಡಿಸಿರುವ ಅವಿಶ್ವಾಸ ನಿರ್ಣಯವನ್ನು ವಿರೋಧಿಸಿ, ನಮ್ಮ ಸರ್ಕಾರದ ಬಗ್ಗೆ ಹಲವಾರು ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರು ಮಾಡಿರತಕ್ಕಂಥ ಆಪಾದನೆಗಳ ಬಗ್ಗೆ ಮತ್ತು ನನ್ನ ಇಲಾಖೆಯ ಮೇಲೆ ಮಾಡಿರತಕ್ಕ ಆಪಾದನೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನನಗೆ ಮಾತನಾಡುವುದಕ್ಕೆ ತಾವು ಅಪ್ಪಣೆ ಕೊಟ್ಟಿದ್ದೀರಿ ಇದಕ್ಕಾಗಿ ನಾನು ತಮಗೆ ಚಿರಋಣಿಯಾಗಿದ್ದೇನೆ. ಸಮಯದ ಅಭಾವವಿರುವುದರಿಂದ ನಾನು ಹೆಚ್ಚು ಹೊತ್ತು ಮಾತನಾಡುವುದಕ್ಕೆ ಹೋಗದೆ 10-15 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸಿರುವ ಅವಿಶ್ವಾಸ ನಿರ್ಣಯದ ಬಗ್ಗೆ ಸಾಕಷ್ಟು ಹೋಂವರ್ಕ್ ಮಾಡಿ ಬಹಳ ಚೆನ್ನಾಗಿ 5-6 ಗಂಟೆಗಳ ಕಾಲ ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಸದನದಲ್ಲಿ ಮೊದಲನೇಬಾರಿಗೆ, ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವಾಗ ಅಂಕಿಸಂಖ್ಯೆಗಳನ್ನು ಉಪಯೋಗಿಸಿಕೊಂಡು ಬಹಳ ಕಸರತ್ತು ನಡೆಸಿ ಚೆನ್ನಾಗಿ ಮಾತನಾಡಿದ್ದಾರೆ. ಇದರ ಜೊತೆಗೆ ನಮ್ಮ ವಿರೋಧ ಪಕ್ಷದ ಸದಸ್ಯರು ಹಾಗೂ ಹೊಸದಾಗಿ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರು ನಮ್ಮ ಸರ್ಕಾರಕ್ಕೆ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ವಿರುದ್ಧ ಏನು ಅವಿಶ್ವಾಸ ನಿರ್ಣಯವನ್ನು ಇಲ್ಲಿ ಮಂಡಿಸಿದ್ದಾರೆ ಅದು ಪಾಸ್ ಆಗುತ್ತದೆ, ಈ ಸರ್ಕಾರ ಹೋಗುತ್ತದೆ ಎನ್ನತಕ್ಕಂಥ ಭ್ರಮೆ ಮಾನ್ಯ ಸದಸ್ಯರಲ್ಲೂ ಇಲ್ಲ ಎನ್ನತಕ್ಕಂಥದ್ದು ಗೊತ್ತಿದೆ. ವೈಚಾರಿಕವಾಗಿ ಹೇಳುವುದಾದರೆ, ಈ ಸಭೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಯವರು

ಒಟ್ಟಿಗೆ ಬರುವುದಾಕ್ಕಾಗುವುದಿಲ್ಲ ಎನ್ನುವ ಅರಿವೂ ಸಹ ಸದಸ್ಯರಲ್ಲಿ ಇದೆ. ಪ್ರಸ್ತುತವಿರುವ ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು, ನಮ್ಮ ಪಕ್ಷದಲ್ಲಿರುವ ಆಂತರಿಕ ಭಿನ್ನಾಭಿಪ್ರಾಯವನ್ನು, ರಾಜಕೀಯವಾಗಿ ಲಾಭ ಪಡೆಯಬೇಕೆಂಬ ಉದ್ದೇಶ ಇಟ್ಟುಕೊಂಡು ಏನು ಅವಿಶ್ವಾಸ ನಿರ್ಣಾಯ ತಂದಿದ್ದಾರೆ, ಇದು ತಕ್ಷಣ ಬಿದ್ದು ಹೋಗುತ್ತದೆ, ಇದರಿಂದಾಗಿ ಇವರಿಗೆ ನಿರಾಶೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾಲ್ಕು ವರ್ಷಗಳ ನಮ್ಮ ಅಧಿಕಾರಾವಧಿಯಲ್ಲಿ ಎಲ್ಲವೂ ಸರಿಯಾಗಿದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ನ್ಯೂನತೆಗಳೂ ಕೂಡ ನಮ್ಮಲ್ಲಿ ಇವೆ. ಶತಮಾನಗಳಿಂದ ಕಂಡರಿಯದ ಮಳೆ ಈ ವರ್ಷ ಬಿದ್ದಿರುವುದರಿಂದ, ರಸ್ತೆಗಳು ಕೆಟ್ಟು ಹೋಗಿವೆ. ಪ್ರಕೃತಿವಿಕೋಪದಿಂದಾಗಿ ಏನು ರಸ್ತೆಗಳು ಹಾಳಾಗಿವೆ ಇವುಗಳನ್ನು ದುರಸ್ಥಿ ಮಾಡಬೇಕು ಎನ್ನುವ ಅರಿವೂ ಕೂಡ ನಮ್ಮ ಸರ್ಕಾರಕ್ಕೆ ಇದೆ. ಅತೀವೃಷ್ಟಿಯಿಂದಾಗಿ ಅನೇಕ ಮನೆಗಳು ಉರುಳಿವೆ, ಇದರಿಂದಾಗಿ ರೈತರಿಗೆ ಅನಾನುಕೂಲವಾಗಿದೆ ಎನ್ನುವ ಅರಿವೂ ಕೂಡ ನಮಗೆ ಇದೆ. ಕೇಂದ್ರಸರ್ಕಾರದವರು ಹತ್ತಾರು ವರ್ಷಗಳಿಂದ ನಡೆಸಿಕೊಂಡು ಬಂದಿರತಕ್ಕಂಥ ರೈತರ ವಿರೋಧಿ ನೀತಿಯಿಂದ ಮತ್ತು ನಾವು ಅನುಸರಿಸಿಕೊಂಡು ಬಂದಿರತಕ್ಕಂಥ ಆರ್ಥಿಕ ಕ್ರಮದಿಂದಾಗಿ ರೈತರಿಗೆ ತೊಂದರೆಯಾಗಿ ಸಾಂಕೇತಿಕವಾಗಿ ಶಿರಾದಂಥ ಘಟನೆಗಳೂ ಕೂಡ ನಮಗೆ ಗೊತ್ತಿದೆ. ಇದರ ಹಿನ್ನೆಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿರುವ ವಿಚಾರದ ಬಗ್ಗೆ ನಮಗೆ ಗೌರವ ಇದೆ. ಆದರೆ, ಮಾನ್ಯ ಸದಸ್ಯರುಗಳು ಮಾಡಿರತಕ್ಕಂಥ ಯಾವುದೇ ಹೊಸ ಆಪಾದನೆಗಳು ಈ ಸರ್ಕಾರದ ಮೇಲೆ ಇಲ್ಲ. ಮಾನ್ಯ ಅನೇಕ ಸದಸ್ಯರು ಹೇಳುವಂತೆ, ನಾನೂ ಕೂಡ ಬಹಳ ಧೈರ್ಯವಾಗಿ ಈ ಮಾತನ್ನು ಹೇಳಬೇಕಾಗಿದೆ. ಅದೇನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರ ಬಗ್ಗೆ ಈ ಸದನದ ಯಾವುದೇ ಸದಸ್ಯರೂ ಕೂಡ ಅವರ ರಾಜಕೀಯದ ಎತ್ತರದ ಬಗ್ಗೆ, ಅವರಿಗಿರತಕ್ಕಂಥ ವಿದ್ವತ್ತಿನ ಬಗ್ಗೆ, ಇಡೀ ರಾಷ್ಟದಲ್ಲಿರುವ ಮುಖ್ಯಮಂತ್ರಿಗಳಲ್ಲಿ ಅವರಿಗಿರತಕ್ಕಂಥ ಅರಿವು ಮತ್ತು ತಿಳುವಳಿಕೆ ಹಾಗೂ ಅನುಭವಕ್ಕೆ ಯಾರೂ ಸರಿಸಾಟಿಯಿಲ್ಲ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಮಾನ್ಯರು ಸುಮಾರು 40-45 ವರ್ಷಗಳಿಂದ ಹೋರಾಟ ಮಾಡಿಕೊಂಡು, ಅಧಿಕಾರದ ದಾಹದಿಂದ ಅಥವಾ ಮುಖ್ಯಮಂತ್ರಿಯಾಗಬೇಕು ಎನ್ನುವ ಆಶೆಯಿಂದ ಅವರು ಈ ಪದವಿಗೆ ಬಂದಿಲ್ಲ ಎನ್ನತಕ್ಕಂಥ ವಿಚಾರ, ಅವರ ಜೊತೆಯಲ್ಲಿರುವ ಆಡಳಿತ ಪಕ್ಷದ ಸದಸ್ಯರಿಗೂ ಮತ್ತು ವಿರೋಧ ಪಕ್ಷದ ಅನೇಕ ಸದಸ್ಯರಿಗೂ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ದೊಡ್ಡತನದ ಬಗ್ಗೆ, ವ್ಯಕ್ತಿತ್ವದ ಬಗ್ಗೆ, ಅವರಿಗಿರುವ ಸ್ನೇಹಪರತೆ ಬಗ್ಗೆ ಹಾಗೂ ಪ್ರಜಾಪ್ರಭುತ್ವದಲ್ಲಿ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎನ್ನುವ ಬಗ್ಗೆ, ಒಬ್ಬ ಅನುಕರಣೀಯ ನಾಯಕರಾಗಿದ್ದಾರೆಂಬುದು ಅನೇಕ ಗೌರವಾನ್ವಿತ ಸದಸ್ಯರಿಗೂ ತಿಳಿದಿರತಕ್ಕಂಥ ವಿಚಾರವಾಗಿದೆ. ಇಂಥ ಮುಖ್ಯಮಂತ್ರಿಗಳ ಮೇಲೆ ಮಾಡಿರತಕ್ಕ

ಅಪಾದನೆಗಳೇನು ಎಂದರೆ, ನೀರಾವರಿ ಕೆಲಸಗಳು ಸರಿಯಾಗಿ ಆಗುತ್ತಿಲ್ಲವೆಂದು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶವನ್ನು ಸರಿಯಾಗಿ ಕೊಡಲಿಲ್ಲ; ಇದರ ಜೊತೆಗೆ ನಮ್ಮ ಪಕ್ಷದ ಆಂತರಿಕ ವ್ಯವಹಾರ ಇಷ್ಟನ್ನು ಬಿಟ್ಟರೆ ಬೇರೆ ಯಾವ ಆಪಾದನೆಗಳನ್ನು ನಮ್ಮ ಮೇಲೆ ಮಾಡುವುದಕ್ಕೆ ಅವಕಾಶ ಇಲ್ಲ ಹಾಗೂ ಇಂಥ ಘಟನೆಗಳು ನಮ್ಮಲ್ಲಿ ನಡೆದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರು ನಮ್ಮ ಮೇಲೆ ಮಾಡಿರತಕ್ಕಂಥ ಅಪಾದನೆಗಳಿಗೆ ನನಗೆ ನಿರಾಶೆಯಾಗಿದೆ. ಇದು ಯಾವ ರೀತಿ ಎಂದರೆ ಬೆಟ್ಟವನ್ನು ಅಗೆದು ಇಲಿಯನ್ನೂ ಕೂಡ ಹಿಡಿಯುವುದಕ್ಕೆ ಸಿಕ್ಕಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಈ ಸರ್ಕಾರ ಬಡವರ ಬಗ್ಗೆ ಏನೂ ಕೆಲಸ ಮಾಡುತ್ತಿಲ್ಲವೆಂದು ಅನೇಕ ಸದಸ್ಯರು ಮಾತನಾಡಿದ್ದಾರೆ. ಬಡವರಿಂದಾಗಿ, ಅಲ್ಪಸಂಖ್ಯಾತರಿಂದಾಗಿ, ಹಿಂದುಳಿದವರ್ಗದವರಿಂದಾಗಿ, ಏನು ಅಧಿಕಾರಕ್ಕೆ ಬಂದಿದ್ದೀರಿ, ಈ ಬಡವರಿಗಾಗಿ, ಅಲ್ಪಸಂಖ್ಯಾತರಿಗಾಗಿ, ಹಿಂದುಳಿದವರ್ಗದವರಿಗಾಗಿ ಏನು ಕೆಲಸ ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ನಮ್ಮ ಅನೇಕ ಗೌರವಾನ್ವಿತ ಸದಸ್ಯರು ಇಲ್ಲಿ ಮಾತನಾಡಿದ್ದಾರೆ. ನಾನು ಪಕ್ಷದ ಹಿತದೃಷ್ಟಿಯಿಂದ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ವಾಸ್ತವಾಂಶಗಳನ್ನು ನಾವು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಮಾನ್ಯ ಎಂ.ಪಿ.ಪ್ರಕಾಶ್‌ರವರು ಹಾಗೂ ಮಾನ್ಯ ರೇವಣ್ಣನವರು ಮನೆಗಳು ಕಟ್ಟತಕ್ಕಂಥ ವಿಚಾರದಲ್ಲಿ ಒಂದು ಮಾತನ್ನು ಹೇಳಿದರು. ಈ ಮಾತನ್ನು ಈ ರಾಜ್ಯದ ಜನತೆಯ ಮುಂದೆ ಬಹಳ ಹೆಮ್ಮೆಯಿಂದ ಹೇಳಬೇಕಾಗಿದೆ. ಅದೇನೆಂದರೆ, ನಮ್ಮ ನಾಲ್ಕು ವರ್ಷದ ಅಧಿಕಾರಾವಧಿಯಲ್ಲಿ ಸುಮಾರು ಎರಡೂ-ಮುಕ್ಕಾಲು ಲಕ್ಷ ಮನೆಗಳನ್ನು ಕಟ್ಟುವುದರ ಜೊತೆಗೆ ಇನ್ನೂ ಒಂದು ಲಕ್ಷ ಮನೆಗಳನ್ನು ಕಟ್ಟುವ ಗುರಿಯನ್ನು ಹೊಂದಿರುವುದಲ್ಲದೆ ಈ ಬಾಬಿಗಾಗಿ ಹಣವನ್ನೂ ಕೂಡ ಇಟ್ಟಿದ್ದೇವೆ. ಈ ಒಂದು ಕಾರ್ಯ, ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮತ್ತು ಮಾನ್ಯ ಜೆ.ಹೆಚ್.ಪಟೇಲ್‌ರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಒಟ್ಟಿನಲ್ಲಿ ನಮ್ಮ ನಾಲ್ಕು ವರ್ಷದ ಅಧಿಕಾರಾವಧಿಯಲ್ಲಿ ಮೂರು ಲಕ್ಷ ಮನೆಗಳನ್ನು ಕಟ್ಟಿರತಕ್ಕಂಥದ್ದು ಬೇರೆ ಯಾವ ಸರ್ಕಾರದ ಅಧಿಕಾರಾವಧಿಯಲ್ಲಿ ಇಲ್ಲ ಎನ್ನತಕ್ಕಂಥದ್ದು ಈ ಸದನದ ಎಲ್ಲಾ ಸದಸ್ಯರು ತಿಳಿದುಕೊಳ್ಳಬೇಕಾಗಿದೆ. ಇನ್ನು ಹಸಿರು ಕಾರ್ಡುಗಳ ಬಗ್ಗೆ ಹೇಳುವುದಾದರೆ, ಬಡವರಿಗೆ ಅಗತ್ಯ ಇರತಕ್ಕಂಥ ಅಕ್ಕಿಯನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಕೆ.ಜಿ. 3-30ರಂತೆ ಸುಮಾರು ಅರವತ್ತು ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ಕೊಟ್ಟಿದ್ದೇವೆ. ಈ ವರ್ಷ ಕೂಡ ಪುನಃ ಏಳು ಲಕ್ಷ ಹಸಿರು ಕಾರ್ಡುಗಳನ್ನು ಕೊಡಬೇಕು ಎನ್ನುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ವಿರೋಧ ಪಕ್ಷದ ಅನೇಕ ಸದಸ್ಯರಿಗೆ ಮಾನ್ಯ ಗೋವಿಂದೇಗೌಡರು ಮಾಡಿರುವಂಥ ಕೆಲಸ ಏನು ಎನ್ನತಕ್ಕಂಥದ್ದು ಗೊತ್ತಿದೆ. ಅಧ್ಯಾಪಕರ ವಿಚಾರವಾಗಿ ಹೇಳುವುದಾದರೆ, ನಾವು ನಮ್ಮ ಚುನಾವಣಾ

ಪ್ರಣಾಳಿಕೆಯಲ್ಲಿ ನಾವು ಅಧಿಕಾರಕ್ಕೆ ಬಂದರೆ ಒಂದು ಲಕ್ಷ ಉದ್ಯೋಗ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೆವು. ಅದರಂತೆ ನಾವು ಈಗಾಗಲೇ ಎಪ್ಪತ್ತು ಸಾವಿರ ಅಧ್ಯಾಪಕರನ್ನು ನೇಮಕ ಮಾಡಿಕೊಂಡಿದ್ದೇವೆ. ಹತ್ತು ಸಾವಿರಕ್ಕೂ ಹೆಚ್ಚು ನಿರುದ್ಯೋಗಿ ಯುವಕರಿಗೆ ಪೋಲಿಸ್ ಇಲಾಖೆಯಲ್ಲಿ ಉದ್ಯೋಗವನ್ನು ಕೊಟ್ಟಿದ್ದೇವೆ. ಹತ್ತು ಸಾವಿರಕ್ಕೊ ಹೆಚ್ಚು ನಿರುದ್ಯೋಗಿ ಯುವಕರಿಗೆ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಉದ್ಯೋಗವನ್ನು ಕೊಟ್ಟಿದ್ದೇವೆ ಹೀಗಿದ್ದರೂ ನಿಮ್ಮ ಸರ್ಕಾರ ಏನೂ ಮಾಡಿಲ್ಲ, ನಿಮ್ಮ ಸರ್ಕಾರ ಬಡವರಿಗೆ ಹಿಂದುಳಿದವರ್ಗದವರಿಗೆ ಏನೂ ಮಾಡಿಲ್ಲ ಈ ಸರ್ಕಾರ ಬಡವರ ವಿರೋಧಿ ಸರ್ಕಾರ ಎಂದು ಹೇಳಿದರೆ ಹೇಗೆ? ಜಿಲ್ಲಾ ಪಂಚಾಯತ್‌ಗಳಲ್ಲಿ, ತಾಲ್ಲೂಕು ಪಂಚಾಯಿತಿಗಳಲ್ಲಿ, ಪುರಸಭೆಗಳಲ್ಲಿ, ಇವತ್ತು ಹಿಂದುಳಿದ ವರ್ಗದವರಿಗೆ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಹಿಂದೆ ಮಾನ್ಯ ದೇವರಾಜ್ ಅರಸ್‌ರವರು ಒಳ್ಳೆಯ ಕೆಲಸವನ್ನು ಮಾಡಿದ್ದರು. ಮಾನ್ಯ ಮೊಯ್ಲಿಯವರ ಮನಸ್ಸಿನಲ್ಲಿ ಏನಿದೆ ಎನ್ನತಕ್ಕಂಥದ್ದು ನಮಗೆ ಅರ್ಥವಾಗುತ್ತದೆ. ನಮ್ಮ ಸಹೋದ್ಯೋಗಿಯಾದ ಮಾನ್ಯ ಪ್ರಕಾಶ್‌ರವರು ತಮ್ಮ ಬಗ್ಗೆ ಮಾತನಾಡಿದ್ದಾರೆ ಎನ್ನತಕ್ಕಂಥ ತಿಳುವಳಿಕೆಯಿಂದ ನೀವು ಬಹಳ ಬೇಸರವನ್ನು ಮಾಡಿಕೊಂಡಿದ್ದೀರಿ. ಇವತ್ತು ನಮ್ಮ ಸರ್ಕಾರಕ್ಕಾಗಲಿ ಅಥವಾ ನಮ್ಮ ಪಕ್ಷಕ್ಕೆ ಆಗಲಿ ಅಥವಾ ಮಾನ್ಯ ಪ್ರಕಾಶ್‌ರಿಗಾಗಲಿ ಅಥವಾ ನನಗಾಗಲಿ ಆ ದೃಷ್ಟಿ ಖಂಡಿತ ಇಲ್ಲ. ಇವತ್ತು ಹಿಂದುಳಿದ ವರ್ಗದವರಿಗೆ ಅಧಿಕಾರವನ್ನು ಕೊಡಬೇಕೆಂಬ ದೃಷ್ಟಿಯಿಂದ ಇಡೀ ಹಿಂದೂಸ್ಥಾನದಲ್ಲಿ ನಾವು ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಅಥವಾ ಪುರಸಭೆಗಳಲ್ಲಿರಬಹುದು, ಈ ಮೂರು ಪಂಚಾಯತಿಗಳಲ್ಲಿ ಹಿಂದುಳಿದವರ್ಗದವರಿಗೆ ಅಧಿಕಾರವನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ ಮತ್ತು ಅಲ್ಪಸಂಖ್ಯಾತರಿಗೆ ಅಧಿಕಾರವನ್ನು ಕೊಡತಕ್ಕಂಥ ಕೆಲಸವನ್ನೂ ಸಹ ಮಾಡಿದ್ದೇವೆ ಹಾಗೂ ಪರಿಶಿಷ್ಟಜಾತಿ :ಪರಿಶಿಷ್ಟವರ್ಗದವರಿಗೆ ಈ ಒಂದು ಸ್ಥಾನವನ್ನು ಕೊಡತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿದೆ. ನಮ್ಮ ಸರ್ಕಾರವನ್ನು ನಿಷ್ಕ್ರಿಯ ಸರ್ಕಾರ ಎಂದು ಹೇಳುತ್ತಿರುವುದರಿಂದ ನನಗಂತೂ ಅರ್ಥವಾಗುತ್ತಿಲ್ಲ. ಇನ್ನು ಹಣಕಾಸಿನ ವಿಚಾರದ ಬಗ್ಗೆ ಹೇಳಬೇಕಾದರೆ, ನಮ್ಮ ಹಣಕಾಸಿನ ಮಂತ್ರಿಗಳಾದ ಸನ್ಮಾನ್ಯ ಸಿದ್ಧರಾಮಯ್ಯನವರು ಕಳೆದ ನಾಲ್ಕು ವರ್ಷಗಳಿಂದ ಯಾವುದೇ ಒಂದು ಇಲಾಖೆಗೆ ಹಣಕಾಸಿನ ಕೊರತೆಯನ್ನು ಅವರು ಮಾಡಿಲ್ಲ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ವಿರೋಧಪಕ್ಷದಲ್ಲಿದ್ದಾಗ ಅನೇಕ ಸಂದರ್ಭಗಳಲ್ಲಿ ಕೆಲಸವನ್ನು ಮಾಡಿದ್ದೇವೆ. ಸರ್ಕಾರ ಹಣಕಾಸಿನ ಇತಿಮಿತಿಗಳನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಇವತ್ತು ಯಾವ್ಯಾವ ಇಲಾಖೆಯಿಂದ ಸರ್ಕಾರಕ್ಕೆ ಎಷ್ಟೆಷ್ಟು ಹಣ ಬರಬೇಕೆಂದು ಮತ್ತು ಪ್ರತಿ ತಿಂಗಳು ಸಹಿತ ಖಜಾನೆ ಖಾಲಿ ಆಗದೇ ಹಾಗೆ ನೋಡಿಕೊಂಡಿರತಕ್ಕಂಥ ಕೀರ್ತಿಯೂ ಸಹ ನಮ್ಮ ಸರ್ಕಾರಕ್ಕೆ ಮತ್ತು ನಮ್ಮ ನಾಯಕರಿಗೆ, ನಮ್ಮ ಹಣಕಾಸಿನ ಮಂತ್ರಿಗಳಿಗೆ ಕೊಡಬೇಕಾಗುತ್ತದೆ. ಇವತ್ತು ಅಲ್ಪಸಂಖ್ಯಾತರಿಗೆ ರಕ್ಷಣೆ ಇಲ್ಲ ಎಂಬ ಮಾತನ್ನು ತಾವು ಹೇಳಿದ್ದೀರಿ. 1989ರಿಂದ 1994ರ ವರೆಗೆ ಈ ರಾಜ್ಯದಲ್ಲಿ ಹಿಂದೂ ಮುಸಲ್ಮಾನ್

ದಂಗೆಗಳು ಆಗುತ್ತಿತ್ತು. ಇವತ್ತು ನಮ್ಮ ಸರ್ಕಾರ ಬಂದ ಮೇಲೆ ಅಂದರೆ, ಮೂರುವರೆ ವರ್ಷಗಳಲ್ಲಿ ಎಷ್ಟು ದಂಗೆಗಳು ಆಗಿವೆ ಎಂಬುದನ್ನು ತಾವು ಲೆಕ್ಕವನ್ನು ತೆಗೆದು ನೋಡಿ. ಇವತ್ತು ನಮ್ಮ ರಾಜ್ಯದ ಪೋಲೀಸರು ಎಲ್ಲವನ್ನೂ ಸರಿಯಾಗಿ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ, ನಮ್ಮ ಪೊಲೀಸರ ದಕ್ಷತೆಯನ್ನು ನಾವು ಮೆಚ್ಚಬೇಕಾಗುತ್ತದೆ. ಇವತ್ತು ಹಿಂದೂ-ಮುಸಲ್ಮಾನರ ಐಕ್ಯತೆಯ ದೃಷ್ಟಿಯಿಂದಾಗಿ ಈದ್ಗಾ ಮೈದಾನದ ಸಮಸ್ಯೆಯನ್ನು ಬಗೆ ಹರಿಸಿದ್ದೇವೆ. ಇದಕ್ಕೆ ಕಾಂಗ್ರೆಸ್ ಪಕ್ಷದವರು ಮತ್ತು ಭಾರತೀಯ ಜನತಾ ಪಾರ್ಟಿಯವರು ಹಾಗೂ ಸ್ಥಳೀಯ ಸಂಸ್ಥೆಗಳು ಈ ಒಂದು ಸಮಸ್ಯೆಯನ್ನು ಬಗೆಹರಿಸಲು ಸಹಕಾರವನ್ನು ಕೊಟ್ಟಿದ್ದಾರೆ. ಇದು ನಮ್ಮ ಪಕ್ಷದ ಕೀರ್ತಿ ಎಂದು ನಾನು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅವತ್ತಿನಿಂದ ಇವತ್ತಿನವರೆಗೆ ರಾಜ್ಯದಲ್ಲಿ ಹಿಂದೂ-ಮುಸಲ್ಮಾನರ ದಂಗೆಗಳು ಆಗುತ್ತಿಲ್ಲ. ನಮ್ಮ ಸರ್ಕಾರ ರಾಜ್ಯದ ಪ್ರಗತಿ ದೃಷ್ಟಿಯಿಂದ, ಅದು ಹಿಂದುಳಿದ ವರ್ಗದವರು ಇರಬಹುದು ಅಥವಾ ಅಲ್ಪಸಂಖ್ಯಾತರು ಇರಬಹುದು ಅಥವಾ ಪರಿಶಿಷ್ಟ ವರ್ಗದವರಾಗಿರಬಹುದು, ಒಂದು ಮಾದರಿ ರಾಜ್ಯವನ್ನಾಗಿ ಈ ರಾಷ್ಟ್ರದಲ್ಲಿ ಮಾಡಬೇಕೆಂಬ ದೃಷ್ಟಿಯನ್ನು ಇಟ್ಟುಕೊಂಡು ನಾವು ಕೆಲಸವನ್ನು ಮಾಡುತ್ತಿದ್ದೇವೆ. ನಮ್ಮ ಸರ್ಕಾರದ ಬಗ್ಗೆ ಅವರ ಅಂತರಾಳದಲ್ಲಿ ಏನು ಇದೆ ಎಂಬ ವಿಚಾರ ನಮಗೂ ಸಹ ಗೊತ್ತಿದೆ. ಮಾನ್ಯ ಜೆ.ಎಚ್.ಪಟೇಲರ ಸರ್ಕಾರ ಹೋಗಬೇಕೆಂಬುದು ಅವರ ಉದ್ದೇಶ ಅಲ್ಲ. ಇನ್ನು 10 ತಿಂಗಳಲ್ಲಿ ಚುನಾವಣೆಯನ್ನು ಎದುರಿಸಬೇಕಾಗುತ್ತದೆ, ಆದ್ದರಿಂದ ಇವರು ರಾಜಕೀಯವಾಗಿ ಈ ವೇದಿಕೆಯಲ್ಲಿ ಹೇಳಬೇಕಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವೂ ಕೂಡ ಸನ್ಯಾಸಿಗಳಲ್ಲಿ. ನಾವು ಮತ್ತೆ ಅಧಿಕಾರಕ್ಕೆ ಬರುವುದರಲ್ಲಿ ಯಾವುದೇ ರೀತಿಯ ಸಂಶಯ ನನಗಂತೂ ಇಲ್ಲ. ಇವತ್ತು ಜನರ ಹತ್ತಿರ ವಿಶ್ವಾಸದಿಂದ ಹೋಗುತ್ತೇವೆ. ನಾವು ಬಡವರಿಗೋಸ್ಕರ ಅಕ್ಕಿ, ನೀರು ಮತ್ತು ಮನೆಯನ್ನು ಕೊಟ್ಟಿದ್ದೇವೆ ಹಾಗೂ ರಕ್ಷಣೆ ಮತ್ತು ಅಧಿಕಾರವನ್ನು ಸಹ ಕೊಟ್ಟಿದ್ದೇವೆ. ಇವತ್ತು ನಮ್ಮ ಆತ್ಮಕ್ಕೆ ತೃಪ್ತಿ ಇದೆ. ಕೆಲವು ತಪ್ಪುಗಳು ಆಗಿರಬಹುದು, ಆಗಿಲ್ಲವೆಂದು ನಾನು ಹೇಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವತ್ತು ಬಸ್ಸಿನ ದರವನ್ನು ಮತ್ತು ನೀರಿನ ದರ ಹಾಗೂ ವಿದ್ಯುಚ್ಛಕ್ತಿ ದರವನ್ನು ಏರಿಸಿದ್ದೀರಿ. ಮಾನ್ಯ ನಾಗೇಗೌಡರು ನೀರನ್ನು ಬಿಟ್ಟರು, ಮಾನ್ಯ ಸಿಂಧ್ಯಾರವರು ಬಸ್ ಮತ್ತು ರೈಲ್‌ನ್ನು ಬಿಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ನಾಗೇಗೌಡರು ನೀರನ್ನು ಬಿಟ್ಟರು ಎಂದು ಯಾವ ಅರ್ಥದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಅವರು ಕಾಂಗ್ರೆಸ್‌ನಲ್ಲಿದ್ದಾಗ ಅವರಿಗೆ ಇದು ಕೋಡ್ ವರ್ಡ್ ಆಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ರೈಲ್ ಬಿಟ್ಟರೆ ಬಹಳ ಸಂತೋಷ. ಆದರೆ ನಾನು ಬಸ್

ಬಿಡತಕ್ಕಂಥ ಕೆಲಸಕ್ಕೆ ಈಗ ಬರುತ್ತಿದ್ದೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಸಿಂಧ್ಯಾರವರ ಭಾಷಣವನ್ನು ನಾನು ತದೇಕ ಚಿತ್ತದಿಂದ ಕೇಳುತ್ತಿದ್ದೆ, ಮಾನ್ಯ ಸಚಿವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಕೆಲವನ್ನು ಸರಿಯಾಗಿ ಹೇಳುತ್ತಾ ಅಲ್ಲೊಂದು ಇಲ್ಲೊಂದು ಸುಳ್ಳನ್ನು ಹೇಳುತ್ತಿದ್ದಾರೆ. ಚುನಾವಣೆಯಲ್ಲಿ ನಾವು ಗೆಲ್ಲುತ್ತೇವೆಂದು ಮಾನ್ಯ ಸಚಿವರು ಹೇಳಿದರು. ಆದರೆ, ಅವರು ಕಡೆಯವರು ಎಷ್ಟೋ ಜನ ನನ್ನ ಹತ್ತಿರ ನಾವು ಗೆಲ್ಲುವುದಿಲ್ಲವೆಂದು ಹೇಳಿದ್ದರು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸನ್ಮಾನ್ಯ ನಂಜೇಗೌಡರು ಈ ಸದನದ ಗೌರವಾನ್ವಿತ ಹಿರಿಯ ಸದಸ್ಯರು. ಅವರು ಕೆಲವುಸಾರಿ ಹೇಳಿರುವುದು ನಿಜ, ನಾನು ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಬೊಮ್ಮಾಯಿರವರು ಇವತ್ತು ಈ ಸದನದಲ್ಲಿ ಇಲ್ಲ. ನಾನು 1983ರಲ್ಲಿ ಶಿವಾಜಿನಗರ ಕ್ಷೇತ್ರದಲ್ಲಿ ನಿಲ್ಲಬೇಕೆಂದು ಇದ್ದೆ. ನಾನು 1962ನೇ ಇಸವಿಯಿಂದ ಬೆಂಗಳೂರಿನಲ್ಲಿದ್ದೇನೆ. ನಮ್ಮ ಪಾರ್ಟಿ ಅಧ್ಯಕ್ಷರಾಗಿದ್ದ ಮಾನ್ಯ ಬೊಮ್ಮಾಯಿರವರು ನನಗೆ, ನೀನು ಕನಕಪುರಕ್ಕೆ ಹೋಗಿ ಚುನಾವಣೆಗೆ ನಿಂತುಕೊಂಡು ಗೆದ್ದು ಬಾ ಎಂದು ಹೇಳಿದರು ಮತ್ತು ಬೆಂಗಳೂರಿನಲ್ಲಿ ಬಹಳ ಜನ ದೊಡ್ಡದೊಡ್ಡವರಿದ್ದಾರೆ, ಆದ್ದರಿಂದ ಕನಕಪುರದಿಂದ ಚುನಾವಣೆಗೆ ನಿಲ್ಲುವುದಕ್ಕೆ ನನಗೆ ಟಿಕೇಟ್ ಕೊಟ್ಟರು. ನಾನು ಊರು ಬಿಟ್ಟು 15-20 ವರ್ಷ ಆಗಿತ್ತು, ಆದ್ದರಿಂದ ಕನಕಪುರದಲ್ಲಿ ಗೆದ್ದುಬರುತ್ತೇನೆಂದು ಅಂದುಕೊಂಡಿರಲಿಲ್ಲ. ಇವತ್ತಿನದಿವಸ ನನ್ನ ಕ್ಷೇತ್ರದ ಜನ ನನ್ನನ್ನು ಸತತವಾಗಿ ಗೆಲ್ಲಿಸಿಕೊಂಡು ಬಂದಿದ್ದಾರೆ. ಆದರೆ ಕೆಲವರು ವಾತವರಣವನ್ನು ನೋಡಿ ಅನುಮಾನಗಳನ್ನು ವ್ಯಕ್ತ ಮಾಡಿರಬಹುದು. ನಾವು ಇವತ್ತು ಅವರಿಗೆ ಒಳ್ಳೆಯ ಕೆಲಸವನ್ನೇ ಮಾಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಸಂಶಯವನ್ನು ಇಟ್ಟುಕೊಳ್ಳಬೇಡಿ ಎಂದು ಹೇಳುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು 5.30ಗಂಟೆಗಳ ಕಾಲ ಬಹಳ ದೀರ್ಘವಾಗಿ ಮಾತನಾಡಿದ್ದನ್ನು ನಾವೆಲ್ಲಾ ಕುಳಿತುಕೊಂಡು ಕೇಳಿದ್ದೇವೆ. ಸಿಂಧ್ಯಾರವರು ಸಾರಿಗೆ ಸಂಸ್ಥೆಯಲ್ಲಿ ದಬ್ಬಾಳಿಕೆಯನ್ನು ಮಾಡಿದ್ದಾರೆ ಮತ್ತು ಸಾರಿಗೆ ಸಂಸ್ಥೆಯಲ್ಲಿ ಎರಡು ಸಲ ಬಸ್ಸಿನ ದರವನ್ನು ಜಾಸ್ತಿ ಮಾಡಿದರೂ ಸಹಿತ ಯಾವುದೇ ಉಪಯೋಗ ಆಗಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಪವಿತ್ರವಾಗಿರತಕ್ಕಂಥ ವೇದಿಕೆಯ ಮೂಲಕ ಹೇಳುವುದೇನೆಂದರೆ, ಕಳೆದ ಎರಡೂವರೆ ವರ್ಷಗಳ ಕಾಲದಲ್ಲಿ ನಾನು, ನಾನು ಎಂದು ಹೇಳುವುದಿಲ್ಲ, ನಮ್ಮ ಮುಖ್ಯಮಂತ್ರಿಗಳ ಸಹಕಾರ ಮತ್ತು ಮಂತ್ರಿ ಮಂಡಲದ ಸಹೋದ್ಯೋಗಿಗಳ ಸಹಕಾರ ಹಾಗೂ ನಮ್ಮ ಆಡಳಿತ ಪಕ್ಷದ ಶಾಸಕರ ಸಹಕಾರ ಮತ್ತು ವಿರೋಧ ಪಕ್ಷದ ಶಾಸಕರ ಸಹಕಾರ, ನೀವೆಲ್ಲರೂ ಸಹಕಾರವನ್ನು ಕೊಟ್ಟಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಮುಖ್ಯವಾಗಿ ಮುಖ್ಯಮಂತ್ರಿಗಳ ಮತ್ತು ಹಣಕಾಸಿನ ಮಂತ್ರಿಗಳ ಸಹಕಾರದೊಂದಿಗೆ ಇವತ್ತು ಸಾರಿಗೆ ಸಂಸ್ಥೆಯಲ್ಲಿ 1989ರಿಂದ

1994ರ ವರೆಗೆ ಏನೇನು ಮಾಡಿದ್ದಾರೆ 1995 ರಿಂದ ಇಲ್ಲಿಯವರೆಗೆ, ಅಂದರೆ ಕಳೆದ ಮೂರೂವರೆ ವರ್ಷದಿಂದ ನಾವೇನು ಮಾಡಿದ್ದೇವೆ ಎನ್ನತಕ್ಕಂಥ ಅಂಕಿಅಂಶಗಳನ್ನು ಮೊದಲು ಸದನಕ್ಕೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನಾವು ಬೆಲೆಗಳನ್ನು ಏರಿಸಿದ್ದೇವೆ ಇಲ್ಲವೆಂದು ಹೇಳುವುದಿಲ್ಲ. 1990ರಲ್ಲಿ ತಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ಬೆಲೆಗಳನ್ನು ಏರಿಸಿದ್ದಿರಿ. ಆಗ ಮಾನ್ಯ ಖರ್ಗೆಯವರು ಸರ್ಕಾರದಲ್ಲಿ ಇರಲಿಲ್ಲ. ಇವರ ಸರ್ಕಾರ ದಿನಾಂಕ 5-6-1990ರಲ್ಲಿ ಮೊದಲನೆ ಸಾರಿ ಬೆಲೆಯನ್ನು ಏರಿಸಿದ್ದೀರಿ ಹಾಗೆ ಎರಡನೇ ಸಾರಿ ದಿನಾಂಕ 18-2-1993ರಲ್ಲಿ ಏರಿಸಿದ್ದಾರೆ. ಇವರು ಐದು ವರ್ಷದ ಅವಧಿಯಲ್ಲಿ ಎರಡು ಸಾರಿ ಏರಿಸಿದ್ದಾರೆ. ಇದರಲ್ಲಿ ಆರ್ಡಿನರಿ ಬಸ್ ಫೇರ್‌ನ್ನು 42 ಪರ್ಸೆಂಟ್ ಏರಿಸಿದ್ದಾರೆ; ಎಕ್ಸ್‌ಪ್ರೆಸ್ 43 ಪರ್ಸ್‌ಂಟ್, ಸೆಮಿ ಲಕ್ಸುರಿ 53 ಪರ್ಸೆಂಟ್ ಹಾಗೂ ಲಕ್ಸುರಿ ಬಸ್ ಫೇರ್ 53 ಪರ್ಸೆಂಟ್‌ನಷ್ಟು ಬಸ್ ದರವನ್ನು ಏರಿಸಿದ್ದಾರೆ. ಈ ಅಂಕಿಅಂಶಗಳನ್ನು ಮುಚ್ಚಿಡದೆ ಈ ಸದನದ ಮುಂದೆ ಇಡುತ್ತಿದ್ದೇನೆ ಮತ್ತು ಹಕ್ಕುಚ್ಯುತಿಗೆ ನಾನು ಒಳಗಾಗುತ್ತೇನೆ ಎನ್ನತಕ್ಕಂಥದ್ದು ಸಹಿತ ನನಗೆ ಗೊತ್ತಿದೆ. ನಮ್ಮ ಕಾಲದಲ್ಲಿ ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಯಾದ ಮೇಲೆ ಮಾರ್ಚ್ ತಿಂಗಳಲ್ಲಿ ಬಸ್ ದರವನ್ನು ಏರಿಸಿದ್ದೇವೆ. ಇದರಲ್ಲಿ ಆರ್ಡಿನರಿ ಬಸ್ ಫೇರ್ 18 ಪರ್ಸೆಂಟ್, ಎಕ್ಸ್‌ಪ್ರೆಸ್ 26 ಪರ್ಸೆಂಟ್ ಹಾಗೂ ಸೆಮಿ ಲಗ್ಜುರಿ 24 ಪರ್ಸೆಂಟ್ ಮತ್ತು ಲಗ್ಜುರಿ 24 ಪರ್ಸೆಂಟ್‌ನಷ್ಟು ಬಸ್ ದರವನ್ನು ಏರಿಸಿದ್ದೇವೆ. ಇದು ಆದ ತಕ್ಷಣ ಕೇಂದ್ರಸರ್ಕಾರದವರು ಡೀಸಲ್ ಬೆಲೆಯನ್ನು ಜಾಸ್ತಿ ಮಾಡಿದರು, ಈ ಸಂದರ್ಭದಲ್ಲಿ ಪ್ರತಿಯೊಂದರಲ್ಲೂ ಸಾರಸಗಟಾಗಿ 7 ಪರ್ಸೆಂಟ್, 7 ಪರ್ಸೆಂಟ್ ಮತ್ತು 5 ಪರ್ಸೆಂಟ್ ಬಸ್ ದರವನ್ನು ಜಾಸ್ತಿ ಮಾಡಿದ್ದೇವೆ. ಕಾಂಗ್ರೆಸ್ ಸರ್ಕಾರದ 5 ವರ್ಷದ ಅವಧಿಯಲ್ಲಿ ಇವರು ಸಾರಸಗಟಾಗಿ 42 ಪರ್ಸೆಂಟ್, 43 ಪಸೆಂಟ್ ಮತ್ತು 53 ಪರ್ಸೆಂಟ್‌ನಷ್ಟು ಬಸ್ ದರವನ್ನು ಏರಿಸಿದ್ದಾರೆ. ನಮ್ಮ ಸರ್ಕಾರದ ಅವಧಿಯಲ್ಲಿ ಒಟ್ಟಾರೆಯಾಗಿ ನಾವು 25 ಪರ್ಸೆಂಟ್, 31 ಪರ್ಸೆಂಟ್ ಮತ್ತು 30 ಪರ್ಸೆಂಟ್ ಬಸ್ ದರವನ್ನು ಏರಿಸಿದ್ದೇವೆ. ಇದು ನಿಜ ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇದು ಅನಿವಾರ್ಯವಾಗಿತ್ತು. ಇವತ್ತು ಇಡೀ ರಾಷ್ಟ್ರದಲ್ಲಿ ತಮಿಳುನಾಡು ಒಂದನ್ನು ಬಿಟ್ಟು ಬಾಕಿ ಯಾವ ರಾಜ್ಯಗಳಲ್ಲಿಯು ನಮ್ಮ ರಾಜ್ಯದಲ್ಲಿರತಕ್ಕಂಥ ಲೋಯೆಸ್ಟ್ ಬಸ್ ದರ ಇಲ್ಲವೆ ಇವರ 5 ವರ್ಷದ ಅವಧಿಯಲ್ಲಿ ಕೇವಲ 5 ಸಾವಿರ ಹೊಸ ಬಸ್‌ಗಳನ್ನು ಮಾತ್ರ ಖರೀದಿ ಮಾಡಿದ್ದಾರೆ. ನಾವು ಕಳೆದ ಮೂರುವರೆ ವರ್ಷದಿಂದ 8 ಸಾವಿರ ಹೊಸ ಬಸ್ಸುಗಳನ್ನು ಖರೀದಿ ಮಾಡಿದ್ದೇವೆ ಮತ್ತು ಈ ಒಂದು ವರ್ಷದಲ್ಲಿ ಮತ್ತೆ ಎರಡು ಸಾವಿರ ಬಸ್‌ಗಳನ್ನು ಖರೀದಿ ಮಾಡುತ್ತಿದ್ದೇವೆ. ಇವರ ಕಾಲದಲ್ಲಿ 10 ಡಿಪೋಗಳಲ್ಲಿ 9 ಡಿಪೋಗಳನ್ನು ಮಾತ್ರ ಇವರು ಪ್ರಾರಂಭ ಮಾಡಿದರು. ನಾವು ಕೇವಲ ಮೂರು ವರ್ಷದಲ್ಲಿ 15 ಡಿಪೋಗಳನ್ನು ಉದ್ಘಾಟನೆ ಮಾಡಿದ್ದೇವೆ ಮತ್ತು ಇನ್ನು ಎರಡು ತಿಂಗಳೊಳಗಾಗಿ 20 ಡಿಪೋಗಳನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಾರಿಗೆ ಸಂಸ್ಥೆಯಲ್ಲಿ 1562 ಜನರಿಗೆ ಕೆಲಸವನ್ನು ಕೊಟ್ಟಿದ್ದೀರಿ. ಆದರೆ,

ನಾವು ಈಗಾಗಲೇ 9909 ಜನರಿಗೆ ಸಾರಿಗೆ ಸಂಸ್ಥೆಯಲ್ಲಿ ಕೆಲಸವನ್ನು ಕೊಟ್ಟಿದ್ದೇವೆ. ಈ ತಿಂಗಳಲ್ಲಿ 3000 ಜನರಿಗೆ ಉದ್ಯೋಗವನ್ನು ಕೊಡುತ್ತಿದ್ದೇವೆ. ಈ ಒಂದೇ ವರ್ಷದಲ್ಲಿ 980 ಹೊಸ ಷೆಡ್ಯೂಲ್‌ನ್ನು ಪ್ರಾರಂಭ ಮಾಡುತ್ತಿದ್ದೇವೆ. ಮಾನ್ಯ ವೀರಪ್ಪಮೊಯ್ಲಿಯವರ ಕಾಲದಲ್ಲಿ ಪರ್‌ಫಾರ್‌ಮೆನ್ಸ್ ಇಂಪ್ರೂವ್‌ಮೆಂಟ್‌ನಲ್ಲಿ ಕ್ಯಾನ್ಸ್‌ಲೇಷನ್ 22 ಪರ್ಸೆಂಟ್ ಇತ್ತು, ನಾವು ಇದನ್ನು 6.5 ಪರ್ಸೆಂಟ್‌ಗೆ ಇಳಿಸಿದ್ದೇವೆ. ಕೆ.ಎಸ್.ಆರ್.ಟಿ.ಯನ್ನು ಟ್ರೈಫರ್‌ಕೇಷನ್ ಮಾಡಬೇಕೆಂದು ತಾವೆಲ್ಲರೂ ಸಹಕಾರ ಕೊಟ್ಟಿದ್ದೀರಿ, ಆದೇ ರೀತಿ ನಾವು ಟ್ರೈಫರ್‌ಕೇಷನ್ ಮಾಡಿದ್ದೇವೆ. ಇದರಿಂದಾಗಿ, ಹುಬ್ಬಳ್ಳಿ ಕಾರ್ಪೊರೇಷನ್ ನಷ್ಟ ಆಗತಕ್ಕಂಥ ಸ್ಥಿತಿಯಲ್ಲಿ ಇಲ್ಲ, ಲಾಭ ಆಗತಕ್ಕಂಥ ಸೂಚನೆ ಇದೆ. ಇವತ್ತು ಬೆಂಗಳೂರು ನಗರ ಸಾರಿಗೆ ಮೊದಲನೆ ಸಾರಿಗೆ ಲಾಭ ಮಾಡುತ್ತಿದೆ ಮತ್ತು ಕೆ.ಎಸ್.ಆರ್.ಟಿ.ಸಿ ನಷ್ಟ ಆಗುತ್ತಿಲ್ಲ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರಕ್ಕೆ ನಮ್ಮ ಮುಖ್ಯಮಂತ್ರಿಗಳಿಗೆ ಮತ್ತು ಎಲ್ಲರಿಗೂ ಸಹಿತ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್‌ನಲ್ಲಿ ವಿಶ್ವಾಸವನ್ನು ಇಟ್ಟುಕೊಂಡಿರತಕ್ಕಂಥವರು. ಕೆಲವು ಕಾರ್ಮಿಕರು ತಪ್ಪು ದಾರಿಗೆ ಎಳೆಯತಕ್ಕಂಥ ಪ್ರಯತ್ನವನ್ನು ಮಾಡಿದರು, ಆಗ ಅವರಿಗೆ ತಿಳುವಳಿಕೆಯನ್ನು ಕೊಡತಕ್ಕಂಥ ದೃಷ್ಟಿಯಿಂದ ಬಿಗಿ ಕ್ರಮವನ್ನು ತೆಗೆದುಕೊಂಡಿದ್ದೇವೆಯೇ ವಿನಹ ಇಲ್ಲಿ ದಬ್ಬಾಳಿಕೆ ನಡೆಸಬೇಕೆಂಬ ದೃಷ್ಟಿಯಿಂದ ಮಾಡಿಲ್ಲ. ಇವತ್ತು ಟ್ರೈಫರ್‌ಕೇಷನ್ ಮಾಡಿದ್ದೇವೆ ಮತ್ತು ಯೂನಿಯನ್‌ಗಳ ಚುನಾವಣೆಯನ್ನು ಮಾಡುವುದಕ್ಕೆ ಹೊರಟಿದ್ದೇವೆ ಎನ್ನತಕ್ಕಂಥ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಮ್ಮ ಮಿತ್ರರಾದ ಮಾನ್ಯ ಪಾಟೀಲ್‌ರವರು ಗ್ರಾಮೀಣ ಪ್ರದೇಶದ ಕಡೆ ಸಾರಿಗೆಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಹೇಳಿದ್ದಾರೆ. ಇವತ್ತು ಮಳೆ ಹೆಚ್ಚಾಗಿ ಬಿದ್ದಿರುವುದರಿಂದಾಗಿ ರಸ್ತೆಗಳು ದುರಸ್ತಿಯಾಗಿರುವ ಕಾರಣ ಗ್ರಾಮೀಣ ಪ್ರದೇಶದಲ್ಲಿ ಸಾರಿಗೆ ವ್ಯವಸ್ಥೆ ಸರಿಯಿಲ್ಲದೇ ಇರಬಹುದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮುಂದೆ ಬರತಕ್ಕಂಥ ಎರಡು ಮೂರು ತಿಂಗಳ ಕಾಲದಲ್ಲಿ ಪ್ರತಿಯೊಬ್ಬ ಶಾಸಕರ ಕ್ಷೇತ್ರಕ್ಕೆ ರಾಷ್ಟ್ರೀಕರಣ ಆಗಿರತಕ್ಕಂಥ ಪ್ರದೇಶದಲ್ಲಿ ಎರಡು-ಮೂರು ಬಸ್‌ಗಳನ್ನು ಮತ್ತು ನಾಲ್ಕೈದು ಹೊಸ ಷೆಡ್ಯೂಲ್‌ಗಳನ್ನು ಕೊಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಸರ್ಕಾರದ ಮೇಲೆ ಈ ಒಂದು ಅವಿಶ್ವಾಸ ನಿರ್ಣಯದ ಮೇಲೆ ಆಪಾದನೆಗಳು ಬಂದಿದ್ದು, ಅದು ಏನೂ ಆಗಲಿಲ್ಲ. ಸರ್ಕಾರದವರು ನಿದ್ದೆಮಾಡಿಕೊಂಡು ಏನು ಕೆಲಸವನ್ನು ಮಾಡಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು ಎನ್ನುವ ದೃಷ್ಟಿಯಿಂದ ನಾನು ಉತ್ತರವನ್ನು ಕೊಡುವ ದೃಷ್ಟಿಯಿಂದ ಈ ಆಪಾದನೆಯಿಂದ ಮುಕ್ತವಾಗಲಿಕ್ಕೆ ನಾನು ಪ್ರಯತ್ನ ಮಾಡಿದ್ದೇನೆಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ಮಾನ್ಯ ಜೆ.ಹೆಚ್.ಪಟೇಲರ ನಾಯಕತ್ವದಲ್ಲಿರತಕ್ಕಂತಹ ನಮ್ಮ ಸರ್ಕಾರ ಅತ್ಯಂತ ಪ್ರಾಮಾಣಿಕವಾಗಿ ಕಳೆದ ನಾಲ್ಕು ವರ್ಷಗಳಲ್ಲಿ, ನಮ್ಮ ಚುನಾವಣೆಯ ಪ್ರಣಾಳಿಕೆಯಲ್ಲಿ ನಾವು ಜನಗಳಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆಯೋ ಅದನ್ನು ಉಳಿಸಿಕೊಳ್ಳುವುದಕ್ಕೆ ನಾವು ಪ್ರಯತ್ನವನ್ನು ಮಾಡಿದ್ದೇವೆ.

ಈ ಸರ್ಕಾರದ ಅವಧಿ ಇನ್ನೊಂದು ವರ್ಷ ಇದೆ. ತಾವುಗಳೇನು ಅವಸರದಲ್ಲಿ ಕೆಲವರು ಇರುವ ಹಾಗೇ ಕಾಣುತ್ತಿದೆ. ತಮಗೆಲ್ಲಾ ದೊಡ್ಡ ನಿರಾಸೆಯು ಕಾದಿದೆ. ಅದರಲ್ಲಿ ಏನೂ ಸಂಶಯವಿಲ್ಲ. ಈ ಅವಿಶ್ವಾಸ ನಿರ್ಣಯ ಪಾಸಾಗಿ ಈ ಸರ್ಕಾರ ಹೋಗಬೇಕೆಂದು ಯಾರಿಗೂ ಉದ್ದೇಶವಿಲ್ಲ ಎನ್ನುವುದು ನಮಗೆ ಅರಿವು ಇದೆ. ಇವರೇನಾದರೂ ಮತ್ತೊಮ್ಮೆ ಪ್ರೆಸ್ ಮಾಡಿದರೆ ಆ ಅವಿಶ್ವಾಸ ನಿರ್ಣಯವನ್ನು ವಿರೋಧ ಮಾಡುತ್ತೇವೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಸಿಂಧ್ಯಾರವರು ನಮ್ಮನ್ನೆಲ್ಲಾ ಕನ್‌ವಿನ್ಸ್ ಮಾಡುವ ಹಾಗೆ ಹೇಳುತ್ತಾರೆ. ನಿಮ್ಮಲ್ಲೇ ಏತಕ್ಕೆ ಲೀಡರ್ ಚೇಂಜ್ ಆಗಬೇಕೆಂದು ಹೇಳುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ನಂಜೇಗೌಡರೇ, ತಾವು ಹೇಳಿದ ಹಾಗೆ ಇದು ಇಂಟರ್‌ನಲ್ ಪಾರ್ಟಿ ಮ್ಯಾಟರ್; ಯಾರೂ ಬಹಿರಂಗವಾಗಿ ಬದಲಾವಣೆಯಾಗಬೇಕೆಂದು ಕೇಳಲಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಈಗ ಆಡಳಿತದಲ್ಲಿ ದಕ್ಷತೆ ಬರಬೇಕು. ಆಡಳಿತದಲ್ಲಿ ರಾಜಕೀಯ ಅಸ್ಥಿರತೆ ಬಂದಾಗ ಅದಕ್ಷತೆ ಬರುತ್ತದೆ. ನಿಮ್ಮ ಪಕ್ಷದಲ್ಲಿ ಇಂಟರ್‌ನಲ್, ಇಂಟರ್‌ನಲ್ ಎಂದು ಹೇಳುತ್ತೀರಿ. ನಿಮ್ಮ ಅಂತರ್‌ಕಲಹದಿಂದ ರಾಜಕೀಯದಲ್ಲಿ ಅಸ್ಥಿರತೆ ಬಂದರೆ ಅದು ಆಡಳಿತದ ಮೇಲೆ ರಿಪ್ಲೆಕ್ಟ್ ಆಗುವುದಿಲ್ಲವೇ? ಅದು ಈಗ ಇರುವಂತದ್ದು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಬಗ್ಗೆ ಕುಮಾರಿ ಜಯಲಲಿತಾ ಒಂದು ಮಾತನಾಡುತ್ತಾರೆ, ಮಮತಾ ಬ್ಯಾನರ್ಜಿಯವರು ಒಂದು ಮಾತನಾಡುತ್ತಾರೆ. ಇವರನ್ನು ಸಂಧಾನ ಮಾಡುವುದಕ್ಕೆ ಶ್ರೀ ಜಾರ್ಜ್‌ರವರನ್ನು ತಮಿಳುನಾಡು ಹಾಗೂ ಕಲ್ಕತ್‌ಕ್ಕೆ ಕಳುಹಿಸುತ್ತಾರೆ. ಅವರುಗಳನ್ನು ಕರೆದುಕೊಂಡು ಬರುವುದು, ನ್ಯಾಯ ಮಾಡುವುದು, ಪಂಚಾಯಿತಿ ಮಾಡುವುದು ಈಗ ಅಲ್ಲೆ ಏನಾಗಿದೆ. ಈಗ ಅಲ್ಲಿ ಇರುವುದು ಸ್ಥಿರತೆನೋ ಅಥವಾ ಅಸ್ಥಿರತೆನೋ, ತಾವೇ ಹೇಳಬೇಕು.

+ ಶ್ರೀ ಸಿ.ಭೈರೇಗೌಡ(ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನನಗಿಂತ ಮೊದಲು ಮಾತನಾಡಿದ ಮಾನ್ಯ ಸಚಿವರು ಅನೇಕ ರಾಜಕೀಯ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ತಂದಿರತಕ್ಕಂತಹ ಅವಿಶ್ವಾಸ ನಿರ್ಣಯ ವಾಸ್ತವಾಂಶಗಳಿಂದ ಕೂಡಿರತಕ್ಕಂಥ ನಿರ್ಣಯವಲ್ಲ. ಕೇವಲ ರಾಜಕೀಯ ಕಾರಣಗಳಿಗೋಸ್ಕರ ತಂದಿರತಕ್ಕಂಥ ಅವಿಶ್ವಾಸ ನಿರ್ಣಯ ಎಂದು ಹೇಳಿದ್ದಾರೆ. ಈ

ಒಂದು ಅವಿಶ್ವಾಸ ನಿರ್ಣಯದ ಮೇಲೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ತಾವು ಕೃಷಿ ಇಲಾಖೆಯಲ್ಲಿ ಕೇವಲ ಪ್ರಚಾರಕ್ಕೋಸ್ಕರ ಅನೇಕ ಮಾತುಗಳನ್ನು ಹೇಳಿದ್ದೀರಿ. ಆದರೆ ಅದರ ಸಾಧನೆ ಏನೂ ಇಲ್ಲ ಎನ್ನುವ ಮಾತನ್ನೂ ಸಹ ಹೇಳಿದ್ದಾರೆ. ನಾವು 1995ರಲ್ಲಿ ಇಡೀ ದೇಶದಲ್ಲಿ ಇಲ್ಲದಿರುವಂತಹ ಹೊಸ ಕೃಷಿ ನೀತಿಯನ್ನು ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ತಂದಿದ್ದೇವೆ. ಈ ಒಂದು ಹೊಸ ಕೃಷಿ ನೀತಿಯನ್ನು ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ತಂದಿದ್ದೇವೆ. ಈ ಒಂದು ಹೊಸ ಕೃಷಿ ನೀತಿಯನ್ನು ಜಾರಿಗೆ ತಂದ ಮೇಲೆ ನಮ್ಮ ರಾಜ್ಯದಲ್ಲಿ ದಾಖಲೆಯ ಪ್ರಮಾಣದಲ್ಲಿ ನಾವು ಆಹಾರ ಉತ್ಪಾದನೆಯನ್ನು ಮಾಡಿದ್ದೇವೆ. ಇದರ ಮುಖ್ಯ ಉದ್ದೇಶಗಳನ್ನು ಸಮಯದ ಅಭಾವವಿರುವುದರಿಂದ ಹೆಚ್ಚಿನ ವಿವರಣೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ದಾಖಲೆಯ ಪ್ರಮಾಣದಲ್ಲಿ ಆಹಾರದ ಉತ್ಪಾದನೆಯಾಗಿದೆ. 1995-96ನೇ ಸಾಲಿನಲ್ಲಿ 86.45 ಲಕ್ಷ ಟನ್ ಆಹಾರದ ಉತ್ಪಾದನೆಯಾಗಿದೆ. ಅದೇ ರೀತಿಯಲ್ಲಿ 1996-97 ನೇ ಸಾಲಿನಲ್ಲಿ 90 ಲಕ್ಷ ಟನ್ ಆಹಾರದ ಉತ್ಪಾದನೆಯನ್ನು ಮಾಡಬೇಕಾಗಿತ್ತು. ಅದಕ್ಕೆ ಬದಲಾಗಿ 93.47 ಲಕ್ಷ ಟನ್ ಆಹಾರದ ಉತ್ಪಾದನೆಯಾಗಿದೆ. ನಾವು ಸಾಧನೆಯನ್ನು ಮಾಡುವುದಕ್ಕೆ ಏನು ಗುರಿಯನ್ನು ಇಟ್ಟುಕೊಂಡಿದ್ದೆವೋ, ಆ ಗುರಿಯನ್ನು ಮೀರಿ ಆಹಾರದ ಉತ್ಪಾದನೆಯನ್ನು ನಾವು ಮಾಡಿದ್ದೇವೆ. 1997-98ನೇ ಸಾಲಿನಲ್ಲಿ ಮಾತ್ರ ಸ್ವಲ್ಪ ಆಹಾರದ ಉತ್ಪಾದನೆಯಲ್ಲಿ ಹಿನ್ನೆಲೆ ಉಂಟಾಗಿತ್ತು. ಇದಕ್ಕೆ ಕಾರಣವೇನೆಂದರೆ ಹೆಚ್ಚಿನ ಮಳೆಯ ಕಾರಣ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಬೇರೆಬೇರೆ ಅತಿಮುಖ್ಯವಾಗಿರತಕ್ಕಂತಹ ಬೆಳೆಗಳು ಏನೇನು ಆಗಿದೆ ಎಂಬ ಬಗ್ಗೆ ಅಂಕಿಅಂಶಗಳು ನನ್ನ ಹತ್ತಿರ ಇದೆ. ಈಗ ಸಮಯದ ಅಭಾವವಿರುವುದರಿಂದ ಹೆಚ್ಚಿನ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಮಾನ್ಯ ಸದಸ್ಯರುಗಳು ತಾವು ವಿದೇಶಕ್ಕೆ ಹೋಗಿ ಬಂದಿದ್ದೀರಿ ನಮ್ಮ ರೈತರಿಗೋಸ್ಕರ ಏನು ತಂದಿದ್ದೀರಿ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಎರಡು ಬಾರಿ ವಿದೇಶಗಳಿಗೆ ಹೋಗಿರುವುದು ನಿಜ. ಹೊರದೇಶಗಳಲ್ಲಿ ಕೃಷಿ ಏನು ಅಭಿವೃದ್ಧಿಯನ್ನು ಸಾಧಿಸುತ್ತಿದೆ ಎಂಬುದನ್ನು ನಾನು ನೋಡಿ ಬಂದ ಮೇಲೆ ಇಲ್ಲಿ ಅನೇಕ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹೊರದೇಶದಲ್ಲಿ ಕೃಷಿಯ ಯಾಂತ್ರೀಕರಣ ಯಾವ ರೀತಿ ಆಗಿದೆಯೋ ಆ ಪ್ರಮಾಣದಲ್ಲಿ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಕೃಷಿಯ ಯಾಂತ್ರೀಕರಣವಾಗಿಲ್ಲ. ಈ ಕೃಷಿಯ ಯಾಂತ್ರೀಕರಣದ ಬಗ್ಗೆ ಒಂದು ವಿಶೇಷವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು, ಮನುಷ್ಯನ ಚಾಲಿತ ಕೈನಿಂದ ಉಪಕರಣಗಳನ್ನು ಯಂತ್ರಚಾಲಿತ ಉಪಕರಣಗಳನ್ನು ಮತ್ತು ಎತ್ತು ಚಾಲಿತ ಉಪಕರಣಗಳನ್ನು ಇವತ್ತು ಆ ಎಲ್ಲಾ ಉಪಕರಣಗಳನ್ನು ಬಳಕೆ ತರಬೇಕೆಂಬ ಉದ್ದೇಶವನ್ನಿಟ್ಟುಕೊಂಡು ನಾವು ವಿಶೇಷವಾದ ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಇವತ್ತಿನ ದಿವಸ ಅದಕ್ಕೆಲ್ಲಾ ವಿಶೇಷವಾದ ರಿಯಾಯಿತಿಯನ್ನು ಕೊಡತಕ್ಕಂತಹ ಕೆಲಸಗಳು ಆಗಿದೆ. ನಾನು ಒಂದೇ ಒಂದು

ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಭತ್ತವನ್ನು ನಾಟಿ ಮಾಡುವುದಕ್ಕೆ, ನಾನು ರಾಜ್ಯದ ನಾನಾ ಮೂಲೆಗಳಿಂದ ಹೋಗಿ ಕೇಳಿದ್ದೇನೆ. ಒಂದು ಎಕರೆಗೆ ನಾಟಿ ಮಾಡುವುದಕ್ಕೆ ಎಷ್ಟು ಖರ್ಚಾಗುತ್ತದೆಂದರೆ ಕೆಲವು ಕಡೆ 400 ರೂಗಳು ಖರ್ಚಾಗುತ್ತದೆಂದು ಮತ್ತೆ ಕೆಲವು ಕಡೆ 500 ಮತ್ತೆ ಕೆಲವು ಕಡೆ 800 ರೂಗಳು ಖರ್ಚಾಗುತ್ತದೆಂದು ಹೇಳುತ್ತಾರೆ. ಕೆಲವು ಕಡೆ 50ರಿಂದ 60 ರೂಗಳು, ಮತ್ತೆ ಕೆಲವು ಕಡೆ 70-80 ರೂಗಳು ಆಳುಗಳ ಕೂಲಿಯನ್ನು ಲೆಕ್ಕಹಾಕುತ್ತಾರೆ. ಈ ಕೆಲಸವನ್ನು ಎಷ್ಟು ಖರ್ಚಿನಲ್ಲಿ ಮಾಡುವುದಕ್ಕೆ ಸಾಧ್ಯವಿದೆ ಎನ್ನತಕ್ಕದ್ದನ್ನು ನೋಡಬೇಕಾಗುತ್ತದೆ. ಭತ್ತವನ್ನು ನಾಟಿ ಮಾಡುವ ಸಣ್ಣ ಉಪಕರಣವಿದೆ. ಆ ಉಪಕರಣದ ಬೆಲೆ ಸುಮಾರು ಒಂದೂವರೆ ಸಾವಿರ ರೂ.ಗಳಾಗಬಹುದು. ಈ ಒಂದು ಬಳಸುವ ಮುನ್ನ ರೈತರಿಗೆ ಭತ್ತನಾಟಿ ಮಾಡುವಾಗ 500 ರೂ.ಗಳಿಂದ 600 ರೂ.ಗಳು ಖರ್ಚಾಗುತ್ತಿದ್ದದ್ದು ಈಗ ಕೇವಲ 50 ರಿಂದ 60 ರೂಗಳು ಮಾತ್ರ ಈ ಉಪಕರಣವನ್ನು ಬಳಸುವುದರಿಂದ ಖರ್ಚಾಗುತ್ತದೆ. ಆ ಯಂತ್ರಗಳನ್ನು ತೆಗೆದುಕೊಡಿ ಎಂದು ತಾವೇ ಹೇಳುತ್ತಿದ್ದೀರಿ. ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ತಿಮ್ಮಪ್ಪನವರೇ, ಅದನ್ನೇ ಕೊಡಬೇಕೆಂಬ ಬಗ್ಗೆ ವಿಶೇಷವಾದ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಇವತ್ತಿನ ದಿವಸ ಹೊಲದಲ್ಲಿ ಕಳೆಯನ್ನು ತೆಗೆಯಬೇಕಾಗಿದ್ದರೆ 10 ಜನ ಮಾಡತಕ್ಕಂತಹ ಕೆಲಸವನ್ನು ಒಬ್ಬನೇ ಮಾಡತಕ್ಕಂತಹ ಉಪಕರಣವೂ ಇದೆ. ಇವತ್ತು ನಾವು ರೈತರಿಗೆ ಅದನ್ನು ಕೊಡತಕ್ಕಂತಹ ಕೆಲಸವನ್ನು ಮಾಡಿದ್ದೇವೆ. ಆ ಉಪಕರಣವು ಮನುಷ್ಯ ಚಾಲಿತವಾಗಿದೆ. ಆ ಸಣ್ಣ ಉಪಕರಣದ ಬೆಲೆ ಸುಮಾರು 150ರಿಂದ 200 ರೂಗಳಾಗಬಹುದು. ಆ ಉಪಕರಣಗಳನ್ನು ಬಳಕೆಗೆ ಬಾರದಂತಹ ರೀತಿಯಲ್ಲಿ ಇವತ್ತು ಈ ದೇಶದಲ್ಲಿ ವ್ಯವಸಾಯ ನಡೆಯುತ್ತಿದೆ. ಅದನ್ನು ನಾವು ಬಳಕೆಗೆ ತರಬೇಕೆಂದು ಮಾಡಿದ್ದೇವೆ. ರಾಜ್ಯದಲ್ಲಿ ಈ ರೀತಿಯಾದ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಇವತ್ತು ರೈತನು ಹೆಚ್ಚು ಬಂಡವಾಳವನ್ನು ಹೂಡಬೇಕಾಗಿತ್ತು; ಆ ಬಂಡವಾಳವನ್ನು ಕಡಿಮೆ ಮಾಡಿ ರೈತನು ತಾನು ಬೆಳೆಯುತಕ್ಕಂತಹ ಬೆಳೆಯಲ್ಲಿ ಹೆಚ್ಚಿನ ಲಾಭವನ್ನು ತರಬೇಕೆನ್ನುವ ಅನೇಕ ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ; ಎನ್ನುವ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ಸದನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಪುಟ್ಟಣಯ್ಯನವರು ಟರ್ಮಿನೇಟೆಡ್ ಸೀಡ್ ಬರುತ್ತದೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದರು. ಇವತ್ತಿನ ದಿವಸ ಇದು ಒಂದು ಅಪಾಯಕಾರಿಯ ಪರಿಸ್ಥಿತಿಯೂ ಹೌದು. ಇದು ಒಂದು ವೈಜ್ಞಾನಿಕ ಸಂಶೋಧನೆಯೂ ಕೂಡ ಆಗಿದೆ. ಆ ಬೀಜಗಳನ್ನು ಉಪಯೋಗ ಮಾಡುವುದರಿಂದ ಮುಂದೆ ಏನೇನು ಅನಾಹುತಗಳು ಆಗುತ್ತದೆಂದು ನಾವು ಈಗಲೇ ಹೇಳುವುದು ಕಷ್ಟವಾಗುತ್ತದೆ. ನಾವು ಪತ್ರಿಕೆಗಳಲ್ಲಿ ವಿಷಯ ಪ್ರಕಟವಾದ ತಕ್ಷಣ ನಾನು ವಿಜ್ಞಾನಿಗಳ ಹಾಗೂ ಉನ್ನತಾಧಿಕಾರಿಗಳ ಸಭೆಯನ್ನು ಕರೆದು ಇದಕ್ಕೆ ಯಾವ ರೀತಿ ಮುಂಜಾಗ್ರತೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಆ

ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಈ ವಿಚಾರವನ್ನು ತಿಳಿಸಿದೆವು. ಏಕೆಂದರೆ ಈ ಬೀಜಗಳು ಹೊರದೇಶದಿಂದ ಬರತಕ್ಕಂಥದ್ದು, ಅಲ್ಲದೆ ಹೊರದೇಶದಿಂದ ಬರತಕ್ಕಂಥ ಸಸಿ ಇವೆಲ್ಲವನ್ನೂ ಕೂಡ ಅದರ ಬಗ್ಗೆ ಜಾಗ್ರತೆಯನ್ನು ವಹಿಸಬೇಕಾಗುತ್ತದೆಂಬುದರ ಬಗ್ಗೆ ಕೇಂದ್ರಸರ್ಕಾರಕ್ಕೆ ಪತ್ರವನ್ನು ಬರೆದಿರುತ್ತೇವೆ. ಈ ವಿಷಯವನ್ನು ಬಹಳ ಸಂತೋಷದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ಇಡೀ ದೇಶದಲ್ಲಿರತಕ್ಕಂತಹ ಪೋರ್ಟ್ ಆಫ್ ಎಂಟ್ರಿ ಎಂದು ಏನಿದೆ; ಅಲ್ಲಿ ಇದಕ್ಕೆ ವಿಶೇಷವಾದಂತಹ ವ್ಯವಸ್ಥೆಯನ್ನು ಮಾಡಿ ಟರ್ಮಿನೇಟೆಡ್ ಸೀಡ್, ಟರ್ಮಿನೇಟೆಡ್ ಜೇನ್ ಇರತಕ್ಕಂತಹ ಬೀಜಗಳನ್ನು ದೇಶದ ಒಳಗಡೆ ಬಿಡಬಾರದು ಎಂಬ ಬಗ್ಗೆ ಕಟ್ಟುನಿಟ್ಟಿನ ಕಟ್ಟಾಜ್ಞೆಮಾಡಿ ಅದರ ಬಗ್ಗೆ ಕ್ರಮಗಳನ್ನೂ ಸಹ ತೆಗೆದುಕೊಂಡಿದ್ದಾರೆಂಬ ಬಗ್ಗೆ ಸಹ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ವ್ಯಾಪಕವಾಗಿ ಚರ್ಚೆಯಾಗಿರತಕ್ಕಂತದ್ದು, ಇವತ್ತು ರೈತ ಯಾವುದೇ ಬೆಳೆಯನ್ನು ಬೆಳೆದರೂ ಕೂಡ ಲಾಭದಾಯಕವಾದ ಬೆಲೆ ಬರುತ್ತಿಲ್ಲವೆಂದು ಹೇಳುತ್ತಾರೆ. ಇದು ವಾಸ್ತವಾಂಶನೂ ಕೂಡ ಹೌದು.

4.00 ಪಿಎಂ

ಅಧ್ಯಕ್ಷರು: ಬಹಳ ಜನ ಸದಸ್ಯರಿಗೆ ಬಹಳ ದಿವಸ ಹೇಳುವುದಕ್ಕೆ ಆಗುವುದಿಲ್ಲ. ನೀವು ಭಾಷಣ ಮಾಡುತ್ತಿದ್ದೀರಿ, ಅವರಷ್ಟಕ್ಕೆ ಅವರು ಮಾತನಾಡಿಕೊಳ್ಳುತ್ತಾರೆ. ಸ್ಕೂಲ್‌ನಲ್ಲಿ ಪಾಠ ಹೇಳಿದ ಹಾಗೆ ಎಷ್ಟು ಸಲ ಇಲ್ಲಿ ಹೇಳುವುದಕ್ಕಾಗುತ್ತದೆ? ನನಗೆ ಇದೊಂದು ಅಪಮಾನ. ಅದನ್ನು ಅವರು ತಿಳಿದುಕೊಳ್ಳುವುದಿಲ್ಲ. ಅವಿಶ್ವಾಸ ನಿರ್ಣಯದ ಮೇಲೆ ಸರ್ಕಾರ ಉತ್ತರ ಕೊಡುತ್ತಿದೆ. ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಗಂಭೀರವಾಗಿರಬೇಕು. ಎಲ್ಲಾ ತಮ್ಮ ತಮ್ಮಲ್ಲಿಯೇ ಮಾತನಾಡಲಿಕ್ಕೆ ಪ್ರಾರಂಭ ಮಾಡುತ್ತಾರೆ. ಗದ್ದಲ ಸಹಿಸಿಕೊಂಡು ನಿಮ್ಮ ಮಾತು ಕೇಳುವುದು ನನಗೆ ಕಷ್ಟವಾಗುತ್ತದೆ. ನೀವು ಕೂತುಬಿಡಿ ಅವರು ಏನೇನು ಮಾತನಾಡಿಕೊಳ್ಳುತ್ತಾರೋ ಮಾತನಾಡಿಕೊಳ್ಳಲಿ. ತಾವೆಲ್ಲರೂ ಸೇರಿ ಅದಕ್ಕೆ ಅನುಮತಿ ಕೊಡಿ. ಅವರು ಅನುಮತಿ ಕೊಟ್ಟಮೇಲೆ ನೀವು ಮಾತನಾಡಿ. ಇನ್ನು ಯಾವರೀತಿ ಹೇಳಬೇಕು? ಕನಿಷ್ಟ ಇಂತಹ ಸನ್ನಿವೇಶದಲ್ಲಿಯಾದರೂ ಗಂಭೀರವಾಗಿರಬೇಡವೇ? ಬೇಸರವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮತವನ್ನು ಪರವಾಗಿ ಹಾಕಬೇಕೋ ವಿರುದ್ಧವಾಗಿ ಹಾಕಬೇಕೋ ಎಂದು ಚರ್ಚೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಓಡಾಡುತ್ತಿರುತ್ತಾರೆ, ಸಂತೆಯಲ್ಲಿ ಓಡಾಡಿದಹಾಗೆ. ಬಹಳ ಅಪರೂಪಕ್ಕೆ ಏನಾದರೂ ಕೆಲಸವಿದ್ದರೆ ಪರವಾಗಿಲ್ಲ. ನಾನು ಕೆಲವು ಸದಸ್ಯರುಗಳನ್ನು ನೋಡಿದ್ದೇನೆ, ಅವರುಗಳ ಹೆಸರು ಹೇಳುವುದು ಬೇಡ. ಅವರು ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಸೀಟಿನಲ್ಲಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಸಂಸ್ಕರಣೆಯಾಗಬೇಕು. ಕೃಷಿಯಲ್ಲಿ ಇವತ್ತು ಏನಾಗುತ್ತಿದೆ? ನಮ್ಮ ದೇಶದಲ್ಲಿ ಅದರಲ್ಲಿ ತೋಟಗಾರಿಕೆ ಉತ್ಪನ್ನಗಳಲ್ಲಿ ಸಂಸ್ಕರಣೆಯಾಗತಕ್ಕದ್ದು ಕೇವಲ 0.6ಪರ್ಸೆಂಟ್ ಮಾತ್ರ ಸಂಸ್ಕರಣೆಯಾಗುತ್ತಿದೆ. ಅದೇ ಹೊರದೇಶಗಳಲ್ಲಿ ಶೇಕಡ 80ರಷ್ಟು ಸಂಸ್ಕರಣೆಗೆ ಒಳಪಡುತ್ತಿದೆ. ಈರುಳ್ಳಿ ಇರಬಹುದು, ಟೊಮ್ಯಾಟೋ ಇರಬಹುದು ಯಾವುದೇ ಇರಬಹುದು. ಅದು ಸಂಸ್ಕರಣೆಯಾದರೆ ಅವರ ಲೈಫ್ ಜಾಸ್ತಿಯಾಗುತ್ತದೆ. ದುರದೃಷ್ಟವಶಾತ್ ಸಂಸ್ಕರಣೆ ಎನ್ನತಕ್ಕದ್ದು ನಮ್ಮಲ್ಲಿ 0.6ಪರ್ಸೆಂಟ್ ಮಾತ್ರ ಇದೆ. ಏನು ಲೋಪ ಆಗಿದೆ ಅಂದರೆ, ನಮಗೆ ಸ್ವಾತಂತ್ರ್ಯ ಬಂದು 50 ವರ್ಷಗಳಾಯಿತು. ಅದು ತಕ್ಷಣದಲ್ಲಿಯೇ ಪ್ರಾರಂಭವಾಗಬೇಕಾಗಿತ್ತು. ಆ ಕೆಲಸ ಇನ್ನೂ ಆಗಲಿಲ್ಲ. ಇವತ್ತು ನಿಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ಇವತ್ತು ಆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ವಿಶೇಷ ಪಾಲಿಸಿಯನ್ನು ರೂಢಿಸಿದ್ದೇವೆ. ಕೆಲವೇ ದಿನಗಳಲ್ಲಿ ಈ ರಾಜ್ಯದ ರೈತರ ಮುಂದೆ ಇಡುತ್ತಿದ್ದೇವೆ. ಸಂಸ್ಕರಣೆಗೆ ವಿಶೇಷವಾದ ಆದ್ಯತೆಯನ್ನು ನೀಡಬೇಕು. ರೈತರು ಬೆಳೆದುದ್ದನ್ನು ಸುಗ್ಗಿಯಲ್ಲಿ ಕೇಳುವರೇ ಇರುವುದಿಲ್ಲ. ಆಲೂಗಡ್ಡೆ ಬೆಳೆಯತ್ತಾರೆ ಬಿಸಾಕುತ್ತಾರೆ. ಟೊಮ್ಯಾಟೋ ಬೆಳೆಯುತ್ತಾರೆ ಬಿಸಾಕುತ್ತಾರೆ. ಈರುಳ್ಳಿ ಬೆಳೆಯುತ್ತಾರೆ ಬಿಸಾಕುತ್ತಾರೆ. ಕಡಲೇಕಾಯಿಯದು ಏನಾಯಿತು ಎಂಬುದು ತಮಗೆ ಗೊತ್ತಿದೆ. ಇಂತಹ ಸಂದರ್ಭದಲ್ಲಿ ರೈತರ ನೆರವಿಗೆ ಬರಬೇಕು. ಅದನ್ನು ಸಂಸ್ಕರಣೆಗೆ ಒಳಪಡಿಸಬೇಕು. ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿ ಅದನ್ನೇ ಒಂದು ಪಾಲಿಸಿಯಾಗಿ ತರುವವರು ಇದ್ದೇವೆ. ಕೇವಲ ಒಂದು ವಾರ ಅಥವಾ 15ದಿವಸಗಳಲ್ಲಿ ದೇಶದ ರೈತರ ಮುಂದೆ ಅದನ್ನು ಇಡುವವರು ಇದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೇಳಬೇಕಾದ ಅನೇಕ ವಿಷಯಗಳು ಇನ್ನೂ ಇವೆ. ವಿಶ್ವವಿದ್ಯಾನಿಲಯಗಳು ಏನಾಗಿವೆಯೆಂದು ತಿಳಿಸಿದ್ದೇನೆ. ನನಗೆ ಸಂತೋಷ, ಎರಡೂ ವಿಶ್ವ ವಿದ್ಯಾನಿಲಯಗಳಲ್ಲಿ ಬಹಳ ಡಿವೊಟೆಡ್ ಆಗಿರತಕ್ಕ ವಿಜ್ಞಾನಿಗಳಿದ್ದಾರೆ. ಇಡೀ ದೇಶದ ಕೃಷಿಗೆ ಅವರು ನೀಡಿರತಕ್ಕ ಸೇವೆ, ಅವರು ಮಾಡಿರತಕ್ಕ ಕೆಲಸ ಅಮೋಘವಾದ ಸೇವೆ ಮಾಡಿದ್ದಾರೆ. ಇವತ್ತಿನ ದಿವಸ ರಾಗಿಯಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಿರತಕ್ಕ ಕೀರ್ತಿ ನಮ್ಮ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿದೆ. ಡಾ|| ಲಕ್ಷ್ಮಣಯ್ಯನವರು ಮಾಡಿದ್ದಾರೆ. ಇತ್ತೀಚೆಗೆ ಅದನ್ನು ಮುಂದುವರಿಸಿಕೊಂಡು ಹೋಗಿ ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ರಾಗಿಯಲ್ಲಿ ಎರಡು ಹೊಸ ತಳಿಗಳನ್ನು ಬಿಡುಗಡೆ ಮಾಡಿದ್ದೇವೆ. ಜಿಪಿಯು 28 ಈಗ ಬಂದಿರತಕ್ಕ ಎಲ್ಲಾ ರಾಗಿ ತಳಿಗಳಿಗಿಂತ ಉತ್ತಮವಾದ ಇಳುವರಿಯನ್ನು ಇವತ್ತಿನ ದಿವಸ ಕೊಡುತ್ತಿದೆ. ನನ್ನ ಹೊಲದಲ್ಲಿ ಬೆಳೆದು; ರಾಗಿ ಕೊಯ್ಲಿಗೆ ಬಂದು ನಿಂತಿದೆ. ಅದನ್ನು ನೋಡಿ ನಾನು ಬಹಳ ಸಂತೋಷಪಟ್ಟಿದ್ದೇನೆ. ನಾನು ಕಣ್ಣಾರೆ ನನ್ನ ಹೊಲದಲ್ಲಿ ಅಲ್ಲ, ರಾಜ್ಯದ ಅನೇಕ ರೈತರ ಹೊಲದಲ್ಲಿ ಬೆಳೆದಿರುವುದನ್ನು ನೋಡಿದ್ದೇನೆ. ಇದರ ಜೊತೆಯಲ್ಲಿ ಬತ್ತದ ತಳಿಗಳನ್ನು ಬಿಡುಗಡೆ ಮಾಡಿರತಕ್ಕದ್ದು ಇದೆ. ಸಂಕರಜಾತಿಯ ಹೈಬ್ರಿಡ್ ಹೊಸ ತಳಿಯನ್ನು

ರಾಜ್ಯದಲ್ಲಿ ಬಿಡುಗಡೆ ಮಾಡಲಾಗಿದೆ. ತೋಟಗಾರಿಕೆ ಬೆಳೆಗಳಾದ ಗೋಡಂಬಿಯಲ್ಲಿ ಹೊಸತಳಿ ಬಂದಿದೆ. ವಿಶ್ವಸಂಸ್ಥೆಯ 50ನೇ ವಾರ್ಷಿಕೋತ್ಸವದ ಅಂಗವಾಗಿ ಯುಎನ್ಒ-50 ಎನ್ನತಕ್ಕ ಗೋಡಂಬಿ ಹೊಸತಳಿ ಬಂದಿದೆ. ಹೊರದೇಶಗಳಿಗೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅನುಕೂಲವಾಗಿರತಕ್ಕ ಗೋಡಂಬಿಯನ್ನು ಸಂಶೋಧನೆ ಮಾಡಿದ್ದೇವೆ. ಈ ರೀತಿಯಾಗಿ ಹೇಳುತ್ತಾ ಹೋದರೆ ಅನೇಕ ವಿಷಯಗಳಿವೆ. ರೇಷ್ಮೆರಂಗದಲ್ಲಿ ಉತ್ತಮದರ್ಜೆಯ ಹೊಸತಳಿಯನ್ನು ಕಂಡುಹಿಡಿದು ಒಂದು ಒಂದೂವರೆ ಸಾವಿರ ಮೊಟ್ಟೆಗಳನ್ನು ಹುಳಗಳು ಕೊಟ್ಟಿರತಕ್ಕದ್ದು ಇದೆ. ಆ ಪ್ರಯತ್ನ ನಡೆಯುತ್ತಿದೆ. ಇದರ ಜೊತೆಗೆ ಹಿಪ್ಪನೇರಳೆಯಲ್ಲಿ ಹೊಸತಳಿ (ವಿ-1) ಬಂದಿದೆ. ಒಂದು ಹೆಕ್ಟೇರ್‌ನಲ್ಲಿ ಸುಮಾರು 80ಟನ್ ರಷ್ಟು ಸೊಪ್ಪು ಬೆಳೆಯತಕ್ಕ ಹೊಸತಳಿ ಬಂದಿದೆ. ಅದರಲ್ಲೂ ಕೋಳಿಯಲ್ಲೂ ಕೂಡ, ಕೋಳಿ ಅಂದ ಕೂಡಲೇ ಪೌಲ್ಟ್ರಿಫಾರಂ ಜ್ಞಾಪಕಕ್ಕೆ ಬರುತ್ತದೆ. ಫಾರಂಗಳನ್ನು ದೊಡ್ಡದಾಗಿ ಕಟ್ಟತಕ್ಕ ಅವಶ್ಯಕತೆಯಿಲ್ಲ. ಸಾಮಾನ್ಯ ರೈತ ಎರಡು-ಮೂರು ಕೋಳಿಗಳನ್ನು ಇಟ್ಟುಕೊಂಡು ಆರೇಳು ಕೆ.ಜಿ. ತೂಕ ಬರುವ ಗಿರಿರಾಜ, ಗಿರಿರಾಣಿ ತಳಿಯನ್ನು ಸಂಶೋಧನೆ ಮಾಡಿ ತಂದಿದ್ದೇವೆ. ಅದು ಅಲ್ಲದೆ ನನಗೆ ಗೊತ್ತಿರುವ ಹಾಗೆ ಇಡೀ ದೇಶದಲ್ಲಿ ಎಲ್ಲೂ ಕಂಡಿಲ್ಲ. ಇವತ್ತು ಹತ್ತಿ ವಾಣಿಜ್ಯ ಬೆಳೆ. ಕೆಲವು ದೇಶಗಳಲ್ಲಿ ನಾನು ಹೋದಾಗ ಹೇಳಿದ್ದಾರೆ. ನಮಗೆ ಆರ್ಗ್ಯಾನಿಕ್ ಕಾಟನ್ ಬೇಕೆಂದು. ನನಗೆ ನಗು ಬಂತು. ಆರ್ಗ್ಯಾನಿಕ್ ಕಾಟನ್ ಅಂದರೆ ಮೈಮೇಲೆ ಹಾಕುವ ಬಟ್ಟೆಗೆ ಕೂಡ ಒಂದು ರೀತಿಯಾಗಿ ಕನ್ಸೂಮರ್ ಪ್ರಿಫರೆನ್ಸ್ ಸೀಮೆಗೊಬ್ಬರ ಹಾಕದೆ ಬೆಳೆಸಿರತಕ್ಕ ಕಾಟನ್ ಇದೆ. ನಮ್ಮ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಾಲ್ಕು ಬಣ್ಣದ್ದು ಸ್ವಾಭಾವಿಕವಾಗಿ ಅದೇ ಬಣ್ಣ ಬರತಕ್ಕ ಹತ್ತಿ ತಳಿಯನ್ನೂ ಕೂಡ ಇವತ್ತಿನ ದಿವಸ ಸಂಶೋಧನೆ ಮಾಡಿದ್ದೇವೆ. ಅದರ ಕಮರ್ಷಿಯಲ್ ಪ್ರೊಡಕ್ಷನ್ ಆಗ ಬೇಕಾಗಿದೆ. ಅದು ಅಲ್ಲದೆ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕೆ ಸಮಗ್ರ ಕೀಟನಿರೋಧಕ ವ್ಯವಸ್ಥೆಯನ್ನು ಐಪಿಎಂ ಎಂದು ಕರೆಯುತ್ತೇವೆ. ಅದನ್ನು ಕೂಡ ಪ್ರಯೋಗ ಮಾಡಿ ರೈತರ ಬೆಳೆಗಳನ್ನು ರಕ್ಷಣೆ ಮಾಡತಕ್ಕ ಕೆಲಸವನ್ನು ಮಾಡಿದ್ದೇವೆ. ಸಂಶೋಧನೆಯ ಪ್ರತಿಫಲದಿಂದ ಇವತ್ತು ಅನೇಕ ರೈತರು ಸಹಾಯ ಮತ್ತು ಪ್ರಯೋಜನೆಗಳನ್ನು ಪಡೆಯುತ್ತಿದ್ದಾರೆ. ಬೆಳೆದು ನಿಂತಿರತಕ್ಕ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕೆ ಹೋದವರ್ಷ ನಾವು ಸೇರಿ ಗುಲ್ಬರ್ಗಾ ಜಿಲ್ಲೆಯಲ್ಲಿ ಬೀದರ್ ಜಿಲ್ಲೆಯಲ್ಲಿ ಯಾವರೀತಿ ನಾಶವಾಯಿತು ಅದರ ಬಗ್ಗೆ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಿದ್ದೇವೆ. ವಿಜ್ಞಾನಿಗಳ ತಂಡ ಮತ್ತು ಇಲಾಖೆಯ ಅಧಿಕಾರಿಗಳ ತಂಡವನ್ನು ನೇಮಿಸಿದ್ದೇವೆ. ಹಿಂದೆ ನಾವು ಚಿಕ್ಕವರು ಇದ್ದಾಗ ಹಳ್ಳಿಗಳಲ್ಲಿ ಸರದಿ ಕಾಯುತ್ತಿದ್ದರು. ರಾತ್ರಿ ಇಷ್ಟು ಜನ ಎಂದು ಹೋಗಿ ಊರನ್ನೆಲ್ಲಾ ಕಾಯಬೇಕಾಗಿತ್ತು. ಆ ರೀತಿಯಾದ ವ್ಯವಸ್ಥೆಯನ್ನು ಈ ವರ್ಷ ಮಾಡಿರುವುದರಿಂದ ಇಲ್ಲಿಯವರೆಗೆ ಕೀಟದಬಾಧೆ ಯಾವರೀತಿ ಇರಬೇಕಾಗಿತ್ತೋ ಅದಕ್ಕಿಂತ ಕೆಳಮಟ್ಟದಲ್ಲಿದೆ. ರೈತರ ರಕ್ಷಣೆಯನ್ನು ಸರ್ಕಾರ ಮಾಡಿದೆಯೆಂದು ಈ ಸಂದರ್ಭದಲ್ಲಿ ಹೇಳಿ, ತಾವು ನಾನು ಇಷ್ಟು ಸಮಯ ಮಾತನಾಡಲು ಅವಕಾಶ

ಕೊಟ್ಟಿದ್ದಕ್ಕಾಗಿ ವಂದಿಸಿ, ನಾನು ಈಗಾಗಲೇ ತಿಳಿಸಿದ್ದೇನೆ ರಾಜಕೀಯ ಪ್ರೇರಿತವಾದ ಈ ಅವಿಶ್ವಾಸ ನಿರ್ಣಯವನ್ನು ವಿರೋಧಿಸುತ್ತಾ ಇದರಲ್ಲಿ ಯಾವ ಹುರುಳೂ ಇಲ್ಲ. ರಾಜಕೀಯವಾಗಿ ಏನು ಅಲ್ಲಿ ಕುಳಿತಿದ್ದಾರೆ ನಮ್ಮ ಸ್ನೇಹಿತರು ಅವರ ಕೆಲಸ ಅವರು ಮಾಡಬೇಕು. ನಾನು ಆ ಕಡೆ ಇದ್ದಾಗ, ಆರು ದಿವಸಗಳ ಕಾಲ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾಗಿಲ್ಲ. ಎಲ್ಲೂ ಇಲ್ಲ. ಯಾವ ವಿಧಾನಸಭೆಯಲ್ಲೂ ಕೂಡ ಚರ್ಚೆಯಾಗಿಲ್ಲ.ದಾಖಲೆ ಸೃಷ್ಟಿ ಮಾಡಬೇಕೆನ್ನುವ ದೃಷ್ಟಿಯಿಂದ ಈ ಅವಿಶ್ವಾಸ ತಂದಿರುವುದನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಹೇಳಿರುವುದಕ್ಕೆ ಒಂದು ಸತ್ಯಾಂಶದ ಉದಾಹರಣೆಯನ್ನು ಕೊಡುತ್ತೇನೆ ಸಾರ್.

ಅಧ್ಯಕ್ಷರು: ಈಗ ಬೇಡಿ.

+ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ): ಮಾನ್ಯಸಭಾಧ್ಯಕ್ಷರೆ, ವಿರೋಧ ಪಕ್ಷದವರು ಕಾಂಗ್ರೆಸ್‌ಪಕ್ಷದವರು ಮತ್ತು ಭಾರತೀಯ ಜನತಾಪಕ್ಷದವರು ವಿಶೇಷವಾಗಿ ಒಟ್ಟಿಗೆ ಸೇರಿ ಸರ್ಕಾರದ ವಿರುದ್ಧ ಈ ಮಂತ್ರಿಮಂಡಲದಲ್ಲಿ ನಮಗೆ ವಿಶ್ವಾಸವಿಲ್ಲವೆಂದು ಹೇಳಿ ನಿರ್ಣಯವನ್ನು ಮಂಡಿಸಿ ಸುಮಾರು 6ದಿನಗಳ ಕಾಲ 32-33 ಗಂಟೆಗಳ ಕಾಲ ಚರ್ಚೆ ಮಾಡಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸತತವಾಗಿ ಐದಾರು ಗಂಟೆಗಳ ಕಾಲ ಮಾತನಾಡಿ ಅವರು 23 ಆಪಾದನೆಗಳನ್ನು ಮಾಡಿದ್ದೇನೆಂದು ಹೇಳಿದ್ದಾರೆ. ಬಹುಶಃ 23 ಆಪಾದನೆಗಳಲ್ಲಿ ಹೊಸದಾಗಿ ಮಾಡಿರತಕ್ಕದ್ದು ಯಾವುದೂ ಇಲ್ಲ. ಕಳೆದ ನಾಲ್ಕು ವರ್ಷಗಳಿಂದ ಪದೇ ಪದೇ ಈ ಸದನದಲ್ಲಿ ಏನು ಚರ್ಚೆ ಮಾಡಿಕೊಂಡು ಬಂದಿದ್ದಾರೆ, ವಿರೋಧಪಕ್ಷದ ನಾಯಕರು ಅದನ್ನೆ ಪುನರಾವರ್ತನೆ ಮಾಡತಕ್ಕ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ ನನ್ನ ಸ್ಪಷ್ಟವಾದ ಉತ್ತರ ಏನೆಂದರೆ ಈಗಾಗಲೇ ನನ್ನ ಎಲ್ಲಾ ಸಹೋದ್ಯೋಗಿಗಳು ಪ್ರಸ್ತಾಪ ಮಾಡಿದಂತೆ ಅವರು ಮಾಡಿರತಕ್ಕ ಆಪಾದನೆಗಳಲ್ಲಿ ಯಾವುದೇ ಹುರುಳಿಲ್ಲ. ಯಾವುದೇ ಸತ್ಯಾಂಶವಿಲ್ಲ. ಅವರು ರಾಜಕೀಯವಾಗಿ ಮಾಡಿರತಕ್ಕ ಆಪಾದನೆಗಳು ಎನ್ನತಕ್ಕ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಪ್ರಸ್ತಾಪ ಮಾಡಿದಂತೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿ ಈ ಸರ್ಕಾರವನ್ನು ತೆಗೆಯುತ್ತೇವೆ ಪರ್ಯಾಯ ಸರ್ಕಾರವನ್ನು ಮಾಡುತ್ತೇವೆನ್ನುವ ಅವರ ಉದ್ದೇಶ ಕೂಡ ಇಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ಬಹಳ ವಿಚಿತ್ರವಾಗಿದೆ. ಇದು ಭಾರತೀಯ ಜನತಾಪಾರ್ಟಿ ಮತ್ತು ಕಾಂಗ್ರೆಸ್ ಪಕ್ಷದವರು ಒಟ್ಟಿಗೆ ಸೇರಿ ಮಂಡಿಸಿರತಕ್ಕಂಥಾದ್ದು.

ಶ್ರೀ ಟಿ.ಬಿ.ಜಯಚಂದ್ರ: ಬೇರೆಬೇರೆಯಾಗಿ ಮಂಡಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ: ಒಟ್ಟಿಗೆ ಓಟು ಹಾಕಬೇಕು ಎಂದು ತೀರ್ಮಾನ

ಮಾಡಿಕೊಂಡಿದ್ದೀರಿ. ಇದನ್ನು ಹಿಡನ್ ಅಜೆಂಡಾ ಎಂದು ಹೇಳಬೇಕಾಗುತ್ತದೆ. ಖರ್ಗೆಯವರು ಬಹಳ ಸಾರಿ ಇಲ್ಲಿ ಹೇಳಿದ್ದರು. ಇದು ಹಿಡನ್ ಅಜೆಂಡಾ....

ಶ್ರೀ ಧರ್ಮಸಿಂಗ್: ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಒಟ್ಟಾಗಿ ಮತಹಾಕುತ್ತಾರೆ ಎಂದು ಅದಕ್ಕೆ ಬೇಕಾದಷ್ಟು ಟೀಕೆ ಮಾಡಿದರೂ ಕೂಡ ಜನ ಅದನ್ನು ಒಪ್ಪುವುದಿಲ್ಲ. ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಗೆ ಇರತಕ್ಕಂಥ ವ್ಯತ್ಯಾಸ ಏನಿದೆ, ನೀವು ಬೇಕಾದಷ್ಟು ರಾಜಕೀಯವಾಗಿ ಬಳಸಿ ಬಳಸಿ ಹೇಳಿದರೂ ಕೂಡ ಜನ ಯಾರೂ ಒಪ್ಪುವುದಿಲ್ಲ.

ಶ್ರೀ ಸಿದ್ಧರಾಮಯ್ಯ: ಧರ್ಮಸಿಂಗ್‌ರವರೇ, ನೀವು ಇಷ್ಟು ರಾಜಕೀಯ ಬಳಸಿದ್ದೀರಿ, ನಾವು ಸ್ವಲ್ಪ ಹೇಳುವುದಕ್ಕೆ ಆಗುವುದಿಲ್ಲವೇನು? ನೀವು ಎಷ್ಟೊಂದು ಹೇಳಿದ್ದೀರಿ. ಸುಮಾರು ಗಂಟೆಗಟ್ಟಲೆ ಕಾಲ ಬರೇ ಅದನ್ನೇ ಹೇಳಿದ್ದೀರಿ. ನಮ್ಮಲ್ಲಿ ಆಂತರಿಕ ಭಿನ್ನಾಭಿಪ್ರಾಯ ಇದೆ ಎಂದು ಹೇಳಿದಿರಿ....

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಸಿದ್ಧರಾಮಯ್ಯನವರೇ ಬೇರೆ ಏನು ಬೇಕಾದರೂ ಹೋಲಿಕೆ ಮಾಡಿ. ಆದರೆ ಈ ಕಾಂಗ್ರೆಸ್‌ನ್ನು ಬೇರು ಸಮೇತ ಕಿತ್ತುಹಾಕಬೇಕು ಎಂದು ಹೇಳುತ್ತಾ ಇರತಕ್ಕಂಥ ಪಕ್ಷ ಭಾರತೀಯ ಜನತಾ ಪಾರ್ಟಿ. ಇವರ ಜೊತೆ ಒಂದಲ್ಲ ಒಂದು ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಂಡಿರತಕ್ಕಂಥವರು ನೀವೇ. ಇದು ಒಂದೇ ನಾಣ್ಯದ ಎರಡು ಮುಖ ಎಂದು ಜಗತ್ತಿಗೇ ಗೊತ್ತಿದೆ.

ಶ್ರೀ ಸಿದ್ಧರಾಮಯ್ಯ: ಈ ರಾಜ್ಯದ ಜನತೆಗೆ ಅನುಕೂಲಸಿಂಧು ಕೆಲಸ ಯಾರ್‍ಯಾರು ಮಾಡುತ್ತಿದ್ದಾರೆ ಎಂಬುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಗೊತ್ತಿದ್ದೂ ಕೂಡ ಆಗ ನಿಮ್ಮನ್ನು ತೆಗೆಯಬೇಕು ಅನ್ನುವುದು ಇತ್ತು. ನೀವು ಹೋಗಬೇಕು ಎಂದು ಇತ್ತು. ಈಗ ಇವರನ್ನು ತೆಗೆಯಬೇಕು ಎಂದು ಶುರುವಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಉಪಮುಖ್ಯಮಂತ್ರಿಗಳೇ, ಅವರು ಕರೆಕ್ಟ್ ಆಗಿ ಹೇಳುತ್ತಿದ್ದಾರೆ. 1983ರಲ್ಲಿ ಭೇಷರತ್ ಬೆಂಬಲ ಕೊಟ್ಟು ಅವರು ಇಲ್ಲಿ ಕುಳಿತು ಕೊಳ್ಳುವುದಕ್ಕೆ ಬೆಂಬಲ ಮಾಡಿಕೊಟ್ಟಿರಲ್ಲ, ಇಲ್ಲದಿದ್ದರೆ ನಿಮ್ಮ ಅಡ್ರೆಸ್ಸೇ ಇರುತ್ತಿರಲಿಲ್ಲ.

ಶ್ರೀ ಸಿದ್ಧರಾಮಯ್ಯ: ಅದನ್ನೂ ಕೂಡ ಜನರೇ ತೀರ್ಮಾನ ಮಾಡುತ್ತಾರೆ. ನಂತರ ಎರನೇ ಸ್ಥಾನ ಬಂದಿದ್ದು ಇವರು. ನಿಮ್ಮ ಕೈಬಿಟ್ಟು ನಮ್ಮ ಜತೆಯಲ್ಲಿ ಇದ್ದಾರೆ ಎಂದು ಹೇಳಿ ಅವರು 18-19 ಜನರು ಬಂದಿದ್ದರು. 1983ನೇ ಇಸವಿಯಲ್ಲಿ 18 ಜನ ಬಂದಿದ್ದರು. ಆಮೇಲೆ ನಮ್ಮ ಕೈಬಿಟ್ಟರು, ಎರಡೇ ಎರಡು ಆದರು. ಮಾನ್ಯ ಯಡಿಯೂರಪ್ಪನವರು ಮತ್ತು ಬಂಗೇರಾ... ಅವರು ಈಗ ನಮ್ಮಲ್ಲಿಗೇ ಬಂದುಬಿಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಂತು ಇಂತೂ ಒಂದೇ ಮನೆತನದಲ್ಲಿ ಹುಟ್ಟಿದಂಥ ಕುಟುಂಬ.

ಶ್ರೀ ಸಿದ್ಧರಾಮಯ್ಯ: ನಿಮ್ಮಿಂದ ಬಹಳಷ್ಟು ಕವಲು ಒಡೆದು ಬಹಳ ಜನ ಆ ಕಡೆಗೆ ಹೊರಟುಹೋಗಿದ್ದಾರೆ. ಇಲ್ಲಿಂದ ಕವಲೊಡೆದು ಎಲ್ಲಾ ಕಡೆ ಸೇರಿಕೊಂಡು ಬಿಟ್ಟಿದ್ದಾರೆ. ಅದೇನೇ ಇರಲಿ, ನಾನು ಹೆಚ್ಚಿಗೆ ರಾಜಕೀಯವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮುಖ್ಯಮಂತ್ರಿಗಳು ನಾಲ್ಕುವರೆ ಗಂಟೆಗೆ ಉತ್ತರ ಕೊಡಬೇಕು ಎಂದು ಇದ್ದಾರೆ. ಆದರೆ ನೀವು ಏನು ಹೇಳಿದಿರಿ? ಈ ರೀತಿ ಅವಿಶ್ವಾಸ ನಿರ್ಣಯ ತೆಗೆದುಕೊಂಡು ಬಂದುಬಿಟ್ಟರೆ ಸರ್ಕಾರವನ್ನು ಬೀಳಿಸಬಹುದು, ಅಲ್ಲಿ ಆಂತರಿಕ ಭಿನ್ನಾಭಿಪ್ರಾಯ ಇದೆ ಎಂದು ಹೇಳಿದಿರಿ. ನಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥವರು. ನಮ್ಮ ಪಕ್ಷದ ಶಾಸಕರಿಗೆ ಮುಕ್ತವಾಗಿ ಮಾತನಾಡತಕ್ಕಂಥ, ಸರ್ಕಾರದ ಬಗ್ಗೆ ದೋಷಗಳು ಇದ್ದರೆ ಅದರ ಬಗ್ಗೆ ಮಾತನಾಡತಕ್ಕಂಥ ಅಧಿಕಾರ ಇದೆ, ಹಕ್ಕು ಇದೆ. ಆದರೆ ಕಾಂಗ್ರೆಸ್‌ನಲ್ಲಿ ಆ ತರಹ ಹಕ್ಕು ಇಲ್ಲ. ಬಿ.ಜೆ.ಪಿ.ಯಲ್ಲಿ ಆ ತರಹ ಮಾತನಾಡುವುದಕ್ಕೆ ಅವಕಾಶ ಇಲ್ಲ. ಈ ಪಕ್ಷ ಮಾತ್ರ.....

ಶ್ರೀ ಕೆ.ಎಸ್.ಈಶ್ವರಪ್ಪ: ಹೊಡೆದಾಟವೇ ಪ್ರಜಾಪ್ರಭುತ್ವ ಎಂಬುದು ಅವರ ಲೆಕ್ಕ. ಉಪಮುಖ್ಯಮಂತ್ರಿಗಳೇ, ಪರಸ್ಪರ ಹೊಡೆದಾಟವೇ ಪ್ರಜಾಪ್ರಭುತ್ವ ಎಂಬ ನಿಮ್ಮ ವೇದವಾಕ್ಯ ಇವತ್ತು ಹೊರಗಡೆ ಬಂದಿದೆ, ಬಹಳ ಸಂತೋಷ.

ಶ್ರೀ ಸಿದ್ಧರಾಮಯ್ಯ: ಭಾರತೀಯ ಜನತಾಪಾರ್ಟಿಯವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲವೆನ್ನತಕ್ಕಂಥಾದ್ದು ಇಡೀ ದೇಶಕ್ಕೆ ಗೊತ್ತಿರುವ ವಿಷಯ. ನೀವು ಪ್ರಜಾಪ್ರಭುತ್ವದ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ: ಗ್ರಾಮಾಂತರ ಪ್ರದೇಶದಿಂದ ರಾಷ್ಟ್ರೀಯ ಮಟ್ಟದವರೆಗೆ ಈ ದೇಶದಲ್ಲಿ ಯಾವುದೇ ಪಕ್ಷ ಚುನಾವಣೆ ನಡೆಸಿದ್ದರೆ ಅದು ಬಿ.ಜೆ.ಪಿ. ಮಾತ್ರ. ಗ್ರಾಮಾಂತರ ಪ್ರದೇಶದಿಂದ ತಾಲ್ಲೂಕು ಮಟ್ಟ, ಜಿಲ್ಲಾಮಟ್ಟ, ರಾಜ್ಯಮಟ್ಟ, ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಮ್ಮನ್ನು ಬಿಟ್ಟರೆ ಇನ್ನು ಯಾವುದೇ ಪಕ್ಷದಲ್ಲಿ ಆಂತರಿಕ ಚುನಾವಣೆ ನಡೆದಿರುವುದಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಈ ತರಹ ಇಂಟರ್‌ಫಿಯರ್ ಆಗುತ್ತೀರಿ, ಮಾತನಾಡುವುದಕ್ಕೇ ಬಿಡುವುದಿಲ್ಲ. ನೀವು ಫ್ಯಾಸಿಸ್ಟ್ ಎಂದರೆ ಬಹಳ ಕೋಪ ಬಂದುಬಿಡುತ್ತದೆ. ಇವರಿಗೆ ಫ್ಯಾಸಿಸ್ಟ್ ಅನ್ನುವ ಹಾಗೇ ಇಲ್ಲ. ಮಾತನಾಡುವುದಕ್ಕೇ ಬಿಡುವುದಿಲ್ಲ. ಇನ್ನೇನು ಹೇಳಬೇಕೆಂದು ನನಗೆ ಅರ್ಥವಾಗುವುದಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ನಿಮ್ಮನ್ನು ಫ್ಯಾಸಿಸ್ಟ್ ಎಂದರೆ ಹೇಗೆ ಮೈಮೇಲೆ ಬಿದ್ದುಬಿಟ್ಟಿರಿ. ಈ

ತರಹ ನಡವಳಿಕೆಗೆ ಇನ್ನು ಯಾವ ತರಹ ಹೇಳಬೇಕು?

ಶ್ರೀ ಕೆಸ್.ಈಶ್ವರಪ್ಪ: ನಿಮ್ಮ ಬಾಯಲ್ಲಿ ಬರಬಹುದು. ಸ್ವಲ್ಪ ಇರುವವರಲ್ಲಿ ಸ್ವಲ್ಪ ಸಿನ್ನಿಯರ್ ಆಗಿರುವ ವೀರಪ್ಪ ಮೊಯಿಲಿಯವರು ಇಂಥಾದ್ದು ಮಾತನಾಡುವುದಿಲ್ಲ ಎಂದು ಲೆಕ್ಕ ಹಾಕಿಕೊಂಡಿದ್ದೆವು. ಅವರೇ ಹಾಗೆ ಮಾತನಾಡಿದರು. ನೀವು ಈಗ ಮಾತನಾಡಿದರೆ ನಾವು ನಿಮ್ಮ ಮೇಲೆ ಏನೂ ಬೀಳುವುದಿಲ್ಲ.

ಶ್ರೀ ಸಿದ್ಧರಾಮಯ್ಯ: ಈಗ ನೀವು ಹೇಳಿದ್ದೆಲ್ಲಾ ನಾವು ಕೇಳಿದ್ದೇವೆ. ಮಾನ್ಯ ಅಧ್ಯಕ್ಷರೇ, ಆದ್ದರಿಂದ ಇದರಿಂದ ಲಾಭ ಪಡೆದುಕೊಳ್ಳಬೇಕು, ಏನೋ ಇದರಿಂದ ಅನಾಹುತ ಆಗಿಬಿಡುತ್ತದೆ ಎಂದು ಏನಾದರೂ ಭ್ರಮೆಯಲ್ಲಿ ನೀವು ಇದ್ದರೆ, ಇನ್ನು ಕೆಲವೇ ನಿಮಿಷಗಳಲ್ಲಿ ನೀವು ಭ್ರಮನಿರಸನರಾಗುತ್ತೀರಿ. ನಿಮಗೆ ಭ್ರಮನಿರಸನ ಆಗುತ್ತದೆ, ನಿಮಗೆ ನಿರಾಶೆಯಾಗುತ್ತದೆ. ಬಹುಶಃ ಇಷ್ಟೆಲ್ಲಾ ಮಾತನಾಡಿದ ಮೇಲೆ ನಾವು ಮಾತನಾಡಬೇಕಾದ ಅಗತ್ಯವಿಲ್ಲ ಎಂದುಕೊಂಡರೆ ನೀವು ಮಂಡಿಸಿರತಕ್ಕಂಥ ಅವಿಶ್ವಾಸ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ ಇದರಲ್ಲಿ ಹುರುಳಿಲ್ಲ. ನಾಲ್ಕು ವರ್ಷಗಳಲ್ಲಿ ಮೂರು ಸಾರಿ ಈರೀತಿ ಅವಿಶ್ವಾಸ ನಿರ್ಣಯವನ್ನು ತೆಗೆದುಕೊಂಡು ಬಂದಿದ್ದೀರಿ. ನಾಲ್ಕು ವರ್ಷಗಳಲ್ಲಿ ಮೂರು ಸಾರಿ ತೆಗೆದುಕೊಂಡುಬಂದು ಇದರಿಂದ ಏನಾದರೂ ಲಾಭ ಪಡೆದುಕ್ಕೊಳ್ಳಬೇಕು ಎಂದರೆ, ಇದರಿಂದ ರಾಜಕೀಯವಾಗಿ ನಿಮಗೆ ಏನೇನೂ ಲಾಭ ಇಲ್ಲ. ನಾನು ಹೇಳುತ್ತೇನೆ, ನಮ್ಮಲ್ಲಿ ಏನೇ ಭಿನ್ನಾಭಿಪ್ರಾಯ ಇದ್ದರೂ ಕೂಡ ಮುಂದಿನ ಚುನಾವಣೆಯಲ್ಲಿ ಕೂಡ ನಾವೇ ಗೆಲ್ಲುವುದು. ಈ ಕಾಂಗ್ರೆಸ್ ಗೆಲ್ಲುವುದಿಲ್ಲ, ಭಾರತೀಯ ಜನತಾಪಾರ್ಟಿ ಗೆಲ್ಲುವುದಿಲ್ಲ ಎನ್ನುವುದನ್ನು ನಾನು ಅತ್ಯಂತ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಬೆಂಬಲಿಗರು ಎಲ್ಲಾ ಕಡೆ ಇದ್ದಾರೆ. ಆದರೆ ಇಲ್ಲಿ ಯಾರೂ ಇಲ್ಲ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ಬಹಳ ಕಷ್ಟ ಇದೆ.

ಶ್ರೀ ಸಿದ್ಧರಾಮಯ್ಯ: ನಮ್ಮ ಬೆಂಬಲಿಗರು ಆ ಕಡೆಯಲ್ಲೂ ಇದ್ದಾರೆ. ನಿಮಗೆ ಗೊತ್ತಿಲ್ಲ...

ಶ್ರೀ ಎಸ್.ರಾಜೇಂದ್ರನ್: ನಾವೆಲ್ಲಾ ಇದ್ದೇವೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಇದರಿಂದ ಏನೇನೂ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಈ ಸರ್ಕಾರ ಸುಭದ್ರವಾಗಿದೆ. ಇನ್ನು ಒಂದು ವರ್ಷ ಕಾಲ ಏನಿದೆ, ಅದನ್ನು ನಾವು ಮುಗಿಸುತ್ತೇವೆ ಮತ್ತು ಮುಂದಿನ ಚುನಾವಣೆಯಲ್ಲಿ ಮತ್ತೆ ಹೆಚ್ಚು ಸ್ಥಾನಗಳನ್ನು ಗಳಿಸಿ ಗೆದ್ದು ಬರುತ್ತೇವೆ. ಏಕೆಂದರೆ ಜನರ ವಿಶ್ವಾಸವನ್ನು ನಾವು ಉಳಿಸಿಕೊಂಡಿದ್ದೇವೆ. ಬಹಳ ಜನ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಈ ಸರ್ಕಾರದಲ್ಲಿ ಹಣವೇ ಇಲ್ಲ, ಖಜಾನೆ ಖಾಲಿಯಾಗಿದೆ, ಎಲ್ಲಾ ನಿಷ್ಕ್ರಿಯವಾಗಿಬಿಟ್ಟಿದೆ,

ಏನೇನೂ ಕೆಲಸ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ನಾವು ಎಷ್ಟು ಕೆಲಸ ಮಾಡಿದ್ದೇವೆ, ಹಿಂದಿನ ಮೂರು ವರ್ಷದ ಸರ್ಕಾರ ಇದ್ದಾಗ ಏನು ಅವರು ಮಾಡಿದ್ದರು, ನಾವು ಏನು ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನು ನಾನು ಈ ವರ್ಷದ ಆಯವ್ಯಯವನ್ನು ಮಂಡಿಸುವಾಗ ಬಹಳ ಸ್ಪಷ್ಟವಾದ ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದೇನೆ. ಮತ್ತೆ ಅದನ್ನು ನಾನು ಪದೆಪದೇ ಹೇಳುವುದಕ್ಕೆ ಹೋಗುವುದಿಲ್ಲ. ಆದರೂ ಕೆಲವು ವಿಚಾರಗಳನ್ನು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾಥಮಿಕ ಶಿಕ್ಷಣಕ್ಕೆ ನಮ್ಮ ಆದ್ಯತೆ ಎಂದು ನಾವು ಹೇಳಿದ್ದೇವೆ. ಇವರು ಹಿಂದಿನ ಮೂರು ವರ್ಷಗಳಲ್ಲಿ 30 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿದ್ದರೆ ನಾವು 61 ಸಾವಿರ ಜನ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಇದು ನಿಷ್ಕ್ರಿಯ ಸರ್ಕಾರವೇನು? ಅವರು ಮೂರು ಸಾವಿರದ ಆರುನೂರು ಕೊಠಡಿಗಳನ್ನು ಮೂರು ವರ್ಷಗಳಲ್ಲಿ ನಿರ್ಮಾಣ ಮಾಡಿದ್ದರೆ ನಾವು ಕಳೆದ ಮೂರು ವರ್ಷಗಳಲ್ಲಿ ಮೂವತ್ತೆರಡು ಸಾವಿರ ಕೊಠಡಿಗಳನ್ನು ನಿರ್ಮಾಣ ಮಾಡಿದ್ದೇವೆ. ಇದು ನಿಷ್ಕ್ರಿಯ ಸರ್ಕಾರವೇ? ಎಂದು ನೀರಾವರಿಗೆ ಅವರು ಮೂರು ವರ್ಷಗಳಲ್ಲಿ 2092 ಕೋಟಿ ಖರ್ಚುಮಾಡಿದ್ದರೆ ನಾವು 4079 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದು ನಿಷ್ಕ್ರಿಯ ಸರ್ಕಾರವೇ ಅಥವಾ ಕ್ರಿಯಾಶೀಲ ಸರ್ಕಾರವೇ ಎಂಬುದನ್ನು ಜನರು ತೀರ್ಮಾನ ಮಾಡಬೇಕು. ಅವರು ಪ್ರತಿವರ್ಷ 60 ಸಾವಿರಕ್ಕಿಂತಲೂ ಹೆಚ್ಚು ಮನೆಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗಲಿಲ್ಲ. ಎಲ್ಲಾ ಇಂದಿರಾಅವಾಜ್ ಮನಗಳು, ಅಂಬೇಡ್ಕರ್ ಯೋಜನೆಯಲ್ಲಿ ಬರತಕ್ಕಂಥ ಮನೆಗಳು ಆಶ್ರಯ ಯೋಜನೆಯಲ್ಲಿ ಬರತಕ್ಕಂಥ ಮನೆಗಳು ಎಲ್ಲಾ ಸೇರಿ ನಾವು ಪ್ರತಿವರ್ಷ ಒಂದು ಮನೆಗಳನ್ನು ಕಟ್ಟಿಸುತ್ತೇವೆ ಎಂದು ಜನರಿಗೆ ಕೊಟ್ಟಂಥ ವಚನ. ಇವತ್ತು ಕಳೆದ ಮೂರು ವರ್ಷಗಳಲ್ಲಿ 95-96, 96-97 ಮತ್ತು 97-98ರಲ್ಲಿ 2,94,000 ಮನೆಗಳನ್ನು ಕಟ್ಟಿಸಿದ್ದೇವೆ. ಇದು ಸರಾಸರಿ 98,000 ಮನೆಗಳನ್ನು ಕಟ್ಟಿಸಿದ್ದೇವೆ. ಇದು ನಿಷ್ಕ್ರಿಯ ಸರ್ಕಾರವೇ? ಇದು ನಾವು ಬಡವರ ಪರವಾಗಿ ಮಾಡಿರತಕ್ಕಂಥ ಕೆಲಸ ಅಲ್ಲವೇನು? ಇದು ಹಳ್ಳಿ ಜನರ ಪರವಾಗಿ ಮಾಡಿರತಕ್ಕಂಥ ಕೆಲಸ ಅಲ್ಲವೇನು? ಕುಡಿಯುವ ನೀರಿಗೆ 179 ಕೋಟಿ ಇದ್ದದ್ದು ಇವತ್ತು 272 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ನಾವು ಖರ್ಚು ಮಾಡಿದ್ದೇವೆ. ಇದು ನಿಷ್ಕ್ರಿಯ ಸರ್ಕಾರ! ಹಣ ಇಲ್ಲ, ಖಜಾನೆ ಖಾಲಿಯಾಗಿಬಿಟ್ಟಿದೆ, ಎನ್ನತಕ್ಕಂಥಾದ್ದು ಹೇಳುತ್ತೀರಿ. ಇದು ನಾನು ಜಂಬಕ್ಕೋಸ್ಕರ ಹೇಳುತ್ತಾ ಇರತಕ್ಕಂಥಾದ್ದು ಅಲ್ಲ. ಇದು ವಿಶ್ವಬ್ಯಾಂಕ್‌ನವರು ಹೇಳಿರತಕ್ಕಂಥಾದ್ದು. ಕರ್ನಾಟಕದಲ್ಲಿ ಆರ್ಥಿಕ ಶಿಸ್ತು ಚೆನ್ನಾಗಿದೆ, ಆರ್ಥಿಕ ನಿರ್ವಹಣೆ ಚೆನ್ನಾಗಿದೆ ಎಂದು ವಿಶ್ವಬ್ಯಾಂಕಿನವರು ಹೇಳಿರತಕ್ಕಂಥಾದ್ದು. ಮೊನ್ನೆ ಪ್ಲಾನಿಂಗ್ ಕಮಿಷನ್ ಮುಂದೆ ಹೋಗಿದ್ದೆವು. ಮಾನ್ಯ ಜಸ್ವಂತ್ ಸಿಂಗ್‌ರವರು ಭಾರತೀಯ ಜನತಾ ಪಕ್ಷಕ್ಕೆ ಸೇರಿದವರು. ಅವರು ಯೋಜನಾ ಆಯೋಗದ ಉಪಾಧ್ಯಕ್ಷರು. ಅವರು ಹೇಳಿರತಕ್ಕಂಥಾದ್ದು ಏನೆಂದರೆ, ಭಾರತದ ಕೆಲವೇ ರಾಜ್ಯಗಳಲ್ಲಿ, ಹಣಕಾಸಿನ ಪರಸ್ಥಿತಿ ಚೆನ್ನಾಗಿರತಕ್ಕ ರಾಜ್ಯಗಳಲ್ಲಿ ಕರ್ನಾಟಕವೂ

ಒಂದು ಎಂಬುದನ್ನು ಶ್ರೀಮಾನ್ ಜಸ್ವಂತ್ ಸಿಂಗ್‌ರವರೇ ಹೇಳಿದ್ದಾರೆ. ಇದು ನಾನು ಹೇಳತಕ್ಕ ವಿಚಾರ ಅಲ್ಲ. ಆದರೆ, ಮಾನ್ಯ ಖರ್ಗೆಯವರು, ಧರ್ಮಸಿಂಗ್‌ರವರು ಮತ್ತು ಭಾರತೀಯ ಜನತಾ ಪಕ್ಷದ ಅನೇಕ ಸದಸ್ಯರುಗಳು, ದುಡ್ಡು ಖರ್ಚು ಮಾಡುವುದಕ್ಕೆ ಸರ್ಕಾರದಲ್ಲಿ ಹಣವೇ ಇಲ್ಲ. 150 ರೂಪಾಯಿ ಚೆಕ್ ಬೌನ್ಸ್ ಆಗಿಬಿಟ್ಟಿದೆ ಎಂದು ಹೇಳಿದರು. 13-7 ರೂಪಾಯಿದು ಯಾವುದೂ ಚೆಕ್ ಇಲ್ಲ. ಆ ತರಹದ್ದು ಬೌನ್ಸೇ ಆಗಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಒಮ್ಮೆಯೂ ಕೂಡ ಸಂಬಳ ಇಲ್ಲವೆಂದು ನಿಲ್ಲಿಸಿರತಕ್ಕಂಥಾದ್ದೇ ಆಗಲೀ, ಇಲ್ಲವೇ ಇಲ್ಲ. ಯಾವುದೇ ಕಾರ್ಯಕ್ರಮಕ್ಕೆ ಹಣ ಇಲ್ಲವೆಂದಾಗಲೀ ಅದು ನೀರಾವರಿಯೇ ಆಗಬಹುದು. ನಾವು ಆದ್ಯತಾ ವಲಯಗಳೆಂದೇನು ಗುರುತಿಸಿಕೊಂಡಿದ್ದೇವೆ. ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ನೀರಾವರಿ, ವಿದ್ಯುತ್ ಮತ್ತು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕಾರ್ಯಕ್ರಮಗಳು. ಮನೆ ಕಟ್ಟತಕ್ಕಂಥಾದ್ದು, ಕುಡಿಯುವ ನೀರು ಈ ಕಾರ್ಯಕ್ರಮಗಳಿಗೆ ಹಣದ ತೊಂದರೆಯಾಗಿದೆ ಎಂಬ ನಿದರ್ಶನಗಳು ಇಲ್ಲ. ಯಾವುದೇ ಚೆಕ್ ಬೌನ್ಸ್ ಆಗಿದೆ ಎಂಬ ನಿದರ್ಶನ ಇಲ್ಲ. ನಿಮಗೆ ಹೇಳುತ್ತೇನೆ, ಈ ವರ್ಷ ಏಪ್ರಿಲ್ ಒಂದನೇ ತಾರೀಖಿನಿಂದ ಇವತ್ತಿನವರೆಗೆ ಒಮ್ಮೆಯೂ ಕೂಡ ವೇಸ್ ಅಂಡ್ ಮೀನ್ಸ್‌ಗೆ ಹೋಗಿಲ್ಲವೆಂದು ಹೇಳುವುದಾದರೆ, ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆಯೇ ಇಲ್ಲವೇ ಎನ್ನುವುದನ್ನು ರಾಜ್ಯದ ಜನ ತೀರ್ಮಾನ ಮಾಡಬೇಕಾಗಿರುತ್ತದೆ. ಮಾನ್ಯ ಮೊಯ್ಲಿಯವರು ಹಣಕಾಸಿನ ಮಂತ್ರಿಗಳಾಗಿದ್ದವರು: ನನಗಿಂತ ಹೆಚ್ಚು ಅನುಭವ ಇರತಕ್ಕಂಥವರು. ಅವರು ಹೇಳಬೇಕು. ಹಾಗೆಯೇ ಮಾನ್ಯ ಘೋರ್ಪಡೆಯವರೂ ಕೂಡ ಇದ್ದಾರೆ. ಒಮ್ಮೆಯೂ ಕೂಡ ಓವರ್ ಡ್ರಾಫ್ಟ್‌ಗೆ ಹೋಗಿಲ್ಲ. ಅಂದಮೇಲೆ ಹಣಕಾಸಿನ ಪರಿಸ್ಥಿತಿ ಕೆಟ್ಟು ಹೋಗಿದೆ, ಖಜಾನೆ ಖಾಲಿಯಾಗಿದೆ ಸರ್ಕಾರ ದಿವಾಳಿಯಾಗಿ ಹೋಗಿದೆ; ಎನ್ನತಕ್ಕಂಥ ಮಾತುಗಳಲ್ಲಿ ಏನಾದರೂ ಹುರುಳು ಇದೆಯೇ ಸತ್ಯ ಇದೆಯೇ ಎನ್ನತಕ್ಕಂಥಾದ್ದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಮತ್ತು ಈ ಸದನದ ವಿವೇಚನೆಗೆ ನಾನು ಬಿಡುತ್ತಿದ್ದೇನೆ. ಇಷ್ಟೆಲ್ಲಾ ಕೆಲಸಗಳನ್ನು ಮಾಡಿದ್ದರೂ ಕೂಡ ನಿಷ್ಕ್ರಿಯ ಸರ್ಕಾರ, ನಿಷ್ಕ್ರಿಯ ಸರ್ಕಾರ ಎಂದು ಹೇಳುತ್ತಾರೆ. ಈ ನಿಷ್ಕ್ರಿಯ ಎಂಬುದಕ್ಕೆ ಡೆಫಿನಿಷನ್ ಏನೂ ಎನ್ನುವುದನ್ನು ಈಗ ಹುಡುಕಬೇಕಾಗಿದೆ. ಕ್ರಿಯಾ ಸರ್ಕಾರ ಎಂದರೇನು, ನಿಷ್ಕ್ರಿಯ ಸರ್ಕಾರವೆಂದರೇನು ಎಂಬುದಕ್ಕೆ ಹೊಸದಾಗಿ ನಾವು ತಯಾರು ಮಾಡಬೇಕಾಗಿರುತ್ತದೆ. ಕೆಲಸ ಮಾಡತಕ್ಕ ಸರ್ಕಾರವೇ ನಿಷ್ಕ್ರಿಯ ಸರ್ಕಾರವೇ? ಇವತ್ತು ಈ ರಾಜ್ಯದ ಜನತೆಗೆ ಇವರು ಏನೇ ಹೇಳಿದರೂ ಕೂಡ, ಮನೆ ಕಟ್ಟಿರುವುದು ಜನಗಳಿಗೆ ಗೊತ್ತಾಗುತ್ತಾ ಇದೆ. ಬಡವರಿಗೆ ಅಕ್ಕಿ ಕೊಡುತ್ತಾ ಇರುವುದು ಜನಗಳಿಗೆ ಗೊತ್ತಾಗುತ್ತಿದೆ. ಕುಡಿಯುವನೀರು ಕೊಟ್ಟಿರತಕ್ಕಂತಾದ್ದು ಜನಗಳಿಗೆ ಗೊತ್ತಾಗುತ್ತಿದೆ. ನೀರಾವರಿಗೆ ಖರ್ಚುಮಾಡಿರತಕ್ಕ ಹಣ ಜನಗಳಿಗೆ ಗೊತ್ತಾಗುತ್ತಿದೆ. ಇವತ್ತು ವರುಣಾ ನಾಲೆ. ಬಹಳ ವರ್ಷಗಳಿಂದ ಏಕೆ ನಿಂತುಹೋಗಿತ್ತು. ಈಗೇಕೆ ಮುಗಿಯುತ್ತಾ ಬಂದಿದೆ. ಹಾಗೇಯೇ ಕೆ ಆರ್ ಎಸ್

ಮಾಡ್ರನೈಸೇಷನ್. ಬಹಳ ವರ್ಷಗಳಿಂದ ಏಕೆ ಆಗಿರಲಿಲ್ಲ; ಈಗೇಕಾಯಿತು? ಅಪ್ಪರ್ ಕೃಷ್ಣಾ ನಿನ್ನೆ ಮೊನ್ನೆ ಶುರುವಾಯಿತೇ? ನಾವು ಬಂದಮೇಲೆ ಅಪ್ಪರ್ ಕೃಷ್ಣಾ ಶುರುವಾಗಿದೆಯೇ? ಕಾವೇರಿ ಜಲಾನಯನ ಪ್ರದೇಶದ ಕೆಲಸ ಕಾರ್ಯಗಳು ನಿನ್ನೆ ಮೊನ್ನೆ ಶುರುವಾಗಿದೆಯೇ? ಅಪ್ಪರ್ ಕೃಷ್ಣಾ ಯೋಜನೆ 1965-66ನೇ ಇಸವಿಯಿಂದ ಪ್ರಾರಂಭವಾಗಿದೆ. ಸುಮ್ಮನೇ, ಕೃಷ್ಣೆಯ ಕಣ್ಣೀರು ಎಂದು ಹೇಳುವುದು. ಜನತಾ ದಳದವರು ಬಂದು, ಕೃಷ್ಣೆಗೆ ಕಣ್ಣೀರು ಬರಿಸಿಬಿಟ್ಟಿದ್ದಾರೆ ಎಂದರು. ಇವತ್ತೇನಾದರೂ ಕೃಷ್ಣೆಯ ಕಣ್ಣೀರನ್ನು ಒರೆಸತಕ್ಕ ಕೆಲಸ ನಡೆದಿದ್ದರೆ, ಅದು ಜನತಾ ದಳದ ಸರ್ಕಾರದಲ್ಲಿ ಎಂಬುದನ್ನು ಅತ್ಯಂತ ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಇವತ್ತು ನಮಗಿರತಕ್ಕ ಹಣಕಾಸಿನ ಇತಿಮಿತಿಯೊಳಗೆ, ಕಳೆದ 3-4 ವರ್ಷಗಳಿಂದ ನಮ್ಮ ಸರ್ಕಾರ ಬಂದಮೇಲೆ ಯಾವುದೇ ಹೆಚ್ಚು ಹೊಸ ತೆರಿಗೆಗಳನ್ನು ಹಾಕತಕ್ಕ ಕೆಲಸ ಮಾಡಿಲ್ಲ. ಸಾಮಾನ್ಯ ಜನರಿಗೆ ಹೊರೆಯಾಗತಕ್ಕ, ಬಡವರಿಗೆ ಹೊರೆಯಾಗತಕ್ಕ, ಕೆಳವರ್ಗದ ಜನರಿಗೆ ಹೊರೆಯಾಗತಕ್ಕ ಯಾವುದೇ ಹೊಸ ತೆರಿಗೆ ಹಾಕತಕ್ಕ ಕೆಲಸ ಮಾಡಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಹಾಗಾದರೆ, ಬಸ್ ರೇಟ್ ಏರಿಸಿದ್ದು, ವಿದ್ಯುತ್ ದರ ಏರಿಸಿದ್ದು ನೀರಿನ ದರ ಏರಿಸಿದ್ದು ಇವುಗಳನ್ನು ಏನೆಂದು ಕರೆಯುತ್ತೀರಿ? ಇವು ಸಾಮಾನ್ಯ ಜನರಿಗೆ ತೊಂದರೆ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್: ಅವೆಲ್ಲಾ ತೆರಿಗೆ ಅಲ್ಲ.

ಶ್ರೀ ವಿ.ಮುನಿಯಪ್ಪ: ಗೋಧಿ ಹಿಟ್ಟು, ಮಾಲ್ಟಾ, ಮೈದಾ ಇವುಗಳಿಗೆಲ್ಲಾ ತೆರಿಗೆ ಹಾಕಿದ್ದೀರಿ. ಕ್ವಿಂಟಾಲ್ ಗೋಧಿ ಹಿಟ್ಟಿಗೆ 57 ರೂಪಾಯಿ ಹಾಕಿದ್ದೀರಿ.

ಶ್ರೀ ಸಿದ್ಧರಾಮಯ್ಯ: ತೆರಿಗೆ ಎಂದು ಹೇಳಿದರೆ, ಆಯವ್ಯಯವನ್ನು ಮಂಡಿಸತಕ್ಕ ಸಂದರ್ಭದಲ್ಲಿ ಹೊಸ ಹೊಸ ತೆರಿಗೆಗಳನ್ನು ಹಾಕಿ ಈ ರಾಜ್ಯಕ್ಕೆ ಭಾರ ಹಾಕಿದ್ದೇವೆಯೇ ಎಂಬ ಅರ್ಥದಲ್ಲಿ ನಾನು ಹೇಳುತ್ತಿದ್ದೇನೆ. ಕೆಇಬಿ ಟ್ಯಾರಿಫ್ ರಿವಿಜನ್ ಮಾಡಿಲ್ಲವೆಂದು ನಾನು ಹೇಳಿಲ್ಲ. ಈ ಸದನದ ಜಂಟಿ ಸಮಿತಿ, ನೀವೇ ರಚನೆ ಮಾಡಿರತಕ್ಕಂತಾದ್ದು. ಅವರೇ ಕೊಟ್ಟಿರತಕ್ಕ ವರದಿ. ಇವತ್ತು ಕೆ ಇ ಬಿ ಉಳಿಯಬೇಕಾದರೆ, ಪ್ರತಿ ವರ್ಷ ಎಷ್ಟು ಹೆಚ್ಚು ಮಾಡಬೇಕೆಂಬ ಸಲಹೆಯನ್ನು ತಾವೇ ಶಿಫಾರಸ್ ಮಾಡಿದ್ದೀರಿ. ನಾನು ತೆರಿಗೆ ಹಾಕಿಲ್ಲವೆಂದು ಹೇಳಲಿಲ್ಲ, ಅವರು ಮಾತನಾಡಿದ್ದಾರೆ. ಇವತ್ತು ಕೆ ಎಸ್ ಆರ್ ಟಿ ಸಿ ಮುಳುಗಿ ಹೋಗುತ್ತಿತ್ತು. 280 ಕೋಟಿ ರೂ. ನಷ್ಟವಾಗತಕ್ಕ ಪರಿಸ್ಥಿತಿ ನಿರ್ಮಾಣವಾಗಿತ್ತು. ಇವತ್ತು ನೋ ಲಾಸ್, ನೋ ಪ್ರಾಫಿಟ್ ಮಟ್ಟಕ್ಕೆ ಬಂದಿದೆ. ಸುಮಾರು 80 ಸಾವಿರ ಜನ ಕೆಎಸ್ಆರ್‌ಟಿಸಿ ಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದನ್ನು ಮುಳುಗಿಸಿ, 80 ಸಾವಿರ ಜನ ಬೀದಿ ಪಾಲು ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಅದನ್ನು ರಿವಿಜನ್ ಮಾಡಿದ್ದೇವೆ. ಅದಕ್ಕೂ ಕೂಡ, ನಿಮ್ಮ ವಿಶ್ವಾಸವನ್ನು ತೆಗೆದುಕೊಂಡೇ ಮಾಡಿರುವಂತಾದ್ದು. ಬಸ್ಸಿನ ದರ ಏರಿಸಿದಿರಿ, ವಿದ್ಯುತ್

ದರ ಏರಿಸಿದಿರಿ ಎಂದು ಹೇಳಿದರೆ, ನಾವು ಏರಿಸಿರತಕ್ಕಂತಾದ್ದು ನಿಜ. ಇವತ್ತು ಕೆ ಇ ಬಿ ಸಂಸ್ಥೆ ಉಳಿಯಬೇಕಾಗಿತ್ತು, ಈ ರಾಜ್ಯದ ಜನತೆಗೆ ವಿದ್ಯುತ್ತನ್ನು ಸಮರ್ಪಕವಾಗಿ ಕೊಡತಕ್ಕ ಕೆಲಸ ಆಗಬೇಕಾಗಿತ್ತು. ಕೆಎಸ್‌ಆರ್‌ಟಿಸಿ ಯನ್ನು ಇವತ್ತು ಉಳಿಸಬೇಕಾಗಿತ್ತು. ಆದರೆ, ಇದನ್ನು ಮುಚ್ಚತಕ್ಕ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದ್ದರಿಂದ, ಜನಗಳಿಗೆ ನೀವು ಸ್ವಲ್ಪ ಭಾರವನ್ನು ಹೊರಬೇಕಾಗುತ್ತೆ ಎಂಬುದನ್ನು ಜನರಿಗೆ ಹೇಳಿ, ಜನರನ್ನು ರಿಕ್ವೆಸ್ಟ್ ಮಾಡಿಕೊಂಡೇ ಈ ಕೆಲಸ ಮಾಡಿರುವುದು. ನಿಮ್ಮನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡೇ ಮಾಡಿರತಕ್ಕಂಥ ಕೆಲಸ. ಈ ಸರ್ಕಾರ ಬೆಲೆ ಏರಿಸಿ ಬಿಟ್ಟಿತು ಎಂದು ಹೇಳಿದರೆ, ಬೆಲೆ ಏರಿಸುವುದೇ ಈ ಸರ್ಕಾರದ ಕೆಲಸವೇ? ಈಗ ನೀರಾವರಿಗೆ 2070 ಕೋಟಿಯಿಂದ 4080 ಕೋಟಿ ಹಣ ಕೊಟ್ಟಿರುವುದು, ಇದು ದುಡ್ಡು ಕೊಟ್ಟ ಹಾಗಲ್ಲವೇ? ಇದು ಹೇಗೆ ಬಂತು, ಇದಕ್ಕೆ ತೆರಿಗೆ ಎಲ್ಲಿ ಬಂತು ಎಂದು ಹೇಳುವುದಿಲ್ಲ. ಜಲಭಾಗ್ಯ ನಿಗಮದ ಸಾಲವನ್ನು ಸರ್ಕಾರ ತೀರಿಸುವುದಿಲ್ಲವೇ? ಇಷ್ಟೆಲ್ಲಾ ಆದರೂ ಇಡೀ ರಾಷ್ಟ್ರದಲ್ಲಿ, ರಾಷ್ಟ್ರದ ಎಲ್ಲಾ ರಾಜ್ಯಗಳ ಸರಾಸರಿ, ಡೆಟ್ ಸರ್ವಿಸ್ 20 ಪರ್ಸೆಂಟಿಗಿಂತ ಜಾಸ್ತಿ ಇದೆ. ಕರ್ನಾಟಕದ್ದು ಇನ್ನೂ 15-16 ಪರ್ಸೆಂಟ್‌ನಲ್ಲೇ ಇದೆ. ಹಾಗೆಂದು, ನಾನು ಸಾಲ ಮಾಡಬೇಕು, ಸಾಲ ಮಾಡುವುದಕ್ಕೆ ಅಬ್ಸಾರ್ಬಿಂಗ್ ಕೆಪ್ಯಾಸಿಟಿ ಕರ್ನಾಟಕದಲ್ಲಿ ಹೆಚ್ಚಾಗಿದೆ ಎಂಬ ವಾದವನ್ನು ನಾನು ಮಂಡಿಸುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: 33 ಪರ್ಸೆಂಟ್ ಮಾತ್ರ ಇವತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ: ಅದೇನು ನಾವು ಬಂದಮೇಲೆ ಮಾಡಿದ್ದೇವೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ಒನ್ ಟು ಡಬಲ್ ಸಾಲ ತಂದಿದ್ದೀರಿ. ಕಳೆದ ನಾಲ್ಕು ವರ್ಷಗಳಿಂದ ಎಷ್ಟು ಸಾಲ ತಂದಿದ್ದೀರಿ, ಆ ಅಂಕಿಅಂಶಗಳನ್ನೂ ಹೇಳಿ.

ಶ್ರೀ ಸಿದ್ಧರಾಮಯ್ಯ: ಬೇರೆ ಬೇರೆ ರಾಜ್ಯಗಳ ವಿಷಯವನ್ನು ಮಾನ್ಯ ಯಡಿಯೂರಪ್ಪನವರು ಕೇಳಿಲ್ಲ. ನಾವು ರಿಸೋರ್ಸ್‌ಸ್ ಮೊಬಲೈಸೇಷನ್‌ನಲ್ಲಿ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಇವತ್ತು ಸೇಲ್ಸ್ ಟ್ಯಾಕ್ಸ್ ಇರಬಹುದು, ಎಕ್ಸೈಸ್ ಇರಬಹುದು, ಮೋಟಾರು ವೆಹಿಕಲ್ಸ್ ಟ್ಯಾಕ್ಸ್ ಇರಬಹುದು ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಇರಬಹುದು, ಈ ಮೇಜರ್ ಟ್ಯಾಕ್ಸ್ ಕೊಡತಕ್ಕ ಇಲಾಖೆಗಳೇನಿವೆ, ಇವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾ ಇವೆ. ತೆರಿಗೆ ಎಲ್ಲಾ ಸೋರಿ ಹೋಗಿದೆ ಎಂದು ಹೇಳಿದರು. ಇವತ್ತು ಸರಾಸರಿ, ಎಲ್ಲಾ ತೆರಿಗೆ ಪ್ರಮಾಣದ ಏರಿಕೆ ಗ್ರೋತ್ ಆಗಿರತಕ್ಕಂತಾದ್ದು ಸುಮಾರು 14ರಿಂದ 15 ಪರ್ಸೆಂಟ್ ಆಗಿದೆ. ಹಿಂದಿನ ಅನೇಕ ವರ್ಷಗಳಿಗೆ ಇದನ್ನು ಹೋಲಿಕೆ ಮಾಡಿದರೆ, ಇದು ಅತ್ಯಂತ ಉತ್ತಮವಾದ ಸಾಧನೆ ಎನ್ನುವುದನ್ನು ತಮಗೆ ತಿಳಿಸಲಿಕ್ಕೆ ಬಯಸುತ್ತಿದ್ದೇನೆ. ಇವತ್ತು ತೆರಿಗೆ ಎಲ್ಲಾ ಸೋರಿ

ಹೋಯಿತು, ಯೋಜನೆಗಳಿಗೆ ಹಣ ಇಲ್ಲವೆಂದು ಹೇಳಿದ್ದಾರೆ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ, 91-92ನೇ ಪ್ರೈಸಸ್ ಪ್ರಕಾರ 12,300 ಕೋಟಿ ಮಾಡಬೇಕಾಗಿತ್ತು. ಅದರ ಪ್ರಕಾರ ಇವತ್ತು ನಾವು 11,400 ಕೋಟಿಯಷ್ಟು ಮಾಡಿದ್ದೇವೆ. ಪ್ಲಾನ್ ಕಟ್ ಮಾಡಿಕೊಂಡು ಬರುತ್ತಿದ್ದೇವೆ ಎಂದು ಹೇಳಿದರು. ಮಾನ್ಯ ಖರ್ಗೆಯವರು ಏನು ಮಾಡಿದ್ದಾರೆಂದರೆ, ಬಜೆಟೆಡ್ ಫಿಗರ್ಸ್ ತೆಗದುಕೊಳ್ಳುವುದು ಮತ್ತು ಖರ್ಚು ಎಷ್ಟಾಗಿದೆ ಎಂಬುದನ್ನು ಹೋಲಿಕೆ ಮಾಡುವುದು. ಅಪ್ರೂವ್ಡ್ ಪ್ಲಾನ್ ತೆಗೆದುಕೊಂಡರೆ, ಇವರು ಹೇಳತಕ್ಕ ಫಿಗರ್ ಬರುವುದಿಲ್ಲ. ಈಗ ಉದಾಹರಣೆಗೆ 1997-98ರಲ್ಲಿ ಅಪ್ರೂವ್ಡ್ ಪ್ಲಾನ್ ಸೈಜ್ 4179 ಕೋಟಿ ರೂಪಾಯಿಗಳು.ನಾವು ಅಚೀವ್ ಮಾಡಿದ್ದು 4326 ಕೋಟಿ. ಸುಮಾರು 147 ಕೋಟಿ ಅಪ್ರೂವ್ಡ್ ಪ್ಲಾನ್‌ಗಿಂತ ಹೆಚ್ಚಿಗೆ ಖರ್ಚು ಮಾಡಿದ್ದೇವೆ. ಬಜೆಟೆಡ್ ಔಟ್‌ಲೇ ಇದ್ದದ್ದು 4545 ಕೋಟಿ. ಅದು ಎಲ್ಲಾ ಕಾಲದಲ್ಲೂ ಕೂಡ ಆಗುತ್ತಾ ಬಂದಿದೆ. 1992-93 ರಿಂದ ಲೆಕ್ಕ ಹಾಕಿಕೊಂಡು ಬಂದರೆ...

4.30 ಪಿಎಂ

ಶ್ರೀ ಟಿ.ಬಿ.ಜಯಚಂದ್ರ: ಬಜೆಟೆಡ್ ಔಟ್ ಲೇ ಇದ್ದದ್ದು 4545 ಕೋಟಿ ರೂ.ಗಳು.

ಶ್ರೀ ಸಿದ್ದರಾಮಯ್ಯ: ಅದು ಎಲ್ಲಾ ಕಾಲದಲ್ಲಿಯಾ ಕೂಡ ಆಗಿಕೊಂಡು ಬಂದಿವೆ.

ಶ್ರೀ ಟಿ.ಬಿ.ಜಯಚಂದ್ರ: ತಾವು ರಿಸೋರ್ಸಸ್ ಎಷ್ಟು ಮೊಬಲೈಜೇಶನ್ ಮಾಡಿದ್ದೀರಿ?

ಶ್ರೀ ಸಿದ್ದರಾಮಯ್ಯ: ಮೊಬಲೈಜೇಶನ್ ಸಹ ಅದೇ ರೀತಿಯಲ್ಲಿ ಆಗುತ್ತಾ ಬಂದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ರಿಸೋರ್ಸಸ್ ಮೊಬಲೈಜೇಶನ್ ಮಾಡಿದ್ದರೂ ಕೂಡ ನಿಮ್ಮ ನಾಲ್ಕೂವರೆ ವರ್ಷದ ಅವಧಿಯಲ್ಲಿ ಪ್ಲಾನ್ ಔಟಲೇ ನಲ್ಲಿ ಸುಮಾರು 1600 ಕೋಟಿ ರೂಪಾಯಿಗಳು ಖೋತಾ ಆಗಿದೆ. ಪ್ರತಿ ವರ್ಷ ಖೋತಾ ಹೆಚ್ಚಿಗೆ ಆಗುತ್ತಿದೆಯೇ ಹೊರತಾಗಿ ಕಡಿಮೆ ಏನೂ ಆಗುತ್ತಿಲ್ಲ. ತಾವು ರಿಸೋರ್ಸಸ್ ಮೊಬಲೈಜೇಶನ್ ಹೆಚ್ಚು ಮಾಡುತ್ತಿದ್ದರೆ ಈ ರೀತಿ ಖೋತಾ ಬರುತ್ತಿರಲಿಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಏಕೆ ಖೋತ ಆಯಿತು ಎನ್ನುವುದನ್ನೂ ಕೂಡ ನಾನು ಹೇಳುತ್ತೇನೆ. ಈ ಟ್ಯಾಕ್ಸ್ ರೆವಿನ್ಯೂ 1994-95ನೇ ಇಸವಿಯಲ್ಲಿ 6968 ಕೋಟಿ 39 ಲಕ್ಷ ರೂ.ಇತ್ತು. ಅದು 1997-98ಕ್ಕೆ 10613 ಕೋಟಿ ರೂಪಾಯಿಗಳು ಆಗಿದೆ. ಇದು ಬೆಳವಣಿಗೆಯಾಗದೇ ಹಿಂದಕ್ಕೆ ಹೋಗಿದೆಯೇ? ಟ್ಯಾಕ್ಸ್ ಪ್ರಮಾಣ ಎಲ್ಲಾ ಒಟ್ಟಿಗೆ ಸೇರಿಸಿದರೆ 15ರಿಂದ 16 ಪರ್ಸೆಂಟ್ ಆವ್‌ರೇಜ್ ಗ್ರೋತ್ ಆಗಿದೆ. ಬಜೆಟ್‌ನಲ್ಲಿ ಅನೇಕ ಇಲಾಖೆಗಳಿಂದ ಹೆಚ್ಚು ಬೇಡಿಕೆ ಬರುವುದರಿಂದ ಪ್ಲಾನ್ ಔಟ್ ಲೇ ಅನ್ನು ಸ್ವಲ್ಪ ಹೆಚ್ಚು ಮಾಡುವಂತೆ ಆಗುತ್ತದೆ. ಇದು ನೀವು ಇದ್ದಾಗಲೂ ಸಹ ಆಗಿದೆ

ಇಲ್ಲ ಎಂದು ಇಲ್ಲ. 1992-93ನೇ ಸಾಲಿನಲ್ಲಿ 126 ಕೋಟಿ ರೂಪಾಯಿಗಳು ಕಡಿಮೆ ಆಗಿದೆ. ಅಪ್ರೂವ್ಡ್ ಪ್ಲಾನ್ ಔಟ್‌ಲೇಗಿಂತ, 1993-94ನೇ ಸಾಲಿನಲ್ಲಿ 228 ಕೋಟಿ ರೂಪಾಯಿಗಳು ಕಡಿಮೆ ಆಗಿದೆ. 1994-95ರಲ್ಲಿ 410 ಕೋಟಿ ಕಡಿಮೆ ಆಗಿದೆ. ಆಮೇಲೆ 1995-96ರಲ್ಲಿ 367 ಕೋಟಿ ಆಗಿದೆ. 1996-97ರಲ್ಲಿ 387 ಕೋಟಿ ಆಗಿದೆ. 1997-98ರಲ್ಲಿ 219 ಕೋಟಿ ಆಗಿದೆ. ಇದು ಹೀಗೆ ಏಕೆ ಆಯಿತು ಅಂದರೆ ಆರ್ ಇ ಸಬ್ಸಿಡಿ ಪ್ರತಿ ವರ್ಷ ಕೂಡ ನಾವು ಹೆಚ್ಚು ಕೊಡುವಂತಹ ಪರಿಸ್ಥಿತಿ ಬಂತು ಇದು ಒಂದು ಬಹಳ ಮುಖ್ಯವಾದ ಕಾರಣ. ನಾವು 1995-96ರಲ್ಲಿ ಆರ್ ಇ ಸಬ್ಸಿಡಿ ಇಟ್ಟುಕೊಂಡಿದ್ದು 80 ಕೋಟಿ ರೂಪಾಯಿ, ಆದರೆ ನಾವು ಆಕ್ಚುಯಲ್ ಆಗಿ ಕೊಟ್ಟಿದ್ದು 295 ಕೋಟಿ ರೂಪಾಯಿ. 1996-97ರಲ್ಲಿ ನಾವು ಬಜೆಟ್‌ನಲ್ಲಿ 186 ಕೋಟಿ ಇಟ್ಟುಕೊಂಡಿದ್ದರೆ ಆದರೆ ನಾವು ಕೊಟ್ಟಿದ್ದು 951 ಕೋಟಿ. ನಾವು 1994-95ನೇ ಸಾಲಿನ ಬಾಕಿಯನ್ನೂ ಸಹ ಸೇರಿಸಿ ಕೊಟ್ಟಿದ್ದೇವೆ. ಹಾಗೆಯೇ 1997-98ರಲ್ಲಿ ನಾವು ಬಜೆಟ್‌ನಲ್ಲಿ 211 ಕೋಟಿ 20 ಲಕ್ಷ ಇಟ್ಟುಕೊಂಡಿದ್ದರೆ ನಾವು ಕೊಟ್ಟಿದ್ದು 598 ಕೋಟಿ 98 ಲಕ್ಷ. ಇದೂ ಸಹ ಪ್ಲಾನ್‌ಸೈಜ್‌ನಲ್ಲಿ ಕಡಿಮೆ ಆಗಲಿಕ್ಕೆ. ಒಂದು ಮೇಜರ್ ಕಾಂಟ್ರಿಬ್ಯೂಟ್ ಆಗುತ್ತದೆ. ರಾಜ್ಯದ ಆರ್ಥಿಕ ಪ್ರಗತಿ ಏನೋ ಹಿಂದಕ್ಕೆ ಹೋಗಿದೆ, ಏನೂ ಬೆಳವಣಿಗೆ ಆಗುತ್ತಿಲ್ಲ ಎನ್ನತಕ್ಕಂಥದು ಕಳೆದ ವರ್ಷ 1997-98ರಲ್ಲಿ ನಮ್ಮ ಜೆ ಡಿ ಪಿ ಗ್ರೋತ್ 6.7. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಅಚೀವ್ ಮಾಡಬೇಕಾದುದು 5.6 ಪರ್ಸೆಂಟ್. ಆದರೆ ಅಚೀವ್ ಮಾಡಿದ್ದು 5.2 ಪರ್ಸೆಂಟ್. 1997-98ರಲ್ಲಿ ಅಚೀವ್ ಮಾಡಬೇಕಾದುದು. 6.7 ಪರ್ಸೆಂಟ್, 9ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಜೆ ಡಿ ಪಿ ಗ್ರೋತ್ 7 ಪರ್ಸೆಂಟ್‌ಗೆ ಹೋಗಬೇಕನ್ನುವ ಉದ್ದೇಶ ಇದೆ. ಇಡೀ ದೇಶದಲ್ಲಿ ಕೇಂದ್ರ ಸರ್ಕಾರದವರೇ ರಿವೈಜ್ಡ್ ಫಿಗರ್ಸ್‌ಗೆ ಬಂಧಿದ್ದಾರೆ ಜೆ ಡಿ ಪಿ ಗ್ರೋತ್‌ನಲ್ಲಿ. ಜೆ ಡಿ ಪಿ ಗ್ರೋತ್ ಎಲ್ಲಾ ಕಡಿಮೆ ಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳು ಒಂದು ಮಾತು ಹೇಳುತ್ತಿದ್ದಾರೆ. ಯಶವಂತಸಿನ್ಹಾರವರು ಒಂದು ಮಾತು ಹೇಳುತ್ತಿದ್ದಾರೆ. ಒಟ್ಟಿಗೆ ಕನಿಷ್ಟ ಏನಾದರೂ ಮಾಡಿ 6.2ಕ್ಕೆ ನಾವು ರೀಚ್ ಆಗಬೇಕೆನ್ನುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಎಲ್ಲಾ ರಾಜ್ಯಗಳ ಆವ್‌ರೇಜ್. ಆದರೆ ಕರ್ನಾಟಕ ಇವತ್ತು ಆರ್ಥಿಕ ಪ್ರಗತಿಯಲ್ಲಿ ದಿವಾಳಿಯಾಗಿದೆ ಎನ್ನತಕ್ಕಂಥ ಮಾತಿನಲ್ಲಿ ಏನೇನೂ ಸತ್ಯಾಂಶ ಇಲ್ಲ ಎನ್ನುವುದನ್ನು ನಾನು ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ತಿಳಿಸುತ್ತೇನೆ. ನಾನು ಮತ್ತೊಮ್ಮೆ ಆ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಏಪ್ರಿಲ್ ಒಂದನೇ ತಾರಿಖಿನಿಂದ ಇವತ್ತಿನವರೆಗೆ ಎಲ್ಲಾ ಇಲಾಖೆಗಳಿಗೂ ಹಣ ಕೊಡತಕ್ಕಂಥಾದ್ದು, ಎಲ್ಲಾ ಕಾರ್ಯಕ್ರಮಗಳಿಗೂ ಹಣ ಬಿಡುಗಡೆ ಮಾಡತಕ್ಕಂಥಾದ್ದು, ಪ್ರತಿ ತಿಂಗಳೂ ಗ್ರಾಮೀಣ ಅಭಿವೃದ್ಧಿಗೆ ಒನ್ ಟ್ವೆಲ್ಥ್ ಆವ್ ದಿ ಅಮೌಂಟ್ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಹಣ ತಪ್ಪದೆ ಬಿಡುಗಡೆ ಮಾಡುತ್ತಾ ಇರತಕ್ಕಂಥಾದ್ದು ಕುಡಿಯುವ ನೀರಿಗೆ ಇರಬಹುದು, ಮನೆಕಟ್ಟುವುದಕ್ಕೆ ಇರಬಹುದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸೀಮಿತವಾಗಿರತಕ್ಕಂಥ ಕಾರ್ಯಕ್ರಮಗಳು ಇರಬಹುದು ಮತ್ತು ಅರ್ಬನ್

ಡೆವಲಪ್‌ಮೆಂಟ್‌ಗೆ ಇರಬಹುದು ಹಣ ಕೊಡುತ್ತಿದ್ದೇವೆ. ಇವತ್ತು ಮಾನ್ಯ ತಿಮ್ಮಯ್ಯನವರು ಸ್ಟೇಟ್ ಫೈನಾನ್ಸ್ ಕಮಿಷನ್ ಅವರು ವರದಿ ಕೊಟ್ಟ ಮೇಲೆ ಅರ್ಬನ್ ಡೆವಲಪ್‌ಮೆಂಟ್‌ಗೆ ಹೆಚ್ಚು ಹಣ ಕೊಡಲು ನಿರ್ಣಯ ಮಾಡಿದ್ದೇವೆ. ಡೆವಲ್ಯೂಷನ್ ಆಫ್ ಫಂಡ್ಸ್, ಅವರ ಶಿಫಾರಸ್ಸಿಗೆ ಅನುಗುಣವಾಗಿ 85 ಪರ್ಸೆಂಟ್ ಪಂಚಾಯತ್ ಇನ್‌ಸ್ಟಿಟ್ಯೂಷನ್‌ಗೆ ಮತ್ತು ಲೋಕಲ್ ಬಾಡೀಸ್‌ಗೆ 50 ಪರ್ಸೆಂಟ್ ಕೊಡುತ್ತಿದ್ದೇವೆ. ಔಟ್ ಆಫ್ 36 ಪರ್ಸೆಂಟ್ ಬಿಟ್ಟು, ಇದನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಎಲ್ಲಿ ಖಜಾನೆ ಖಾಲಿ ಆಗಿದೆ? ಎಲ್ಲಿ ಬಿಲ್ಸ್ ಬೌನ್ಸ್ ಆಗುತ್ತಿವೆ? ಎಲ್ಲಿ ಚೆಕ್ಸ್ ಬೌನ್ಸ್ ಆಗುತ್ತಿವೆ? ನಾನು ಮತ್ತೆ ಹೇಳುತ್ತಿದ್ದೇನೆ ಈ ಸರ್ಕಾರ ಆರ್ಥಿಕವಾಗಿ ರಾಜ್ಯದಲ್ಲಿರುವಂತಹ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಹಣ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿಬೇಕಾದಷ್ಟು ಹಣ ಇದೆ ಎನ್ನವಂತಹ ಮಾತನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾವು ಯಾವ ವಲಯಗಳನ್ನು ಆದ್ಯತಾವಲಯಗಳೆಂದು ಗುರುತಿಸಿಕೊಂಡಿದ್ದೇವೆ ನಾವು ಚುನಾವಣೆ ಸಂದರ್ಭದಲ್ಲಿ ಮತ್ತು ತದನಂತರ ನಾವು ಏನು ಮಾಡುತ್ತೇವೆ ಎನ್ನತಕ್ಕಂಥ ಭರವಸೆಗಳನ್ನು ಆಶ್ವಾಸನೆಗಳನ್ನು ಜನರಿಗೆ ಕೊಟ್ಟಿದ್ದೆವೋ ಅವುಗಳನ್ನು ತಪ್ಪದೇ ಜಾರಿ ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿದೆ ಮತ್ತು ಮಾಡಿ ತೋರಿಸಿದ್ದೇವೆ ಕಳೆದ ಮೂರು ವರ್ಷಗಳಿಂದ ಎನ್ನತಕ್ಕಂಥಾ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸರ್ಕಾರ ರಾಜೀನಾಮೆ ಕೊಡಬೇಕೇ? ಇದನ್ನು ಜನ ತೀರ್ಮಾನ ಮಾಡುತ್ತಾರೆ. ಈ ಸರ್ಕಾರ ರಾಜೀನಾಮೆ ಕೊಡಬೇಕೋ. ಅಥವಾ ಮುಂದುವರಿಯಬೇಕೋ ಎನ್ನುವುದನ್ನು ಜನ ತೀರ್ಮಾನ ಮಾಡುತ್ತಾರೆ. ಅಲ್ಲಿಯವರೆಗೆ ನಾವು ಏಕೆ ರಾಜೀನಾಮೆಯನ್ನು ಕೊಡಬೇಕು? ಇದೆಲ್ಲಾ ಮಾಡಿದ್ದಕ್ಕೆ ನಾವು ರಾಜೀನಾಮೆ ಕೊಡಬೇಕೇ? ಇಷ್ಟೊಂದು ಕಾರ್ಯಕ್ರಮಗಳನ್ನು ಮಾಡಿ, ಇಷ್ಟೊಂದು ಹಣ ಖರ್ಚು ಮಾಡಿದ್ದಕ್ಕೆ ನಾವು ರಾಜೀನಾಮೆ ಕೊಡಬೇಕೇ? ಏನು ಮಾತೆತ್ತಿದರೆ ರಾಜೀನಾಮೆ ಕೊಡಬೇಕೆನ್ನುವುದು, ನಾಚಿಕೆ ಇಲ್ಲವೇ ನಿಮಗೆ ಎನ್ನುವುದು, ಮಾನ ಮರ್ಯಾದೆ ಇಲ್ಲ ನಿಮಗೆ ಎನ್ನುವುದು; ಇಷ್ಟೆಲ್ಲಾ ಮಾಡಿದ್ದಕ್ಕೆ ನಮಗೆ ಮಾನ ಮರ್ಯಾದೆ ಇಲ್ಲವೇ? ಮಾನ ಮರ್ಯಾದೆ ಇಲ್ಲ ನಿಮಗೆ ದನ ಕಾಯುವುದಕ್ಕೆ ಹೋಗಬೇಕು ನೀವು. ಎಮ್ಮೆ ಕಾಯುವುದಕ್ಕೆ ನೀವು, ಹೋಗಬೇಕು ಎಂದು ಹೇಳುತ್ತೀರಿ. ಆ ಪರಿಸ್ಥಿತಿ ಬಂದರೆ ಎಮ್ಮೆ ಕಾಯುವುದಕ್ಕೂ ಹೋಗಬೇಕಾಗುತ್ತದೆ ದನ ಕಾಯುವುದಕ್ಕೂ ಹೋಗಬೇಕಾಗುತ್ತದೆ. ಇಲ್ಲಿಗೆ ಬಹಳ ಜನ ಎಮ್ಮೆ ಕಾಯುವವರು, ದನ ಕಾಯುವವರೇ ಬಂದಿರುವುದು. ನಾವೇನು ಇಲ್ಲಿ ಶಾಶ್ವತವಾಗಿ ಗೂಟ ಹೊಡೆದುಕೊಂಡು ಕುಳಿತುಕೊಳ್ಳುವುದಕ್ಕೆ ಬಂದಿಲ್ಲ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ.....

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ತಾವು ಗೂಟ ಹೊಡೆದುಕೊಂಡು ಶಾಶ್ವತವಾಗಿ ಇರುತ್ತೇವೆಂದು ಹೇಳಬಾರದು.

ಶ್ರೀ ಸಿದ್ದರಾಮಯ್ಯ: ನಾನು ಹಾಗೆಂದು ಹೇಳಲಿಲ್ಲ. ಗೂಟ ಹೊಡೆದುಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಬಂದಿಲ್ಲ ಎಂದು ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಯಾವ ಕಡೆಗೆ ಹೊರಟಿದ್ದೀರಿ?

ಶ್ರೀ ಸಿದ್ದರಾಮಯ್ಯ: ನಾನು ಯಾವ ಕಡೆಗೂ ಹೋಗಿಲ್ಲ ಎಲ್ಲಾ ಸರಿಯಾಗಿದೆ ನೇರವಾಗಿಯೇ ನಾವು ಹೋಗುವುದು. ಆ ಕಡೆಗೂ ಹೋಗುವುದಿಲ್ಲ ಈ ಕಡೆಗೂ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: 13ನೇ ತಾರೀಖು ಏನು ಮಾಡುತ್ತೀರಿ?

ಶ್ರೀ ಸಿದ್ದರಾಮಯ್ಯ: ಅದನ್ನು ನಾವು ತೀರ್ಮಾನ ಮಾಡಿಕೊಳ್ಳುತ್ತೇವೆ. ಅದಕ್ಕೆ ನಿಮ್ಮ ಸಹಾಯ ಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಮ್ಮ ಸಹಾಯ ಅಲ್ಲ ನೀವು ಕಚ್ಚಾಡುತ್ತಿದ್ದಿರಲ್ಲಾ ಅದಕ್ಕೆ ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಮಗೆ ಗೊತ್ತಿದೆ ನಾವು ಏನು ಮಾಡಬೇಕೆಂದು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನೀವು 13ನೇ ತಾರೀಖು ನಿಮ್ಮ ಪ್ರಾಮಾಣಿಕತೆಯನ್ನು ತೋರಿಸಿದರೆ ನಾನು ಸಂತೋಷ ಪಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಇವತ್ತು ಏನು ಮಾಡಬೇಕೆನ್ನುವುದು ಗೊತ್ತಿದೆ. 13ನೇ ತಾರೀಖು ಏನು ಮಾಡಬೇಕೆನ್ನುವುದು ಗೊತ್ತಿದೆ. ನೀವು ನಮಗೆ ಅದನ್ನು ಹೇಳಿಕೊಡಬೇಕಾಗಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಂತೋಷ.

ಶ್ರೀ ಸಿದ್ದರಾಮಯ್ಯ: ನಾನೂ ಕೂಡ ಸುಮಾರು 20 ವರ್ಷಗಳಿಂದ ರಾಜಕೀಯದಲ್ಲಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಹೌದು. ನಾನು 35 ವರ್ಷಗಳಿಂದ ರಾಜಕೀಯದಲ್ಲಿ ಇದ್ದೇನೆ.

ಶ್ರೀ ಸಿದ್ದರಾಮಯ್ಯ: ಇರಿ ಬೇಡ ಎಂದು ನಾನು ಹೇಳುವುದಿಲ್ಲ. ಇನ್ನೂ 35 ವರ್ಷಗಳ ಕಾಲ ಇರಿ ನಮಗೇನು ಆಗಬೇಕು?

ಶ್ರೀ ವಾಟಾಳ್ ನಾಗರಾಜ್: ನಾನು ನಿಮ್ಮನ್ನು ಇರಬೇಡಿ ಎಂದು ಹೇಳಲಿಲ್ಲ. ಆದರೆ 13ನೇ ತಾರೀಖು ಇದೇ ಒಗ್ಗಟ್ಟು ಇದೆಯೇ ಎಂದು ಕೇಳಿದೆ ಅಷ್ಟೇ.

ಶ್ರೀ ಸಿದ್ದರಾಮಯ್ಯ: ಈಗಲೂ ಇರುತ್ತೇವೆ ಇನ್ನು ಒಂದು ವರ್ಷದವರೆಗೂ ಇರುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಸಂತೋಷ.

ಶ್ರೀ ಸಿದ್ದರಾಮಯ್ಯ: ಆಂತರಿಕ ಭಿನ್ನಾಭಿಪ್ರಾಯಗಳು ಇದ್ದ ತಕ್ಷಣ ಏನೋ ಎಲ್ಲಾ ಮುಳುಗಿ ಹೋಯಿತು, ಹಡಗು ಮುಳುಗಿ ಹೋಯಿತು, ಎಂದು ಯಾರಾದರೂ ಕನಸು ಕಂಡಿದ್ದರೆ ಅದು ಹಗಲು ಕನಸುಗಳು ಆಗುತ್ತವೆ.

ಶ್ರೀ ವಾಟಾಳ್ ನಾಗರಾಜ್: ಹಡಗು ಮುಳುಗಿ ಹೋಯಿತು ಎಂದು ನಾವ್ಯಾರು ಹೇಳುತ್ತಿಲ್ಲ. ನೀವೇ ಹೇಳುತ್ತಿರುವುದು. ನಿಮ್ಮ ಪಕ್ಷದವರೇ ಹೇಳಿದ್ದು 13ನೇ ತಾರೀಖು ಹಡಗು ಮುಳುಗಿ ಹೋಗುತ್ತೆ ಎಂದು, ನಾವ್ಯಾರು ಮಾತನಾಡಲಿಲ್ಲ.

ಶ್ರೀ ಸಿದ್ದರಾಮಯ್ಯ: ಈಗ ನಾನು ನಿಮಗೆ ಮಾತನಾಡಿದ್ದೇನೆಯೇ? ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ವಾಟಾಳ್ ನಾಗರಾಜ್ ಅವರೇ, ನೀವು ಅವರಿಗೆ ಬೆಂಬಲ ಕೊಟ್ಟು ಏಕೆ ಈ ರೀತಿಯಾದ ಪರಿಸ್ಥಿತಿ ನಿಮಗೆ ಬಂತು?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಖರ್ಗೆಯವರು ಏನು ಹೇಳುತ್ತಿದ್ದಾರೆಂದರೆ ನೀವು ಬೆಂಬಲ ಕೊಟ್ಟು ಈ ತರಹ ಸಿದ್ದರಾಮಯ್ಯನವರು ಹೇಳುತ್ತಾರಲ್ಲಾ ಎಂದು. ಸಿದ್ದರಾಮಯ್ಯನವರು ಹೇಳುತ್ತಾರೆ ಅಥವಾ ಬಿಡುತ್ತಾರೆ ಎನ್ನುವುದಕ್ಕೆ ನನ್ನ ಬೆಂಬಲವಲ್ಲ. ಈ ಸರ್ಕಾರ ವಿಸರ್ಜನೆ ಆಗಬಾರದು. ಈ ಸರ್ಕಾರ ಐದು ವರ್ಷ ಇರಬೇಕೆನ್ನುವ ಉದ್ದೇಶದಿಂದಲೇ ನನ್ನ ಬೆಂಬಲ. ಶಾಸ್ತ್ರವನ್ನು ನಾನು ಕೇಳುತ್ತಾ ಇಲ್ಲ. ನಿಮ್ಮ ಪಕ್ಷದ ಮುಖಂಡರುಗಳು ಶಾಸ್ತ್ರವನ್ನು ಕೇಳಿ ಈ ತೀರ್ಮಾನವನ್ನು ಮಾಡಿಕೊಂಡಿರುವುದು. 14ನೇ ತಾರೀಖಿನೊಳಗಾಗಿ ಈ ಸರಕಾರ ಹೋಗುತ್ತದೆ ಎಂದು ಶಾಸ್ತ್ರ ಕೇಳಿದವರು; ನಾವುಗಳಂತೂ ಅಲ್ಲ.

ಶ್ರೀ ಸಿದ್ದರಾಮಯ್ಯ (ಉಪ-ಮುಖ್ಯಮಂತ್ರಿಯವರು): ತಾವುಗಳು ಇದು ತನಕ ಎಲ್ಲವನ್ನೂ ನೋಡಿದ್ದೀರಿ. ಈಗ ನಿಮ್ಮ ನಿರ್ಣಯವನ್ನು ಸೋಲಿಸಲು ಇಲ್ಲಿ ಪಕ್ಷದ ಸಿಪಾಯಿಗಳಂತೆ ಎಲ್ಲರೂ ಬಂದು ಕುಳಿತಿರುವುದನ್ನು ನೋಡಿ. ಆದ್ದರಿಂದ ಈ ತರಹದ ಕನಸುಗಳನ್ನು, ಭ್ರಮೆಗಳನ್ನು ಕಾಣಬೇಡಿ. ಕನುಸುಗಳನ್ನು ಬೇಕಾದರೆ ಕಟ್ಟಿಕೊಳ್ಳಿರಿ,

ಭ್ರಮೆ ಮಾತ್ರ ಬೇಡ...

SRI N.RAJANNA: There is plenty of money in the treasury.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಈಗ ಸಮಯದ ಅಭಾವದಿಂದಾಗಿ ಎಲ್ಲಾ ಅಂಕಿಅಂಶಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ನಮ್ಮ ಸರಕಾರವು ಸದೃಢವಾಗಿದೆ. ನಾವು ಆಯವ್ಯಯದಲ್ಲಿ ಹೇಳಿರತಕ್ಕಂಥ ಕಾರ್ಯಕ್ರಮಗಳನ್ನು, ಇಲ್ಲಿಯವರೆಗೆ ಜನತೆಗೆ ಕೊಟ್ಟಿರತಕ್ಕಂಥ ವಚನಗಳನ್ನು, ಭರವಸೆಗಳನ್ನು, ಎಲ್ಲವನ್ನೂ ನಾವು ಈಡೇರಿಸುತ್ತಾ ಬಂದಿದ್ದೇವೆ. ಇನ್ನೂ ಒಂದು ವರ್ಷದ ವರೆಗೆ ನಾವು ಅಧಿಕಾರಿದಲ್ಲಿದ್ದು ಈ ಎಲ್ಲಾ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ನಮಗೆ ಯಾವುದೇ ಅಡ್ಡಿ-ಆತಂಕಗಳಾಗಲೀ, ಹಣಕಾಸಿನ ತೊಂದರೆಯಾಗಲೀ ಇಲ್ಲ. ಪುನಃ ನಾವೇ ಅಧಿಕಾರಕ್ಕೆ ಬರುವುದು ಮತ್ತು ಜನರು ನಮ್ಮನ್ನೇ ನಂಬುತ್ತಾರೆ ಎಂಬ ವಿಶ್ವಾಸ ನಮ್ಮದು. ಈಗ ಕಾಂಗ್ರೆಸ್‌ನ ಮಿತ್ರರು ಅಧಿಕಾರದಲ್ಲಿದ್ದವರು. ನೀವೇಕೆ ಈ ನಿರ್ಣಯವನ್ನು ತಂದಿದ್ದೀರೆಂಬುದು ಗೊತ್ತಿಲ್ಲ. ಅವರಾದರೆ ಅಧಿಕಾರದಲ್ಲಿರಲಿಲ್ಲ, ಅವರೇನಾದರೂ ಮಾಡಿಕೊಳ್ಳಲಿ. ನೀವು ಹಾಗಲ್ಲ, ನೀವು ಇಂಥ ಅಧಿಕಾರವನ್ನು ಎಷ್ಟು ಸಾರಿ ನೋಡಿದ್ದೀರಿ. ಇಷ್ಟೆಲ್ಲಾ ಇದ್ದೂ ಏಕೆ ಇದನ್ನು ತಂದಿದ್ದೀರಿ? ಅದು ಏನೇ ಇರಲಿ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟ ನಂತರ ಅವರು ತಮ್ಮ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು. ಯಾಕೆಂದರೆ ಅನೇಕ ಸಾರಿ ಹೀಗೆ ನಿರ್ಣಯವನ್ನು ತಂದಾಗ ಓಟಿಗೆ ಹಾಕುವ ಸಂದರ್ಭದಲ್ಲಿ ಉತ್ತರ ಹೇಳಲು ಕೂಡ ನಿಲ್ಲದೆ ಜಾಗವನ್ನು ಖಾಲಿ ಮಾಡುವುದು, ಅಥವಾ ಏನೋ ಒಂದು ರೀತಿಯಲ್ಲಿ ಹೋಗಿ ಬಿಡುತ್ತೀರಿ. ಈ ಸಾರಿ ಹಾಗೆ ಮಾಡಬೇಡಿ. ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಿ, ಈ ಸರಕಾರವು ಸದೃಢವಾಗಿದೆ. ಜನರಿಗೆ ಒಳ್ಳೆಯದನ್ನು ಮಾಡುತ್ತಿದೆ. ನೀವು ಕೂಡ ಇದನ್ನು ಮುಂದುವರಿಸಿಕೊಂಡು ಹೋಗಿ ಎಂದು ನಿಮ್ಮ, ಸಹಾಯ, ಸಲಹೆ, ಸೂಚನೆಗಳನ್ನು, ರಚನಾತ್ಮಕವಾಗಿ ಕೊಟ್ಟುಕೊಂಡು ಹೋಗಿ. ನಿಮ್ಮ ಆ ಒಂದು ಸಹಕಾರವನ್ನು ಸರಕಾರವು ಸ್ವಾಗತ ಮಾಡುತ್ತದೆ ಎಂದು ಹೇಳಿ, ಈ ಸರಕಾರವು ಚೆನ್ನಾಗಿ ನಡೆಯುತ್ತಿರುತ್ತದೆ ಎಂಬ ಮಾತನ್ನು ಹೇಳಿ ತಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ, ಮಾನ್ಯ ಅಧ್ಯಕ್ಷರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಉಪ-ಮುಖ್ಯಮಂತ್ರಿಯವರಿಗೆ ಧನ್ಯವಾದಗಳು. ಈಗ ಮಾನ್ಯ ಸಭಾನಾಯಕರು ತಮ್ಮ ಉತ್ತರವನ್ನು ನೀಡುತ್ತಾರೆ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ವಿಯೆಟ್ನಾಮಿನ ಅಧ್ಯಕ ಹೋಚಿಮಿನ್‌ನನ್ನು ಯುದ್ಧವಾದ ನಂತರ ಕೇಳುತ್ತಾರೆ, ನೀನು ಇಷ್ಟು ಪ್ರಭಲವಾದ ಅಮೇರಿಕಾದೊಡನೆ ಸೆಣಸಾಡಿ ಹೇಗೆ ಗೆದ್ದೆ? ಎಂದು. ಆಗ

ಹೋಚಿಮಿನ್ ಹೇಳುತ್ತಾನೆ ಅಮೇರಿಕಾದ ಸೈನಿಕರು ನಾವು ಸೈನಿಕರು ಎಂದು ಭಾವಿಸಿದ್ದರು. ಆದರೆ ವಿಯೆಟ್ನಾಮಿನ ನಮ್ಮ ಸೈನಿಕರು, ನಮ್ಮ ಸೈನ್ಯದ ಅಧಿಕಾರಿಗಳು, ತಾವು ಪ್ರತಿಯೊಬ್ಬರೂ ಹೋಚಿಮಿನ್ ಎಂದು ಹೋರಾಟ ಮಾಡಿದ್ದರಿಂದ ಆ ಯುದ್ಧಗೆದ್ದರು ಎಂದು ಹೇಳುತ್ತಾರೆ. ಆ ಭಾವನೆಯು ನಮ್ಮಲ್ಲಿ ಇರುವುದರಿಂದ ನೀವು ಗೆಲ್ಲುವುದಕ್ಕೆ ಆಗುವುದಿಲ್ಲ... ನಾನು ಒಂದು ವಿಷಯವನ್ನು ಮೊದಲಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಾನು ಯಾವ ವ್ಯಕ್ತಿ ಅಥವಾ ಒಂದು ಸರಕಾರದ ಬಗ್ಗೆ ಹೇಳುವಾಗ ದಯವಿಟ್ಟು ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ಈಗ ದಶಕಗಳ ಅಧಿಕಾರವನ್ನು ಮಾಡಿರತಕ್ಕಂಥ ಒಂದು ಪಕ್ಷ ಈಗ ಅಧಿಕಾರ ನಡೆಸತಕ್ಕಂಥ ಪಾರ್ಟಿ ಒಂದು. ಇನ್ನು ಯಾರು ಹಂಗೂ ಇಲ್ಲದೆ ಇರತಕ್ಕಂಥ ವಾಟಾಳ್ ನಾಗರಾಜ್‌ರವರು, ಹಷ್ಮಿಯವರು ಪುಟ್ಟಣ್ಣಯ್ಯನವರು ಮುನಿಯಪ್ಪನವರು, ಶಿವರಾಮೇಗೌಡರವರು, ರಾಜೇಂದ್ರನ್‌ರವರು, ಇವರು ತಾವು ಯಾವ ಸರಕಾರಕ್ಕೆ ಬೆಂಬಲ ಕೊಡಬೇಕೆಂದು ಗುಣ ನೋಡಿ ಓಟು ಕೊಡುವವರು. ಅವರು ನಮ್ಮನ್ನು ನೋಡಿ ಓಟು ಕೊಡುವವರಲ್ಲ. ಅದಕ್ಕಾಗಿಯೇ, ತಾವುಗಳು ಹತ್ತಾರು ವರ್ಷಗಳ ಕಾಲ ಸರಕಾರವನ್ನು ನಡೆಸಿದ್ದೀರಿ. ಹಲವಾರು ದೋಷಗಳು ಮತ್ತು ಸಾಧನೆಗಳು ಇರಬಹುದು. ಏನೂ ಆಗಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಆದರೆ ನಮ್ಮ ದೇಶವು ಇವೊತ್ತು ಯಾವ ಸ್ಥಿತಿಯಲ್ಲಿದೆ; ಇದನ್ನು ನಾವೆಲ್ಲರೂ ಸ್ವಲ್ಪ ಮನಃ ಪೂರ್ವಕವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇದು ಅವಿಶ್ವಾಸ ನಿರ್ಣಯ. ಕಾಂಗ್ರೆಸ್‌ಗೆ ಬಿಜೆಪಿಯವರ ಮೇಲೆ ಅವಿಶ್ವಾಸ. ಬಿಜೆಪಿಯವರಿಗೆ ಕಾಂಗ್ರೆಸ್‌ನವರ ಮೇಲೆ ಅವಿಶ್ವಾಸ. ಅವರಿಬ್ಬರೂ ಸೇರಿ ನಮ್ಮ ಮೇಲೆ ಅವಿಶ್ವಾಸ.... ನಾನು ಕೂಡ ಬಹಳ ಅವಿಶ್ವಾಸಗಳನ್ನು ನೋಡಿದ್ದೇನೆ. ಇಂಥ ಅವಿಶ್ವಾಸ ನಿರ್ಣಯವನ್ನು ನಾನು ಎಂದೂ ನೋಡಿಲ್ಲ. ಅವಿಶ್ವಾಸ ನಿರ್ಣಯವನ್ನು ನೀವು ತರಬಾರದಿತ್ತು ಎಂದು ನಿಮಗೆ ಹೆದರಿಕೊಂಡು ಹೇಳುತ್ತಿಲ್ಲ. ಬಹುಶಃ ಬಹಳ ಪ್ರಭುದ್ಧತೆಯನ್ನು ಪಡೆದುಕೊಂಡಿರತಕ್ಕಂಥ ಪ್ರಜಾತಂತ್ರಗಳಲ್ಲಿ ಅವಿಶ್ವಾಸವನ್ನು ಹಾಗೆ ತರುವುದಿಲ್ಲ. ಯಾಕೆಂದರೆ ಇಂದಿರಾಗಾಂಧಿಯವರ ಕಾಲದಲ್ಲಾಗಲೀ, ನೆಹರೂರವರ ಕಾಲದಲ್ಲಾಗಲೀ, ಅನಂತರದಲ್ಲಾಗಲೀ ಯಾರೇ ಸರಕಾರ ನಡೆಸುವವರು ಅವಿಶ್ವಾಸ ನಿರ್ಣಯವನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಅವಿಶ್ವಾಸ ನಿರ್ಣಯವನ್ನು ಮಂಡಿಸಿದವರು ಅದನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂಬುದು ಒಂದು ಪ್ರಜಾತಂತ್ರದ ಸತ್‌ಸಂಪ್ರದಾಯ. ಇಲ್ಲಿ ನಾನು ಯಾರ ಬಗ್ಗೆಯೂ ರೆಫರ್ ಮಾಡುವುದಿಲ್ಲ. ಏನು ಉದ್ದೇಶವನ್ನು ಇಟ್ಟುಕೊಂಡು ಈ ಅವಿಶ್ವಾಸ ನಿರ್ಣಯವನ್ನು ತಂದಿದ್ದೀರಿ? ಈ ಸರಕಾರವನ್ನು ತೆಗೆಯುವುದಕ್ಕೆ ಆಗುವುದಿಲ್ಲ ಎನ್ನುವುದೂ ಗೊತ್ತು. ನೀವೆಲ್ಲರೂ ಸೇರಿದರೂ ಕೂಡ ಸರಕಾರವನ್ನು ತೆಗೆಯುವುದಕ್ಕೆ ಆಗುವುದಿಲ್ಲ ಎಂಬುದೂ ನಿಮಗೆ ಗೊತ್ತು. ಇದು ರಾಜಕೀಯವಾಗಿ ನಿಮ್ಮ ಪಕ್ಷಗಳ ಶಕ್ತಿಯನ್ನು, ಪಕ್ಷಗಳ ಧೋರಣೆಯನ್ನು ಚುನಾವಣೆಯು ಬರುವ ಸಂದರ್ಭದಲ್ಲಿ

ತೋರಿಸುವುದಕ್ಕೋಸ್ಕರವಾಗಿ ತಂದಿರುವ ಅವಿಶ್ವಾಸ ನಿರ್ಣಯ ಇರಬಹುದು ಎಂದು ನನಗನ್ನಿಸುತ್ತದೆ. ಆ ಉದ್ದೇಶವು ನಿಮಗೆ ಇರಬೇಕು. ಅದು ಇರುವುದು ತಪ್ಪಲ್ಲ. ಆದರೆ ಜನರಿಗೆ ನಮ್ಮಲ್ಲಿ ವಿಶ್ವಾಸವಿದೆ, ನಮಗೆ ಜನರಲ್ಲಿ ವಿಶ್ವಾಸವಿದೆ. ನೀವು ಏನಾದರೂ ಅವಿಶ್ವಾಸವನ್ನು ಮಾಡಿಕೊಳ್ಳಿ, ನಮಗೆ ಅದರ ಚಿಂತೆ ಇಲ್ಲ. ನಮ್ಮ ಸರಕಾರದವರು ಏನು ಕೆಲಸವನ್ನು ಮಾಡಿದ್ದೇವೆ, ಎಷ್ಟು ಕೆಲಸವನ್ನು ಮಾಡಿದ್ದೇವೆ ಎಂಬ ಬಗ್ಗೆ ಹಣಕಾಸಿನ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು, ನೀರಾವರಿ ಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಿಗಳು, ಸಾರಿಗೆ ಮಂತ್ರಿಗಳು ಮುಂತಾಗಿ ಎಲ್ಲವನ್ನೂ ಹೇಳಿದ್ದಾರೆ. ಅವರುಗಳು ಪ್ರಸ್ತಾಪ ಮಾಡದೇ ಇರುವ ವಿಷಯಗಳನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಅದಕ್ಕಿಂತ ಮುಂಚೆ ದೇಶದಲ್ಲಿ ಇವೊತ್ತು ಪರಿಸ್ಥಿತಿ ಹೇಗೆ ಇದೆ ಎಂಬುದನ್ನು ನೋಡಬೇಕು. ಕರ್ನಾಟಕದಲ್ಲಿ ಇವತ್ತು ನಾವು ಹೇಗಿದ್ದೇವೆ ಎಂಬುದನ್ನು ಅವರಿಗೆ, ಇವರಿಗೆ ಹೋಲಿಕೆ ಮಾಡಿ ಅವರಿಗಿಂತ ನಾವು ಚೆನ್ನಾಗಿದ್ದೇವೆ, ಇವರಿಗಿಂತ ನಾವು ಚೆನ್ನಾಗಿದ್ದೇವೆ ಎಂದು ಹೇಳಲು ಹೋಗುವುದಿಲ್ಲ. ನಮ್ಮ ಪ್ರಗತಿಯನ್ನು ಹೇಳಿಕೊಳ್ಳುವಷ್ಟು ಹೆಮ್ಮೆ ಇದೆ. ರಿಸರ್ವ್‌ಬ್ಯಾಂಕ್‌ನವರು ಹೇಳಿದ ಹಾಗೆ, ವಿಶ್ವಬ್ಯಾಂಕ್‌ನವರು ಹೇಳಿದ ಹಾಗೆ, ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸ್ಟಡಿ ಮಾಡಲು ಬಂದಂಥ ಸೆಂಟ್ರಲ್ ಪೋಲೀಸರು ಬಂದು ಹೇಳಿದ ಹಾಗೆ. ಇಂಟರ್‌ನ್ಯಾಷನಲ್ ಪೋಲೀಸ್ ಕಮಿಶನರ್ ಬಂದು ಹೇಳಿದ ಹಾಗೆ, We are second to none. We are Number One State. ಇದೆಲ್ಲಾ ನಿಮಗೆ ಏಕೆ ಕಾಣುವುದಿಲ್ಲ? ಅದು ಯಾಕೆ ಗೊತ್ತೇ? ಎಕ್ಸ್‌ರೇ ತೆಗೆಯುವ ಮೆಷಿನ್ ಇರುತ್ತದಲ್ಲಾ ಎಕ್ಸ್‌ರೇ ಮೆಷಿನ್‌ನ ಮುಂದೆ ಒಬ್ಬ ಬಹಳ ಸುಂದರಿಯನ್ನು ನಿಲ್ಲಿಸಿದರೆ ಫೋಟೋ ಬರುವುದು ಬರೀ ಎಲುಬು. ಅದೇ ದೊಡ್ಡ ಪೈಲ್ವಾನ್‌ನನ್ನು ನಿಲ್ಲಿಸಿದರೂ ಅದೇ ಎಲುಬೇ. ಹೀಗೆ ಎಕ್ಸ್‌ರೇ ಕಣ್ಣುಗಳಲ್ಲಿ ಬರೇ ಎಲುಬುಗಳನ್ನು ಮಾತ್ರ ತೋರಿಸುತ್ತವೆ. ಹೀಗೆ ಸೌಂದರ್ಯವನ್ನು ನೋಡಲು ನಿಮಗೆ ಆಗುತ್ತಿಲ್ಲವಲ್ಲಾ? ನೀವುಗಳು ಸೌಂದರ್ಯವನ್ನು ನೋಡುವುದನ್ನು ಕಲಿತುಕೊಳ್ಳಿ, ದೋಷವನ್ನು ಹೇಳಿ. ಬರೇ ಎಕ್ಸ್‌ರೇ ಕಣ್ಣುಗಳು ನಿಮ್ಮದ್ದಾದರೆ ಜೀವನವೇ ಬಹಳ ಕಷ್ಟವಾಗುತ್ತದೆ. ನಿಮ್ಮಿಂದ ಯಾರನ್ನೂ ನೋಡುವುದಕ್ಕೆ ಆಗುವುದಿಲ್ಲ. ಆದರೆ ಎಕ್ಸ್‌ರೇ ಕೂಡ ಬೇಕು, ಬೇಡ ಎಂದು ನಾನು ಹೇಳುವುದಿಲ್ಲ. ಎಲ್ಲೋ ಆಳವಾದ ರೋಗಗಳು ಇದ್ದರೆ ಅದನ್ನು ಪತ್ತೆ ಹಚ್ಚಲು ಸ್ಕ್ಯಾನಿಂಗ್, ಎಕ್ಸ್‌ರೇ ಮುಂತಾಗಿ ಎಲ್ಲವೂ ಬೇಕು. ಆದರೆ ಎಲ್ಲಾ ಸಮಯದಲ್ಲಿ ಅದನ್ನು ಉಪಯೋಗಿಸಿದರೆ ನಿಮ್ಮ ಜೀವನದ ರಸವೇ ಹೊರಟು ಹೋಗುತ್ತದೆ. ಅದಕ್ಕಾಗಿ ಡಿ.ವಿ.ಗುಂಡಪ್ಪನವರು ಸರಕಾರ ಅಂದರೆ ಹೇಗೆ, ಏನು ಎಂಬ ಬಗ್ಗೆ ಬರೆದಿದ್ದಾರೆ. ಅವರು ಯಾವ ವರ್ಷದಲ್ಲಿ ಎಷ್ಟು ವರ್ಷದ ಕೆಳಗೆ ಬರೆದಿದ್ದಾರೋ ಏನೋ? ಬಹುಶಃ ಆಗ ಯಾರ ಸರಕಾರವು ಇತ್ತು ಎಂಬುದೂ ಕೂಡ ನನಗೆ ಗೊತ್ತಿಲ್ಲ.

ಸರಕಾರ ಹರಿಗೋಲು
ತೆರೆ ಸುಳಿಗಳ್ ಅತ್ತಿತ್ತ
ಸುರೆ ಕುಡಿದ ಕೆಲವರು ಹುಟ್ಟು ಹಾಕುವರು
ಬಿರುಗಾಳಿ ಬೀಸುವುದು
ಜನರೆದ್ದು ಕುಣಿಯುವುದು
ಆದರೂ ಉರುಳದಿದ್ದಿರುವುದು ಬಹುದಾಶ್ಚರ್ಯ

ಯಾವ ಕಾಲದಲ್ಲಿ ಬರೆದಿದ್ದಾರೋ, ಇಂಥಾ ಜನ ಇಂಥಾ ಹುಟ್ಟು ಹಾಕುವವರು, ಇಂತಹ ಬಿರುಗಾಳಿ, ಆದರೂ ಮುಳುಗಿಲ್ಲವಲ್ಲಾ ಇದು. ಅದು ಭಾರತ. ಇದಕ್ಕಿಂತ ಶಕ್ತಿವಂತ ದೇಶಗಳು ಒಡೆದು ಚೂರುಚೂರಾದವು. ನಮ್ಮ ಮುಂದೆ ಹುಟ್ಟಿದ ಅನೇಕ ರಾಷ್ಟ್ರಗಳು ಇವತ್ತು ನಮಗೆ ಸಾಲ ಕೊಡುವಂತಾಗಿರಬಹುದು. ಆದರೂ ಈ ದೋಣಿ ಮುಳುಗಿಲ್ಲ. ಅದಕ್ಕೆ ಯಾರ್‍ಯಾರೋ ಏನೇನೋ ವ್ಯಾಖ್ಯಾನ ಮಾಡಬಹುದು. ಈ ರಾಷ್ಟ್ರದ ಸಮಗ್ರ ಸಂಸ್ಕೃತಿ ಏನಿದೆ ಅದರಲ್ಲಿ ಎಲ್ಲೋ ಒಂದು ಕಡೆ ಆ ಅಂತರ್ಶಕ್ತಿ ಇದೆ, ಅದರಿಂದ ಉಳಿದಿದ್ದೇವೆ. ಈಗ ಸುಮ್ಮನೆ ನಾವು ಹೇಳುತ್ತೇವೆ: ಬಿಜೆಪಿ ಹಾಗೆ ಮಾಡ್ತು, ಹೀಗೆ ಮಾಡ್ತು ಎಂದು ಇವತ್ತಿನ ಪತ್ರಿಕೆಗಳು ಇವತ್ತಿನ ಸರ್ಕಾರಗಳು, ಸಚಿವರು, ಅವರ ಮೇಲೆ ಬರುವ ಆರೋಪಗಳು, ಲಾ ಅಂಡ್ ಆರ್ಡರ್ ಸ್ಥಿತಿಗಳು ಇದನೆಲ್ಲ ನೋಡಿದಾಗ ಗುಂಡಪ್ಪನವರ ನೆನಪು ಬರುತ್ತದೆ, ಆದರೂ ಇದು ಮುಳುಗಿಲ್ಲ. ಮುಳುಗಬೇಕು ಎಂಬುದು ಅಲ್ಲ ನನ್ನಿಚ್ಛೆ. ಇದು ಮುಳುಗುವ ಹಾಗೆ ನಾವು ಮಾಡಬಾರದು. ಅವರ ಕಾಲು ನಾವು ಎಳೆಯುವುದು, ನಮ್ಮ ಕಾಲು ನೀವು ಎಳೆಯುವುದು. ಸ್ಥಿರತೆ ಬಗ್ಗೆ ಹೇಳುತ್ತಿದ್ದಿರಿ: ಮಮತಾಬ್ಯಾನರ್ಜಿ ಹೇಳಿದ್ದಾರೆ, I will give only seven days' time; ಜಯಲಲಿತಾ ಹೇಳಿದ್ದರು I give only two weeks time ಬರ್ನಾಲಾ ಒಂದು ಸಲ ಹೇಳಿದ್ದರು We will not support, we will withdraw support ಇದನ್ನು ನೋಡಿ ನಮಗೇನು ಖುಷಿ ಆಗುತ್ತದೆ? ಏನಾಯಿತು? ಬಿಜೆಪಿ ಸರ್ಕಾರ ಇದ್ದ ತಕ್ಷಣ ಅದು ಮುಳುಗಿಹೋಗಿಬಿಡಬೇಕು, ನಾವೊಂದು ಅನಾರ್ಕಿಯಾಗಬೇಕು, ನಾವೊಂದು ಹೇಳಿಕೇಳುವರಿಲ್ಲದ ದೇಶವಾಗಬೇಕು ಎಂದು ಅಲ್ಲ. ಹಾಗೆಂದ ತಕ್ಷಣ ನಾವು ಹೇಗೆ ಮಾಡಿದ್ದೇವೆ ಎಂಬುದನ್ನು ನೀವು ಬಹಳ ತಪ್ಪು ತಿಳಿದುಕೊಂಡಿದ್ದೀರಿ: ಕುಸ್ತಿ ಆಡುವುದು ಹೇಗೆ ಎಂದು ಹುಡುಗರಿಗೆ ಕಲಿಸುವುದಕ್ಕೆ ನಮ್ಮ ಗರಡಿಮನೆ ಇರುತ್ತದೆ. ನಮ್ಮ ಗರಡಿಮನೆಯಲ್ಲಿ ಚೆನ್ನಾಗಿ ಕುಸ್ತಿ ಕಲಿತ ಮೇಲೇ ನಿಮ್ಮನ್ನು ಹೊಡೆಯುವುದು. ಗೊತ್ತಾಯ್ತಾ, ನಾಳೆ ಚುನಾವಣೆಗಳಿಗೆ ನಮ್ಮ ಪೈಲ್ವಾನರುಗಳು ಬರುವ ಹೊತ್ತಿಗೆ ನಿಮ್ಮನ್ನು ಮುಗಿಸುವುದಕ್ಕೆ ಬರ್ತಾರೆ, ಗರಡಿಯಲ್ಲಿ ಕುಸ್ತಿಯಾಡದೆ ಮುದ್ದಾಡುತ್ತಾರಾ ಯಾರಾದರೂ? ಗರಡಿಮನೆಯಲ್ಲಿ ಕುಸ್ತೀನೇ ಆಡುವುದು. ಆದ್ದರಿಂದ ನೀವು ತೀರಾ ಒಳಹೊಕ್ಕು ನೋಡೋಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್: ನೀವು 13ನೇ ತಾರೀಖು ಖುಸ್ತಿ ಆಡುತ್ತೀರಲ್ಲಾ, ಅದನ್ನು ಇಡೀ ರಾಜ್ಯದ ಜನತೆಗೆ ತೋರಿಸುವ ಹಾಗೆ ಮಾಡಿ.

ಶ್ರೀ ಜೆ.ಎಚ್.ಪಟೇಲ್: ಆಯಿತು, ತೋರಿಸುತ್ತೇವೆ. ವಾಟಾಳ್‌ರವರೇ, ಅವರದು, ಬೆಳಿಗ್ಗೆ ಪೇಪರ್ ಓದುವಾಗ, ಮಮತಾಬ್ಯಾನರ್ಜಿಯವರದು ತೃಣಮೂಲ ಕಾಂಗ್ರೆಸ್, ಅರೆ, ನಮ್ಮ ಕಾಂಗ್ರೆಸ್ ಏನಿರಬಹುದು ಎಂದು ನನಗನ್ನಿಸಿದಾಗ ಇವರದು ಋಣಮೂಲಕಾಂಗ್ರೆಸ್, ಇವರು ಜನರ ಋಣಾನೂ ತೀರಿಸಲಿಲ್ಲ, ಅವರು ಮಾಡಿಟ್ಟುಹೋದ ಋಣಾನಾ ನಾವೂ ತೀರಿಸಬೇಕಾಯಿತು. ಬಿಜೆಪಿ ಏನಾಗಿರಬಹುದು ಅಂದರೆ ಅಣುಮೂಲ, ಬಂದು ಬಾಂಬ್ ಹಾರಿಸಿಬಿಟ್ಟರಲ್ಲಾ. ಆಮೇಲೆ ನಮ್ಮ ಜನತಾ ಪರಿವಾರ ಏನಿದೆ ಇದು ಆಗಾಗ್ಗೆ ರಣಮೂಲ ಆಗುತ್ತದೆ. ಅದಕ್ಕೆ ಕೊನೆಯೇ ಇಲ್ಲ. ಹೀಗಿದೆ ಇವತ್ತಿನ ಪರಿಸ್ಥಿತಿ. ಒಂದೊಂದು ಸಲ ನಿಮ್ಮನ್ನು ನಗಿಸಬೇಕೆಂಬ ಇಚ್ಛೆಯಿಂದೇನೇ ಹೇಳುತ್ತೇನೆ. ಒಂದೊಂದ್ಸಾರಿ ನೊಂದೂ ಹೇಳ್ತೇನೆ. ಅದೇ ಗುಂಡಪ್ಪನವರು ಕೇಳುತ್ತಾರೆ. ಈ ಮಾತಿಗೆ ಉತ್ತರ ಯಾರೂ ಕೊಡುವುದಕ್ಕೆ ಆಗುವುದಿಲ್ಲ. ಸತ್ಯವಂತನ ಅರಸುತ ಪೇಟೆಯೊಳಗೆ ಹಾಡಹಗಲಲೆ ದೀವಿಗೆಯ ಹಿಡಿದು ನಡೆದು ಕೆಟ್ಟದೀಜಗವೆಂದು ತೊಟ್ಟಿಯೊಳಗೆ ಎಸೆದನು ತಾತ್ವಿಕ ಡಯೋಜನಿಸ್ ಮಂಕುತಿಮ್ಮ. ಒಬ್ಬ ಫಿಲಾಸಫರ್ ಮಧ್ಯಾಹ್ನ ಲಾಟೀನು ಹಿಡಿದು ಹೊರಟಿರುತ್ತಾನೆ. ಏಕೆಂದರೆ ಸತ್ಯವಂತರನ್ನು ಹುಡುಕುವುದಕ್ಕೆ ಹೊರಟಿದ್ದ, ಈ ಬೆಳಕಿನಲ್ಲಂತೂ ಆಗುವುದಿಲ್ಲ ಆದ್ದರಿಂದ ಆ ಲಾಟೀನನ್ನು ಎಸೆದು ಮುಂದಕ್ಕೆ ಹೋಗುತ್ತಾನೆ. ಹಾಗೆ ಈಗ್ಯಾರು ಆ ಲಾಟೀನು ಹಿಡಿದುಕೊಂಡು ಹುಡುಕುವವರು? ಸತ್ಯವಂತರು ಎಲ್ಲಿ ಸಿಗಬಹುದು? ಬ್ಯಾಂಕ್‌ಗಳ ನೋಟಿಸ್‌ನಲ್ಲಿರಬಹುದಾ? ಸಿಬಿಐ ಚಾರ್ಜ್ ಶೀಟಿನಲ್ಲಿರಬಹುದಾ? ಸುಪ್ರಿಂಕೋರ್ಟ್ ಲಿಸ್ಟ್‌ನಲ್ಲಿರಬಹುದಾ? ಪರದೇಶಿ ರೆಕಾರ್ಡ್‌ಗಳಲ್ಲಿರಬಹುದಾ? ಸತ್ಯವಂತರು ಎಲ್ಲಿರಬಹುದು? ನಮ್ಮನ್ನು ಹೇಳಿದಿರಿ ನೀವು, ನಿಷ್ಕ್ರಿಯ ಸರ್ಕಾರ ಎಂದು; ಒಂದ್ಸಲ ಸಿಟ್ಟಿಗೆ ಬಂದು ನಮ್ಮದು ಷಂಡ ಸರ್ಕಾರ ಎಂದರು. ಯಾರಾದರೂ ಗಂಡಸಿಗೆ ನೀನು ಷಂಡ ಅಂದರೆ ನಾನು ಷಂಡನಲ್ಲ ಎಂದು ತೋರಿಸುವುದಕ್ಕೆ ಬೇಕಾದಷ್ಟು ಮಾರ್ಗಗಳಿವೆ. ವೈದ್ಯಕೀಯವಾಗಿಯೂ ತೋರಿಸಬಹುದು, ಫಿಜಿಕಲ್ ಆಗಿಯೂ ತೋರಿಸಬಹುದು. ಸರ್ಕಾರ ಷಂಡ ಅಂದರೆ ಪೋಲಿಸರಿಗೆ ನಾನೇನು ಯಾವಾಗಲೂ ಲಾಠಿ ಎತ್ತಿಕೊಂಡೇ ಇರ್ರಿ ಎಂದು ಹೇಳಲಾ? ಸರ್ಕಾರ ಷಂಡ ಆಗುವುದಿಲ್ಲ. ಅದಕ್ಕೇ ಈ ಸ್ಥಿತಿಯಲ್ಲಿ ನಾವು ಬಹಳ ಪ್ರಬುದ್ಧರಾಗಿ ಚೆನ್ನಾಗಿದ್ದೂ ಪರಸ್ಪರ ನಾವೇನೇ ಜಗಳ ಆಡಿದ್ರೂ ಚಿಂತೆ ಇಲ್ಲಪ್ಪ; ಅಮೆರಿಕಾದವರಿಗೆ ಚೂಯಿಂಗಂ ಭಾರಿ ಅಭ್ಯಾಸ. ಆ ಲಿವಿನ್‌ಸ್ಕಿ ಎನ್ನುವ ಚೂಯಿಂಗಂ ಸಿಕ್ಕಿ ಬಿಟ್ಟಿತಲ್ಲಾ ಜಗಿದರು, ಜಗಿದರು, ಸಾಕಾಗುವವರೆಗೂ ಜಗಿದು ಕೈಬಿಟ್ಟುಬಿಟ್ಟರು. ಅವರಿಗೆ ಹೊಟ್ಟೆಬಟ್ಟೆಯ ಪ್ರಶ್ನೆ ಇಲ್ಲ. ಉದ್ದಿಮೆಗಳನ್ನು ಬೆಳೆಸುವ ಪ್ರಶ್ನೆ ಇಲ್ಲ, ಮನೆ ಕಟ್ಟುವ, ಮಕ್ಕಳನ್ನು ಓದಿಸುವ ಪ್ರಶ್ನೆ ಇಲ್ಲ. ಅದಕ್ಕೇ ಲಿವಿನ್‌ಸ್ಕಿ ಭಾರಿ ದೊಡ್ಡ ಪ್ರಶ್ನೆಯಾದಳು. ನಮ್ಮಲ್ಲಿ ಇನ್ನೂ 46 ಜನ ಹೆಬ್ಬೆಟ್ಟು ಒತ್ತುವವರು 49 ಜನ ಬಡತನದ ರೇಖೆ

ಕೆಳಗಿರುವವರು, ಸರಿಯಾದ ಆಸ್ಪತ್ರೆಗಳೇ ಇಲ್ಲದ ಲಕ್ಷಾಂತರ ಗ್ರಾಮಗಳು, ಇವತ್ತು ಯಾವುದಕ್ಕೆ ನಮ್ಮ ಪ್ರೆಯಾರಿಟಿ? ನಮ್ಮ ಸರ್ಕಾರ ಬಂದ ಮೇಲೆ ನಮ್ಮ ಪ್ರೆಯಾರಿಟಿ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ವಸತಿ, ಕುಡಿವ ನೀರು ನೀರಾವರಿ. ಇನ್ನೂ ಇದ್ದಾವೆ. ಆದ್ದರಿಂದ ನಮ್ಮ ಪ್ರೆಯಾರಿಟಿ ಏನು ಎಂಬ ಸ್ಪಷ್ಟ ಚಿತ್ರ ಕೊಡುವುದಕ್ಕಾಗಿ ಬಹಳ ಬ್ರೀಫಾಗಿ I will start with the social welfare, because that is our priority No.1 ಸಮಾಜಕಲ್ಯಾಣ ಇಲಾಖೆಯಲ್ಲಿ ವೆಚ್ಚದ ಬಾಬ್ತು: 1992ರಿಂದ 95ರವರೆಗೆ 952 ಕೋಟಿ. ನಾವು ಬಂದ ಮೇಲೆ 95ರಿಂದ 98ರವರೆಗೆ 1345 ಕೋಟಿ ಪ್ರಾರಂಭಿಸಲಾದ ಹಾಸ್ಟೆಲ್‌ಗಳ ಸಂಖ್ಯೆ : 92ರಿಂದ 95ರವರೆಗೆ 139. 95ರಿಂದ 98ರವರೆಗೆ 296. ಹಾಸ್ಟೆಲ್ ಕಟ್ಟಡಗಳ ನಿರ್ಮಾಣ ಸಂಖ್ಯೆ ಆ ಕಾಲದಲ್ಲಿ 105, ನಾವು ಮಾಡಿರುವುದು 156. ವಿದ್ಯಾರ್ಥಿವೇತನ ಹಂಚಿಕೆ: ಅವರ ಕಾಲದಲ್ಲಿ ಕೊಟ್ಟಿದ್ದು 73 ಕೋಟಿ. ರೂಗಳೂ ನಾವು ಕೊಟ್ಟಿರುವುದು 108 ಕೋಟಿ. ರೂಗಳು. ಸ್ಕಾಲರ್‌ಶಿಫ್ ಪಡೆದ ಹುಡುಗರು 35 ಲಕ್ಷ ಅವರ ಕಾಲದಲ್ಲಿ. 61 ಲಕ್ಷ ನಮ್ಮ ಕಾಲದಲ್ಲಿ. ಆಮೇಲೆ ಅಂಬೇಡ್ಕರ್ ಭವನಗಳು. ಅಲ್ಲಲ್ಲಿ ಬಂದಿರುವ ದಲಿತರು ಸವರ್ಣೀಯರ ಘರ್ಷಣೆಗಳನ್ನು ನಮ್ಮಕಾಲದಲ್ಲಿ ಎಷ್ಟು ಕಡಿಮೆ ಮಾಡಿದ್ದೇವೆ ಇದಕ್ಕೆಲ್ಲಾ ವಿವರ ಇವೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಬಗ್ಗೆ 92ರಿಂದ ಮುಂದೆ ಹೇಳುವ ತನಕ.

5.00 ಪಿ.ಎಂ

ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರ ಬಗ್ಗೆ 92ರಿಂದ 95ರವರೆಗೆ ಹೇಳುತ್ತೇನೆ. 171 ಕೋಟಿ 74 ಲಕ್ಷ ಅವರ ಕಾಲದಲ್ಲಿ ಮಾಡಿದ್ದರು. 256 ಕೋಟಿ 71 ಲಕ್ಷ ನಮ್ಮ ಕಾಲದಲ್ಲಿ, ಈ ವರ್ಷ 10 ಕೋಟಿ 682 ಲಕ್ಷ ರೂ. ಖರ್ಚು ಮಾಡುತ್ತೇವೆ. ವಿದ್ಯಾರ್ಥಿನಿಲಯಗಳ ಸಂಖ್ಯೆ ಹಿಂದುಳಿದ ವರ್ಗದವರಿಗೆ 92 ರಿಂದ 95 ನಿಲ್ 95-98 ರವರೆಗೆ 156. ಇದು ನಿಷ್ಕ್ರಿಯ ಸರ್ಕಾರ ಅಲ್ಲಾ? ಮೊರಾರ್ಜಿ ವಸತಿ ಶಾಲೆಗಳ ಸಂಖ್ಯೆ ನಿಲ್, 95 ರಿಂದ 98 13+1=14. ಇದು ನಿಷ್ಕ್ರಿಯ ಸರ್ಕಾರ! ಗಂಗಾಕಲ್ಯಾಣ ಯೋಜನೆ ಬಗ್ಗೆ ಏನೇನೂ ಮಾಡಿರಲಿಲ್ಲ. ಆ ಯೋಜನೆಯನ್ನು ನಮ್ಮ ಸರ್ಕಾರ ಬಂದಮೇಲೆ ಅದಕ್ಕೆ ಫುಟ್ ಸಿಕ್ಕಿತು. ಆ ಗಂಗಾಕಲ್ಯಾಣ ಯೋಜನೆಯಲ್ಲಿ ಈಗ ಹಾಲಿ 22 ಸಾವಿರ ಎಕರೆಗೆ ನೀರನ್ನು ಒದಗಿಸಿದ್ದೇವೆ. ಆ ಯೋಜನೆ ಏನು ಎಂಬುದು ತಮಗೆ ಗೊತ್ತಿದೆ. ನಾನೇನು ಹೇಳುವುದು ಬೇಕಿಲ್ಲ. ಅಲ್ಲಸಂಖ್ಯಾತರ ಅಭಿವೃದ್ಧಿಗೋಸ್ಕರ ಈ ವಿವರವನ್ನು ನಾನು ಏಕೆ ಕೊಟ್ಟಿಲ್ಲ ಎಂದರೆ ಅಲ್ಲಸಂಖ್ಯಾತರ ಅಭಿವೃದ್ಧಿಗೋಸ್ಕರ ಒಂದು ಕಾರ್ಪೊರೇಷನ್ ಮಾಡಿದ್ದೇವೆ. ಅದಕ್ಕೇ ಒಂದು ಇಲಾಖೆ ಮಾಡಿದ್ದೇವೆ. We have created a Directorate to look after the welfare of minorities.. ಅವರ ಬಗ್ಗೆ ಮಾತನಾಡುವುದು ಎಲ್ಲರೂ ಮಾತನಾಡಬಹುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗದವರ ಬಗ್ಗೆ ಕಣ್ಣೀರು ಹರಿಸುವವರನ್ನು ಬಹಳ ಜನರನ್ನು ನೋಡಿದ್ದೇನೆ. ಅವರಿಗೆ ಏನಾದರೂ ಸಹಾಯ ಮಾಡದೆ ಬರೀ ಅತ್ತರೇನು ಬಂತು. ಬರೀ ಮಾತನಾಡಿದರೆ ಏನು ಬಂತು? ಅದಕ್ಕೆ ನಾವು ಪರಸ್ಪರ ವಾಗ್ವಾದಗಳಲ್ಲಿ

ತೊಡಗಿ ಅವರನ್ನು ಮರೆತಿದ್ದೇವೆ. ಸುಮ್ಮನೆ ನಾವು ವಾಗ್ವಾದ ಮಾಡುತ್ತೇವೆ. ಎಜ್ಯುಕೇಷನ್‌ನಲ್ಲಿ ಬಹುಶಃ ಯಾವ ರಾಜ್ಯದಲ್ಲೂ ಇಷ್ಟೊಂದು ತೀವ್ರತರವಾದ ಸುಧಾರಣೆ ಆಗಿಲ್ಲ. ಪ್ರೈಮರಿ ಸ್ಕೂಲ್ ಟೀಚರ್ಸ್ ರೆಕ್ರೂಟೆಡ್ 92ರಿಂದ 95, 13, 600 95-98ರವರೆಗೆ 72, 373. ಹೈಸ್ಕೂಲ್ ಟೀಚರ್ಸ್ ರೆಕ್ರೂಟೆಡ್ ಮಾಡಿರುವುದು 1992-95- Nil, 1995-98- 9,412, High School Headmasters recruited during 1992-95- Nil, ನಮ್ಮ ಕಾಲದಲ್ಲಿ 1436. New primary Schools during their period-1550, our time 3820. Primary Schools upgraded this is something very strange. During their time it was 233. During our time 6,550. ಇದು ನಿಷ್ಕ್ರಿಯ ಸರ್ಕಾರ. Education is our first priority. ಅದನ್ನು ತಾವುಗಳು ಎಲ್ಲರೂ ಒಪ್ಪಿದ್ದೀರಿ. ಗೋವಿಂದೇಗೌಡರು ಮಾಡಿರುವ ಕೆಲಸ ಸ್ತುತ್ಯಾರ್ಹ ಎಂದು ಎಲ್ಲರೂ ಒಪ್ಪಿದ್ದೀರಿ. ಯಾರೂ ಅದನ್ನು ಅಲ್ಲಗಳೆದಿಲ್ಲ. ಇದನ್ನೆಲ್ಲಾ ಕಂಡು ಸಮಾಜಕಲ್ಯಾಣ ಇಲಾಖೆಯಲ್ಲಿ ಆಗಿರುವುದನ್ನು ಕಂಡಿದ್ದೀರಿ, ಬ್ಯಾಕ್‌ವರ್ಡ್ ಕ್ಲಾಸಸ್ ಮತ್ತು ಮೈನಾರಿಟೀಸ್ ಇಲಾಖೆಯಲ್ಲಿ ಆಗಿರುವುದನ್ನು ನೋಡಿದ್ದೀರಿ. ನಿಮ್ಮ ಎದುರಿಗೆ ಇಟ್ಟಿದ್ದೇವಲ್ಲಾ. ಇದನ್ನು ವರ್ಣನೆ ಮಾಡುವುದಲ್ಲ. ಕ್ರಿಯೆ ಎಂದರೇನು? ಡಿಫೈನ್ ಮಾಡಬೇಕು. ನೀವೆಲ್ಲಾ ಮಾಡಿದ್ದು ಕ್ರಿಯೆಯಲ್ಲ, ನಾವು ಮಾಡಿದ್ದೇವಲ್ಲಾ ಅದು ಕ್ರಿಯೆ. ಅದು ನಮ್ಮಿಂದ ಸಾಧ್ಯವಿಲ್ಲ. ಅಂಥ ಕ್ರಿಯೆಗಳನ್ನು ಮಾಡುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ. ಮಾನ್ಯ ಪಾಟೀಲ್‌ರವರೇ, ನೀವು ಬಯ್ದರೂ ಚಿಂತೆ ಇಲ್ಲ, ಏನು ಮಾಡಿದರೂ ಚಿಂತೆಯಿಲ್ಲ. ನಾವು ಅಂಥ ಕ್ರಿಯೆಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಯಾರನ್ನು ಕುರಿತು ಹೇಳುತ್ತಿಲ್ಲ. ಆದ್ದರಿಂದ ಇನ್ನು ಕೆಲವು ವಿಷಯಗಳು ಮಾನ್ಯ ಸದಸ್ಯರಿಗೆ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಪಡೆದು ತಿಳಿಸಬೇಕಾಗಿದೆ. ನಮ್ಮ ರಾಜ್ಯದ ಆರ್ಥಿಕ ಪ್ರಗತಿಯ ಬಗ್ಗೆ, ಔದ್ಯೋಗಿಕ ಪ್ರಗತಿಯ ಬಗ್ಗೆ ಆರೋಗ್ಯದ ಸಾಧನೆ ಬಗ್ಗೆ ಮೊದಲು ಹೇಳುತ್ತೇನೆ. ಅದು ರಿಮಾರ್ಕಬಲ್. ಈ ಹೌಸಿಂಗ್‌ನಲ್ಲಿ 92 ರಿಂದ 95, 1 ಲಕ್ಷದ 60 ಸಾವಿರ, ನಮ್ಮ ಕಾಲದಲ್ಲಿ 3 ಲಕ್ಷದ 23 ಸಾವಿರ+ 44 ಸಾವಿರ 3 ಲಕ್ಷದ 67 ಸಾವಿರ ಮನೆಗಳನ್ನು ನಾವು ಕಟ್ಟಿದ್ದೇವೆ. ಆರೋಗ್ಯದ ಬಗ್ಗೆ ಹೇಳುವುದಾದರೆ 95 ರಿಂದ 98 ನಮ್ಮ ಕಾಲದಲ್ಲೇ ಡಾಕ್ಟರ್ಸ್ ರೆಕ್ರೂಟೆಡ್ 1757, including contract basis- 98 ರಿಂದ 99 640 being recruited ಒಟ್ಟು 2800. ಆಮೇಲೆ ಪ್ಯಾರಾ ಮೆಡಿಕಲ್ ಸ್ಟಾಫ್ include-- 4633 ಪ್ಯಾರಾ ಮೆಡಿಕಲ್ ಸ್ಟಾಫ್, ಈ ವರ್ಷ 2800 ಜನ ನರ್ಸಸ್, ವರ್ಕರ್ಸ್ ಎಲ್ಲಾ ಮಾಡಿದ್ದೇವೆ. ವಿಶ್ವಬ್ಯಾಂಕ್ ಅನುದಾನದಲ್ಲಿ 546 ಕೋಟಿ ರೂಪಾಯಿಗಳನ್ನು ಅವರಿಂದ ಸಹಾಯ ಪಡೆದು 201 ಆಸ್ಪತ್ರೆಗಳನ್ನು ಅಪಗ್ರೇಡ್ ಮಾಡಿದ್ದೇವೆ. ಗುಲ್ಬರ್ಗಾ ಜಿಲ್ಲೆ ಒಂದಕ್ಕೆ ಜರ್ಮನ್‌ನ ಕೆ.ಎಫ್.ಡಬ್ಲ್ಯೂ. ಸಂಸ್ಥೆಯಿಂದ 82 ಕೋಟಿ ರೂಪಾಯಿಗಳ ಸಹಾಯಧನವನ್ನು ಪಡೆದು ಆ ಡಿವಿಜನ್‌ಗೇ ನಾವು ಇವತ್ತು ಖರ್ಚು ಮಾಡುತ್ತಿದ್ದೇವೆ. ಬಹುಶಃ ಅವೆಲ್ಲಾ ಆಸ್ಪತ್ರೆಗಳು, ಸ್ಕೂಲುಗಳು ಅವು ಕಾಣುತ್ತಾ ಇಲ್ಲ.

ಈಗ ಕಣ್ಣಿದ್ದರೆ ಕಾಣಬಹುದು. ಕಿವಿ ಇದ್ದರೆ ಅಟ್‌ಲೀಸ್ಟ್ ಬಯ್ದಿದ್ದಾದರೂ ಕೇಳಬಹುದು. ನಾನು ಕೇಳುವುದಕ್ಕೆ ತಯಾರು ಇಲ್ಲ, ನಾನು ಕಾಣುವುದಕ್ಕೆ ತಯಾರು ಇಲ್ಲ ಎನ್ನುವ ಧೋರಣೆ ತಾಳಿದರೆ ನಾವು ಹೇಗೆ ಹೇಳಬೇಕು. ಹಾಗೆ ತಿಳಿದುಕೊಳ್ಳುವ ಹಾಗೆ ಮುಟ್ಟಬೇಕಾಗುತ್ತದೆ. ಇದ್ದೇವೆ ಎಂದು. ಇನ್ನು ಒಂದೊಂದು ಸಾರಿ ಏನು ನೀವು ತಪ್ಪು ಮಾಡುತ್ತೀರಿ ಎಂದರೆ ಈ ಎಲೆಕ್ಟ್ರಿಕ್ ವೈರನ್ನು ಮುಟ್ಟುವುದು, ನೀವು ಮುಟ್ಟಿರುವಾಗ ನಾವು ಸ್ವಿಚ್ ಆಫ್ ಮಾಡಿರುತ್ತೇವೆ. ಇದೇನು, ಇದು ತಂತಿ ಎಂದು ಹೇಳುತ್ತೀರಿ. ನಾವು ಸ್ವಿಚ್ ಹಾಕಿದಕೂಡಲೇ ನೀವು ಚುನಾವಣೆಯಲ್ಲಿ ಏನಾಗುತ್ತೀರಿ ಎಂದು ಎಲ್ಲರೂ ನೋಡುವಿರಂತೆ. ಈಗ ತಂತಿಯನ್ನು ಮುಟ್ಟಿ, ಬೇಡ ಎನ್ನುವುದಿಲ್ಲ. ಚುನಾವಣೆಯಲ್ಲಿ ತಂತಿ ಮುಟ್ಟಿದವರ ಗತಿ ಏನಾಗುತ್ತದೆ ಎಂಬುದನ್ನು ನೋಡೋಣ. ಕೆ.ಐ.ಬಿ. ಬಗ್ಗೆ ಹೇಳುವುದಾದರೆ ನಾವು ಸಬ್ ಸ್ಟೇಷನ್ಸ್, ಹೊಸ ಟ್ರಾನ್ಸ್‌ಮಿಷನ್ ಲೈನ್ಸ್, ಕೆಪಿಸಿಎಲ್‌ನ ಹೊಸ ಜನರೇಟಿಂಗ್ ಕೆಪ್ಯಾಸಿಟಿ we are adding this year, we have already added 510 mwtts. of power. We are going to add another 600 mwtts, ಪ್ರೈವೇಟ್ ಸೆಕ್ಟಾರ್‌ದು 300 ಆಗುತ್ತದೆ. ನಮ್ಮ ಥರ್ಮಲ್ ಜನರೇಷನ್ 5528 ಮಿಲಿಯನ್ ಯೂನಿಟ್ will be added at Raichur Thermal Station. ಯಾರಾದರೂ ಹೋಗಿ ರಾಯಚೂರು ಥರ್ಮಲ್ ಸ್ಟೇಷನನ್ನು ನೋಡಿದ್ದೀರಾ? ಏನು ಕೆಲಸ ನಡೆದಿದೆ? ಎಷ್ಟು ವೇಗವಾಗಿ, ತ್ವರಿತವಾಗಿ ಈಗಾಗಲೇ 5 ಮತ್ತು 6 ಆಯಿತು. 7ಕ್ಕೆ ಈಗಾಗಲೇ ಪ್ರಾರಂಭ ಮಾಡುತ್ತಿದ್ದೇವೆ. and for the first time 33% generation has been added in one year. No State has done... ಇದು ಏಕೆ ಕಾಣುವುದಿಲ್ಲ? ಹಳ್ಳಿಗಾಡಿನಲ್ಲಿ ತೊಂದರೆ ಇದೆ. ಲೋಡ್ ಷೆಡ್ಡಿಂಗ್‌ನ ತೊಂದರೆ ಇದೆ. ಲೋಡ್ ಷೆಡ್ಡಿಂಗ್‌ನ ತೊಂದರೆ ಇದೆ, ಪವರ್ ಕಟ್ ಇದೆ ಒಪ್ಪಿಕೊಳ್ಳುತ್ತೇವೆ. ಅದನ್ನು ಹೇಗೆ ಮ್ಯಾನೇಜ್ ಮಾಡಬೇಕು? ಅದೇನೋ ಈ ಸಾರಿ ಪುಣ್ಯಾತ್ಮರು ಅಧಿಕಾರದಲ್ಲಿದ್ದಾಗ ಮಳೆ ಬರಲಿಲ್ಲ. ನಾವೇನು ಪಾಪ ಮಾಡಿದ್ದೆವೋ ನಾವು ಬಂದ ತಕ್ಷಣ ಮಳೆ ಬರುವುದಕ್ಕೆ ಶುರು ಆಯಿತು. ರೋಡ್ ಕೆಟ್ಟು ಹೋಯಿತು. ರೋಡ್ ಕೆಟ್ಟು ಹೋಯಿತು ಎಂದು ರೋಡ್ ನೋಡುತ್ತೀರೇ ಹೊರತು ಪಕ್ಕದಲ್ಲಿರುವ ಫಸಲು ಹೇಗೆ ಇದೆ ಎಂದು ನೋಡುವುದಕ್ಕೆ ಆಗಲಿಲ್ಲವೇ? ಅದಕ್ಕೇ ನಾನು ಹೇಳುತ್ತೇನೆ.ನಾವು ಪರ್ಸನಲ್ ಆಗಿ ಯಾವುದನ್ನೂ ತೆಗೆದುಕೊಳ್ಳುವುದಿಲ್ಲ. If we have not done justice to the people, ಅವರಿಗೆ ಬೇಕಾದರೆ ನಾವಿವತ್ತು ತಲೆ ಬಾಗುತ್ತೇವೆ. ನಾವು ತಪ್ಪು ಮಾಡಿದ್ದರೆ ಜನಗಳಿಗೆ ಹೇಳುತ್ತೇವೆ. ಕೆಇಬಿ ರೇಟ್ ಜಾಸ್ತಿ ಮಾಡಿದಿರಿ ಎಂದು ಹೇಳಿದಿರಿ. ಕೆಇಬಿ ರೇಟ್ ಜಾಸ್ತಿ ಮಾಡಿದಾಗ ಇಷ್ಟೆಲ್ಲಾ ಹೇಳಿದಿರಲ್ಲಾ, ಕೇಂದ್ರ ಸರ್ಕಾರ ಯಾರದ್ದೇ ಇರಲಿ. ನಿಮ್ಮದು ನಮ್ಮದು ಎಂದಲ್ಲ. 18,500 ಕೋಟಿ ರೂಪಾಯಿ ಸಂಬಳ ಹೆಚ್ಚು ಮಾಡಿಕೊಂಡರಲ್ಲಾ, ಆಗ ಏಕೆ ರಸ್ತೆ ರೋಕೋ, ರೈಲ್ ರೋಕೋಮಾಡಲಿಲ್ಲ? ಸರ್ಕಾರೀ ಅಧಿಕಾರಿಗಳು ಅಂದರೆ ಅವರೇನು ಆಫ್ರೀಕಾದಿಂದ ಬಂದಿದ್ದಾರಾ? ಎಲ್ಲರೂ ನಮ್ಮ ವಿರೋಧಿಗಳಾ? ಯಾರದೋ ಅಣ್ಣ ಇರಬಹುದು,

ಯಾರದೋ ತಮ್ಮ ಇರಬಹುದು, ಯಾರದೋ ಮಗ ಇರಬಹುದು. ಸರ್ಕಾರೀ ಅಧಿಕಾರಿಗಳು ಅಂದರೆ ಅವರು ಅಸ್ಪೃಶ್ಯರು. ಎಲ್ಲರೂ ಮಹಾ ಪಾಪಿ, ಅಪರಾಧಿ. ಆ ರೀತಿ ನಾವು ನೋಡುವುದು. ಯಾವನೇ ಪೊಲಿಟಿಷಿಯನ್ ಅಂದರೆ ಇವನು ದಗಲ್‌ಬಾಜಿ, ಇವನನ್ನು ನಂಬಬಾರದು. ಇವನು ಹೀಗಿರುತ್ತಾನೋ, ಹಾಗೆ ಇರುತ್ತಾನೋ, ಹೋಗುತ್ತಾನೋ ಎಂದು ಅವರು ನೋಡುವುದು. This has rocked the very democratic base of India not only in Bangalore but everywhere,. ಬ್ಯೂರೋಕ್ರಸಿಗೂ ಪೊಲಿಟಿಷಿಯನ್ಸ್ ಬೇಕಾದಂತಹ ಒಂದು ಬಿಹೇವಿಯರ್, ಪರಸ್ಪರ ವಿಶ್ವಾಸ. ಹಳ್ಳಿಗಾಡಿನಲ್ಲಿ ಹಣಕಾಸು ಖರ್ಚು ಮಾಡಿದ್ದು ಇರಬಹುದು. ಹಳ್ಳಿಗಾಡಿನ ಬಗ್ಗೆ ಕಮಿಟ್‌ಮೆಂಟ್ ಇಲ್ಲದೇ ಇರುವವರು ಬಹಳ ಜನ ಇದ್ದಾರೆ, ಒಪ್ಪಿಕೊಳ್ಳುತ್ತೇನೆ. ದುಡ್ಡು ಹೊಡೆಯುವುದಕ್ಕೆ ಯಾವ ಪ್ರೋಗ್ರಾಮ್ ಚೆನ್ನಾಗಿದೆ ಎಂದು ಹೇಳಿ ಆ ಪ್ರೋಗ್ರಾಮ್ ಹುಡುಕಿ ಅದನ್ನೇ ಅಪ್ರೂವ್ ಮಾಡುವುದು. ಇದೆಲ್ಲಾ ಇದ್ದಾವೆ. ಈ ದೋಷಗಳೆಲ್ಲಾ ಈ ಆಡಳಿತದ ಯಂತ್ರಗಳಲ್ಲಿ ಇದ್ದಾವೆ. ರಾಜಕಾರಣದಲ್ಲೂ ಇದ್ದಾವೆ. ಡೀಜನರೇಷನ್ ಆಫ್ ಪಾಲಿಟಿಕ್ಸ್ ಎಂಬ ಒಂದು ಆರ್ಟಿಕಲ್ ಇದೆ. ಗಾಂಧೀಜಿ ಅವರ ಕಾಲದಲ್ಲಿ ಜನರೇಷನ್ ಆಫ್ ಪಾಲಿಟಿಕ್ಸ್ ಆಯಿತು. ಈಗ ನಮ್ಮ ಕಾಲದಲ್ಲಿ ಡೀ ಜನರೇಷನ್ ಎಂದು ಆಯಿತು. who has to re juvenate? Let us not bother. Mr.Vajapayee or somebody is there or Congress or Janata Dal- But who is going to rejuvenate. Where are we heading to? ಅದು ಬೇಡವಾ? ಎಲ್ಲರನ್ನೂ ಸುಮ್ಮನೇ ಬಯ್ಯುವುದಾ? ಮೊನ್ನೆ ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ಸಬ್ ಇನ್ಸ್‌ಪೆಕ್ಟರ್ ಹಾಗೆ ಅಂದ, ಸರ್ಕಲ್ ಇನ್ಸ್‌ಪೆಕ್ಟರ್ ಹಾಗೆ ಅಂದ, ಅವನು ಹೀಗೆ ಮಾಡಿದ, ಅವನು ಛಾರ್ಜ್ ಶೀಟ್ ಹಾಕಲಿಲ್ಲ ಎಂದು ಹೇಳಿದರು. ನೋ ಕಾನ್‌ಫಿಡೆನ್ಸ್ ಮೋಷನ್ ಮೇಲೆ ಮಾತನಾಡುವಾಗ ಯಾವುದಾದರೂ ಮೇಜರ್ ಪಾಲಿಸಿ ಮ್ಯಾಟರ್ಸ್ ಬಗ್ಗೆ ಅಥವಾ ಯಾವುದಾದರೂ ಡಿಪಾರ್ಟ್‌ಮೆಂಟ್‌ನಲ್ಲಿನ ಲೋಪಗಳನ್ನು ಹೇಳಬೇಕು. ಸನ್ಮಾನ್ಯ ಸದಸ್ಯರುಗಳು ಅವರವರ ಕ್ಷೇತ್ರಗಳ ಸಮಸ್ಯೆ ಬಗ್ಗೆ ಹೇಳಿದರು. ಮಾನ್ಯ ಶಾಸಕರುಗಳು ಅವರ ಕ್ಷೇತ್ರದ ಸಮಸ್ಯೆಗಳನ್ನು ಬೇರೆ ಸಂದರ್ಭದಲ್ಲಿ ಹೇಳಬಹುದು. ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ತಮ್ಮ ಅನುಮತಿ ಪಡೆದು ಯಾವಾಗಲಾದರೂ ಮಾತನಾಡಬಹುದು. ಹಾಗಾಗಿ there is a kind of barrier that has been set up. ಮೂಲತಃ ಅವಿಶ್ವಾಸವನ್ನು ನಾವು ಬೆಳೆಸಿಕೊಂಡೇ ಹೋಗುತ್ತಿದ್ದೇವೆ ವಿಶ್ವಾಸ ಎನ್ನುವುದನ್ನೇ ಕಳೆದುಕೊಳ್ಳುತ್ತಿದ್ದೇವೆ. ಪರಸ್ಪರ ಮನುಷ್ಯ ಮನುಷ್ಯರಲ್ಲಿ ವಿಶ್ವಾಸ ಇಲ್ಲ. ಇದು ಹೇಗೆ ಇದು? How are you going to rejuvenate India? ಅದನ್ನು ಅಟ್‌ಲೀಸ್ಟ್ ಹಿರಿಯರಾದಂತಹ ಪಕ್ಷದ ಮುಖಂಡರುಗಳು ತಮ್ಮ ಸದಸ್ಯರಿಗೆ ಹೇಳಬೇಕಿತ್ತು. ಹೊಸ ಸದಸ್ಯರಿಗೆ ಏನೂ ಗೊತ್ತಾಗದೇ ಇರಬಹುದು. ತಾವುಗಳು ಆದರೂ ಆ ಬಗ್ಗೆ ಬೆಳಕು ಚೆಲ್ಲಿ ನಮ್ಮ ಸರ್ಕಾರ ಈ ಕಡೆ ಗಮನ ಕೊಡುತ್ತಿಲ್ಲ

ಎಂದು ಹೇಳಿದರೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದನ್ನು ಕೇಳಿದ್ದೇನೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದನ್ನು ಕೇಳಿದ್ದೇನೆ. ಮಾನ್ಯ ಮುನಿಯಪ್ಪನವರು ತುಂಬಾ ಒಳ್ಳೆಯ ಸಲಹೆಯನ್ನು ಕೊಟ್ಟರು. ಅವರು ನಮ್ಮ ಸರ್ಕಾರಕ್ಕೆ ಸಪೋರ್ಟ್ ಮಾಡಬೇಕು ಎಂದಲ್ಲ. ಅವರು ಈ ಸಮಾಜವನ್ನು.. the very system is collapsing, degenerating. How are we going to correct the system? ಮಾನ್ಯ ರಾಜೇಂದ್ರನ್ ಅವರು ಹಾಸ್ಯಪೂರ್ವಕವಾಗಿ ಸ್ವಲ್ಪ ಚೆನ್ನಾಗಿ ಮಾತನಾಡಿದರು. ಇರಬಹುದು. He was concerned about the system. What are we going to do? ಅದು ಕೆಪಿಸಿಎಲ್‌ರುದು ಆಯಿತಲ್ಲಾ; ಇಂಡಸ್ಟ್ರೀ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ಒಂದು ಪ್ರಚಾರ ಶುರುವಾಯಿತು. ಬೆಂಗಳೂರಿನಿಂದ ಎಲ್ಲಾ ಉದ್ಯೋಗಗಳು ಹಾರಿ ಹೋಗುತ್ತಿದ್ದಾವೆ, ಚೆನ್ನೈಗೆ ಹೋಗುತ್ತಿವೆ, ಹೈದರಾಬಾದ್‌ಗೆ ಹೋಗುತ್ತಿವೆ, ಹಾಗೆ ಎಂದು ಪ್ರಚಾರ ಶುರು ಆಯಿತು. ವಾಸ್ತವಿಕ ಅಂಶ ಅದಲ್ಲ. ನಮ್ಮ ಇನ್‌ಫರ್ಮೇಷನ್ ಟೆಕ್ನಾಲಜಿ ಮತ್ತು ಸಾಫ್ಟ್ ವೇರ್ ಇಂಡಸ್ಟ್ರೀನಲ್ಲಿ we have record achievement. 235 Independent Export-oriented Software Industries are in Bangalore. We have exported Rs 2000 crores worth of software. Andhra Pradesh not even reached 200, Tamil Nadu is just Rs 170 crores. ಇದನ್ನು ನಾವು ಬರೆಸಿಲ್ಲ. ಅಮೇರಿಕಾದ ಪತ್ರಿಕೆಯಲ್ಲಿ ಅವರು ಹೇಳುತ್ತಾರೆ. ಪ್ರಪಂಚದ ಹತ್ತು ಪ್ರಾಮುಖ್ಯ ನಗರದ ಬಗ್ಗೆ ಹೇಳುತ್ತಾರೆ. "Hot News Technical city" ಅಮೇರಿಕನ್ ಪೇಪರ್‌ನಲ್ಲಿ ಹೇಳುತ್ತಾರೆ Bangaolre one of the top Ten. Seven are in America, One is Britain; one is Israel and one in Bangalore, ಇದನ್ನು ನಾವು ಬರೆಸಿದ್ದೇವಾ? ಇವೂ ಕಾಣುವುದಿಲ್ಲವಾ? ಇನ್‌ಫರ್ಮೇಷನ್ ಟೆಕ್ನಾಲಜಿ ಪಾರ್ಕ್ ಮಾಡಿರುವುದು ಕಾಣುವುದಿಲ್ಲವಾ? ನಮ್ಮ ಕಾಲದಲ್ಲಿಯೇ; ಯಾವಾಗಲೋ ಬಂದಿದ್ದರೋ ಎಂದಲ್ಲ. ಅವರುಗಳು ಈ ರಾಜ್ಯಕ್ಕೆ ಬಂದು, ಈ ರಾಜ್ಯವನ್ನು ಈ ರಾಜ್ಯದ ಸ್ಥಿತಿಗತಿಗಳನ್ನು, ಈ ರಾಜ್ಯದ ಹವಾಮಾನವನ್ನು, ಇಲ್ಲಿರತಕ್ಕ available skilled labour, Engineers, Doctors and above all, the culture of Karnataka,..... ಮೊನ್ನೆ ಹೋದಾಗ ಅವರು ಹೇಳುತ್ತಾರೆ. ಒಬ್ಬ ದೊಡ್ಡ ಇಂಡಸ್ಟ್ರಿಯಲಿಸ್ಟ್ ಹೇಳುತ್ತಾರೆ. They are all coming. They have already come. We are holding discussions with them. This is from all angle, political otherwise climatic, Karnataka is one but, Bangalore is the safest place.. ಅಲ್ಲಲ್ಲಿ ಸಣ್ಣ ಪುಟ್ಟ ಕೆಲಸಗಳು ಆಗಿರಬಹುದು. ಪೋಲೀಸ್‌ನವರು ನಿರ್ಲಕ್ಷ್ಯ ಮಾಡಿದ್ದಾರೆ ಎಂದಲ್ಲ. ಬೆಂಗಳೂರಿನ ಪ್ರಜಾಸಂಖ್ಯೆಗೆ, ಮತ್ತು ಬೆಂಗಳೂರಿನ ಬಾಹುಳ್ಯ ಮತ್ತು ಅದರ ಬೆಳವಣಿಗೆಗೆ ಹೋಲಿಸಿದರೆ ಬೇರೆ ಪಟ್ಟಣಗಳು ಅತ್ಯಂತ ನರಕ ಸದೃಶ. ಎಲ್ಲಿ ಯಾವಗ ಬಾಂಬು

ಬೀಳುತ್ತದೋ ಗೊತ್ತಿಲ್ಲ. ದೆಹಲಿಯಲ್ಲಿ ಯಾವಾಗ ಬಾಂಬು ಬೀಳುತ್ತದೋ ಗೊತ್ತಿಲ್ಲ. ದೊಡ್ಡ ದೊಡ್ಡ ಬಜಾರ್‌ಗಳಿಗೆ ಈಗ ಹೋಗಲು ಹೆದರುತ್ತಾರೆ. ನಾನು 1967ರಲ್ಲಿ ಎಂ.ಪಿ.ಆಗಿದ್ದಾಗ ದೆಹಲಿಯಲ್ಲಿ ಎಷ್ಟು ಶಾಂತವಾದ ಸ್ಥಳ ಇತ್ತು. ಈಗ ಅಲ್ಲಿ ಹಾಗೆ ಇಲ್ಲ. ಅದಕ್ಕೆ ಹಲವಾರು ವಿದೇಶಿ ಶಕ್ತಿಗಳು ಇವೆ. ಆ ವಿದೇಶಿ ಶಕ್ತಿಗಳನ್ನು ಹೇಗೆ ನಿಗ್ರಹಿಸಬೇಕು? ಅವರ ಮೂಲಗಳು ಏನು? ನಮ್ಮ ಪಕ್ಕದಲ್ಲಿರುವ ಶಕ್ತಿಗಳನ್ನು ಹೇಗೆ ಟ್ಯಾಕಲ್ ಮಾಡಬೇಕು. ಅದು ಒಂದಾದರೆ, ಹೊರಗಡೆಯಿಂದ ಬರತಕ್ಕ ಇನ್‌ವೆಸ್ಟರ್ಸ್ ಏನು ನೊಡುತ್ತಾರೆ, ಸೇಫ್ಟಿ ನೋಡುತ್ತಾರೆ. So, Bangalore is considered as the safest place in India not even Bombay: ಇದನ್ನು ನಾನಲ್ಲ ಹೇಳುತ್ತಿರುವುದು ಅಮೇರಿಕಾದವರು ಹೇಳುತ್ತಿರುವುದು. ಇನ್ನೊಂದು ಅದೇ ತರಹ ಮ್ಯಾಗಜಿನ್ 'ಗ್ಲೋಬಲ್ ಹಾಟ್ ಸ್ಪಾಟ್' ಎಂದು ಅಮೇರಿಕಾದ ಮ್ಯಾಗಜಿನಲ್ಲಿ ಹೇಳುತ್ತಾರೆ. ಗ್ಲೋಬಲ್ ಹಾಟ್ ಸ್ಪಾಟ್‌ನಲ್ಲಿನ ಎರಡನೇ ಪುಟದಲ್ಲಿ ಮೊದಲನೆಯದು ಬೆಂಗಳೂರಿನ ವಿಚಾರ ಹೇಳುತ್ತಾರೆ. It rates Bangalore as the 3rd hot spot city in the World; ಹೀಗೆ ಬೇರೆ ರಾಷ್ಟ್ರದವರು ಬೇರೆಯವರು ಈ ರಾಜ್ಯ ಮುಂದುವರಿಯಲಿ, ಮುಂದುವರೆಯಬೇಕು. ಸಮಸ್ಯೆಗಳು ಇದ್ದಾವೆ ಕಾರ್ಮಿಕರ ಸಮಸ್ಯೆಗಳು ಇದ್ದಾವೆ. ರೈತರುಗಳ ಸಮಸ್ಯೆಗಳು ಇದ್ದಾವೆ; ಇಲ್ಲ ಎಂದು ಹೇಳುವುದಿಲ್ಲ. ಸಮಸ್ಯೆಗಳನ್ನು ನಾವು ಹೇಗೆ ಟ್ಯಾಕಲ್ ಮಾಡಬೇಕು? How are we tackling them. ಕೆಲವು ಸಾರಿ ಪ್ರಕೃತಿ ವಿಕೋಪ ಆಗುತ್ತದೆ. ಅದನ್ನು ನಾವು ನಿಲ್ಲಿಸುವುದಕ್ಕೆ ಆಗುವುದಿಲ್ಲ ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಗವರ್ನಮೆಂಟ್ ಆರ್ಡರ್‌ನಿಂದ ಮಳೆ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅದು ಸಾಧ್ಯ ಇಲ್ಲ. ಆದುದರಿಂದ, ನಾವೆಲ್ಲರೂ ನಾಡನ್ನು ಕಟ್ಟುವುದರ ಮೂಲಕ ನಮ್ಮ ನುಡಿಯನ್ನು ರಕ್ಷಿಸಬೇಕು. ಇದರ ಬಗ್ಗೆ ನಮ್ಮಲ್ಲಿ ಪಕ್ಷಭೇದವೂ ಇಲ್ಲ, ಭಿನ್ನಾಭಿಪ್ರಾಯವೂ ಇಲ್ಲ. ಕರ್ನಾಟಕ ರಾಜ್ಯದಲ್ಲಿರುವಂಥ ಪ್ರೇಕ್ಷಣೀಯ ಸ್ಥಳಗಳು ಇಡೀ ಭಾರತದ ಯಾವ ರಾಜ್ಯದಲ್ಲೂ ಇಲ್ಲ. ಬೇರೆ ದೇಶಗಳಿಗೆ ಹೋಲಿಸಿದರೆ ಅಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಸ್ಥಳಗಳಿಲ್ಲ, ಪ್ರೇಕ್ಷಣೀಯ ಸ್ಥಳಗಳನ್ನು ಅವರು ಮಾಡಿಲ್ಲ. ನಾನು ವಿದೇಶದಲ್ಲಿರುವ ನಯಾಗರ ಜಲಪಾತ ನೋಡಿದ್ದು, ಇತರ ಎಲ್ಲಾ ಜಲಪಾತಗಳನ್ನೂ ನೋಡಿದ್ದೇನೆ. But we have not been able to expose ourselves to the world. ಟೂರಿಸಂ ಎಂದರೆ ಏನು? ದೆಹಲಿಗೆ ಬಂದು ಅಲ್ಲಿಂದ ಜೈಪುರಕ್ಕೆ ತೆರಳಿ ಅಲ್ಲಿನ ಅರಮನೆ ನೋಡಿ ಬೋಟಿಂಗ್ ಮಾಡಿ ವಾಪಸ್ಸು ಹೋದರೆ ಭಾರತದಲ್ಲಿರುವ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದಂತಾಯಿತೇ? ಇನ್ನೂ ಅಗಾಧವಾದ ಕಾರ್ಯಕ್ರಮಗಳಿದ್ದು ಹಣಕಾಸಿನ ಸ್ಥಿತಿ-ಗತಿ ಗಮನಿಸಿಕೊಂಡು ನಮ್ಮ ಭಾರವನ್ನು ನಾವು ಹೊರಲು ಸಾಕಷ್ಟು ಶಕ್ತರಾಗಿದ್ದೇವೆಂದು ತೋರಿಸಿ ಕೊಟ್ಟಿದ್ದೇವೆ. We need investment from outside; we need capital investment from private sector. We need, but there we have to choose. ಟೆಕ್ನಾಲಜಿಕಲ್ ಇಂಪ್ರೂವ್‌ಮೆಂಟ್ ಇನ್ ಅಗ್ರಿಕಲ್ಚರ್ ಬಗ್ಗೆ

ನಮ್ಮ ಕೃಷಿ ಸಚಿವರು ಹೇಳಿದ್ದಾರೆ. ಹೀಗೆ ಯೋಜನೆಗಳು ಹಲವಾರು ವಲಯಗಳಲ್ಲಿದ್ದು ಮಾಡುತ್ತಿದ್ದೇವೆ. ನಾವು ನಡೆಯುತ್ತಿರಬೇಕಾದರೆ ಹಗಲೆಲ್ಲಾ ತೊಡರುಗಾಲು ಕೊಡುವುದು! ತೊಡರುಗಾಲು ಕೊಡಬೇಡಿ ನಾನು ಚೂರು ನಡೆಯುತ್ತೇನೆ: ಸಾಮಾನು ತೆಗೆದುಕೊಂಡು ಹೋಗಿ ಅಲ್ಲಿಂದ ಅಲ್ಲಿಗೆ ನಿಲ್ಲಿಸುತ್ತೇನೆ ಅಂದರೂ ಬಿಡುವುದಿಲ್ಲ. ತೊಡರುಗಾಲು ಕೊಡುವುದು! ರಾಸ್ತಾ ರೋಕೋ ಬಗ್ಗೆ ಹೇಳುವುದಾದರೆ, ಆ ರಸ್ತೆಯಲ್ಲಿ ನಡೆಯಲು ಆಗುವುದಿಲ್ಲವೆಂದು ನೀವೇ ಹೇಳುತ್ತೀರಿ, ಮತ್ಯಾಕೆ ನೀವು ರಾಸ್ತಾ ರೋಕೋ ಮಾಡುವುದಕ್ಕೆ ಹೋದಿರಿ? ರಾಸ್ತಾ ರೋಕೋ ಜೊತೆಗೆ ರೈಲ್ ರೋಕೋ ಮಾಡುತ್ತೀರಿ. ಮೊನ್ನೆ ಸಿರಾದಲ್ಲಿ ನಡೆದ ದುರ್ಘಟನೆ ಆಗಬಾರದಿತ್ತು, ನಾವು ರೈತರ ಕ್ಷಮೆ ಕೇಳಿದ್ದೇವೆ. ಅದು ಸರ್ಕಮ್‌ಸ್ಟೆನ್‌ಷಿಯಲ್. ಬೆಲೆ ಕುಸಿಯುವುದು, ಏರುವುದು ಅಖಿಲ ಭಾರತದ ಸಮಸ್ಯೆಯಾಗಿದೆ. ಇವೊತ್ತು ಮಾನ್ಯ ಪ್ರಧಾನಮಂತ್ರಿಯವರೂ ಹೇಳಿದ್ದಾರೆ, ಹಣಕಾಸು ಮಂತ್ರಿಯವರೂ ಸಹ ಹೇಳಿದ್ದಾರೆ.We have to tackle it as a total national problem. ಮಾರುಕಟ್ಟೆಗೆ ನಮ್ಮದೇನು ಚೈನಾ ದೇಶವೇ? ಚೈನಾದಲ್ಲಿ ಏನು ಮಾಡಿದ್ದಾರೆಂದರೆ, ವಿದೇಶಿ ವಸ್ತುಗಳನ್ನು ಮಾರಾಟ ಮಾಡುವುದು, ಅದರ ಮಾರುಕಟ್ಟೆ ವ್ಯವಸ್ಥೆಯನ್ನು ಹಾಂಗ್‌ಕಾಂಗ್ ಕಡೆ ಕಳುಹಿಸಿದ್ದಾರೆ ಮತ್ತು ಅವರ ದೇಶದೊಳಗೆ ನಿಯಂತ್ರಿತ ಮಾರುಕಟ್ಟೆ ಇದೆ, ಯಾರೂ ಏನೂ ಮಾಡುವ ಹಾಗಿಲ್ಲ. ಅಲ್ಲಿ ಫುಲ್ಲಿ ಕಂಟ್ರೋಲ್ಡ್ ಮಾರ್ಕೆಟ್, ಕಂಟ್ರೋಲ್ಡ್ ಪಾಲಿಟಿಕ್ಸ್, ಆದರೆ, ಇಲ್ಲಿ ಎಲ್ಲವೂ ಫ್ರೀ. ಹಾಗಾಗಿ, ಈ ದೇಶವನ್ನು ರಿಪೇರಿ ಮಾಡುವುದಕ್ಕಾಗುತ್ತದೋ ಇಲ್ಲವೋ ಎನ್ನುವ ಸ್ಥಿತಿಗೆ ತಂದಿಟ್ಟಿದ್ದೇವೆ. ಇದೆಂತಹ ದೊಡ್ಡ ದೇಶ, ಇಲ್ಲಿ ಎಂತೆಂತಹ ಸಾಧನೆಗಳಿವೆಯೆಂದು ಹಲವಾರು ಚಿಂತಕರು, ದಾರ್ಶನಿಕರು ಹೇಳುತ್ತಾರೆ. ಇದು ಎಂತಹ ದೊಡ್ಡದೇಶ ಅಚೀವ್‌ಮೆಂಟ್ಸ್ ಇವೆ. I don't denigrate, I don't undermine. Achievements also, we have to speak. ಆಂತರಿಕವಾಗಿ, ದೀಪಾವಳಿ ಹಬ್ಬ ಮಾಡುವಾಗ ನೀವು ನಿಮ್ಮ ಮನೆ ಮುಂದೆ ದೀಪ ಇಡುತ್ತೀರಿ, ಕ್ರಿಸ್‌ಮಸ್ ಹಬ್ಬದಲ್ಲಿ ಕ್ರೈಸ್ತರು ಅವರ ಮನೆ ಮುಂದೆ ಲ್ಯಾಂಪನ್ನು ತೂಗು ಹಾಕುತ್ತಾರೆ. ಅದು ಆತನ ಹಬ್ಬ, ದೀಪಾವಳಿ ನಮ್ಮ ಹಬ್ಬ, ರಂಜಾನ್ ಮುಸ್ಲಿಮರ ಹಬ್ಬ, ಹೀಗೆ ಮಾಡುವುದು ಒಂದು ರೀತಿಯ ರಿಲೀಜಿಯಸ್ ಪ್ರಾಕ್ಟೀಸ್‌ನಿಂದ ಬಂದಿರುವ ಸಂಪ್ರದಾಯವೆಂದು ನಾನು ಒಪ್ಪುತ್ತೇನೆ. ಆದರೆ, ಈಗ ಹೇಳುವುದು ಸರಿಯೇ, ತಪ್ಪೇ ಎಂಬುದು ನನಗೆ ಗೊತ್ತಿಲ್ಲ. ಏನೆಂದರೆ, ಮಸೀದಿಯೊಳಗೆ ಹಿಂದೂ ಧರ್ಮದವನು ಹೋಗಿ ಓಂ ನಮಃ ಶಿವಾಯ ಎಂದರೆ ಯಾರಿಗೆ ಅಫೆಕ್ಟ್ ಆಗುತ್ತದೆ? ಅಲ್ಲಿರುವವನೂ ಶಿವನೇ. ಅಥವಾ ಶಿವ ಮುಂದಿರಕ್ಕೆ ಸದಸ್ಯರಾದ ಸೈಯದ್ ಜುಲ್ಫಿಕರ್ ಹಶ್ಮಿಯವರು ಬಂದು ಅಲ್ಲಾಹೋ ಅಕ್ಬರ್ ಎಂದು ಹೇಳಿದರೆ ಲಿಂಗಾಯತರಿಗೆ ಏನಾಗುತ್ತದೆ? ಈ ತರಹದ ಒಂದು ಕಾಂಪೊಸಿಟ್ ಕಲ್ಚರ್ ಅನ್ನು ಇವೊತ್ತು ನಾವು ಡೆವಲಪ್‌ಮೆಂಟ್ ಮಾಡುವುದು ಬಿಟ್ಟು, ಮಸೀದಿಯಲ್ಲಿ, ದೇವಾಲಯದಲ್ಲಿ, ಚರ್ಚ್‌ನಲ್ಲಿ ಇರುವವನು ಒಬ್ಬ ದೇವನೇ ತಾನೇ? ಈ ರೀತಿ ಹೇಳುವುದು ಭಾರತೀಯ ಸಂಸ್ಕೃತಿಯಾಗಿತ್ತು. That was the

greatness of Indian culture. ಬುದ್ಧ ಮತ್ತು ಆತನ ನಂತರ ಬಂದಂಥ ಎಲ್ಲಾ ಸಾಂಸ್ಕೃತಿಕ ಹೊಂದಾಣಿಕೆಗಳೂ ಸಹ ಅದೇ ರೀತಿ ಇವೆ. ಆದುದರಿಂದ, ಒಂದು ಕಲ್ಚರಲ್ ಡ್ಯಾಮೇಜ್; ಮತ್ತು ಪೊಲಿಟಿಕಲ್ ಡಿ-ಜನರೇಷನ್. ಇನ್ನು ಕರಪ್ಷನ್ ಬಗ್ಗೆ ಮಾತನಾಡದಿರುವುದು ಮರ್ಯಾದೆ. ಏಕೆಂದರೆ, ಭ್ರಷ್ಟಾಚಾರವೆಂದರೇನು? ಅದನ್ನು ಯಾರೂ ಡಿಫೈನ್ ಮಾಡುವ ಹಾಗಿಲ್ಲ. ಅದರ ಬಗ್ಗೆ ಸ್ಟ್ರಿಕ್ಟ್ ಆಗಿ ಆ್ಯಂಟಿ-ಕರಪ್ಷನ್ ಆ್ಯಕ್ಟ್ ಇದೆ. ಆದರೂ ಯಡಿಯೂರಪ್ಪನವರೇ ಇವೊತ್ತು ಅದರ ಡೆಫನೆಶನ್, ಎನ್‌ಫೋರ್ಸ್‌ಮೆಂಟ್, ಕಾನೂನುಗಳು ಯಾರು ಕೈಗೂ ನಿಲುಕುವುದಿಲ್ಲ. ನಾನು ಸಿಟ್ಟಿನಿಂದ ಹೇಳುತ್ತೇನೆಂದಲ್ಲ. ಇಲ್ಲಿ ಮಹಾತ್ಮಾಗಾಂಧಿ ಇದ್ದಂತೆ ಚೈನಾದಲ್ಲಿ ಮಾವೊತ್ಸೆ ತುಂಗ್. ನಮಗೆ ಭಯ ಇರಬೇಕು, ಇಲ್ಲವೇ ಪ್ರೀತಿ ಇರಬೇಕು ಇಲ್ಲವೇ ಭಕ್ತಿ ಇರಬೇಕು. ಇದ್ಯಾವುದೂ ಇಲ್ಲ. ನಿಮ್ಮ ಬಗ್ಗೆ ಯಾರಿಗೂ ಪ್ರೀತಿಯೂಇಲ್ಲ, ಭೀತಿಯೂ ಇಲ್ಲ ಎಂದು ಯಾರೋ ನನ್ನ ಬಗ್ಗೆ ಹೇಳಿದರು. ನನ್ನ ಬಗ್ಗೆ ಭೀತಿ ಇಲ್ಲದಿದ್ದರೆ ಐ ಡೋಂಟ್ ಮೈಂಡ್. ಆದರೆ, ಪ್ರೀತಿ ಇಲ್ಲದಿದ್ದರೆ, ನನ್ನನ್ಯಾಕೆ ಪ್ರೀತಿ ಮಾಡುವುದಿಲ್ಲ ಎಂದು I get really worried about it. ಇವೊತ್ತು ಇಂಡಸ್ಟ್ರೀಯಲ್ ಗ್ರೋಥ್, ನಮ್ಮ ಇನ್‌ಫರ್ಮೇಷನ್ ಟೆಕ್ನಾಲಜಿಯಲ್ಲಾಗಿರುವ ಸಾಧನೆಗಳು, ಆರೋಗ್ಯ ಗೃಹ ನಿರ್ಮಾಣ, ಪ್ರಾಥಮಿಕ ಶಿಕ್ಷಣ, ನೀರಾವರಿ, ಕುಡಿಯುವ ನೀರು, ಗ್ರಾಮೀಣಾಭಿವೃದ್ಧಿ ಹಾಗೆಯೇ ಹಣಕಾಸು. ಹಣಕಾಸು ನಿರ್ವಹಣೆಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ ಆಫ್ ಕರ್ನಾಟಕ ಎಂದು ಅವರು ಬರೆದಿದ್ದಾರೆ, ಇದನ್ನು ನಾವು ಬರೆದಿರುವುದಲ್ಲ. ರಾಜ್ಯದಲ್ಲಿನ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಇಷ್ಟನ್ನು ಹೇಳುತ್ತಾ, ನಮ್ಮದು ನಿಷ್ಕ್ರಿಯ ಸರ್ಕಾರ; ಇದು ಸತ್ತಿದೆಯೇ ಬದುಕಿದೆಯೇ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಸತ್ತಿದ್ದರೆ ನೀವ್ಯಾಕೆ ಅದನ್ನು ಮುಟ್ಟುವುದಕ್ಕೆ ಹೋಗುತ್ತೀರಿ, ನಿಮ್ಮಷ್ಟಕ್ಕೆ ನೀವು ಇರಿ. ಕೆಲವು ಸಾರಿ ಆಲೋಚನೆಯಿಲ್ಲದೆ ಎಂತಹ ಜಿಜ್ಞಾಸೆಗೆ ಒಳಗಾಗುತ್ತೇವೆಂದರೆ, ಚೈನಾದಲ್ಲಿ ಕನ್‌ಫ್ಯೂಷಯಸ್‌ಗಿಂತ ಮುಂಚೆ ತಾವೋ ಎಂಬ ಒಬ್ಬ ದಾರ್ಶನಿಕನಿದ್ದು, ಆತನಿಗೆ ಇಬ್ಬರು ಶಿಷ್ಯಂದಿರಿದ್ದರು. ಒಂದು ದಿವಸ ಅವರು ರಸ್ತೆಯಲ್ಲಿ ಶಿಷ್ಯಂದಿರೊಂದಿಗೆ ಬರುತ್ತಿದ್ದಾಗ ಶಿಷ್ಯಂದಿರ ನಡುವೆ ತೀವ್ರ ವಾಗ್ವಾದ ನಡೆಯುತ್ತದೆ. ಒಬ್ಬ ಶಿಷ್ಯ ಸೂರ್ಯ ಬೆಳಿಗ್ಗೆ ಹೊತ್ತು ಹತ್ತಿರವಿರುವುದರಿಂದ ದೊಡ್ಡವನಾಗಿ ಕಾಣುತ್ತಾನೆ, ಮಧ್ಯಾಹ್ನ ಹೊತ್ತು ದೂರ ಹೋಗುವುದರಿಂದ ಚಿಕ್ಕವನಾಗಿ ಕಾಣುತ್ತಾನೆ. ಎಂದರೆ, ಇನ್ನೊಬ್ಬ ಶಿಷ್ಯ ಸೂರ್ಯ ದೂರವಿರುವುದರಿಂದ ಬೆಳಿಗ್ಗೆ ಹೊತ್ತು ತಂಪಾಗಿರುತ್ತದೆ ಹತ್ತಿರ ಬರುವುದರಿಂದ ಮಧ್ಯಾಹ್ನದ ಹೊತ್ತು ಬಹಳ ಸುಡುತ್ತದೆ ಎನ್ನುತ್ತಾನೆ. ಇವರಿಬ್ಬರ ವಾದದಲ್ಲಿ ಯಾವುದು ಸರಿಯಿರಬಹುದೆಂದು ತಮ್ಮಂಥ ಜ್ಞಾನಿ ಹೇಳಬೇಕು. ಸೂರ್ಯ ಬೆಳಿಗ್ಗೆ ಹತ್ತಿರವಿರುತ್ತಾನೆಯೇ? ಮಧ್ಯಾಹ್ನ ಹತ್ತಿರವಿರುತ್ತಾನೆಯೇ? ಅದಕ್ಕೋಸ್ಕರ ಇಂತಹುದನ್ನೆಲ್ಲಾ ಎಕ್ಸರ್‌ಸೈಜ್ ಮಾಡಿದ್ದೇವೆ, ಮಾಡುತ್ತೇವೆ. ನಾವು ಸಮಗ್ರ ರಾಷ್ಟ್ರದ ಪರಿಸ್ಥಿತಿ ಬಗ್ಗೆ ಆಲೋಚನೆ ಮಾಡೋಣ ಅಥವಾ ಕರ್ನಾಟಕ ರಾಜ್ಯದ ಹಿತರಕ್ಷಣೆ ಬಗ್ಗೆ ಆಲೋಚಿಸೋಣ. ತಪ್ಪಾಗಿದ್ದರೆ ಹೇಳಿ

ಸರಿಪಡಿಸಿಕೊಳ್ಳುತ್ತೇವೆ. ಜನರು ತೀರ್ಮಾನ ಮಾಡುತ್ತಾರೆ, ಜನರು ತೀರ್ಮಾನ ಮಾಡುತ್ತಾರೆ ಎಂದರೆ ಅವರು ತೀರ್ಮಾನ ಮಾಡದೆ ಇನ್ಯಾರು ಮಾಡುತ್ತಾರೆ? ನಮ್ಮಲ್ಲಿ ಅವರ ವಿಶ್ವಾಸವಿದೆಯೆಂದೇ ನಿಮ್ಮ ಇಂತಹ ಎಲ್ಲಾ ಸಾಹಸಗಳನ್ನು ಎದುರಿಸುವುದು, ಅವರ ವಿಶ್ವಾಸ ಕಳೆದುಕೊಂಡರೆ ನಮಗೇನಿದೆ? ಒಂದು ವೇಳೆ ಅವರ ವಿಶ್ವಾಸ ಕಳೆದುಕೊಂಡು ನೀವುಗಳೆಲ್ಲರೂ ಸೇರಿಕೊಂಡು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ತಂದರೆ ಮುಗಿಯುತ್ತದೆಯೇ? ಅವರ ಬಗ್ಗೆ ನಮಗೆ ವಿಶ್ವಾಸವಿದೆ. ನಮ್ಮ ಐದು ಜನ ಸದಸ್ಯ ಸ್ನೇಹಿತರು ವಿರೋಧ ಪಕ್ಷದಲ್ಲಿದ್ದರೂ ಸ್ವಲ್ಪ ಬುದ್ಧಿವಂತಿಕೆಯಿಂದ ಆಲೋಚನೆ ಮಾಡಿ ಸಮಚಿತ್ತದಿಂದ ನಮಗೇನು ಬೆಂಬಲ ಕೊಟ್ಟಿದ್ದಾರೆ, ಅವರು ನಮ್ಮನ್ನು ಗುಣಾತ್ಮಕವಾಗಿ ನೋಡಿದರೆ ವಿನಾ ಪೂರ್ವಾಗ್ರಹದಿಂದ ನೋಡಲಿಲ್ಲ.

5.30 ಪಿ.ಎಂ

ಯಾವುದೇ ಪ್ರಿಜುಡ್ಯೂಸ್‌ನಿಂದ ನೋಢಲಿಲ್ಲ. ಗುಣಾತ್ಮಕವಾಗಿ ನೋಡಿದರು; ಹಾಗೇಯೇ ಮೊಯ್ಲಿಯವರು ಖರ್ಗೆಯವರು ಧರ್ಮಸಿಂಗ್ ಅವರು ಸಾಕಷ್ಟು ವರ್ಷಗಳ ಕಾಲ you have had enough of your life in politics. ಇಂತಹ ಎಕ್ಸರ್‌ಸೈಜ್ ಮಾಡಬಾರದು. ಈಗ ಮಾಡಿದ್ದೀರಿ. ವೋಟು ಹಾಕುತ್ತಾರೆ. ನಾವು ಗೆಲ್ಲುತ್ತೇವೆ, ನೀವು ಸೋಲುತ್ತೀರಿ ಆ ಮಾತು ಬೇರೆ. ಕುಸ್ತಿ ಆಡೋಣ. ಗೇಮ್ಸ್‌ಗೆ ಒಂದು ರೂಲ್ಸ್ ಇರುವುದಿಲ್ಲವೇ? ಹಿಂದೆ ಎಲ್ಲಾ ಕುಸ್ತಿ ಆಡುವಾಗ ಕಾಚಾ ಕಟ್ಟಿಕೊಳ್ಳುತ್ತಿದ್ದರು. ಕಾಚಾ ಕಟ್ಟಿಕೊಳ್ಳುವಾಗ ಅವರ ಮಧ್ಯೆ ಇದ್ದವನು ನೀನು ಏನಾದರೂ ಹಿಡಿ ಕಾಚಾ ಮಾತ್ರ ಹಿಡಿಯಬೇಡ ಎಂದು ಹೇಳುತ್ತಿದ್ದ. ನೀವು ಬರೀ ಕಾಚಾ ಹಿಡಿದಿರೇ ಹೊರತು ನಮ್ಮ ಮೈ ಹಿಡಿಯಲೇ ಇಲ್ಲ. ಆದ್ದರಿಂದ ಮುಂದೆ ನಾನು ಯಡಿಯೂರಪ್ಪನವರಿಗೂ ಹೇಳುವುದು ಅಷ್ಟೇ. ನಿಮ್ಮ ಪಾರ್ಟಿ ಆದರೂ ಅಧಿಕಾರಕ್ಕೆ ಬರಲಿ ಅವರಾದರೂ ಇರಲಿ, ನಾವು ಏಕೆ ಇಷ್ಟು ಆತ್ಮವಿಶ್ವಾಸದಿಂದ ನಾವು ಅಧಿಕಾರಕ್ಕೆ ಪುನಃ ಬರುತ್ತೇವೆಂದರೆ ನಾವು ಜನರ ಕೆಲಸ ಮಾಡಿದ್ದೇವೆ. ನಮ್ಮ ಜನ ಯಾರು ಕೆಲಸ ಮಾಡಿದ್ದಾರೋ ಅವರನ್ನು ಮರೆಯುವುದಿಲ್ಲ. ಆ ವಿಶ್ವಾಸದಿಂದ ನಾವು ಪುನಃ ಬರುತ್ತೇವೆಂದು ಹೇಳಿದ್ದೇವೆ ಬರುತ್ತೇವೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್.ಎನ್.ನಂಜೇಗೌಡ:- ಕಾಚಾ ಹಿಡಿಯೋಣ ಅಂದರೆ ಕಾಚಾ ಇಲ್ಲವಲ್ಲಾ.

ಶ್ರೀ ಜೆ.ಎಚ್.ಪಟೇಲ್:- ಹಾಗಾದರೆ ಇನ್ನೇನೂ ಮುಟ್ಟುವುದಕ್ಕೆ ಹೋಗಬೇಡಿ.

ನಗು

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಬಹಳ ದೀರ್ಘ ಕಾಲದಿಂದ ನಡೆದಂತಹ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಆದಂತಹ ಧಾಟಿಯಲ್ಲಿ

ಉತ್ತರವನ್ನು ನೀಡಿದ್ದಾರೆ. ನಮಗೆ ಈ ಉತ್ತರ ಹೊಸದೇನೂ ಅಲ್ಲ. ಇದು ಅಪೇಕ್ಷಿತ. ಎಲ್ಲಾ ಜನರಿಗೂ ಕೂಡ ಗೊತ್ತಿದೆ. ಈ ರಾಜ್ಯದ ಜನರಿಗೂ ಕೂಡ ತಾವು ಹೇಗೆ ಉತ್ತರ ಕೊಡುತ್ತೀರಿ ಎನ್ನತಕ್ಕಂಥಾದ್ದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ಒಂದು 15 ನಿಮಿಷ ಡಿ.ವಿ.ಗುಂಡಪ್ಪನವರದ್ದು ಒಂದು 15 ನಿಮಿಷ ಕಾರ್ಲ್ ಮಾರ್ಕ್ಸ್‌ದ್ದು, ಯಾವ್ಯಾವುದು ತಮಗೆ ಅನುಕೂಲ ಇರುತ್ತವೆ ಅದನ್ನು ಕೋಟ್ ಮಾಡುವುದು, ಇನ್ನೊಂದು 15 ನಿಮಿಷ ತಮಗೆ ಬೇಕಾದಂತಹ ಜೋಕ್ಸ್ ಹೇಳುವುದು, ಇನ್ನೊಂದು 15 ನಿಮಿಷ ವಿರೋಧಪಕ್ಷದವರಿಗೆ ಯಾವ್ಯಾವ ಟಾಂಟ್ ಹೊಡೆಯ ಬಹುದು, ಅಂಥಾದ್ದು ಸಂಗ್ರಹಿಸಿ ಹೇಳತಕ್ಕಂಥಾದ್ದು, ಇನ್ನು ಅರ್ಧ ಗಂಟೆಯಲ್ಲಿ ಇರತಕ್ಕಂಥ ಅಂಕಿ ಅಂಶಗಳನ್ನು ಓದಿ ಇದಕ್ಕೆ ನಾನು ರಾಜೀನಾಮೆ ಕೊಡಬೇಕೇ ಎಂದು ಹೇಳಿ ತಮ್ಮ ಭಾಷಣವನ್ನು ಮುಕ್ತಾಯ ಮಾಡಿದ್ದಾರೆ. ತಮಗೆ ಧನ್ಯವಾದಗಳು. ಆದರೆ ಈ ಒಂದು ಪ್ರಸ್ತಾವನೆ ತಂದಿದ್ದು ಇದನ್ನು ತಾವು ಬಹಳ ಲಘುವಾಗಿ ಪರಿಗಣಿಸಬೇಕು ಎನ್ನುವ ದೃಷ್ಟಿಯಿಂದ ಅಲ್ಲ. ಎರಡನೆಯದು ಏನೂ ಯಾವ ತಪ್ಪು ಇಲ್ಲ ಯಾವ ನೀತಿಯೂ ಇಲ್ಲ ಸುಮ್ಮನೆ ಈ ಒಂದು ಪ್ರಸ್ತಾವನೆಯನ್ನು ತಂದಿದ್ದಾರೆ ಎಂದು ಹೇಳಿ, ಅನೇಕ ಸಚಿವರೂ ಕೂಡ ಪ್ರಸ್ತಾವನೆಯನ್ನು ಮಾಡಿದರು. ಏಕೆಂದರೆ ರೆಕಾರ್ಡ್‌ನಲ್ಲಿ ಬೇರೆ ರೀತಿಯಲ್ಲಿ ಹೋಗಬಾರದು. ನಾನು ತಮ್ಮ ಗಮನಕ್ಕೆ ತರುತ್ತೇನೆ. 1978ರಿಂದ ಇತ್ತೀಚೆಗೆ ಮಾತ್ರ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಯಾವ ರೀತಿಯಲ್ಲಿ ಅವಿಶ್ವಾಸ ನಿರ್ಣಯದ ಮೇಲೆ ಯಾರ ಯಾರ ಕಾಲದಲ್ಲಿ ಎಷ್ಟೆಷ್ಟು ದಿನ ಮಾತನಾಡಿದರು, ಎನ್ನುವ ಬಗ್ಗೆ ನಾನು ಹೇಳುತ್ತೇನೆ. ಏಕೆಂದರೆ ಇವತ್ತು ಸುಮ್ಮನೆ ಇವರು ಈ ಒಂದು ಅವಿಶ್ವಾಸ ನಿರ್ಣಯವನ್ನು ತಂದು ಈ ಸದನದ ಸಮಯವನ್ನು ವ್ಯರ್ಥ ಮಾಡಿದರು ಎನ್ನತಕ್ಕಂಥ ಒಂದು ಇಂಪ್ರೆಷನ್ ಅನ್ನು ಕ್ರಿಯೇಟ್ ಮಾಡುವುದಕ್ಕೆ ಹೊರಟಿದ್ದಾರೆ. 1978ರಿಂದ 1982ನೇ? ಅವಧಿಯಲ್ಲಿ ಶ್ರೀಮಾನ್ ದೇವರಾಜ ಅರಸು ಮತ್ತು ಶ್ರೀಮಾನ್ ಗುಂಡೂರಾವ್ ಅವರ ಕಾಲದಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದರು. ಆಗ ಸುಮಾರು 4 ದಿವಸಗಳ ಕಾಲ ಚರ್ಚೆ ನಡೆಯಿತು. 25-9-79, 24-9-79, 26-9-79 ಹಾಗೂ 27-9-79 ಮತ್ತು ತದನಂತರ 1990-91ರಲ್ಲಿ ನಮ್ಮ ಸರ್ಕಾರದ ವಿರುದ್ಧ ಮಾನ್ಯಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅಂದಿನ ನಿಮ್ಮ ಪಕ್ಷದ ಮುಖಂಡರು ಇವತ್ತು ನಮ್ಮ ಪಕ್ಷದಲ್ಲಿದ್ದಾರೆ, ಶ್ರೀಮಾನ್ ಚಂದ್ರೇಗೌಡರು 2-9-90 3-9-90 ಮತ್ತು 4-9-90, 5-9-90 ಆಗ ಮಾನ್ಯ ಸಿಂಧ್ಯಾರವರು ಇದ್ದರು, ಭೈರೇಗೌಡರು ಇದ್ದರು, ನಾಗೇಗೌಡರು ನಮ್ಮ ಕಡೆ ಇದ್ದರು. ಇವರೆಲ್ಲರೂ ಕೂಡ ಇದ್ದರು ಆಗ ನಾಲ್ಕು ದಿನ ಚರ್ಚೆ ಆಯಿತು. ಆಮೇಲೆ ಆ ಚರ್ಚೆಯಲ್ಲಿ ಭಾಗವಹಿಸಿದವರು 5 ಜನ. 1993ರಲ್ಲಿ ಆರ್.ವಿ.ದೇಶಪಾಂಡೆಯವರು ವಿರೋಧಪಕ್ಷದ ನಾಯಕರಾದರು. ಮಾನ್ಯ ಚಂದ್ರೇಗೌಡರು ಬದಲಾವಣೆ ಆದರು. ಅವರು 1-9-93, 2-9-93 ಹಾಗೂ 6-9-93 ಮೂರು ದಿವಸ ಕೇವಲ 3 ಜನ ಮಾತ್ರ ಆ ಚರ್ಚೆಯಲ್ಲಿ ಭಾಗವಹಿಸಿದ್ದರು. ಅದಾದ ನಂತರ ಮುಂದೆ 1995ರಲ್ಲಿ ಮಾನ್ಯ ಯಡಿಯೂರಪ್ಪನವರು ತಂದರು.

ಆಮೇಲೆ ಪುನಃ ಮಾನ್ಯ ಜೆ.ಎಚ್.ಪಟೇಲರು ಬಂದಾಗ ಬಿ.ಜೆ.ಪಿ.ಯವರು ಸ್ಪಾನ್ಸರ್ ಮಾಡಿದಂತಾದ್ದಕ್ಕೆ ಕಾಂಗ್ರೆಸ್ಸಿನವರು ಆಗ ಒಂದು ಪ್ರಸ್ತಾವನೆಯನ್ನು ಮಂಡಿಸಿದರು. ಇವತ್ತು ನಾನು ಇಲ್ಲಿ ಮಂಡಿಸಿದ ನಿರ್ಣಯದ ಮೇಲೆ 6 ದಿವಸ ಚರ್ಚೆ ಆಗಿದೆ. ಆ 6 ದಿವಸದಲ್ಲಿ ತಮಗೆ ಗೊತ್ತಿರುವ ಹಾಗೆ ಕಬ್ಬನ್‌ಪಾರ್ಕ್ ವಿಷಯ ಹೆಚ್ಚು ಕಡಿಮೆ ಒಂದು ದಿವಸ ಆಯಿತು. ಎರಡನೆಯದು ನಿನ್ನೆ ಹಕ್ಕುಚ್ಯುತಿ ನಿರ್ಣಯದ ಮೇಲೆ ಹೆಚ್ಚುಕಡಿಮೆ ಎರಡು ಗಂಟೆ ಆಯಿತು. ಆದರೆ ನಾವು ಸೀರಿಯಸ್ ಆಗಿ ಚರ್ಚೆ ಮಾಡಿದ್ದು ಅವಿಶ್ವಾಸ ನಿರ್ಣಯದ ಮೇಲೆ ಕೇವಲ 4 ದಿವಸಕ್ಕಿಂತಲೂ ಹೆಚ್ಚಿಗೆ ಆಗಿಲ್ಲ. ಅದಕ್ಕೆ ತಾವು 7 ದಿವಸ ತೆಗೆದುಕೊಂಡಿರಿ 8ದಿವಸ ತೆಗೆದುಕೊಂಡಿರಿ ಎಂದು ಹೇಳಿ ನಾವು ಏನೋ ದೊಡ್ಡ ಅಪರಾಧ ಮಾಡಿದ್ದೇವೆ ಎನ್ನತಕ್ಕಂಥ ದಿಕ್ಕಿನಲ್ಲಿ ತಾವು ಮಾತನಾಡಿ ಸಮರ್ಥನೆ ಮಾಡಿಕೊಂಡಿರಿ. ಆದರೆ ನಾನು ಕೇಳುತ್ತೇನೆ ಇವತ್ತು ಅನೇಕ ಜನ ಮಂತ್ರಿಗಳು ಉತ್ತರ ಕೊಟ್ಟರು. ಅದರಲ್ಲಿ ಯಾವುದಕ್ಕೂ ಕೂಡ ಸಮರ್ಪಕವಾದ ಉತ್ತರ ನನಗಂತೂ ಸಿಗಲಿಲ್ಲ. ಅತಿವೃಷ್ಟಿ ಬಗ್ಗೆ ಮಾಹಿತಿ ಕೊಟ್ಟರು. ನಾವು ಫ್ಯಾಕ್ಟ್ ಅಂಡ್ ಫಿಗರ್ಸ್ ಹೇಳಿದ್ದೇವೆ. ನೀವು ಏನು ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೀರಿ ಅದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಅದರ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಜಾನುವಾರುಗಳು ಸತ್ತಿದ್ದಕ್ಕಾಗಿ ಒಂದು ನಯಾಪೈಸೆ ಇದುವರೆಗೂ ಬಿಡುಗಡೆಯಾಗಿಲ್ಲ. ಅದರ ಬಗ್ಗೆಯೂ ಕೂಡ ತಾವು ಏನೂ ಹೇಳಲಿಲ್ಲ. 5 ಸಾವಿರ ರೂಪಾಯಿ 10 ಸಾವಿರ ರೂಪಾಯಿ ಮನೆ ಬಿದ್ದು ಹೋಗಿರುವವರಿಗೆ ಕೊಡಬೇಕೆಂದು ಇದ್ದರೂ ಸಹ ಅದರ ಬಗ್ಗೆ ಯಾವ ಚಕಾರ ಶಬ್ದ ಕೂಡ ಹೇಳಲಿಲ್ಲ. ನಾವು ಏನು ಆಪಾದನೆಗಳನ್ನು ಮಾಡಿದೆವು ಅವುಗಳು ರೊಟೀನ್ ಆಗಿ ಮಾಡಿದಂತೆ ತಾವು ತಿಳಿದುಕೊಂಡಿದ್ದೀರಿ. ನಾವು ಮಾಡಿದಂತಹ ಅಪಾದನೆಗಳಿಗೆ ಸರ್ಕಾರದಿಂದ ಯಾವ ಉತ್ತರ ಇಲ್ಲ. ಸರ್ಕಾರದಿಂದ ಸರ್ಕಾರಿ ಅಜ್ಞೆಗಳು ಹೋಗಿದ್ದನ್ನು ಬಿಟ್ಟರೆ ಹಿಂದೆ ಏನು ಆಯಿತು ಮುಂದೆ ಏನಾಯಿತು ಎಂದು ಹೇಳುವುದನ್ನು ಬಿಟ್ಟರೆ ಅದರ ಬಗ್ಗೆ ಯಾವ ಮಾತೂ ಸರ್ಕಾರದಿಂದ ಬರಲಿಲ್ಲ. ಅದಾದ ನಂತರ ಮಾನ್ಯ ನೀರಾವರಿ ಮಂತ್ರಿಗಳಲ್ಲಿ ನಾವೇನು ಪ್ರಸ್ತಾಪ ಮಾಡಿದೆವು ಅಂದರೆ ತಾವು ಇರದೇ ಇರತಕ್ಕಂಥ ವಿಷಯವನ್ನು ಹುಟ್ಟಿಸಿ ಅದಕ್ಕೆ ಒಂದು ದೊಡ್ಡ ಮಹತ್ವ ಕೊಡತಕ್ಕಂಥ ರೀತಿಯಲ್ಲಿ ಸುಪ್ರೀಂ ಕೋರ್ಟ್‌ನಿಂದ ಒಬ್ಬ ಕಮೀಷನರ್ ಬಂದು ನಮ್ಮ ಆಲ್ಮಟ್ಟಿ ಡ್ಯಾಮ್ ನೋಡಿಕೊಂಡು ಹೋಗತಕ್ಕಂಥಾದ್ದು, ಇವತ್ತು, ಕಾವೇರಿ ಒಪ್ಪಂದವನ್ನು ಒಪ್ಪಿ ಹಿಂದೆ ಏನು ನಮಗೆ ಇಂಟರೀಯಂ ಅರ್ಡರ್‌ನ್ನು ಒಪ್ಪಬಾರದು ಎಂದು ಹೇಳಿ ಈ ಸದನದಲ್ಲಿ ಸರ್ವ ಸಮ್ಮತದಿಂದ ಒಂದು ಸಾಲಿನ ನಿರ್ಣಯ ಏನು ಆಗಿತ್ತು, ಅದರ ಬಗ್ಗೆ ಕೂಡ ಅವರು ಯಾವುದೇ ರೀತಿಯ ಸಮಾಧಾನಕರವಾದಂತಹ ಉತ್ತರ ಕೊಡಲಿಲ್ಲ. ಆಂಧ್ರಪ್ರದೇಶದವರಿಗೆ ಬರೆದಂತಹ ಪತ್ರದ ಬಗ್ಗೆ ಕೂಡ ಉತ್ತರ ಕೊಡಲಿಲ್ಲ. ಏಕೆ ಕೊಡಲಿಲ್ಲ ಅಂದರೆ ಅದರ ಬಗ್ಗೆ ಕೂಡ ಅವರಿಂದ ನಮಗೆ ಉತ್ತರ ಇಲ್ಲ. ನಾವು ಯು ಕೆ ಪಿ ಯಲ್ಲಿ ನಡೆದಂತಹ ಅವ್ಯವಹಾರ ಮತ್ತು ವಿ.ಸಿ.ಕ್ಯಾನಲ್‌ನಲ್ಲಿ ನಡೆದಂತಹ ಅವ್ಯವಹಾರವನ್ನು ಸಿ ಬಿ ಐ ಗೆ ಒಪ್ಪಿಸಿ ಎಂದು ಕೇಳಿದ್ದೇವೆ ಅದರ ಬಗ್ಗೆ ಕೂಡ ಯಾವುದೇ ಉತ್ತರ ಹೇಳಲಿಲ್ಲ. ನಮ್ಮ ಭೈರೇಗೌಡರು

ಅವರಿಗೆ ಸಂಬಂದಪಟ್ಟಂತೆ ಹೋದಸಲ ನಮ್ಮ ರೈತರು ಎನು ತಮ್ಮ ಜೀವವನ್ನು ಕಳೆದುಕೊಂಡರು ಬೆಳೆ ಹಾನಿಯಿಂದ ಮತ್ತು ಕಳಪೆ ಗೊಬ್ಬರದಿಂದ, ಆ ಬಗ್ಗೆ ಸದನದ ಸಮಿತಿ ಏನು ವರದಿ ಕೊಟ್ಟಿತ್ತು ಅದನ್ನು ಯಥಾವತ್ತಾಗಿ ಇಂಪ್ಲಿಮೆಂಟ್ ಮಾಡಿ ಎಂದು ಕೇಳಿದ್ದೆವು. ಮತ್ತು ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮಿಷನ್‌ನವರು ಶಿಫಾರಸ್ಸು ಮಾಡಿದಾಗಲೂ ಸಹ ಅದರ ಮೇಲೂ ಯಾವ ಬೆಳಕು ಚೆಲ್ಲಲಿಲ್ಲ. ಇನ್ನು ಉಳಿದಂತೆ ಬಸ್ಸಿನ ಬಗ್ಗೆ ಮಾನ್ಯ ಸಿಂಧ್ಯಾರವರು ಅವರದ್ದೇ ಆದ ಧಾಟಿಯಲ್ಲಿ ಅವರು ಸಮರ್ಥನೆ ಮಾಡಿಕೊಂಡರು. ಆದರೆ ಕೆ ಎಸ್ ಆರ್ ಟಿ ಸಿ ಈಗಲೂ ಕೂಡ ಲಾಸ್‌ನಲ್ಲಿದೆ ಎಂದು ಈಗಲೂ ಒಪ್ಪಿಕೊಳ್ಳುತ್ತಾರೆ. ಇನ್ನೂ ಕೆ ಎಸ್ ಆರ್ ಟಿ ಸಿ ಸೇವೆ ಸರಿಯಾಗಿಲ್ಲ ಎಂದು ಅವರು ಒಪ್ಪಿಕೊಳ್ಳುತ್ತಾರೆ. ಇನ್ನು ಮಾನ್ಯ ಪ್ರಕಾಶ್‌ರವರು ತಮ್ಮದೇ ಆದ ರೀತಿಯಲ್ಲಿ ಅಂಕಿಅಂಶಗಳನ್ನು ಹೇಳಿ ಅವರು ಕಟ್ಟಿಸಿದಂತಹ ಮನೆಗಳು ಎಷ್ಟು ಸಂಡಾಸ್‌ಗಳು ಎಷ್ಟು ರಸ್ತೆಗಳು ಎಷ್ಟು ಎನ್ನುವುದನ್ನು ಹೇಳಿದ್ದಾರೆ. ಅವುಗಳನ್ನು ನಾವು ಮುಂದೆ ಡಿಮ್ಯಾಂಡ್ ಮೇಲೆ ನೋಡೋಣ. ಅವರು ಕೊಟ್ಟಂತಹ ಉತ್ತರಕ್ಕೂ ಇದಕ್ಕೂ ಯಾವ ಸಂಬಂಧವಿಲ್ಲ. ನಾವು ಯಾರಾದರೂ ಡಿಮ್ಯಾಂಡ್ ರೈಸ್ ಮಾಡಿ ಕೇಳಿದರೆ ಒಂದು ರೀತಿ. ಅದರ ಬಗ್ಗೆ ನಮಗೆ ಪ್ರಸ್ತಾವನೆ ಇಲ್ಲ. ಅದರ ಬಗ್ಗೆ ಅವರು ಉತ್ತರ ಹೇಳತಕ್ಕಂಥ ಅವಶ್ಯಕತೆ ಇಲ್ಲ. ಮಾನ್ಯ ಸಿಂಧ್ಯಾರವರು ಒಂದು ಮಾತು ಹೇಳಿದರು. ಮಾನ್ಯ ಸಿದ್ದರಾಮಯ್ಯನವರು ಒಂದು ಮಾತು ಹೇಳಿದರು. ನಾನು ಇಷ್ಟೊಂದು ಮಾಡಿದ್ದೇನೆ ನನ್ನ ಭಂಡಾರ ತುಂಬಿದೆ. ಖಜಾನೆ ತುಂಬಿದೆ. ಒಂದು ಚೆಕ್ ಬೌನ್ಸ್ ಆಗಿಲ್ಲ. ಎಂದು ಪದೇ ಪದೇ ಹೇಳಿ ಸಮರ್ಥನೆ ಮಾಡಿಕೊಂಡರು. ಅವರು ಬಹಳ ಆವೇಶ ಭರಿತರಾಗಿ ನಾನು ಇದಕ್ಕೆ ರಾಜೀನಾಮೆ ಕೊಡಬೇಕೇ? ನಾನು ಇದಕ್ಕೆ ದನ ಕಾಯುವುದಕ್ಕೆ ಹೋಗಬೇಕೇ ಎಂದು ಸ್ವಲ್ಪ ಸಿಟ್ಟಿನಲ್ಲಿ ಮಾತನಾಡಿದರು. ನಿಮ್ಮದು ಭಂಡಾರ ತುಂಬಿದ್ದರೆ 1600 ಕೋಟಿ ರೂ.ಗಳು ಇವತ್ತು ಪ್ಲಾನ್ ಔಟ್‌ಲೇನಲ್ಲಿ ಕಟ್ ಮಾಡತಕ್ಕಂಥ ಅವಶ್ಯಕತೆಯೇ ಇರಲಿಲ್ಲ. ಹೆಚ್ಚು ಹಣ ನಿಮ್ಮಲ್ಲಿ ಸಂಪಾದನೆಯಾಗಿದ್ದರೆ, ಸಂಗ್ರಹಣೆ ಮಾಡಿದ್ದರೆ ಇವತ್ತು ಪ್ಲಾನ್ ಔಟ್‌ಲೇಯನ್ನು ಯಥಾವತ್ತಾಗಿ ಇಂಪ್ಲಿಮೆಂಟ್ ಮಾಡುತ್ತಿದ್ದಿರಿ. ಅದು ಡೆಫಿಸಿಟ್ ಆಗುವ ಪ್ರಶ್ನೆಯೇ ಬರುತ್ತಿರಲಿಲ್ಲ. ತಾವು ಹೋದ ಸಲ ಇಷ್ಟು ಕಲೆಕ್ಷನ್ ಆಗಿತ್ತು, ನಾವು ಈ ವರ್ಷ ಇಷ್ಟು ಕಲೆಕ್ಷನ್ ಮಾಡಿದ್ದೇವೆ ಎಂದು ಆಗಲೇ ಅಂಕಿ ಅಂಶಗಳನ್ನು ನೀಡಿದಿರಿ. ಈ ಇನ್‌ಫ್ಲೇಷನ್ ರೇಟಿಗೆ ಮತ್ತು ತಾವು ಕಲೆಕ್ಟ್ ಮಾಡಿದಂತಹ ಹಣಕ್ಕೆ ಹೋಲಿಸಿ ನೋಡಿದಾಗ ನಿಜವಾದಂತಹ ನಿಮ್ಮ ಅಚೀವ್‌ಮೆಂಟ್ ಎಷ್ಟು ಪರ್ಸೆಂಟ್ ಎಂಬುದು ಗೊತ್ತಾಗುತ್ತದೆ. 1993ರಲ್ಲಿದ್ದಂತಹ ಬೆಲೆಗಳಿಗೆ ಇಂದಿನ ಬೆಲೆಗಳನ್ನು ಹೋಲಿಸಿದರೆ ಕಳೆದ ವರ್ಷಗಳಲ್ಲಿ ಬೆಲೆಗಳು ಶೇಕಡ 40ರಿಂದ 200ರಷ್ಟು ಹೆಚ್ಚಾಗಿವೆ. ವಸ್ತುಸ್ಥಿತಿ ಹೀಗಿರುವಾಗ ಸೇಲ್ಸ್ ಟ್ಯಾಕ್ಸ್ ಹೆಚ್ಚಿಗೆ ಬರುತ್ತದೋ ಕಡಿಮೆ ಬರುತ್ತದೋ? ಅಂದರೆ ಆ ಪ್ರಮಾಣದಲ್ಲೂ ಇವತ್ತು ನೀವು ಸೇಲ್ಸ್ ಟ್ಯಾಕ್ಸ್ ಅನ್ನು ಸಂಗ್ರಹಣೆ ಮಾಡಿದ್ದು ಅಥವಾ ನೀವು ಕ್ರೋಢೀಕರಿಸಿದ್ದು ಏನೇನೂ ಅಲ್ಲ ಎಂಬುದನ್ನು ನಾವು ಹೇಳಬೇಕಾಗುತ್ತದೆ. ಆ ಇನ್‌ಫ್ಲೇಷನ್ ರೇಟಿಗೂ ಸಂಬಂಧ ಇಲ್ಲ, ಇವರ ಫಿಸಿಕಲ್ ಅಚೀವ್‌ಮೆಂಟ್‌ಗೂ ಸಂಬಂಧವಿಲ್ಲ, ಹಣ ನಾವು

ಹೆಚ್ಚಿಗೆ ಖರ್ಚು ಮಾಡಿದ್ದೇವೆ ಎನ್ನತಕ್ಕಂಥದ್ದು ಒಂದನ್ನು ಬಿಟ್ಟರೆ ಆ ಹಣಕ್ಕೆ ಇನ್‌ಫ್ಲೇಷನ್‌ಗೆ ಮತ್ತು ರೈಸಿಂಗ್ ಪ್ರೈಸಸ್‌ಗೆ ಹೋಲಿಸಿಕೊಂಡು ನೀವೇನಾದರೂ ಹೇಳಿದ್ದರೆ, ಇವತ್ತಿನ ಮನಿ ವ್ಯಾಲ್ಯೂಗೆ ತಾವು ಕಂಪೇರ್ ಮಾಡಿ ಹೇಳಿದ್ದರೆ ನಾನು ಅದನ್ನು ಒಪ್ಪಿಕೊಳ್ಳುತ್ತಿದ್ದೆ. ಅವರು ಇಷ್ಟೊಂದು ಹೇಳಿದರೂ ಕೂಡ ಯಾವ ದೃಷ್ಟಿಯಿಂದಲೂ ಕೂಡ ನಾವು ಅವರಿಗೆ ಸಮರ್ಥನೆ ಮಾಡತಕ್ಕಂಥದ್ದೇ ಆಗಲೀ, ವಾಪಸ್ ತೆಗೆದು ಕೊಳ್ಳತಕ್ಕಂಥ ಪ್ರಶ್ನೆ ಆಗಲೀ ಇಲ್ಲಿ ಉದ್ಭವಿಸುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಮಾತುಗಳನ್ನು ತಮ್ಮದೇ ಆದಂತಹ ಧಾಟಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, 20 ವರ್ಷದ ಹಿಂದೆ ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಜೆ.ಹೆಚ್.ಪಟೇಲ್‌ರವರು ಈ ಕಡೆ ಮೂರನೇ ಸ್ಥಾನದಲ್ಲಿ ಕುಳಿತಿದ್ದರು. ಆಗ ಮಾನ್ಯ ಜೆ.ಹೆಚ್.ಪಟೇಲ್‌ರವರು ಸದನದಲ್ಲಿ ಏನು ಹೇಳಿದರು ಎಂಬುದನ್ನು ಓದಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. 25ನೇ ಜುಲೈ 78ರಿಂದ 1ನೇ ಆಗಸ್ಟ್ 1978ರ ಅಧಿಕೃತ ವರದಿ ಪುಟ 385ರಲ್ಲಿ ಮಾನ್ಯ ಜೆ.ಹೆಚ್.ಪಟೇಲ್ ಭಾಷಣ ಇದೆ. ನಾನು ಅದನ್ನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ.

'' ಶ್ರೀ ಜೆ.ಹೆಚ್.ಪಟೇಲ್:- ...ಒಂದು ಮಾತು ಈಗಾಗಲೇ ದೇಶದ ಬೇರೆ ಕಡೆ ಭಾಗಗಳಲ್ಲಿ ಕೂಡ ಪ್ರಚಲಿತವಾಗುತ್ತಿದೆ. ಏನೆಂದರೆ ಕರ್ನಾಟಕ ಸರ್ಕಾರ ಮತ್ತು ಕರ್ನಾಟದ ಮುಖ್ಯಮಂತ್ರಿಗಳವರು ಹಿಂದುಳಿದಂತಹ ಹರಿಜನ ಗಿರಿಜನರ ಚಾಂಪಿಯನ್ ಅಂತ. ಇದರಲ್ಲಿ ಆಶ್ಚರ್ಯವಾಗುವುದೇನೆಂದರೆ, ಇವತ್ತು ಒಂದಲ್ಲ ಹತ್ತು ಹಾಸ್ಟೆಲ್‌ಗಳನ್ನು ಕಟ್ಟಿರಬಹುದು. ಒಂದು ಐದಾರು ಕೋಟಿ ರೂ.ಗಳು ಜಾಸ್ತಿ ಜನಕ್ಕೆ ಪೆನ್‌ಷನ್ ಕೊಟ್ಟಿರಬಹುದು. ಅದರಲ್ಲಿ ನನಗೆ ನಂಬಿಕೆ ಇಲ್ಲ. ಏನಾದರೂ ರ್‍ಯಾಡಿಕಲ್ ಆಗಿ ಕಾಂಕ್ರೀಟ್ ಆದ ಕೆಲಸಗಳನ್ನು ಏನಾದರೂ ಮಾಡಿದ್ದೀರಾ ಎಂದು ನಾನು ಕೇಳಬಯಸುತ್ತೇನೆ. ಈಗ ಉದಾಹರಣೆಗೆ ಡಾಕ್ಟರ್ ಲೋಹಿಯಾ ಅವರು ಹದಿನೈದು ವರ್ಷಗಳ ಹಿಂದೆ ಒಂದು ಸೂಚನೆಯನ್ನು ಆಗಿದ್ದ ಪ್ರಧಾನ ಮಂತ್ರಿಗಳವರಿಗೆ ಕೊಟ್ಟಿದ್ದರು. ಆದರೆ ಅದು ಏನು ಅಂತ ಹೇಳಿದರೆ ಈ ದೇಶದಲ್ಲಿ ಪ್ರತಿಯೊಬ್ಬರೂ ಯಾರೇ ಆಗಿರಲಿ ತಿಂಗಳಿಗೆ ಮೂರು ಸಾವಿರ ರೂ.ಗಳಿಗಿಂತ ಹೆಚ್ಚಿಗೆ ಖರ್ಚು ಮಾಡಬಾರದು. ಅದರ ಬಗ್ಗೆ ಒಂದು ಸೀಲಿಂಗ್ ತನ್ನಿ ಎಂದು ಹೇಳಿದರು. ಆದರೆ ಇವತ್ತು ತಾವೇನು ಇನ್‌ಕಂ ಟ್ಯಾಕ್ಸ್, ವೆಲ್ತ್ ಟ್ಯಾಕ್ಸ್ ಅಂತ ಹಾಕುತ್ತಿದ್ದೀರಿ, ಆದರೂ ಕೂಡ ಇವತ್ತು ಶ್ರೀಮಂತರು ದೊಡ್ಡ ದೊಡ್ಡ ಅರಮನೆಯಂತಹ ಮನೆಗಳನ್ನು ಕಟ್ಟಿಸುತ್ತಲೇ ಇದ್ದಾರೆ. ಆದುದರಿಂದ ತಾವು ಒಂದು ಕಾನೂನು ತಂದು ಯಾರೇ ಆಗಲೀ ಎರಡು ಸಾವಿರ ರೂ.ಗಳಿಗಿಂತ ಹೆಚ್ಚಿಗೆ ಖರ್ಚು ಮಾಡಿದ್ದ ಕೂಡಲೇ ಅವರನ್ನು ಅರೆಸ್ಟ್ ಮಾಡಿ, ಪ್ರಾಸಿಕ್ಯೂಟ್ ಮಾಡಿ. ಅದನ್ನು ಮಾಡುವುದಕ್ಕೆ ಹೇಗೆ ಬರುತ್ತದೆ ಎನ್ನುವುದಕ್ಕೆ ಅವರು ಹಿಂದೆಯೇ ಒಂದು ಪ್ಲಾನ್ ಕೊಟ್ಟಿದ್ದಾರೆ. ಆ ರೀತಿ ಮಾಡಿದರೆ ವರ್ಷಕ್ಕೆ ಆರು ಸಾವಿರ ಕೋಟಿ ರೂ.ಗಳು ಉಳಿತಾಯವಾಗುತ್ತದೆ. ಯೋಜನೆ

ಕೊಟ್ಟಿದ್ದಾರೆ, ಆದರೆ ಇಲ್ಲಿಯವರೆಗೆ ಅದನ್ನು ಯಾರೂ ಮಾಡಿಲ್ಲ. ಆದುದರಿಂದ ತಾವು ಅದನ್ನು ಮಾಡಿ....

ಶ್ರೀಮಾನ್ ಜೆ.ಹೆಚ್.ಪಟೇಲ್‌ರವರು 20 ವರ್ಷಗಳ ಹಿಂದೇ ಇದೇ ಸದನದಲ್ಲಿ ಈ ಕಡೆ ಕುಳಿತಾಗ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವರಾಜ್ ಅರಸ್‌ರವರಿಗೆ ಈ ಮಾತನ್ನು ಹೇಳಿದ್ದರು. ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ, ಹಾಸ್ಟೆಲ್ ಕಟ್ಟಿದರೆ ಜನ ಏನು ಮುಂದೆ ಬರುತ್ತಾರಾ ಎಂದು ತಾವು ಹೇಳಿದಿರಿ. ಈಗ ಹಾಸ್ಟೆಲ್‌ಗಳಿಗೆ ಹೋಗಿ ತೋರಿಸುತ್ತೇನೆ, ರೆಸಿಡೆನ್ಷಿಯಲ್ ಹಾಸ್ಟೆಲ್‌ಗೆ ಹೋಗಿ ತೋರಿಸುತ್ತೇನೆ, ಬೇರೆ ಮನೆಗಳು ಕಟ್ಟಿದ್ದು ಹೋಗಿ ತೋರಿಸುತ್ತೇನೆ, ಆಗ ಇದು ಅಪ್ರಸ್ತುತ. ಈಗ ಇದು ಪ್ರಸ್ತುತ. ಆಮೇಲೆ ನಾನು ಕೇಳುತ್ತೇನೆ, ಲೋಹಿಯಾರವರ ರ್‍ಯಾಡಿಕಲ್ ಚೇಂಜಸ್ ತರಬೇಕು, ಬರೇ ಮನೆ ಮಾಡಿದರೇನು? ಹಾದಿ ಮಾಡಿದರೇನು? ಅದಕ್ಕೇ ನಾನು ಹೇಳಿದ್ದು, ಜನ ಅಪೇಕ್ಷೆ ಪಟ್ಟಿದ್ದು ಏನೆಂದರೆ, ಸಮಾಜವಾದಿ ನಾಯಕರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಅದಕ್ಕಾಗಿ ಏನಾದರೂ ರ್‍ಯಾಡಿಕಲ್ ಬದಲಾವಣೆ ತರುತ್ತಾರೆ ಎನ್ನತಕ್ಕಂಥ ಅಪೇಕ್ಷೆ ಇತ್ತು. ಆದರೆ ಇವತ್ತು ಆಗಿದ್ದೇನೆಂದರೆ, ಎಲ್ಲಾ ಫುಸ್ ಏನೂ ಆಗಿಲ್ಲ. ಮಾನ್ಯ ದೇವರಾಜ್ ಅರಸ್‌ರವರು ಹಾಕಿದಂತಹ 20 ಅಂಶಗಳ ಕಾರ್ಯಕ್ರಮ ಮುಂದುವರೆದಿದೆಯೇ ಹೊರತು ನಿಮ್ಮದ್ಯಾವುದು ರ್‍ಯಾಡಿಕಲ್ ಚೇಂಜಸ್ ಇದೆ? 2 ಸಾವಿರ ರೂ.ಗಳಿಗೆ ಮಿತಿಗೊಳಿಸಿ ಅದಕ್ಕಿಂತ ಹೆಚ್ಚು ಖರ್ಚು ಮಾಡುವವರನ್ನು ನೀವು ಬಂದ ಮೇಲೆ ಅರೆಸ್ಟ್ ಮಾಡುತ್ತಿದ್ದೀರಾ? 3 ಸಾವಿರ ರೂ.ಗಳಿಗೆ ಆದಾಯ ಲಿಮಿಟೇಷನ್ ಮಾಡಿ ನೀವೇನಾದರೂ ಕಾನೂನು ತಂದಿದ್ದೀರಾ? ಇದು ಹೇಳುವುದಕ್ಕೆ ಬಹಳ ಸುಲಭ, ಕಥೆ ಹೇಳಬಹುದು, ಪುರಾಣ ಹೇಳಬಹುದು, ಬುದ್ಧಿಜೀವಿಗಳು ಅಥವಾ ತಾವು ಓದಿದಂತಹ ಅನೇಕ ಮಾತುಗಳನ್ನು ಉದ್ಧರಿಸಬಹುದು, ಅವುಗಳನ್ನು ಹೇಳಿ ಮರುಳು ಗೊಳಿಸಬಹುದು. ಆದರೆ ಅಧಿಕಾರ ಸಿಕ್ಕಾಗ ನೀವೇನು ಮಾಡುತ್ತೀರಿ ಎಂಬುದು ಬಹಳ ಮುಖ್ಯ. ಆ ಕೆಲಸ ನೀವು ಮಾಡಿಲ್ಲ. ಇದಕ್ಕಾಗಿ ಜನತೆಗೆ ದುಃಖ ಇದೆ, ವ್ಯಥೆ ಇದೆ. ಈ ಅಪೇಕ್ಷೆಯನ್ನು ಬೇರೆಯವರು ಯಾರೂ ಕೂಡ ಇಲ್ಲಿ ಮಾಡುತ್ತಿರಲಿಲ್ಲ. ನಿಮ್ಮಿಂದ ಅಪೇಕ್ಷೆ ಏಕೆ ಮಾಡಿದ್ದು ಎಂದರೆ, ನೀವು 40-50 ವರ್ಷಗಳ ಸತತವಾಗಿ ಈ ಒಂದು ತತ್ವದಲ್ಲಿ ಬೆಳೆದಂತಹ ಮನುಷ್ಯ, ಈ ವ್ಯಕ್ತಿ, ಇಂತಹ ವ್ಯಕ್ತಿ ಅಧಿಕಾರಕ್ಕೆ ಬಂದರೆ ಏನಾದರೂ ಹೊಸ ಚೈತನ್ಯ, ಮಾರ್ಗದರ್ಶನ, ಹೊಸ ರ್‍ಯಾಡಿಕಲ್ ಚೇಂಜಸ್ ತರುತ್ತಾರೆ ಅನ್ನತಕ್ಕಂಥ ಅಪೇಕ್ಷೆ ಇತ್ತೇ ಹೊರತಾಗಿ ನಮ್ಮ 20 ಅಂಶದ ಕಾರ್ಯಕ್ರಮಗಳಡಿ ಕಟ್ಟಿದ ಮನೆಗಳ ಅಂಕಿ ಅಂಶಗಳನ್ನು ಓದಿ ಹೇಳವುದಕ್ಕೆ ತಾವೇ ಬೇಕೇ? ಯಾರಾದರೂ ಅದನ್ನು ಹೇಳಬಹುದು. ಆದ್ದರಿಂದ ದಯವಿಟ್ಟು ನೋ ಕಾನ್ಫಿಡೆನ್ಸ್ ಮೋಷನ್ ಅನ್ನು ಬಹಳ ಲಘುವಾಗಿ ತೆಗೆದುಕೊಳ್ಳಬೇಡಿ. ಈಗ ತಾವೆಲ್ಲಿದ್ದೀರಿ ಎಂದರೆ, ಆ ಬಗ್ಗೆ ತಾವೇ ಹಿಂದೆ ಹೇಳಿಕೊಂಡಿದ್ದೀರಿ, ಅದನ್ನೂ ಕೂಡ ನಾನು ಹೇಳುತ್ತೇನೆ, ಇವರ ಕಥೆ ಹೇಗೆ ಆಗಿದೆ ಎಂದರೆ, ನಾನು ಬಹಳ ಡೆವಲಪ್‌ಮೆಂಟ್ ಆಗಿದೆ ಎಂದು ಎಲ್ಲವನ್ನೂ ಓದಿ

ಓದಿ ಹೇಳುವುದು, ಆದರೆ ಇವರ ಡೆವಲಪ್‌ಮೆಂಟ್ ಹೇಗಿದೆ ಎಂದರೆ, ಅವರು ಹೇಳಿದಂತಹ ಕಥೆಯನ್ನು ಅವರಿಗೇ ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

'' ಪುಟ ಸಂಖ್ಯೆ 384. ಶ್ರೀ ಜೆ.ಹೆಚ್.ಪಟೇಲ್:-..... ಆದರೆ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ, ಗಂಗಾ ನದಿಗೆ ಕೆಲವು ನಾವಿಕರು ಹೋದರು. ಅಲ್ಲಿ ದೋಣಿಯಲ್ಲಿ ಕುಳಿತುಕೊಂಡರು. ನದಿಯಲ್ಲಿ ಇಡೀ ರಾತ್ರಿ ಹುಟ್ಟು ಹಾಕಿಕೊಂಡು ಹೊರಟರು. ಬೆಳಕು ಹರಿಯುವವರೆಗೂ ಹುಟ್ಟು ಹಾಕುತ್ತಲೇ ಇದ್ದರು. ಬೆಳಗಾದ ಮೇಲೆ ದಂಡೆ ಮುಟ್ಟಿದ್ದೇವೆಂದು ತಿಳಿದುಕೊಂಡು ನೋಡಿದರು. ಆದರೆ ದೋಣಿ ದಡದಲ್ಲಿ ಇದ್ದಲ್ಲೇ ಇತ್ತು. ಇದು ಏತಕ್ಕೆ ಈ ರೀತಿಯಾಯಿತು ಎಂದು ನೋಡಿದರು. ದೋಣಿಯನ್ನು ಹಗ್ಗದಲ್ಲಿ ಕಟ್ಟಿ ಹಾಕಿದ್ದರು. ಆ ಹಗ್ಗವನ್ನು ಬಿಚ್ಚಿರಲಿಲ್ಲ. ಹೀಗೆ ನಿಮ್ಮ ದೋಣಿ ದಡವನ್ನಂತೂ ಸೇರಲಿಲ್ಲ. ಸಮಾಜವನ್ನು ಬದಲು ಮಾಡಲು ನಿಮ್ಮ ದಿಕ್ಕು ಏನು ಎಂದು ಗೊತ್ತಾಗಲಿಲ್ಲ.....''

ಈ ಮಾತನ್ನು ಮಾನ್ಯ ಜೆ.ಹೆಚ್.ಪಟೇಲ್‌ರವರು ಮಾನ್ಯ ದೇವರಾಜ್ ಅರಸ್ ಅವರಿಗೆ ಹೇಳಿದ್ದರು. ನಾನು ಹೇಳುತ್ತೇನೆ, ನಿಮ್ಮ ದೋಣಿ ಎಲ್ಲಿದೆಯೋ ಅಲ್ಲೇ ಇದೆ, ಹಗ್ಗ ನೀವು ಬಿಚ್ಚಿಲ್ಲ, ರಾತ್ರಿ ಬೆಳಗೂ ನೀವು ಹುಟ್ಟು ಹಾಕಿದ್ದಿರಿ, ಏನೂ ಪ್ರಗತಿ ಆಗಿಲ್ಲ, ಅದಕ್ಕಾಗಿ ತಾವು ಕೊಟ್ಟಂತಹ ಉದಾಹರಣೆ ಏನಿದೆ, ಅದನ್ನು ತಾವು ಸಮರ್ಥಿಸಿಕೊಳ್ಳುತ್ತೀರಿ ಎಂದು ನಾನು ಕುಳಿತುಕೊಳ್ಳುತ್ತೇನೆ, ಅಥವಾ ಇದರಲ್ಲಿ ತಪ್ಪಾಗಿದೆ ಎಂದು ನೀವು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಾನು ನನ್ನ ಭಾಷಣವನ್ನು ಈ ಮಾತಿನಿಂದ ಸಮರ್ಥಿಸಿ ಕೊಂಡು ನಾನು ತಂದಂತಹ ನೋ ಕಾನ್ಫಿಡೆನ್ಸ್ ಮೋಷನ್‌ಗೆ ಇಡೀ ನಮ್ಮ ಎಲ್ಲಾ ಶಾಸಕರೂ ಮತ್ತು ಅವರ.....

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿಗಳು):- ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ದೋಣಿ ನಮ್ಮದು, ಹಗ್ಗ ಅವರದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹಗ್ಗ ನಮ್ಮದು ಎಂದು ಅವರು ಹೇಳುತ್ತಿದ್ದಾರೆ. ಅವರು ಈ ಮಾತು ಹೇಳಿದ್ದು ಈ ಪುಸ್ತಕದಲ್ಲಿ ಇದೆ. ಅವರದೇ ಹಗ್ಗ, ಅವರೇ ರಾತ್ರಿ ಎಲ್ಲಾ ಹುಟ್ಟುಹಾಕಿದ್ದು, ಆ ದೋಣಿ ಎಲ್ಲಿದೆಯೋ ಅಲ್ಲೇ ನಿಂತಿದೆ, ಆ ಪ್ರಗತಿಯ ದೋಣಿಯು ಸಾಗಲಿಲ್ಲ, ಗಂಗಾ ಪಾರು ಆಗಲಿಲ್ಲ, ಎಲ್ಲರಿಗೂ ಕೂಡ ನಿಜವಾಗಿಯೂ ನೀವು ಮುಳುಗಿಸುತ್ತೀರಿ. ಅವರು ಹೇಳಿದ ಹಾಗೆ ನೀವೇ ತೂತು ಹೊಡೆಯುತ್ತೀರೋ ಏನೋ ನನಗೆ ಗೊತ್ತಿಲ್ಲ. ಅದಕ್ಕಾಗಿ...

ಅಧ್ಯಕ್ಷರು:- ಅವರು ಹೇಳಿದ್ದು, ಅವತ್ತು ದೋಣಿ ಹಗ್ಗ ಎರಡೂ ಅಲ್ಲಿ ಇರುವವರದ್ದೇ ಆಗಿತ್ತು. ಇವತ್ತು ಹಗ್ಗ ಒಬ್ಬರದು, ದೋಣಿ ಒಬ್ಬರದಾಗಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಕಾಶಿಗೆ ಹೋಗಿ ಬದಲಾಗದಿದ್ದರೆ ಹೇಗೆ? ನಿಮ್ಮ ಮಾತನ್ನು ನಿಮಗೇ ಕೊಟ್ಟಾಗಲೂ ಕೂಡ ನೀವು ಅದನ್ನು ಸಮರ್ಥನೆ ಮಾಡಿಕೊಳ್ಳುವುದಿಲ್ಲ ಎಂದರೆ ಹೇಗೆ? ಅದಕ್ಕಾಗಿ ಈ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, ಅವಿಶ್ವಾಸ ನಿರ್ಣಯದ ಅಂತಿಮ ಘಟ್ಟದಲ್ಲಿ ನಾವು ಇವತ್ತು ಇದ್ದೇವೆ. 45 ದಿನಗಳಿಂದ ಏನೇನು ಆಡಳಿತ ಪಕ್ಷದ ವ್ಯಕ್ತಿಗಳು ಹೇಳುತ್ತಿದ್ದಾರೆ, ಅದನ್ನೇ ಆರು ದಿನಗಳಲ್ಲಿ ತುಂಬ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಂತಹ ಉತ್ತರ ಇದು ರಾಜ್ಯದ ಜನತೆಗಾಗಲಿ, ಇವತ್ತು ವಿರೋಧ ಪಕ್ಷದಲ್ಲಿ ಏನು ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ ನಮಗಾಗಲಿ, ಭಿನ್ನಮತೀಯರಿಗಾಗಲಿ ಖಂಡಿತ ತೃಪ್ತಿ ತಂದಿಲ್ಲ. ಹಾಗಾಗಿ ಮಾನ್ಯ ಮುಖ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ, ಇದು ಕೇವಲ ಹಾಸ್ಯಾಸ್ಪದ ಮತ್ತು ರಾಜ್ಯದ ಜನತೆ ಏನು ದುಃಖದಲ್ಲಿ ತೊಡಗಿದ್ದಾರೆ ಅವರಿಗೆ ತೃಪ್ತಿ ತರದೆ ಇರುವಂತಹ ಉತ್ತರವಾಗಿರುವುದರಿಂದ ನಾವೆಲ್ಲರೂ ಅವಿಶ್ವಾಸ ನಿರ್ಣಯ ಏನು ಮಂಡನೆ ಮಾಡಿದ್ದೇವೆ, ಅದನ್ನು ಡಿವಿಷನ್‌ಗೆ ನಾನು ಒತ್ತಾಯ ಮಾಡುತ್ತೇನೆ. ದಯವಿಟ್ಟು ಅವಕಾಶ ಕೊಡಬೇಕು.

SRI B.I.PATIL:- Speaker Sir, Belgaum Border issue is pending for the last 43 years.

(INTERRUPTIONS)

SRI B.I.PATIL:- Therefore, Maharastra and Karnataka Government should solve it amicably.

(ಈ ಹಂತದಲ್ಲಿ ಶ್ರೀ ಬಿ.ಐ.ಪಾಟೀಲ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್: ಬೆಳಗಾಮ್ ಕತೆ ಈಗ ಮುಗಿದು ಹೋಗಿದೆ. ಗಡಿ ಸಮಸ್ಯೆ ಪ್ರಶ್ನೆ ಈಗ ಬರುವುದಿಲ್ಲ. ಗಡಿ ಸಮಸ್ಯೆ ಮುಗಿದ ಸಮಸ್ಯೆ. ಬೆಳಗಾಂ ಎಂದೆಂದಿಗೂ ಕರ್ನಾಟಕಕ್ಕೆ ಸೇರಿದ್ದು. ಇದರ ಬಗ್ಗೆ ಬೇರೆ ಪ್ರಶ್ನೆ ಇಲ್ಲವೇ ಇಲ್ಲ.

ಅಧ್ಯಕ್ಷರು: ಈಗ ಜೆ.ಹೆಚ್.ಪಟೇಲ್ ಸರ್ಕಾರದ ವಿರುದ್ಧ ಇರುವ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ಈ ಸದನವು ಶ್ರೀ ಜೆ.ಹೆಚ್.ಪಟೇಲ್ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುತ್ತದೆ"

SRI MALLIKARJUNA KHARGE: I press for division.

ಈ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

ಸಭೆಯನ್ನು ವಿಭಜಿಸಲಾಯಿತು

ಅಧ್ಯಕ್ಷರು: ವಿಭಜಿಸಿದಾಗ ಫಲಿತಾಂಶ ಹೀಗೆ ಬಂದಿದೆ.

ಹೌದು-83

ಇಲ್ಲ-133

ಅವಿಶ್ವಾಸ ನಿರ್ಣಯ "ಇಲ್ಲ" ಎನ್ನುವವರ ಪರವಾಗಿದೆ.

ಅವಿಶ್ವಾಸ ನಿರ್ಣಯ ತಿರಸ್ಕರಿಸಲ್ಪಟ್ಟಿತು

ಪ್ರಕಟಣೆ

ಅಧ್ಯಕ್ಷರು: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಏನೆಂದರೆ," ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಗಳ ನಿಯಮ 107ರ ಮೇರೆಗೆ ದಿನಾಂಕ 09-11-1998ರಂದು ವಿಧಾನ ಪರಿಷತ್ತು, "ಕರ್ನಾಟಕ ಶರೀರ ರಚನಾ ಶಾಸ್ತ್ರ (ತಿದ್ದುಪಡಿ) ವಿಧೇಯಕ, 1998ನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಿದೆ. ಆದುದರಿಂದ ಸದರಿ ವಿಧೇಯಕಕ್ಕೆ ವಿಧಾನ ಸಭೆಯ ಸಮ್ಮತಿಯನ್ನು ನೀಡಬೇಕೆಂದು ಈ ಮೂಲಕ ಕೋರುತ್ತೇನೆ" ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 11-11-1998ರ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)